ಅಕ್ಷಯ ತದಿಗೆ



ಪದ್ಮಾ ಶ್ರೀಧರ್

ಅಕ್ಷಯ ತದಿಗೆ

ಪದ್ಮಾ ಶ್ರೀಧರ್

ಧೃತಿ ಪ್ರಕಾಶನ
ಜಿ.3, ಹಯಗ್ರೀವ ಅಪಾರ್ಟ್‌ಮೆಂಟ್ ನಂ. 1,2,
ದತ್ತಾತ್ರೇಯ ದೇವಸ್ಥಾನ ರಸ್ತೆ, 1ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ,
ನರಸಿಂಹರಾಜಕಾಲೋನಿ, ಬೆಂಗಳೂರು–560 019.
ದೂರವಾಣಿ : 26671773

AKSHAYA TADIGE-Stories by Smt. Padma Sridhar
Published By **M/s. Dhruthi Prakashana** G3, Hayagriva Apartment, No. 1,2, Dattatreya Temple Road, 1st Cross, 5th Main Road, N.R.Colony, Bangalore- 560 019.

ಪ್ರಥಮ ಮುದ್ರಣ	:	2009
ಪುಟಗಳು	:	160
ಬೆಲೆ	:	ರೂ. 90/-
ಉಪಯೋಗಿಸಿದ ಕಾಗದ	:	70gsm ಮ್ಯಾಪ್ಲಿಥೊ
ಮುಖಪುಟ	:	ಆರ್ಟ್ ಫೋಕಸ್
ಹಕ್ಕುಗಳು	:	ಲೇಖಕರದು

ಅಧಿಕೃತ ಮಾರಾಟಗಾರರು
ಧೃತಿ ಪ್ರಕಾಶನ
ಜಿ.3, ಹಯಗ್ರೀವ ಅಪಾರ್ಟ್‌ಮೆಂಟ್
ನಂ. 1,2, ದತ್ತಾತ್ರೇಯ ದೇವಸ್ಥಾನ ರಸ್ತೆ,
1ನೇ ಅಡ್ಡ ರಸ್ತೆ, 5ನೇ ಮುಖ್ಯರಸ್ತೆ,
ನರಸಿಂಹರಾಜ ಕಾಲೋನಿ, ಬೆಂಗಳೂರು-19.
ದೂರವಾಣಿ : 26671773

ಅಕ್ಷರ ಜೋಡಣೆ :
ಪ್ರಶಾಂತ್ ಎಂಟರ್‌ಪ್ರೈಸಸ್
ತ್ಯಾಗರಾಜನಗರ, ಬೆಂಗಳೂರು-28
ದೂರವಾಣಿ : 26761529

ಮುದ್ರಣ : ಅಶ್ವಿನಿ ಪ್ರಿಂಟರ್ಸ್, ಬೆಂಗಳೂರು

ಮುನ್ನುಡಿ

ಮೊದಲನೆಯದು ''ಅಕ್ಷಯತದಿಗೆ''. ಇದು ಒಂದು ನೀಳ್ಗತೆ...ಸಾಮಾಜಿಕ ವಿಷಯವನ್ನು ಆಧಾರವಾಗಿಟ್ಟುಕೊಂಡು, ಕೌಟುಂಬಿಕ ಪಾತ್ರಗಳನ್ನೊಳಗೊಂಡು, ರಚಿತಗೊಂಡ ಕತೆ.

''ಅಕ್ಷಯ ತದಿಗೆ'' ಒಂದು ಪ್ರಶಸ್ತವಾದ ದಿನ. ಈ ಮುಹೂರ್ತದಲ್ಲಿ ನಡೆಯುವ ಒಳ್ಳೆಯ ಕಾರ್ಯಗಳು ವೃದ್ಧಿಯಾಗುತ್ತದೆ ಎಂಬ ಸಾಮಾನ್ಯ ನಂಬಿಕೆ. ವೈಶಾಖ ಮಾಸದ ಶುಕ್ಲ ಪಕ್ಷದ ತದಿಗೆಯ ದಿನ ಆಚರಿಸುವ ಹಬ್ಬ

ಈ ಕತೆಯ ನಾಯಕಿ ವೃಂದಾ, ಯಾವ ಸಂಭ್ರಮ ಉತ್ಸಾಹಗಳಿಲ್ಲದೇ ಯಾವ ಆಸೆ ಆಡಂಬರಗಳಿಲ್ಲದೇ ವಿರಾಗಿಯಂತೆ ದಿನಗಳನ್ನು ತಳ್ಳುತ್ತಿರುತ್ತಾಳೆ. ಅವಳ ಬಾಳಿನಲ್ಲೂ ಅನಿರೀಕ್ಷಿತವಾಗಿ, ಸಂಭ್ರಮ ಉತ್ಸಾಹಗಳು ತುಂಬಿ ಬರುತ್ತದೆ. ಅವಳಿಗೆ ಒಳಿತನ್ನು ಹಾರೈಸುವವರು, ಅವಳಿಗೆ ಸಹಾಯಕರಾತ್ತಾರೆ. ಅಕ್ಷಯ ತದಿಗೆಯಂದು ಅವಳ ಜೀವನದಲ್ಲಿ ಒಂದು ತಿರುವು. ಇದು ಈ ಕತೆಯ ಕಥಾವಸ್ತು.

ಎರಡನೆಯದು, ''ಅರುಣರಾಗ'' ಇದೂ ಒಂದು ನೀಳ್ಗತೆ. ಈ ಕತೆಯೂ ಒಂದು ಸಾಮಾಜಿಕ ತಳಹದಿಯ ಮೇಲೆಯೇ ರಚಿತಗೊಂಡಿರುವುದು. ನಾಯಕಿ ಅಪ್ರಾಪ್ತ ವಯಸ್ಕಳಲ್ಲ. ಮುಗ್ದೆಯೂ ಅಲ್ಲ. ಆದರೆ ಬಾಲಿಶ ಸ್ವಭಾವದವಳು. ಅವಳನ್ನು ಮೆಚ್ಚುವ ಯುವಕ, ಪ್ರೌಢ... ತಾನಾಗಿಯೇ ಇವಳನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಅದು ಯಾಕೆ? ಹೇಗೆ? ಎನ್ನುವುದೇ ಕಥಾವಸ್ತು.

ಈ ಎರಡೂ ನೀಳ್ಗತೆಗಳನ್ನು ಒಂದಾಗಿಸಿ, ಪುಸ್ತಕ ರೂಪದಲ್ಲಿ ಹೊರತರುತ್ತಿರುವ ಪ್ರಕಾಶಕರಿಗೆ ನನ್ನ ಕೃತಜ್ಞತೆಗಳು.

ವಂದನೆಗಳೊಂದಿಗೆ,

ಇತಿ ತಮ್ಮ ವಿಶ್ವಾಸಿ
ಪದ್ಮಾ ಶ್ರೀಧರ್

ತುಳಸೀ ಪೂಜೆ ಮುಗಿಸಿ, ಅರಿಶಿನ ಕುಂಕುಮದ ತಟ್ಟೆಯೊಂದಿಗೆ ಒಳಗೆ ಬಂದ ವೃಂದಾ ತನ್ನ ಗಂಡ ರೂಮಿನಿಂದ ಹೊರಗೆ ಬಂದೇ ಇಲ್ಲವೆನ್ನುವುದನ್ನು ಗಮನಿಸಿದಳು. ನೆನ್ನೆಯಿಂದ ಒಳಗೇ ಕೂತಿದ್ದಾರಲ್ಲ, ಏನು ಕಾರಣವಿರಬಹುದು? ಹಾಗೆಲ್ಲ ಮನೆಯಲ್ಲಿ ಕೂರುವವರೇ ಅಲ್ಲ, ಅಥವಾ ಮನೆಯಲ್ಲಿ ಇದ್ದಷ್ಟು ಹೊತ್ತು ಹಾರಾಟ ಕೂಗಾಟ ತಪ್ಪಿದ್ದಲ್ಲ. ಏನಾಗಿದೆ ಇವರಿಗೆ? ಭೂತ ಪ್ರೇತ ಮೆಟ್ಟಿಕೊಂಡಿರಬಹುದೆ? ಎಂದುಕೊಂಡು ಭಯದಿಂದ ನಡುಗಿದಳು.

"ಮಂಜುನಾಥ, ನೀನೇ ಕಾಪಾಡಪ್ಪ ಹಾಗೇನೂ ಆಗದಿರಲಿ" ಎಂದು ದೇವರಲ್ಲಿ ಬೇಡಿ ಅಡಿಗೆ ಮನೆಗೆ ಹೋದಳು. ಅವನ ರೂಮಿಗೆ ಹೋಗುವ ಅಧಿಕಾರ ಅವಳಿಗಿರಲಿಲ್ಲ. ಅಡಿಗೆ ಮನೆಯ ಪಕ್ಕದ ಉಗ್ರಾಣವನ್ನು ಖಾಲಿ ಮಾಡಿಸಿ, ಅವಳು ತನ್ನ ರೂಮನ್ನಾಗಿ ಮಾಡಿಕೊಂಡಿದ್ದಳು.

ತಿಂಡಿ, ಅಡಿಗೆ ಎರಡನ್ನು ಮಾಡಿ ಮುಗಿಸಿ ಅವನಿಗಾಗಿ ಕಾದಳು. ನೆನ್ನೆಯಿಂದ ಏನೂ ತಿಂದಿಲ್ಲ ಎಂಬ ಅನುಮಾನವಾದರೂ, ರೂಮಿನಲ್ಲಿ ತಿನ್ನುವ ಪದಾರ್ಥಗಳನ್ನು ತಂದಿಟ್ಟುಕೊಂಡಿರಬಹುದು. ಹಸಿವಾದಾಗ ತಿಂದಿರಬಹುದು ಎಂದುಕೊಂಡರೂ, ಅವಳ ಕುತೂಹಲ ಹೆಚ್ಚುತ್ತಿತ್ತು. ಈಚೆಗೆ ಒಂದು ವಾರದಿಂದ ಮನೆಗೇ ಬಂದಿಲ್ಲದವರು, ಯಾವಾಗಲೋ ಒಳಗೆ ಬಂದು ಸೇರಿ ಒಳಗೇ ಕೂತಿದ್ದಾರಲ್ಲ, ಯಾರಿಗಾದರೂ ಅಂಜಿ ಕುಳಿತಿರಬಹುದೆ ಎಂದುಕೊಂಡರೂ, ಕೇಳುವ ಧೈರ್ಯವಂತೂ ಇರಲಿಲ್ಲ. ಆದರೂ ತನ್ನ ಪೂಜೆ, ವ್ರತಗಳಿಂದ ಫಲ ಸಿಕ್ಕುವ ಸಮಯ ಬಂದಿದೆ ಎಂದು ಕಾಣುತ್ತೆ. ಮನೆಯಲ್ಲಿ ಒಂದು ದಿನವಾದರೂ ಇರುವ ಬುದ್ಧಿಯನ್ನು ದೇವರೇ ಕೊಟ್ಟಿದ್ದಾನೆ ಅವರಿಗೆ ಎಂದುಕೊಂಡು ಸಂತಸ ಹೊಂದಿದಳು.

ಅಷ್ಟರಲ್ಲಿ ಕೆಲಸದ ಹೆಂಗಸು, ಸರಸ್ವತಿಯ ಮಗ ಭೀಮ ಬಂದ. ಭೀಮನೂ ಭೀಮನೇ, ಕಟ್ಟುಮಸ್ತಾಗಿದ್ದ ಹದಿನೈದು ಹದಿನಾರು ವರ್ಷದ ಹುಡುಗನನ್ನು ವೃಂದಾ ತನ್ನ ತಮ್ಮನಂತೆ ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದಳು.

''ನೋಡು ಅಣ್ಣಾವರು, ಮಲಗಿದಾರೋ.. ಏನು ಮಾಡುತ್ತಿದ್ದಾರೆ ಅಂತ ನೋಡಿಕೊಂಡು ಬರ್ತೀಯಾ..'' ಮೆಲ್ಲಗಿನ ಧ್ವನಿಯಲ್ಲಿ ಕೇಳಿದಳು.

ಭೀಮ ಬೆದರಿದ. ಆದರೂ ಇಲ್ಲವೆನ್ನಲಾರ. ರೂಮಿನ ಬಾಗಿಲಿನಲ್ಲಿ ನಿಂತು ಒಳಗೆ ಇಣುಕಿದ. ಅಣ್ಣಾವರು, ಕಿಟಕಿಯ ಬಳಿ ನಿಂತು, ಹೊರಗೆ ನೋಡುತ್ತಿದ್ದುದನ್ನು ಕಂಡು, ಅದನ್ನೇ ವರದಿ ಒಪ್ಪಿಸಿದ.

''ಹೊರಗೆ ಯಾರಾದರೂ ಇದಾರಾ.. ನೋಡಿಕೊಂಡು ಬಾ..'' ಎಂದಳು. ಹೊರಗೆ ಯಾರೂ ಇರಲಿಲ್ಲವಾದ್ದರಿಂದ ಹಾಗೇ ಹೇಳಿದ. ಗಂಡನ ವರ್ತನೆ ಅವಳಿಗೆ ಅಚ್ಚರಿಯನ್ನುಂಟು ಮಾಡಿತ್ತು.

''ಅವರ ಸ್ನಾನವಿನ್ನು ಆಗಿಲ್ಲ, ಸಾಯಂಕಾಲ ಬಾ..'' ಭೀಮ ಹೊರಟು ಹೋದ.

ನೆನ್ನೆಯಿಂದ ಒಂದೇ ಸಮನೇ ಒಳಗೇ ಕೂತಿದ್ದು ಪಿನಾಕಿಗೆ ಬೇಸರವಾಗಿತ್ತು. ಎದ್ದು ಮನೆಯನ್ನೆಲ್ಲಾ ಒಂದು ಸುತ್ತು ಹಾಕಿ ಬರುವ ಅಂತ ಎಂದುಕೊಂಡರೂ ಹಾಗೆ ಮಾಡಲಾಗದೇ ಒಳಗೇ ಕೂತಿದ್ದ. ವೃಂದಾ ಏನು ಮಾಡುತ್ತಿದಾಳೋ ಎಂದುಕೊಂಡರೂ, ಹೋಗಿ ನೋಡುವ ಧೈರ್ಯವಿರಲಿಲ್ಲ. ಕೈ ಬಳೆಗಳ ಸದ್ದಾದಾಗ, ಎದ್ದು ಬಾಗಿಲಿನ ಸಂದಿನಿಂದ ಒಂದೆರಡು ಸಲ ನೋಡಿದ್ದ.

ಯಾವ ಆಧುನಿಕ ಅಲಂಕಾರವೂ ಇಲ್ಲದೇ, ಸಾದಾ ಸೀದವಾಗಿದ್ದ ವೃಂದಾಳ ಬಗ್ಗೆ ಅವನಿಗೆ ಗೌರವ ಮೂಡಿತು. ಪತಿಯೇ ಪರಮೇಶ್ವರ ಎಂದು ತಿಳಿದಿರುವ ಈಕೆಗೆ ತಾನು ದ್ರೋಹಮಾಡುತ್ತಿದ್ದೇನೆ..ಬಂದಂತೆಯೇ ಹೊರಟು ಹೋದರೆ ಹೇಗೆ ಅಂತಲೂ ಎಂದುಕೊಳ್ಳುವನು. ಅನೇಕ ಸಲ ಪ್ರಯತ್ನ ಪಟ್ಟೂ, ಅವನು ಆ ಮನೆಯಿಂದ ಹೊರಗೆ ಹೋಗಲಾಗಿರಲಿಲ್ಲ, ತಾನು ಅವಳ ಮಾತಿಗೆ ಒಪ್ಪಬಾರದಾಗಿತ್ತು ಅಂತ ಬಾರಿ ಬಾರಿಗೂ ಅನ್ನುಕೊಳ್ಳುವಷ್ಟು ಮನಸ್ಸು ಮುಜುಗರದಿಂದ ತುಂಬಿಕೊಂಡಿತ್ತು.

ಭೀಮ ಬಂದಾಗ, ಅವನು ಒಳಗೆ ತನ್ನ ರೂಮಿಗೆ ಬಂದರೆ, ಏನಾದರೂ ಮಾತನಾಡಬಹುದಾಗಿತ್ತು. ಆದರೆ ಆ ಹುಡುಗ ಹಾಗೇ ಹೊರಟುಹೋದ.. ಅವನಿಗೂ ಭಯ ತನ್ನೊಡನೆ ಮಾತನಾಡಲು. ಆದರೆ ತಾನು ಅವನಲ್ಲವಲ್ಲ.. ಹಾಗಾದರೆ ಯಾರಿಗೂ ಸಂಶಯ ಬಂದಿಲ್ಲವೆ! ಆಕೆ ಸಹ ತನ್ನ ಮೇಲೆ ಸಂಶಯ ಬಂದಂತಿಲ್ಲ.. ಹಾಗಿದಿದ್ದರೆ, ಇರುವರೆಗೂ ಸುಮ್ಮನಿರುತ್ತಿದ್ದಳೇ, ಯಾರೋ ತನ್ನ ಮನೆಗೆ ಬಂದು ಸೇರಿದಾರೆ ಎಂದು ಪೋಲಿಸರಿಗೆ ತಿಳಿಸದೇ ಇರುತ್ತಿರಲಿಲ್ಲ.. ಪೋಲಿಸರು ಎಳೆದುಕೊಂಡು ಹೋಗಿರುತ್ತಿದ್ದರು.

ಪೋಲಿಸರು ಎಂದೊಡನೆ ಅವನ ಭಯ ಇಮ್ಮಡಿಯಾಯಿತು. ತಾನು ಇಲ್ಲಿ ತಲೆ ಮರೆಸಿಕೊಂಡು ಇರುವುದೇನೋ ನಿಜ.. ಆದರೆ ಪೋಲಿಸರ ಕೈಗೆ ಸಿಕ್ಕಿ ಬಿದ್ದರೆ, ತಾನು

ಮಾಡದ ಕೊಲೆಯ ಆಪಾದನೆ ಹೊತ್ತು ಜೈಲಿನಲ್ಲಿ ಕಳೆಯಬಹುದಾದ ದಿನಗಳ ಬಗ್ಗೆ ನೆನಪಿಸಿಕೊಂಡು ಬೆವತುಹೋದ.

ನನ್ನ ಪಾಡಿಗೆ ನಾನಿದ್ದೆ. ನನಗೇ ಯಾಕೆ ಈ ಶಿಕ್ಷೆ ದೇವರೇ ಎಂದು.. ದೇವರಲ್ಲಿ ಮೊರೆ ಇಟ್ಟ. ಗೋಡೆಯ ಮೇಲೆ ಇದ್ದ ಒಂದು ಫೋಟೋ ಇವನನ್ನು ನೋಡಿ ನಕ್ಕಂತಾಯಿತು. ಅದು ಯಾರ ತರಹದ ನಗೆ ಎಂದು ಇವನಿಗೆ ತಿಳಿಯಲಿಲ್ಲ. ರೂಮಿಗೇ ಸೇರಿಕೊಂಡಿದ್ದ ಬಚ್ಚಲು ಮನೆಗೆ ಹೋಗಿ ಮುಖ ತೊಳೆದು ಬಂದ. ಹಸಿವಾಗುತ್ತಿತ್ತು. ಮನೆಯ ಒಳಗಿನಿಂದ ಘಂ ಎನ್ನುವ ಕಾಫಿ, ತಿಂಡಿಯ ವಾಸನೆ ಹಸಿವನ್ನು ಕೆರಳಿಸಿತ್ತು. ತಾನೇ ಹೋಗಿ ಕೇಳಿ, ತಿಂದರೆ ಎಂದುಕೊಂಡರೂ, ಹೊರಗೆ ಹೋಗುವುದು ಹೇಗೆ! ಆ ಹುಡುಗ ಭೀಮ ರೂಮಿನ ತನಕ ಬಂದಿದ್ದರೆ.. ಹೇಳಿಕಳಿಸಬಹುದಾಗಿತ್ತು. ಆದರೆ ಈಗ..! ತನ್ನ ಬ್ಯಾಗ್ ತೆಗೆದು, ಅದರಲ್ಲಿ ಉಳಿದಿದ್ದ ಬಿಸ್ಕತ್ತುಗಳನ್ನು ತಿಂದು ನೀರು ಕುಡಿದ. ಕಿತ್ತಲೆ ಹಣ್ಣನ್ನು ತಿಂದು, ಬಾಯಿಗೆ ಒಂದು ಚೂರು ಅಡಿಕೆ ಹಾಕಿಕೊಂಡು ಮಲಗಿದ. ಅಡಿಗೆಯ ಒಗ್ಗರಣೆ ವಾಸನೆ ಅವನನ್ನು ತಿವಿದಿತ್ತು.

ಅವಳು ಯಾರಿಗಾಗಿ ಅಡಿಗೆ ಮಾಡಿದ್ದಾಳೆ? ಅವಳೊಬ್ಬಳಿಗಂತೂ ಅಲ್ಲ. ಅವಳ ಗಂಡನಿಗೆ ತಾನೇ ? ಗಂಡನನ್ನು ಕರೆದು ಆದರದಿಂದ ಬಡಿಸುವ ಅವಕಾಶವೇ ಅವಳಿಗೆ ಒದಗಿಲ್ಲವೇನೋ.. ಈಗ ತಾನಾಗಿಯೇ ಹೋಗಿ ಕುಳಿತರೆ, ಅವಳೇನು ಮಾಡಬಹುದು? ಬೇಡ ಬೇಡ.. ತನ್ನ ಮೇಲೆ ಅನುಮಾನ ಬರಬಹುದು.. ತಾನೀಗ ಸಧ್ಯಕ್ಕೆ ಇಲ್ಲಿಂದ ಎಲ್ಲಿಗೂ ಹೋಗುವಂತಿಲ್ಲ. ಆದರೆ ಇದು ನನ್ನ ಪ್ಲ್ಯಾನಂತೂ ಅಲ್ಲ. ಇದು ಕಮಲಿನಿಯ ಪ್ಲ್ಯಾನು.. ಅವಳ ಮಾತಿಗೆ ತಾನು ಒಪ್ಪಬಾರದಾಗಿತ್ತು ಅಂತ ಒಂದು ಸಲ ಅನ್ನಿಸಿದರೆ, ಇನ್ನೊಂದು ಸಲ ಅದನ್ನು ಬಿಟ್ಟು ಬೇರೆ ಮಾರ್ಗವೇ ಇರಲಿಲ್ಲವಲ್ಲ ಎಂದೂ ಅನ್ನಿಸುತ್ತಿತ್ತು.

ತನ್ನ ಪಾಡಿಗೆ ತಾನಿದ್ದವನು. ಈಗ ತನ್ನ ಬಳಿ ಆಟೋ ಇಲ್ಲ.. ಮಾಲಿಕರ ಮನೆಗೆ ಹೋಗುವ ಹಾಗಿಲ್ಲ. ತನ್ನ ಬಟ್ಟೆ ಇತ್ಯಾದಿ ಎಲ್ಲಾ ಅವರ ಮನೆಯ ಔಟ್‌ಹೌಸ್‌ನಲ್ಲಿದೆ. ಎಲ್ಲಾ ಹಾಗೇ ಇದೆಯೋ, ಅಥವಾ ಆಚೆಗೆ ಎಸೆದಿದಾರೆಯೇ, ಹಾಗೆ ಮಾಡಲಾರರು. ಅವರಿಗೆ ನನ್ನನ್ನು ಕಂಡರೆ ಅಭಿಮಾನವಿತ್ತು. ಆದರೆ ಆ ಅಭಿಮಾನವನ್ನು ಕಳೆದುಕೊಳ್ಳುವ ಪರಿಸ್ಥಿತಿ ಒದಗಿದೆಯಲ್ಲ. ನಾನು ಅವರ ಎದುರಿಗೆ ನಿಂತು ನಡೆದ ವಿಷಯವನ್ನು ಹೇಳುವುದಾದರೂ ಹೇಗೆ? ನಂಬದೇ ನನ್ನನ್ನು ಪೋಲಿಸರಿಗೆ ಹಿಡಿದುಕೊಟ್ಟರೆ ? ಬೇಡ, ಬೇಡ, ತಾನು ಮಾಡದ ಅಪರಾಧಕ್ಕಾಗಿ, ಪೋಲಿಸರಿಗೆ ಸಿಕ್ಕಿ ಬಿದ್ದರೆ ಆಯ್ತು ನನ್ನ ಗತಿ ಎಂದುಕೊಂಡು, ಮುಂದೇನು ಎಂದು ಚಿಂತಿಸಿದ. ಮುಂದಿನ ದಾರಿ ಅವನಿಗೆ ತಿಳಿದಿರಲಿಲ್ಲ. ಹಿಂದೆ ನಡೆದು ಬಂದ ದಾರಿ ನೆನ್ನೆಯವರೆಗೆ ಇಲ್ಲಿಯ ತನಕ ನಡೆದು ಬಂದ ದಾರಿಯ ಬಗ್ಗೆ ಅರಿವಿತ್ತು.

ತಾನು ಇಲ್ಲಿ ಒಳಗೇ ಕೂತಿರುವುದು ಹೇಗೆ? ಅದು ತನ್ನಿಂದಾಗದ ಕೆಲಸ; ಆದರೆ ರೂಮಿನಿಂದ ಆಚೆ, ಒಂದೆರಡು ದಿನಗಳ ಮಟ್ಟಿಗಾದರೂ, ಬರಬಾರದು.. ಎಂದು ಕಮಲಿನಿ ಹೇಳಿದ್ದಳಲ್ಲ. ಆದರೂ, ಹೊರಗೆ ಬರುವ, ಮನೆಯ ಒಳಗೆ, ಹೊರಗೆ ಅಡ್ಡಾಡುವ ವೃಂದಾಳೊಡನೆ ಮಾತನಾಡುವ ಇಚ್ಛೆಯಾಗುತ್ತಿತ್ತು. ಅದಕ್ಕೆ ತಾನಾಗಿಯೇ ಒದಗಿ ಬರುವ ಅವಕಾಶಕ್ಕಾಗಿ ಎದುರು ನೋಡುತ್ತಿದ್ದ.

ಸಾಯಂಕಾಲ, ಭೀಮ ಬಂದವನು ರೂಮಿನಲ್ಲಿ ಇಣುಕಿಕೋಡಿದ್ದ. ಕಣ್ಣಮೇಲೆ ತೋಳನ್ನಿರಿಸಿ ಮಲಗಿದ್ದವನಿಗೆ ಹೆಜ್ಜೆಯ ಸಪ್ಪಳ ಕೇಳಿಸಿತ್ತು. ತೋಳನ್ನು ಸರಿಸಿ ನೋಡಿದ್ದ. ಭೀಮ ಬಚ್ಚಲು ಮನೆಗೆ ಹೋಗಿದ್ದ..ಹೆದರುತ್ತಾ ಅವನು ಮತ್ತೆ ಹೊರಗೆ ಹೊರಡುವಷ್ಟರಲ್ಲಿ ಇವನು "ಭೀಮಾ.." ಎಂದು ಕೂಗಿದ್ದ. ಅವನು ಹಾಗೇ ನಿಂತ. ಬಾಯಿಲ್ಲಿ ಎಂದ. ಅವನು ಕತ್ತನ್ನೆತ್ತದೇ, ಕೈ ಕಟ್ಟಿ ನಿಂತಿದ್ದ. "ಏನು ಬಂದಿದ್ದೆ.. ಏನು ಬೇಕಾಗಿತ್ತು.."

"ಏನಿಲ್ಲ..ಬ..ಬ..ಬಟ್ಟೆ..ಒಗೆಯಕ್ಕೆ...." ಹೇಳಿದ್ದ ತೊದಲುತ್ತಾ

"ಬಟ್ಟೆ ಯಾವುದೂ ಇಲ್ಲ, ನೀನು ಹೋಗು" ಎಂದು ಕಳಿಸಿದ್ದ.

ತಾನು ನೆನ್ನೆಯಿಂದ ಸ್ನಾನವನ್ನು ಮಾಡಿಲ್ಲ. ಬ್ಯಾಗಿನಲ್ಲಿರುವ ಇನ್ನೊಂದು ಸೆಟ್ ಬಟ್ಟೆ ಸಹ ಕೊಳಕಾಗಿದೆ. ಮನೆ ತುಂಬಾ ಅವನ ಬಟ್ಟೆ ಇದೆ. ಆದರೆ ತೊಡುವ ಮನಸ್ಸಿಲ್ಲ. ಅಳತೆ, ಚಿಕ್ಕದೋ, ದೊಡ್ಡದೋ ಯಾರಿಗೆ ಗೊತ್ತು".. ಹೊರಟು ಹೋಗಿದ್ದ ಆ ಹುಡುಗನನ್ನು ಕರೆದುಕೊಂಡು ಆಚೆ ಇಣುಕಿ ನೋಡಿದ. ಆ ಹುಡುಗ ವೃಂದಳೊಡನೆ ಏನನ್ನೋ ಮಾತನ್ನಾಡುತ್ತಿದ್ದುದನ್ನು ಕಂಡ. ಭೀಮ ಈ ಕಡೆಗೆ ಬರುವುದನ್ನೇ ಕಾದಿದ್ದು.. ಪಿಸುದನಿಯಲ್ಲಿ ಕರೆದಿದ್ದ. 'ಶ್..ಶ್.. ಬಾಯಿಲ್ಲಿ' ಭೀಮ ಅತ್ತಿತ್ತ ನೋಡುತ್ತಾ ಬಂದಿದ್ದ.

"ನಾನು ಸ್ನಾನ ಮಾಡಬೇಕು. ಬಿಸಿನೀರಿಲ್ಲ, ಹಾಗೇ ನೆನ್ನೆದಿನದ ಕೊಳೆಬಟ್ಟೆ ಇದೆ. ಸೋಪು ತಂದುಕೊಡು. ನಾನೇ ಒಗಿತೀನಿ.."

ಆ ಹುಡುಗ ಅವನನ್ನೇ ಬೆರಗಾಗಿ ನೋಡಿದ. ಬೆದರಿದ ಪಿನಾಕಿ ಸರಕ್ಕನೇ ಒಳಗೆ ಹೋದ. ತಾನು ಏನಾದರೂ ತಪ್ಪು ಆಡಿದೆನೆ! ತಾನು ಅವನಲ್ಲವೆಂದು ಈ ಹುಡುಗನಿಗೆ ಗೊತ್ತಾಗಿ ಹೋದರೇ ತನ್ನ ಗತಿ ಎಂದುಕೊಂಡ.

ಆದರೆ ಆ ಹುಡುಗ ಏನನ್ನು ಆಡಲಿಲ್ಲ, ಬಚ್ಚಲು ಮನೆಗೆ ಹೋಗಿ ಬಾಯ್ಲರಿಗೆ ನೀರು ತುಂಬಿ ಸ್ವಿಚ್ ಹಾಕಿದ. ಒಂದು ಬಕೆಟ್ಟಿಗೆ, ಸೋಪಿನ ಪುಡಿ ಹಾಕಿ, ನೀರು ಕದಡಿ, ಮತ್ತೆ ಇವನ ಬಳಿಗೆ ಬಂದ. ಬಟ್ಟೆ ಕೊಡಿ, ಒಗೆದು ಹಾಕ್ತೀನಿ."

'ಅಲ್ಲಿ ಬ್ಯಾಗಿನಲ್ಲಿದೆ ತಗೋ..' ಎಂದ. ಆ ಹುಡುಗ ಬಟ್ಟೆಗಳನ್ನು ತೆಗೆದುಕೊಂಡು ಹೊರಟುಹೋದ. ನೋಡಿದರೆ ಹುಡುಗ ವಿಧೇಯನಂತೆ ಕಾಣಿಸುತ್ತಾನೆ. ತಾನು ಇವನ ಸ್ನೇಹವನ್ನು ಗಳಿಸಬೇಕು ಎಂದುಕೊಂಡ.

ಆ ಹುಡುಗ ಹೋಗಿ ವೃಂದಳೊಡನೆ ಏನೋ ಮಾತನಾಡುತ್ತಿರುವಂತೆ ಅನ್ನಿಸಿ, ಏನೋ ಒಂದು ತರಹ ಭಯ ಆವರಿಸಿಕೊಂಡಿತು. ಸ್ನಾನಮಾಡಿ, ಬೇರೆ ಬಟ್ಟೆ ಧರಿಸಿ ಊಟ ಮಾಡಿ ತಾನು ಇಲ್ಲಿಂದ ಹೊರಟು ಬಿಡಬೇಕು. ಹೀಗೆ ತಾನು ಇಲ್ಲಿರಲಾರೆ.. ಎಂದು ನಿಶ್ಚಯಿಸಿಕೊಂಡ.

ಅಷ್ಟರಲ್ಲಿ ಭೀಮ ಒಂದು ಲೋಟ ಕಾಫಿ ಹಿಡಿದುಕೊಂಡು ಬಂದ. ಬೇಡ, ಬೇಕು ಎಂದು ಏನೂ ಹೇಳದೇ ಕಾಫಿ ಕುಡಿದು ಮುಗಿಸಿದ. ಗಂಟಲಿಗೆ ಹಿತವೆನಿಸಿತ್ತು. ಚೈತನ್ಯ

ಬಂದಂತೆನಿಸಿತ್ತು. ಇಲ್ಲಿ ತಾನೊಬ್ಬ. ಅಸಹಾಯಕನಾಗುವ ಮೊದಲು ಏನಾದರೂ ಮುಂದಿನ ಹೆಜ್ಜೆ ತೆಗೆದುಕೊಳ್ಳಬೇಕು ಎಂದು ನಿರ್ಧರಿಸಿದ.

ನೀರು ಕಾದಿದೆಯಾ?.. 'ಹೂಂ' ಎಂದು ಹುಡುಗ. ಇವನ ಬಳಿ ಬೇರೆ ಬಟ್ಟೆಗಳಿರಲಿಲ್ಲ. ಆ ಹುಡುಗ ಹೊರಗೆ ಹೋಗುವುದನ್ನೇ ಕಾದಿದ್ದು ಸ್ನಾನದ ಮನೆಗೆ ಹೋದ. ಸ್ನಾನ ಮಾಡಿ ಅದೇ ಬಟ್ಟೆಯನ್ನು ವಿಧಿ ಇಲ್ಲದೇ ಧರಿಸಿ ಹೊರಗೆ ಬಂದ. ಭೀಮ ಅವನಿಗಾಗಿ ಕಾಯುತ್ತಾ ನಿಂತಂತೆ ಅನ್ನಿಸಿತ್ತು.

''ಅಡಿಗೆ ಆಗಿದ್ರೆ ಊಟ ಮಾಡ್ತೀನಿ, ಹಾಗಂತ ಹೇಳು..'' ಭೀಮ ಓಡಿ ಹೋಗಿ, ಕೆಲವೇ ಕ್ಷಣಗಳಲ್ಲಿ ಹಿಂತಿರುಗಿದ. 'ಬರಬೇಕಂತೆ'.. ಎಂದ. ಇವನು ಅವನ ಹಿಂದೆಯೇ ಹೋಗಿ, ಹಾಕಿದ್ದ ತಟ್ಟೆಯ ಬಳಿಯ ಚಾಪೆಯ ಮೇಲೆ ಕುಳಿತ. ಮಾಡಿದ್ದ ಅಡಿಗೆಗಳನ್ನು ಸಣ್ಣ ಸಣ್ಣ ಪಾತ್ರೆಗಳಲ್ಲಿ ತೋಡಿ, ಅಲ್ಲಿಟ್ಟಿತ್ತು. ತಾನೇ ಬಡಿಸಿಕೊಳ್ಳಬೇಕೋ, ಅಥವಾ ಆಕೆಯೇ ಬಂದು ಬಡಿಸುತ್ತಾಳೋ ಗೊತ್ತಾಗಲಿಲ್ಲ. ತನಗೇ ಬಡಿಸಿಕೊಳ್ಳಲು ಹೀನಾಯವೆನಿಸಿ, ''ಭೀಮ ಬಡಿಸೋ..'' ಎಂದ. ಭೀಮ ಅನುಮಾನಿಸಿದ. ಮತ್ತೊಮ್ಮೆ ಇವನು ಹೇಳಲು ಅವನು ಹೆದರುತ್ತಾ ಬಡಿಸಿದ. ಅಕ್ಕ ಪಕ್ಕ ಬಡಿಸುವಾಗ ಚೆಲ್ಲಿದರೂ, ಅವನು ಸಿಡುಕದೇ ಇದ್ದಾಗ ಭೀಮನಿಗೆ ಆಶ್ಚರ್ಯವೂ ಆಗಿತ್ತು. ಹೆದರಿಕೆಯೂ ಹೋಗಿತ್ತು.

ಒಳಗೆ ಅಡಿಗೆ ಮನೆಯಲ್ಲಿದ್ದ ವೃಂದಾಳಿಗೆ ಎಷ್ಟು ತಡೆದುಕೊಳ್ಳಬೇಕೆಂದರೂ, ಒತ್ತಿ ಒತ್ತಿ ಅಳು ಒಳಗಿನಿಂದ ಬರುತ್ತಿತ್ತು. ಸೊರ ಸೊರ ಸದ್ದು ಕೇಳಿದಾಗ, ಇವನು ಎಚ್ಚೆತ್ತ. ಹಸಿವಿನಿಂದ ಕಂಗಾಲಾಗಿದ್ದ ತಾನು, ಊಟ ಮಾಡಿದ್ದೆ.. ಇವಳೇನೆಂದುಕೊಂಡಳೋ.. ಏಕೆ ಅಳುತ್ತಿದ್ದಾಳೋ.. ಅವಳನ್ನು ಕರೆದು ಕೇಳುವ ಧೈರ್ಯವಿರಲಿಲ್ಲ.

ಇವನು ಎದ್ದು ಕೈ ತೊಳೆದು, ಚಪ್ಪಲಿ ಮೆಟ್ಟಿ ಹೊರಗೆ ಹೊರಟಾಗ, ತನ್ನ ಹಿಂದೆ ಅವರಿಬ್ಬರೂ ತನ್ನನ್ನು ನೋಡುತ್ತಿರಬಹುದೆಂಬ ಅನಿಸಿಕೆಯಿಂದ ಇವನು ಹಿಂತಿರುಗಿ ನೋಡಲಿಲ್ಲ. ಸೀದಾ ಹೋಟೆಲ್ಲಿಗೆ ಬಂದ ಅಲ್ಲಿಯೇ ಕಮಲಿನಿ ಸಿಗುತ್ತೇನೆಂದು ಹೇಳಿದ್ದಳು. ಇವನನ್ನು ಕಂಡೊಡನೆ ಅದೆಲ್ಲಿದ್ದಳೋ ಅವಳೇ ಬಂದಳು. ಇವನು ಪೆಚ್ಚು ನಗೆ ನಕ್ಕ. ಅವಳೂ ಹೆದರಿದ್ದಂತೆ ಅನ್ನಿಸಿತ್ತು.

''ಎಲ್ಲಾ ಸರಿಹೋಯ್ತೋ. ಅಥವಾ ಹಾಗೇ ಇದೆಯೋ..?

''ಒಳಗೇ ಇದ್ದೂ ಇದ್ದೂ ಬೇಸರವಾಗ್ತಾ ಇದೆ. ಬ್ಯಾಗಿನಲ್ಲಿದ್ದ ಬಿಸ್ಕತ್ತು ಬ್ರೆಡ್ಡು ತಿಂದೂ ತಿಂದೂ ಸಾಕಾಗಿತ್ತು. ಇವತ್ತು ಸ್ನಾನ ಮಾಡಿ ಊಟ ಮಾಡಿದೆ.''

''ಹೌದಾ? ಅವಳೇನಾದರೂ ಕೇಳಿದಳಾ?''

''ಇಲ್ಲ, ಆದರೆ ಅಳುತ್ತಿದ್ದಳು ಅಂತ ಅನ್ನಿಸ್ತು''

''ಅಳದೇ ಏನು ಮಾಡ್ತಾಳೆ, ಅವಳ ಗಂಡ ಅವಳ ಮನೆಯಲ್ಲಿ ಊಟ ಮಾಡಿ ಎಷ್ಟು ದಿನಗಳಾಗಿತ್ತೋ..?

''ಅನುಮಾನ ಬಂದರೆ.. ನನ್ನ ಗತಿ?''

''ಏನೂ ಹೆದರಬೇಡಿ, ನೋಡೋಣ.. ಇನ್ನೊಂದೆರಡು ದಿನಗಳು ಕಳೆಯಲಿ''

ಹಾಗೇ ಇನ್ನು ಎರಡು ದಿನಗಳು ಕಳೆದವು. ಅವನು ಊಟ ತಿಂಡಿಯನ್ನು ತನ್ನ ರೂಮಿಗೇ ತರಿಸಿಕೊಂಡು ತಿನ್ನುತ್ತಿದ್ದ. ಹೊರಗೆ ಮಾತ್ರ ಬಂದಿರಲಿಲ್ಲ. ಅಲ್ಲಿಂದಲೇ ವೃಂದಾಳ ಚಲನವಲನವನ್ನು ಗಮನಿಸುತ್ತಿದ್ದ. ಭೀಮ ಅವಳ ನೆರಳಿನಂತೆ ಅವಳ ಜತೆಯೇ ಓಡಾಡುತ್ತಿದ್ದ. ರಾತ್ರಿ ಹೊತ್ತು ಸಹ ಅವನೂ ಅಲ್ಲೇ ಮಲಗುತ್ತಿದ್ದನು. ಇವನಿಗೆ ನೆಮ್ಮದಿ ಎನಿಸಿತ್ತು.

ಅಂದಿನ ದಿನ ಬೆಳಿಗ್ಗೆ ಎದ್ದ ಸ್ವಲ್ಪ ಹೊತ್ತಿನ ನಂತರ, ಅವಳು ಏನೋ ಸಂಭ್ರಮ ಪಡುತ್ತಿರುವಂತೆ ಅನ್ನಿಸಿದಾಗ, ಹೊರಗಿನವರು ಯಾರಾದರೂ ಬರುತ್ತಾರೆಯೇ.. ಎಂದು ದಿಗಿಲಾಯಿತು. ಭೀಮನನ್ನು ಕರೆದು ಕೇಳುವ ಮನಸ್ಸಾಯಿತು. ಅವನೆಲ್ಲೂ ಕಾಣಲಿಲ್ಲ. ಅಷ್ಟರಲ್ಲಿ ಅವನು ಒಂದು ಆಟೋ ಮಾಡಿಕೊಂಡು ಬಂದಿದ್ದ.

ಅವರುಗಳಿಗೆ ಕಾಣದಂತೆ ಹೊರಗೆ ನೋಡಿದ. ವೃಂದಾ ಒಂದೆರಡು ಬುಟ್ಟಿಗಳನ್ನು ಇಟ್ಟುಕೊಂಡು ಆಟೋ ಹತ್ತಿದಳು. ಕೆಳಗಿನ ದನಿಯಲ್ಲಿ ಭೀಮನಿಗೆ ಏನನ್ನೋ ಹೇಳಿದಳು ಇವನಿಗೆ ಕೇಳಿಸಲಿಲ್ಲ.

''ಎಲ್ಲಿಗೆ ಹೋದಳು ಇವಳು! ತನ್ನನ್ನು ಬಿಟ್ಟು..? ಆಟೋ ಹೊರಟು ಹೋಯಿತು. ಭೀಮ ಒಳಗೆ ಬಂದು ಬಾಗಿಲನ್ನು ಹಾಕಿಕೊಂಡ. ತಾನೂ ಒಂದು ಆಟೋ ಹಿಡಿದು ಅವಳ ಹಿಂದೆ ಹೋಗಲೇ ಎಂದುಕೊಂಡರೂ, ತಾನೀಗ ದುಡುಕಬಾರದು, ಭೀಮನನ್ನು ಕೇಳಿದರಾಯ್ತು ಎಂದುಕೊಂಡು ಹೊರಗೆ ಬಂದ. ಭೀಮ ಎದ್ದುನಿಂತ.

''ಭೀಮ ನೀನೇಕೆ ಜತೆಯಲ್ಲಿ ಹೋಗಲಿಲ್ಲ?'' ಕೇಳಿದ.

''ನಿಮ್ಮ ಜತೆಗೆ ನನ್ನನ್ನು ಇರು ಎಂದಿದಾರೆ.'' ಎಂದ. ಒಂದು ಗಳಿಗೆ ರೇಗಿತು. ತನ್ನ ಕಾವಲಿಗೆ ಬಿಟ್ಟು ಹೋಗಿರಬಹುದೆ! ತನ್ನ ಮೇಲೆ ಅನುಮಾನವೇನೋ ಎಂದುಕೊಂಡು, ಹೇಗೂ ಅವಳು ಮನೆಯಲ್ಲಿಲ್ಲ. ತಾನೂ ಮನೆಯನ್ನೆಲ್ಲ ಒಂದು ಸುತ್ತು ಹಾಕಿ, ಎಲ್ಲಾ ಪರಿಚಯ ಮಾಡಿಕೊಂಡರೆ ಹೇಗೆ ಅನ್ನಿಸಿತು. ಭೀಮ ಅವನ ಹಿಂದೆ ಹಿಂದೆಯೇ ಬಂದಾಗ, ಸಂಶಯ ಹೆಚ್ಚಾಯಿತು. ಇದು ತನ್ನ ಮನೆಯಲ್ಲ.. ಆದರೆ ತನ್ನ ಮನೆಯಂತೆ ನಟಿಸಬೇಕು. ತಾನೀಗ ಅವನಿಗೆ ಹೆದರಿದಷ್ಟು ಅನುಮಾನ ಹೆಚ್ಚುತ್ತದೆ ಎಂದುಕೊಂಡು, ಕೈ ಕಟ್ಟಿ ಎಲ್ಲಾ ಕಡೆ ತಿರುಗಾಡಿದ.

''ಏನಾದ್ರೂ ಕಳೆದುಹೋಗಿದೆಯಾ, ಹುಡುಕ್ತಿದೀರಲ್ಲ..'' ನಾನು ಹುಡುಕಿ ಕೊಡ್ಲಾ?

''ನೆಮ್ಮದಿ ಕಳೆದು ಹೋಗಿದೆ'' ಎನ್ನುವ ಮನಸ್ಸಾಯಿತು. ಆದರೆ ಈ ಹುಡುಗನ ಹತ್ತಿರ ಆ ಮಾತೇಕೆ ಎಂದುಕೊಂಡು, ''ಎಷ್ಟು ದಿನದಿಂದ ನೀನು ಇಲ್ಲಿದೀಯ.?

''ಹತ್ತು ದಿನದಿಂದ ಇಲ್ಲಿದೀನಿ.. ಸ್ಕೂಲಿಗೆ ರಜವಿದೆಯಲ್ಲ''

''ಅವಳು.. ಮುಂಚೆ ಇದ್ದಳಲ್ಲ..''

''ನೀಲಮ್ಮ ಊರಿಗೆ ಹೋಗಿದಾರೆ. ಅದಕ್ಕೇ ನನ್ನನ್ನು ಗೊತ್ತು ಮಾಡಿದಾರೆ. ನಾನು ಅವರ ತಂಗಿ ಮಗ.'' ಸ್ವಲ್ಪ ಹಾಯೆನಿಸಿತ್ತು. ನೀಲಮ್ಮನೇ ಇದ್ದಿದ್ದರೆ ಇಷ್ಟು ಹೊತ್ತಿಗೆ ತನ್ನ ಬಂಡವಾಳ ಬಯಲಾಗದೇ ಇರುತ್ತಿರಲಿಲ್ಲ. ''ಈ ಹುಡುಗ ಹೊಸಬ ಪರವಾಗಿಲ್ಲ ಎಂದುಕೊಂಡು, ''ಓದ್ತಾ ಇದೀಯಾ? ಯಾವ ಕ್ಲಾಸು?'' ವಿಶ್ವಾಸವನ್ನು ಪ್ರಕಟಿಸಿ ಕೇಳಿದ.

ಅವನು ನಾಚಿಕೆಯಿಂದ ತಲೆ ಕೆರೆದುಕೊಂಡು, ಇನ್ನು ಏಳನೇ ಕ್ಲಾಸು ಎಂದ. ಹುಡುಗನ ಜಾಣತನದ ಮಟ್ಟ ತಿಳಿಯಿತು. ತನಗೆ ಇವನಿಂದ ಏನೂ ತೊಂದರೆ ಇಲ್ಲ ಎಂದುಕೊಂಡು, ''ನಾನು ಸ್ವಲ್ಪ ಹೊರಗೆ ಹೋಗಿ ಬರ್ತೀನಿ.. ಒಬ್ಬನೇ ಇರ್ತೀಯಾ ಪರವಾಗಿಲ್ವಾ!? ಕೇಳಿದ.

''ಅವರು ಬರೋವರೆಗೂ ನೀವು ಎಲ್ಲಿ ಹೋಗಕೂಡದಂತೆ. ಹಾಗಂತ ಹೇಳಿದಾರೆ.''

ತಕ್ಷಣ ರೇಗಿತ್ತು. ನಾನು ಹೋದರೆ ಇವಳಿಗೇನು! ನನ್ನನ್ನು ತಡೆಯೋಕ್ಕೆ ಇವಳ್ಯಾರು! ನಾನು ಹೋಗೇ ಹೋಗ್ತೀನಿ ಎಂದುಕೊಂಡು, ಹೊರಡಲನುವಾದ. ಆದರೆ ಮರುಕ್ಷಣವೇ, ಇದು ಸುಸಮಯ, ಅವಳ ವಿಶ್ವಾಸವನ್ನು ಗಳಿಸಲು, ಏನೋ ಒಂದು ಲೆಖ್ಖಾಚಾರ ಹಾಕಿಕೊಂಡು ಹೊರಗೆ ಹೋಗಿರಬಹುದು. ಅವಳು ಬಂದಾಗ ನಾನಿಲ್ಲದಿದ್ದರೆ, ಅವಳ ಎಣಿಕೆ ತಪ್ಪಾಗಬಹುದು.. ಆಗ ಏನಾಗಬಹುದೋ.. ಅವಳಿಗೆ ತಿಳಿಯದಂತೆ ಅವಳ ಮನೆಗೆ ಬಂದು ಸೇರಿದ್ದಾಗಿದೆ. ಅವಳ ಮರ್ಜಿಯನ್ನು ಅನುಸರಿಸಿದರೆ ತಾನು ಇಲ್ಲಿರಬಹುದು. ಆದರೆ.. ತಾನು ಮಾಡುತ್ತಿರುವುದು ತಪ್ಪಲ್ಲವೇ.. ಸಮಯ ಸಾಧಿಸಿ, ಎಲ್ಲಾ ಅವಳಿಗೆ ತಿಳಿಸಿ, ಅವಳು ಏನು ಹೇಳುತ್ತಾಳೋ ಹಾಗೇ ಮಾಡಿದರೆ.. ಅದಕ್ಕಿನ್ನು ಸಮಯ ಒದಗಿಲ್ಲ. ಇನ್ನು ಎಷ್ಟು ದಿನ ಕಾಯಬೇಕೋ ಎಂದುಕೊಂಡು ತಾನಿದ್ದ ರೂಮಿಗೆ ಬಂದು ಹಾಸಿಗೆಯ ಮೇಲೆ ಕಾಲು ಚಾಚಿ ಮಲಗಿದ.

ಸುಮಾರು ಹದಿನೈದು ದಿನದಿಂದ ಹೀಗೇ ಮಲಗಿರುವುದೇ ಆಗಿದೆ. ಈ ಮನೆಗೆ ಬರುವುದಕ್ಕೆ ಮುಂಚೆ ಒಂದು ವಾರ ಹೋಟೆಲ್ಲಿನಲ್ಲಿದ್ದ.. ಆಗಲೂ ಏನೋ ಆತಂಕ ಭಯ.. ಹೀಗೇ ತಾನಿನ್ನು ಎಷ್ಟು ವರ್ಷ ಕಳೆಯಬೇಕು. ನನ್ನಷ್ಟೇ ಬೇಗುದಿ ಆ ಕಮಲಿನಿಗೆ. ಆದರೆ ಅವಳು ನಿರಾತಂಕವಾಗಿರುವಂತೆ ಅನ್ನಿಸುತ್ತಲ್ಲ ಅಂತನ್ನಿಸಿದರೂ,.. ಈಗ ತಾನಾಗಿಯೇ ಆತಂಕವನ್ನು ದೂರ ಮಾಡಿಕೊಳ್ಳುವ ಉಪಾಯ ಹೊಳೆಯಲಿಲ್ಲ.

ಯಾರೋ ಬಾಗಿಲು ಬಡಿದ ಸದ್ದಿಗೆ ಗಡಬಡಿಸಿ ಎದ್ದ. ಭೀಮ ಬಾಗಿಲು ತೆಗೆದ. ಯಾರೋ ಒಳಗೆ ಬಂದಿರಬೇಕು.. ಗಾಬರಿ ಎನಿಸಿ ಹೊದಿಕೆ ಹೊದ್ದು ಗೋಡೆ ಕಡೆ ತಿರುಗಿ ಮಲಗಿದ. ಭೀಮ ಹೇಳುತ್ತಿದ್ದುದು ಕೇಳಿಸಿತ್ತು.

''ಅಕ್ಕ ಇಲ್ಲ, ದೇವಸ್ಥಾನಕ್ಕೆ ಹೋಗಿದಾರೆ. ಅಣ್ಣ ಮಲಗಿದಾರೆ''

ಆ ಹುಡುಗಿಗೆ ಹುಚ್ಚು, ಈ ಜನ್ಮದಲ್ಲಿ ಇವನು ಬದಲಾಗುಲ್ಲ, ಅದು ಬಿಡಲ್ಲ'' ಎಂದು ಆತ ಸ್ವಲ್ಪ ಜೋರಾಗಿಯೇ ಹೇಳಿದಾಗ, ಅದು ಅವಳ ಗಂಡನನ್ನು ಕುರಿತು ಅಂದಿದ್ದು

ಎಂದು ಅರಿವಾಯಿತು. ಮತ್ತೆ ಸ್ವಲ್ಪ ಹೊತ್ತು ಯಾರೂ ಮಾತನಾಡದೇ ಇದ್ದಾಗ, ಆತ ಹೊರಟು ಹೋದರೇನೋ ಎಂದುಕೊಂಡರೂ, ಎದ್ದುಬಂದು ನೋಡಲು ಅಂಜಿದ. ಭೀಮನನ್ನು ಕರೆದು ಕೇಳಲು ಅನುಮಾನಿಸಿದ.

ಆಟೋ ನಿಂತ ಸದ್ದಾಯಿತು, ಅವಳೇ ಬಂದಿರಬಹುದು ಎಂದು ಊಹಿಸಿದ. ''ಏನು ಚಿಕ್ಕಪ್ಪ, ಯಾವಾಗ ಊರಿನಿಂದ ಬಂದಿರಿ?'' ಅವಳು ಅತಿ ಉತ್ಸಾಹದಿಂದ ಕೇಳಿದಾಗ ಇವನು ಇಳಿದು ಹೋದ. ವೃಂದಳ ಚಿಕ್ಕಪ್ಪಾ, ಊರನಿಂದ ಬಂದಿದಾರೆ ಅಂದರೆ, ಇನ್ನು ಎಷ್ಟು ದಿನ ಇಲ್ಲಿರುತ್ತಾರೋ.. ತನ್ನ ಗತಿಯೇನು?..ಅವರು ಏನು ಪ್ರಶ್ನಿಸುತ್ತಾರೋ, ತನ್ನ ರಹಸ್ಯ ಹೊರಬಿದ್ದರೆ ಎನಿಸಿದಾಗ, ಎದ್ದು ಬಾಗಿಲನ್ನು ಹಾಕಿಕೊಂಡ.

''ನಿನಗೆ ಬುದ್ಧಿ ಇಲ್ಲ ವೃಂದಾ.. ಎಷ್ಟು ಅಂತ ಪೂಜೆ ಪುನಸ್ಕಾರ ಮಾಡ್ತೀಯ ಮದುವೆಯಾಗಿ ಐದು ವರ್ಷದ ಮೇಲಾಯ್ತು. ಇನ್ನು ಅವನು ಬದಲಾಗ್ತಾನೆ ಅನ್ನುವ ಆಸೆಯನ್ನು ಬಿಡು. ಡೈವೋರ್ಸ್ ತಗೋ.. ನಾನು ನಿನಗೆ ಬೇರೆ ಮದುವೆ ಮಾಡಿಸ್ತೀನಿ.'' ಎಂದಿದ್ದಳು.

''ಚಿಕ್ಕಪ್ಪ ನೀವು ಈ ಮಾತು ಹೇಳ್ತಿದೀರಾ!''

''ಹೂಂನಮ್ಮ, ಮತ್ತಿನ್ನೇನು ಮಾಡಲಿ! ಸಾತು ಕೇಳಿದಳಲ್ಲ ಅಂತ, ಈ ಮದುವೆಗೆ ನಿನ್ನ ಅಪ್ಪ ಅಮ್ಮನ್ನ ಒಪ್ಪಿಸಿದೆ, ಇವನು ಹೀಗೇ ಮುಂದುವರೀತಾನೆ ಅಂತ ಗೊತ್ತಿದ್ದಿದ್ರೆ ನಾನು ಖಂಡಿತಾ ಇಂತಹ ಕೆಲಸ ಮಾಡುತ್ತಿರಲಿಲ್ಲ. ನಾನಾಗಿಯೇ ನಿನಗೆ ಅನ್ಯಾಯ ಮಾಡಿದಂತಾಯ್ತು. ಅದಕ್ಕೆ ನಾನೇ ಸರಿ ಮಾಡಬೇಕು ಅಂತ, ನನ್ನ ಮಾತು ಕೇಳು.. ಇವನನ್ನು ಬಿಟ್ಟುಬಾ..''

''ಹಾಗೆ ಬಿಟ್ಟು ಬರುವುದಾದರೆ ಎಂದೋ ಆ ಕೆಲಸ ಮಾಡುತ್ತಿದ್ದೆ. ಆದರೆ ಅವರು ಒಂದಲ್ಲ ಒಂದು ದಿನ ಸರಿ ಹೋಗ್ತಾರೆ ಅನ್ನುವ ನಂಬಿಕೆ ನನಗಿದೆ. ನನ್ನ ಪೂಜೆ, ವ್ರತ ಕತೆ ನನಗೆ ಒಳ್ಳೆಯದನ್ನೇ ಮಾಡುತ್ತದೆ.''

''ನೀನು ಹಳೇ ಕಾಲದ ಪತಿವ್ರತೆ ತರಹ ಆಡಬೇಡ. ಆ ಕಾಲವೆಲ್ಲ ಹೋಯ್ತು. ಕಾಲಕ್ಕೆ ತಕ್ಕ ಹಾಗೆ ಬದಲಾಗಬೇಕು ಎನ್ನುವುದನ್ನು ನಾನು ಒಪ್ತೀನಿ.''

''ಈಚೆಗೆ ನೀವು ತುಂಬಾ ಬದಲಾಯಿಸಿ ಹೋಗಿದೀರಿ ಅಂತ ಗಿರಿಜಾ ಹೇಳಿದ್ದಳು. ಆದರೆ ನಾನು ನಂಬಿರಲಿಲ್ಲ.''

''ಈಗ ನಂಬಿಕೆ ಬಂತು ಅಲ್ವಾ!..''

''ನಿಧಾನವಾಗಿ ಮಾತನಾಡೋಣ ಚಿಕ್ಕಪ್ಪಾ, ಮೊದಲು ಈ ತೀರ್ಥ ಪ್ರಸಾದಗಳನ್ನು ತಗೋಳ್ಳಿ..'' ಅವರಿಗೆ ಕೊಟ್ಟು, ಸ್ವಲ್ಪ ತೀರ್ಥ ಪ್ರಸಾದವನ್ನು ಒಂದು ದೊನ್ನೆಗೆ ಹಾಕಿ, ಭೀಮ..ಇದನ್ನು ಅಣ್ಣಾವರಿಗೆ ಕೊಟ್ಟು ಬಾ ಎಂದಳು..''

ಚಿಕ್ಕಪ್ಪ ಆಶ್ಚರ್ಯದಿಂದ ಕಣ್ಣರಳಿಸಿದರು.

''ಏನಮ್ಮ..ಅವನಿಗೆ! ಅವನಿಗೆ ದೇವರ ಮೇಲೆ ವಿಶ್ವಾಸ, ನಂಬಿಕೆ, ಭಕ್ತಿ ಏನಾದ್ರೂ ಇದೆಯೆ! ನಿನಗೆ ಭ್ರಾಂತು''

''ನನ್ನ ಕರ್ತವ್ಯ ನಾನು ಮಾಡ್ತಿದೀನಿ.. ಈಗೊಂದು ವಾರದಿಂದ ಅವರು ಮನೇಲೇ ಇದಾರೆ. ಹೊರಗೆಲ್ಲೂ ಹೋಗಿಯೇ ಇಲ್ಲ. ಅದಕ್ಕೇ ಪೂಜೆ ಮಾಡಿಸಿಕೊಂಡು ಬರೊಕ್ಕೆ ಹೋಗಿದ್ದೆ''

''ಏನಾಗಿದೆ? ಹುಶಾರಿಲ್ವೆ ಅವನಿಗೆ..?'' ಆಶ್ಚರ್ಯವಿತ್ತು ದನಿಯಲ್ಲಿ.

''ಹುಶಾರಾಗಿದಾರೆ..ಆದರೆ ಯಾಕೋ ಮನೆಯಿಂದ ಆಚೆ ಹೋಗೇ ಇಲ್ಲ.''

ಆತ ನಕ್ಕಂತೆ ಕೇಳಿಸಿತ್ತು. ಅವರುಗಳು ಸ್ವಲ್ಪ ಕೆಳಗಿನ ಧ್ವನಿಯಲ್ಲಿ ಮಾತನಾಡಿದ್ದರೂ, ಇವನಿಗೆ ಕೇಳಿಸಿತ್ತು. ಹಾಗಾದರೆ, ಇವಳ ಗಂಡನಿಗೆ ಕಿವಿ ಕೇಳಿಸುತ್ತಿರಲಿಲ್ಲವೆ? ಕಮಲಿನಿ ಆ ವಿಷಯ ಹೇಳಿದಂತೆ ನೆನಪಿಲ್ಲ ಎಂದುಕೊಂಡ.

''ಈ ಚಿಕ್ಕಪ್ಪ ಯಾರು! ಈಗ್ಯಾಕೆ ಬಂದಿದಾರೆ! ಎಷ್ಟು ದಿನ ಇಲ್ಲಿರುತ್ತಾರೆ?'' ಇವನ ಆತಂಕ ಮತ್ತೆ ಅಧಿಕವಾಯಿತು. ಭೀಮ ಬಾಗಿಲು ತಳ್ಳಿದ. ಬಾಗಿಲು ಹಾಕಿತ್ತು. ಮತ್ತೆ ಹಾಗೇ ವಾಪಸ್ಸು ಹೋದ.

''ಮಲಗಿದಾರೇನೋ, ಆಮೇಲೆ ಕೊಟ್ಟರಾಯ್ತು'' ಎಂದು ವೃಂದಾ ಹೇಳಿದ್ದು ಕೇಳಿಸಿತ್ತು. ''ಬನ್ನಿ ಚಿಕ್ಕಪ್ಪಾ ಊಟ ಮಾಡೋಣಂತೆ.''

''ಏನು ಅಡಿಗೆ ಮಾಡಿದೀಯ?''

''ಅನ್ನ ಹುಳಿ, ಅಷ್ಟೆ ಬೇಕಾದರೆ ಸಂಡಿಗೆ ಕರೀತೀನಿ.''

''ಸಂಡಿಗೆ ಹಪ್ಪಳ ಯಾವುದೂ ಬೇಡ. ಮಜ್ಜಿಗೆ ಇದೆಯೋ ಇಲ್ಲವೋ, ನೆಂಚುಕ್ಕೆ ಉಪ್ಪಿನಕಾಯಿ ಬಡಿಸಿ ಬಿಡು ಸಾಕು.''

ಪಿನಾಕಿಯ ಹೊಟ್ಟೆ ಚುರುಗುಟ್ಟಲಾರಂಭಿಸಿತು. ತಾನು ಮಲಗಿದೀನಿ ಅಂತ ತಿಳಿದಿದಾಳೆ. ಅವಳಾಗಿಯೇ ಎಬ್ಬಿಸುವುದಿಲ್ಲ. ತಾನಾಗಿಯೇ ಹೋದರೆ.. ಎಂದುಕೊಂಡಾಗ, ಚಿಕ್ಕಪ್ಪನ ದೃಷ್ಟಿಗೆ ಹೆದರಿ, ಹಾಗೇ ಮಲಗಿದ.

ಚಿಕ್ಕಪ್ಪ ಊಟ ಮಾಡಿ ಮಲಗಿದರು ಅಂತ ಕಾಣಿಸುತ್ತೆ. ಸದ್ದೇ ಇಲ್ಲ ಎಂದುಕೊಂಡು, ಬಾಗಿಲು ತೆಗೆದ. ಬಾಗಿಲಿನಲ್ಲಿ ಭೀಮ ಕೂತಿದ್ದ. ಭೀಮ ತಟ್ಟೆ ಹಾಕು, ಎಂದ ಆಜ್ಞೆಯಧ್ವನಿಯಲ್ಲಿ. ತನಗೇ ನಗು. ತಾನ್ಯಾರೋ ಪರಕೀಯ, ಈ ಮನೆಯಲ್ಲಿ ಆಜ್ಞೆ ಮಾಡುವಷ್ಟು ಧೈರ್ಯ ತನಗೇ!

ಭೀಮನೇ ತಟ್ಟೆ ಹಾಕಿ ಬಡಿಸಿದ. ವೃಂದಾ ಎಲ್ಲಿದ್ದಳೋ ಬರಲಿಲ್ಲ. ಸರಸರನೆ ಊಟ ಮುಗಿಸಿ, ಕಳ್ಳನಂತೆ ಬಂದು ಮತ್ತೆ ರೂಮು ಸೇರಿದ. ವೃಂದಾ ಚಿಕ್ಕಪ್ಪನ ಸೇವೆಯಲ್ಲಿ

ನಿರತಳಾಗಿದ್ದಾಳೇನೋ ಎಂದುಕೊಂಡಾಗ ವ್ಯಂಗ ನಗೆ ಇಣುಕಿತ್ತು. ಏನೇನು ಪಿತೂರಿ ಮಾಡಲು ಬಂದಿದಾರೋ.. ವೃಂದಾಳ ಮೇಲೆ ಅತಿ ಪ್ರೀತಿ ಇರುವಂತೆ ಅನ್ನಿಸುತ್ತೆ. ಅದೇ ನೆಪ ಮಾಡಿಕೊಂಡು ತನಗೆ ಬುದ್ಧಿ ತಿಳುವಳಿಕೆ ಹೇಳಲು ಬಂದರೆ ಎಂದು ಎನಿಸಿದಾಗ, ಎದ್ದು ಸರಸರನೆ ಬೇರೆ ಉಡುಪು ಧರಿಸಿ, ಯಾರಿಗೂ ತಿಳಿಯದಂತೆ ಮೆಲ್ಲಗೆ ಹೊರಗೆ ಅಡಿ ಇಟ್ಟ. ಹೊರಬಾಗಿಲಿನಲ್ಲಿ ನಿಂತಿದ್ದ ಭೀಮ ಇವನನ್ನು ಕಂಡು ಓಡಿಬಂದ.

''ನಾನು ಬರುವುದು ಸ್ವಲ್ಪ ತಡವಾಗುತ್ತೆ. ನನಗೋಸ್ಕರ ಯಾರು ಊಟಕ್ಕೆ ಕಾಯುವುದು ಬೇಡ. ಹಾಗಂತ ಅಕ್ಕನಿಗೆ ಹೇಳಿಬಿಡು..'' ಎಂದ. ಭೀಮ ತಲೆ ಅಡಿಸಿದ. ಸೀದಾ ಆ ಹೋಟೆಲ್ಲಿಗೆ ಬಂದ. ಕೌಂಟರಿನಲ್ಲಿ ಕಮಿಲಿನಿ ಕಾಣಲಿಲ್ಲ. ಒಳಗಿನ ಲಾಂಜಿನಲ್ಲಿ ಅವಳಿಗಾಗಿ ಕಾದ. ಎಷ್ಟು ಹೊತ್ತು ಕಾದರೂ ಅವಳು ಬರಲಿಲ್ಲ. ನಿರಾಶನಾಗಿ ಹಿಂತಿರುಗಿದ. ಅವಳ ಮನೆ ಸಹ ಅವನಿಗೆ ಗೊತ್ತಿರಲಿಲ್ಲ.

ಮುಂಬಾಗಿಲು ತೆಗೆದೇ ಇದ್ದುದರಿಂದ ಸೀದಾ ಒಳಗೆ ಹೋದ. ತನ್ನ ರೂಮಿನಲ್ಲೇ ಇದ್ದ ಬಚ್ಚಲು ಮನೆಗೆ ಹೋಗಿ ಬಾಗಿಲು ಹಾಕಿಕೊಂಡ. ಬಾಗಿಲು ತೆಗೆದು ಹೊರಬಂದವನಿಗೆ, ತನ್ನ ಮಂಚದ ಬಳಿ ಯಾರೋ ನಿಂತಿರುವಂತೆ ಕಂಡಿತು. ಕತ್ತಲೆಯಲ್ಲಿ ನಿಂತಿದ್ದವರು ಯಾರೆಂದು ತಿಳಿಯಲಿಲ್ಲ.. ಯಾರು! ಯಾರು! ಎಂದ ಸ್ವಲ್ಪ ಕೆಳಗಿನ ಧ್ವನಿಯಲ್ಲಿ. ಆ ವ್ಯಕ್ತಿ ಮಾತನಾಡಲಿಲ್ಲ. ಇವನಿಗೆ ದೀಪ ಹಾಕಿ ನೋಡುವ ಧೈರ್ಯಬರಲಿಲ್ಲ. ವ್ಯಕ್ತಿಯ ಬಳಿ ಸರಿದ. ಅವನು ಹತ್ತಿರ ಸರಿದ ಕೂಡಲೇ ಹಿಂದೆ ಸರಿಯಲು ನೋಡಿದ ವ್ಯಕ್ತಿ ಮುಗ್ಗರಿಸಿದಾಗ ಇವನು ಹಿಡಿದ. ತಕ್ಷಣ ಗೊತ್ತಾಗಿತ್ತು ಆ ವ್ಯಕ್ತಿ ಹೆಂಗಸೆಂದು. ಕೈ ಬಿಟ್ಟ ''ಏನು ಮಾಡ್ತಿದ್ದೆ ಇಲ್ಲಿ..'' ಸ್ವಲ್ಪ ಗಡುಸಾಗಿ ಕೇಳಿದ. ಅವಳು ಉತ್ತರಿಸದೇ ಅವನನ್ನು ತಳ್ಳಿಕೊಂಡೇ ಹೊರಗೆ ಹೊರಟು ಹೋದಳು. ಒಂದು ಗಳಿಗೆ ತಡೆದು, ರೂಮಿನ ದೀಪ ಹಾಕಿದ. ಅಲ್ಲಿ ಏನು ಅಸ್ತವ್ಯಸ್ತವಾಗಿ ಕಾಣಲಿಲ್ಲ!

ಅವಳೇಕೆ ಬಂದಿದ್ದಳು ಇಲ್ಲಿ? ಏನಾದರೂ ಹುಡುಕಲು ಬಂದಿದ್ದಳೆ? ಅಥವಾ ಏನಾದರೂ ಅನುಮಾನ ಬಂದು, ಅದನ್ನು ಬಗೆಹರಿಸಿಕೊಳ್ಳಲು ಬಂದಿದ್ದಳೆ? ಅಥವಾ.....ಅಥವಾ ನನಗಾಗಿ ಬಂದಿದ್ದಳೇ. ಆ ಯೋಚನೆ ಬಂದಿದ್ದೇ ತಡ, ಮೈಯಲ್ಲೆಲ್ಲಾ ಏನೋ ಸಂಚಾರವಾದಂತಾಯಿತು. ತಾನು ಅವಳ ಸನಿಹದಲ್ಲಿ ನಿಂತಿದ್ದೆ. ಅವಳು ತನ್ನನ್ನು ತಳ್ಳಿಕೊಂಡೇ ಹೋದಳಲ್ಲ..ಎನಿಸಿದಾಗ ಮೊಸರಾಗ ಪಸರಿಸಿದಂತಾಯಿತು. ಅವಳು ತನ್ನನ್ನು ಅವಳ ಗಂಡನೆಂದೇ ತಿಳಿದಿದ್ದಾಳೆ. ತಾನು ಸ್ವಲ್ಪ ಪ್ರೀತಿ ತೋರಿಸಿದರೂ ಸಾಕು. ಅವಳು ತನ್ನ ಬಳಿಗೆ ಬರುವುದು ಖಚಿತ. ತಾನೇಕೆ ಆ ಪ್ರಯತ್ನವನ್ನು ಮಾಡಬಾರದು ಎಂದುಕೊಂಡರೂ, ಒಂದು ಹೆಜ್ಜೆಯನ್ನು ಮುಂದಿಡಲಾರದಾದ.

ತಾನೆಂತಹ ಅವಿವೇಕಿ, ತಾನು ಇಲ್ಲಿರುವುದೇ ನ್ಯಾಯವಲ್ಲ, ಅಂಥಾದ್ದರಲ್ಲಿ, ಅವಳ ಸಂಗವನ್ನು ಬಯಸಹೊರಟಿದ್ದೇನಲ್ಲ, ತನ್ನಿಂದ ಏನಾದರೂ ಅವಿವೇಕ ನಡೆಯುವ ಮೊದಲೇ ತಾನು ಇಲ್ಲಿಂದ ಹೊರಟುಬಿಡಬೇಕು. ಹೋಗುವ ಮುಂಚೆ ಅವಳಿಗೆ ಎಲ್ಲಾ ತಿಳಿಸಿ ಅವಳ ಕ್ಷಮಾಪಣೆ ಕೇಳಬೇಕು. ಕೆಲವು ದಿನಗಳ ಆಶ್ರಯ ಕೊಟ್ಟದ್ದಕ್ಕೆ ಕೃತಜ್ಞತೆ

ಹೇಳಬೇಕು. ಆದರೆ.. ಮೊದಲು ಆ ಚಿಕ್ಕಪ್ಪ ಇಲ್ಲಿಂದ ತೊಲಗಲಿ. ಆ ಚಿಕ್ಕಪ್ಪ ಇರುವವರೆಗೂ, ತಾನು ಅವಳೊಡನೆ ಮಾತನಾಡಲಾರೆ..ಎಂದುಕೊಂಡ.

ಏನೂ ಮಾಡಲು ತೋಚದೇ, ಹಾಸಿಗೆಯ ಮೇಲೆ ಕೂತ. ಕೈಗೆ ಏನೋ ತಗುಲಿದಂತಾಯ್ತು ನೋಡಿದ. ಕರಿಯ ದಾರಕ್ಕೆ ಕಟ್ಟಿದ್ದ ಒಂದು ತಾಯಿತ. ನಗು ಬಂತು. ಗೋಡೆಯತ್ತ ಎಸೆಯಬೇಕೆಂದುಕೊಂಡವನು, ಹಾಗೆ ಮಾಡಲಾಗದೇ, ಅದನ್ನು ತನ್ನ ಷರಟಿನ ಜೇಬಿನೊಳಗೆ ಇಳಿಬಿಟ್ಟ. ಅಸ್ತವ್ಯಸ್ತವಾಗಿದ್ದ ದಿಂಬನ್ನು ಸರಿಮಾಡಿದ. ದಿಂಬಿನ ಕೆಳಗೆ ಇನ್ನೊಂದು ತಾಯಿತ. ಇದೇನಪ್ಪಾ ಎಂದುಕೊಂಡು, ಅದನ್ನು ಕೈಲಿ ಹಿಡಿದು, ಹಾಸಿಗೆಯನ್ನು ಸ್ವಲ್ಪ ಎತ್ತಿ ನೋಡಿದ. ಹಾಸಿಗೆಯ ಕೆಳಗೆ ಹತ್ತಾರು ತಾಯಿತಗಳು.. ಒಂದು ಗಳಿಗೆ ಮೈ ಝುಲ್ ಎಂದಿತು. ಇದ್ಯಾವ ತಂತ್ರವೋ, ಯಂತ್ರವೋ, ಯಾವ ವಶೀಕರಣದ ಮಂತ್ರವೋ..ತಾನೇಕೆ ಇದಕ್ಕೆ ಸಿಕ್ಕಿ ಬೀಳಬೇಕು ಎಂದುಕೊಂಡರೂ ಮರುಗಳಿಗೆಯೇ ಇದೆಲ್ಲ ಅವಳ ಗಂಡನಿಗಾಗಿ, ಅವನನ್ನು ಸರಿದಾರಿಗೆ ತರಲು ತಂದಿರಿಸಿರುವ ತಾಯಿತಗಳು. ತನಗೂ ಇದಕ್ಕೂ ಏನು ಸಂಬಂಧವಿಲ್ಲ ಎಂದುಕೊಂಡು ಎಲ್ಲಾ ತಾಯಿತಗಳನ್ನು ಒಟ್ಟಾಗಿ ಸೇರಿಸಿ ಹಾಸಿಗೆಯಡಿಯಲ್ಲಿ ಹಾಕಿದ. ಅಲ್ಲಿಗೆ ಅದನ್ನು ಮರೆತ.

ಆ ರಾತ್ರಿ ಅವನಿಗೆ ಏನೇನೋ ಕನಸುಗಳು. ಯಾರೋ ಇವನನ್ನು ಅಟ್ಟಿಸಿಕೊಂಡು ಬರುತ್ತಿರುವಂತೆ, ನೋಡುತ್ತಾ ನೋಡುತ್ತಾ ಅದು ಆ ವ್ಯಕ್ತಿಯು ಮುಂಬಂದಂತೆ.. ಅದರ ಕತ್ತಿನಲ್ಲಿ ಈ ತಾಯಿತಗಳು ತೊಯ್ದಾಡುತ್ತಿರುವಂತೆ. ತಾನು ಅದನ್ನು ಕೈ ಹಾಕಿ ಎಳೆದಂತೆ. ಆ ವ್ಯಕ್ತಿ ಕಿರುಚಿಕೊಂಡಂತೆ.. ತಕ್ಷಣ ಎಚ್ಚರವಾಯಿತು. ತಾನು ಎಲ್ಲಿದ್ದೇನೆ ಎಂದು ಅರಿವಾಗಲು ಕೆಲ ನಿಮಿಷಗಳು ಬೇಕಾದವು.

ಒಂದು ವೇಳೆ ಸತ್ತ ವ್ಯಕ್ತಿ ತನ್ನನ್ನು ಪ್ರೇತವಾಗಿ ಕಾಡಿದರೆ.. ಎಂದೆನಿಸಿದಾಗ ಆ ರೂಮಿನಿಂದ ಹೊರಗೆ ಬಂದು ನಿಂತ. ಹೊರಗಿನಿಂದ ಬೀಸುತ್ತಿದ್ದ ಗಾಳಿಗೆ ಸ್ವಲ್ಪ ಹಿತವೆನಿಸಿತು. ತಾನು ಇನ್ನು ಈ ಮನೆಯಲ್ಲಿರಲಾರೆ. ಒಂದಲ್ಲ ಒಂದು ರೀತಿಯ ಭಯ ತನಗೆ ಇದ್ದೇ ಇರುತ್ತದೆ. ತನಗೆ ಇದರಿಂದ ಮುಕ್ತಿಯಿಲ್ಲ. "ಅಯ್ಯೋ ದೇವರೇ, ನೀನಾದರೂ, ನಾನು ಏನು ಮಾಡಬೇಕೆಂಬ ಉಪಾಯವನ್ನು ತಿಳಿಸಬಾರದೇ.." ಕಾಣದ ದೇವರನ್ನು ಆ ಅರ್ಧರಾತ್ರಿಯಲ್ಲಿ ಕೇಳಿಕೊಂಡ.

ವೃಂದಾ ಬೆಳಿಗ್ಗೆ ದೇವರ ಪ್ರಸಾದವನ್ನು ಕಳಿಸಿದ್ದಳು. ಆದರೆ ತಾನು ಮಲಗಿದ್ದವನಂತೆ ನಟಿಸಿದ್ದೆ. ಅದರ ಫಲವೇ ಇದು. ಒಳಗೆ ಬಂದು ಹಾಸಿಗೆಯ ಮೇಲೆ ಕುಳಿತುಕೊಳ್ಳುವ ಮನಸ್ಸಾಗದೇ, ನೆಲದ ಮೇಲೆ ಮಲಗಿದ. ಚಿಕ್ಕವಯಸ್ಸಿನಲ್ಲಿ ಕಲಿತಿದ್ದ ದೇವರ ಶ್ಲೋಕಗಳನ್ನು ಮನಸ್ಸಿನಲ್ಲೇ ಹೇಳಿಕೊಂಡ. ನೆಲ ಒತ್ತುತ್ತಿತ್ತು. ಹೊದೆಯಲು ಹೊದಿಕೆ ಇಲ್ಲ. ನಿದ್ದೆ ಬರಲಿಲ್ಲ. ಆ ರಾತ್ರಿಯೆಲ್ಲಾ ಎದ್ದು ಕೂತು, ಕೂತು ಎದ್ದು ಕಾಲ ಕಳೆದ.

ತನ್ನ ಹತ್ತಿರ ಬೇರೆ ಹಾಸಿಗೆ, ಹೊದಿಕೆಗಳಿಲ್ಲ..ಏಕೋ ಏನೋ ಅವನ ಹಾಸಿಗೆಯ ಮೇಲೆ ಮಲಗಿದ್ದಕ್ಕೆ ಅಂತಹ ಕನಸು ಬಂದಿದೆಯೇನೋ ಅಂತನ್ನಿಸ್ತಿದೆ. ನಾಳೆಯಿಂದ ನಾನೇನು ಮಾಡಲಿ ಎಂದುಕೊಂಡು, ಚೆನ್ನಾಗಿ ಬೆಳಗಾಗುವುದನ್ನೇ ಎದುರು ನೋಡುತ್ತಿದ್ದ.

ಚಿಕ್ಕಪ್ಪ ಬೆಳಗಿನ ವಾಕಿಂಗ್ ಹೋಗಿದ್ದರೇನೋ ಎಲ್ಲೂ ಕಾಣಲಿಲ್ಲ. ಭೀಮ ಎದ್ದುದನ್ನು ಕಂಡು ''ಕಾಫಿ ತರಲೇ'' ಅಂತ ಕೇಳಿದ.. ''ನಿಮ್ಮಕ್ಕ ಎಲ್ಲಿ! ಕೇಳಿದ. ಸ್ನಾನಕ್ಕೆ ಹೋಗಿದಾರೆ. ಇವನೆಂದ.

''ನನ್ನ ಸೋಪು ಮುಗಿದುಹೋಗಿದೆ ತಂದುಕೊಡು..'' ಎಂದು ಅವನ ಕೈಗೆ ಹತ್ತು ರೂಗಳ ನೋಟನ್ನಿತ್ತು ಅವನು ಹೋಗುವುದನ್ನೇ ಕಾದಿದ್ದು ಬಾಗಿಲನ್ನು ಹಾಕಿಕೊಂಡು, ಸರಸರನೇ, ತಾನು ಮಲಗಿದ್ದ ಹಾಸಿಗೆಯನ್ನು ಚಿಕ್ಕಪ್ಪ ಮಲಗಿದ್ದ ಹಾಸಿಗೆಯನ್ನು ಅದಲು ಬದಲು ಮಾಡಿದ. ಮರೆಯದೇ ತಾಯಿತಗಳನ್ನು ತೆಗೆದು ಅಟ್ಟದ ಮೇಲೆ ಹಾಕಿದ. ನಂತರ ತನ್ನ ಪಾಡಿಗೆ ತಾನು ಹಾಯಾಗಿ ಮಲಗಿ ನಿದ್ರಿಸಿದ.

ಅವನಿಗೆ ಚೆನ್ನಾಗಿ ಎಚ್ಚರವಾದಾಗ, ಮಧ್ಯಾಹ್ನವಾಗುತ್ತಾ ಬಂದಿತ್ತು. ಭೀಮನಾಗಲೀ ವೃಂದನಾಗಲೀ ಆತನನ್ನು ಎಚ್ಚರಿಸುವ ಗೋಜಿಗೆ ಹೋಗಿರಲಿಲ್ಲ. ಚಿಕ್ಕಪ್ಪ ಸ್ವಲ್ಪ ಎತ್ತರದ ಧ್ವನಿಯಲ್ಲೇ ಹೇಳುತ್ತಿದ್ದರು.

''ನಿಮ್ಮ ಮಾವ ಏನೋ, ಕೂತು ತಿನ್ನುವಷ್ಟು ಆಸ್ತಿ ಬಿಟ್ಟು ಹೋಗಿದಾರೆ. ಆದರ ಹಾಗಂತ ಮನೆಯಲ್ಲೇ ಕೂತು ತಿಂದರೆ, ತಿಂದದ್ದು ಅರಗಬೇಡವೆ! ಮನೇಲೇ ಇದಾನಲ್ಲ.. ಏನು ಇದರ ಅರ್ಥ..?

''ಬಿಡಿ ಚಿಕ್ಕಪ್ಪಾ.. ಹೇಗೋ ಆಗುತ್ತೆ, ನಮ್ಮದೇನು ದೊಡ್ಡ ಸಂಸಾರವೇ?''

''ಈಗ ದೊಡ್ಡದಲ್ಲ, ಮುಂದೂ ಹೀಗೇ ಇರುತ್ಯೇ?''

''ಹೇಗೆ ಇರುತ್ತೋ ನನಗೆ ತಿಳಿಯದು. ಈ ಮನೆಗೆ ಸೊಸೆಯಾಗಿ ಬಂದೆ. ಬದುಕಿರುವವರೆಗೂ ಈ ಮನೆಯವಳಾಗಿ ಬಾಳ್ತೀನಿ. ನನಗಿನ್ನಾವ ಆಸೆಯೂ ಇಲ್ಲ.''

''ಯಾವ ಆಸೆಯೂ ಇಲ್ಲವೇ, ಈ ವ್ರತ ಕತೆಗಳನ್ನು ಮಾಡ್ತಿಲ್ಲ ನೀನು..''

''ಆಸೆ..ಅದು ಬೇರೆ. ನಾಲ್ಕು ಜನರಂತೆ ಸಂಸಾರ ನಡೆಸಬೇಕೆಂಬ ಆಸೆ ಎಲ್ಲಾ ಹೆಂಗಸರಿಗೂ ಇರಲ್ಲವೆ!''

''ನಿನ್ನ ದೇವರಿಗೆ ಇನ್ನು ದಯೆ ಬಂದಿಲ್ಲ ನಿನ್ನ ಮೇಲೆ.''

''ದೇವರಿಗೆ ನನ್ನ ಮೇಲೆ ದಯೆ ಬರುವವರೆಗೂ ನಾನು ಕಾಯ್ತೀನಿ.''

''ಮಚ್ಚು ಮಡುಗಿ, ನಿನಗೊಂದು ತರಹ ತಿಳುವಳಿಕೆ ಇಲ್ಲ, ನಿನ್ನ ಗಂಡನಿಗೆ ಇನ್ನೊಂದು ತರಹ ತಿಳುವಳಿಕೆ ಇಲ್ಲ, ಜೀವಮಾನವನ್ನೆಲ್ಲಾ ಹೀಗೇ ಕಳೆದರೆ ಏನು ಪ್ರಯೋಜನ?''

''ಅದನ್ನೇ ಪಡೆದುಕೊಂಡು ಬಂದದ್ದು, ಅಂತ ಭಾವಿಸ್ತೀನಿ.''

''ಏನು ಸುಖ ಅದರಲ್ಲಿ? ಎಲ್ಲಾ ಜವಾಬ್ದಾರಿನೂ ಹಾಕ್ಕೊಂಡು ಫಜೀತಿ ಪಡ್ತಾ ಇದೀಯ.. ಏನಾದ್ರೂ ಮಾಡ್ಕೊಳ್ಳಲಿ. ಎಲ್ಲಾ ಅವನ ತಲೆಗೆ ಕಟ್ಟಿ ನಿಶ್ಚಿಂತೆಯಿಂದಲಾದ್ರೂ ಇರಬಾರದೇ..''

"ಅತ್ತೆಗೆ ಮಾತು ಕೊಟ್ಟು ಬಿಟ್ಟಿದೀನಿ.."

"ನೀನು ಅತ್ತೆಗೆ ಮಾತು ಕೊಟ್ಟೆ. ಆಕೆ ನಿನಗೇನು ಸುಖ ಕೊಟ್ಟಳು? ಅವಳ ಕೈಲಿ ತಿದ್ದಲಾಗದ ಮಗನನ್ನು ನೀನೇನು ಸರಿಮಾಡ್ತೀಯೋ..?"

"ಬಂದಾಗೆಲ್ಲಾ ಇದೇ ಮಾತನ್ನಾಡ್ತೀರಿ.. ಬೇರೆ ಮಾತನ್ನಾದ್ರೂ ಆಡಿ."

"ಅಂದರೆ ನಿನ್ನ ಹಠ ನಿನಗೆ, ನಿನಗೆ ಸಾವಿತ್ರಿ ಅಂತ ಹೆಸರನ್ನಿಡಬೇಕಾಗಿತ್ತು." ವೃಂದಾ ಮುಕ್ತವಾಗಿ ನಕ್ಕಾಗ, ಒಳಗೆ ಮಲಗಿದ್ದವನಿಗೆ ಏನೋ ಒಂದು ತರಹವೆನಿಸಿತ್ತು. ಅವಳೂ ತನ್ನನ್ನು ದ್ವೇಷಿಸಿದ್ದರೇ? ಆಗೇನಾಗ್ತಿತ್ತು ? ಹಾಗಾದರೆ ಇವಳು ಅಷ್ಟು ಸತೀ ಸಾಧ್ವೀಮಣಿಯೇ..?

"ಇನ್ನು ಹತ್ತು ಹದಿನೈದು ದಿನಕ್ಕೆ ಮತ್ತೆ ಬರ್ತೀನಿ. ಸ್ವಲ್ಪ ಕೆಲಸವಿದೆ. ಚಿಕ್ಕಪ್ಪ ಹೇಳುತ್ತಿದ್ದರು.. ಅವನಿಗೆ ನಾನು ಹೇಳುವ ಗೋಜಿಗೆ ಹೋಗೊಲ್ಲ, ನಿನಗೇ ಗೊತ್ತಲ್ಲ, ಆ ದಿನ ನನಗಾದ ಮರ್ಯಾದೆ.."

"ಅಂದರೆ, ಇವಳ ಗಂಡನಿಂದ ಆತನಿಗೆ ಏನೋ ಅವಮಾನವಾಗಿದೆ, ಅಷ್ಟಿದ್ದೂ ಆತ ಕೇಳಿಸುವಂತೆ ಹೀಗೆ ಮಾತನಾಡುತ್ತಾರಲ್ಲ. ಅವರು ಮತ್ತೆ ಬರುವುದಕ್ಕೆ ಮುಂಚೆ ತಾನು ಏನಾದರೂ ಒಂದು ಇತ್ಯರ್ಥ ಮಾಡಿಬಿಡಬೇಕು. ಹೀಗೇ ಅಜ್ಞಾತವಾಸದಲ್ಲಿ ಎಷ್ಟು ದಿನ ಇರುವುದು!"

ಒಂದು ವಾರವಾದರೂ ತನಗೆ ಇಲ್ಲಿಗೆ ಹೊಂದಿಕೊಳ್ಳಲು ಆಗಿಲ್ಲ, ಭಯ ಆವರಿಸಿಕೊಂಡೇ ಇದೆ. ಆ ಸತ್ತ ವ್ಯಕ್ತಿಯ ಬಗ್ಗೆ ಪೇಪರ್‌ನಲ್ಲಿ ಬಂದಿತ್ತು ಎಂದು ಕಮಲಿನಿ ಹೇಳಿದ್ದಳು. ಆ ಸುದ್ಧಿಯ ಪ್ರಕಾರ, ಸತ್ತ ವ್ಯಕ್ತಿ ನಾನು.. ನಾನು ಸತ್ತಿಲ್ಲ ಬದುಕಿದ್ದೇನೆ ಎಂದು ನಾನು ಯಾರಿಗೆ ಹೇಳಿಕೊಳ್ಳಲಿ! ಹಾಗೆ ಹೇಳುವುದು ಬೇಡವೇ ಬೇಡ ಎಂದು ಅವಳು ಹೇಳಿದ್ದಳಲ್ಲ, ಆದರಿಂದ ಅವಳಿಗೆ ಕಷ್ಟವಂತೆ, ಪೋಲಿಸು, ಕೇಸು ಎಂದು ಸಿಕ್ಕಿಕೊಳ್ಳಲು ಇಷ್ಟವಿಲ್ಲವಂತೆ. ಅದು ಸರಿಯೋ, ತಪ್ಪೋ ತಿಳಿಯದ ಸ್ಥಿತಿಯಲ್ಲೇ ಇದೀನಿ. ನಾನಿನ್ನು ಅವಳ ಮನೆಗೆ ಹೋಗೋಣ ಎಂದರೆ ಮನೆ ಗೊತ್ತಿಲ್ಲ. ಆ ಹೋಟೆಲ್ಲಿಗೆ ಸಾಯಂಕಾಲ ಮಾತ್ರ ಬರ್ತಾಳಂತೆ. ಅಲ್ಲೇ ಇವನ ಸ್ನೇಹವಾಗಿರುವದು. ಮನೆ ಹುಡುಕಿಕೊಂಡು, ಅವಳನ್ನು ಹೋಗಿ ನೋಡಿ, ಮಾತನಾಡಿ ಬರೋಣವೆಂದುಕೊಂಡ, ಸಧ್ಯಕ್ಕೆ ಈ ಊರಿನಲ್ಲಿ ಅವಳೊಬ್ಬಳೇ ಅವನ ಸ್ನೇಹಿತೆ, ಹಿತಚಿಂತಕಿ, ಇವನು ಮನೆಯಿಂದ ಸ್ವಲ್ಪ ದೂರ ನಡೆದು, ಬಸ್‌ಸ್ಟಾಂಡಿನಲ್ಲಿ ನಿಂತಿದ್ದ. ಅಷ್ಟರಲ್ಲಿ ಒಂದು ಆಟೋ ಇವನ ಬಳಿ ಬಂದು ನಿಂತಿತು. ಅದರಲ್ಲಿ ಒಳಗಿದ್ದವರು ಬಗ್ಗಿ ನೋಡಿದರು. ಅವರು ಯಾರಿರಬಹುದು ಎಂದು ಇವನಿಗೆ ಊಹಿಸಲೂ ಆಗಲಿಲ್ಲ. ತಕ್ಷಣ ಏನೋ ಒಂದು ತರಹ ಭಯ ಆವರಿಸಿಕೊಂಡಿತು. ಅವರು ಕರೆಯುತ್ತಿದ್ದರೂ, ತನಗಲ್ಲವೆಂಬಂತೆ, ನಿಂತಿದ್ದ ಇನ್ನೊಂದು ಆಟೋದೊಳಗೆ ಕೂತು, ದಾರಿ ಕೇಳಿದ. ತನ್ನ ಹಿಂದೆ ಆ ಆಟೋ ಏನಾದರೂ ಫಾಲೋ ಮಾಡುತ್ತಿದೆಯೋ ಎಂದು ಒಂದೆರಡು ಸಲ ನೋಡಿದ. ಯಾವ ಆಟೋನೂ ಇವನನ್ನು ಫಾಲೋ ಮಾಡುತ್ತಿರಲಿಲ್ಲ. ದಿನದ ಹೊತ್ತಿನಲ್ಲಿ

ಮನೆಯಿಂದ ಹೊರಗೇ ಬರಬಾರದು. ಬಂದರೆ ಸಿಕ್ಕಿ ಬೀಳುತ್ತೇನೆ ಎಂದುಕೊಂಡ.

ಆ ರಾತ್ರಿ ಅಲ್ಲೇ ಹೋಟೆಲ್ಲಿನಲ್ಲಿ ಉಳಿದುಕೊಂಡ. ಕಮಲಿನಿಯೊಡನೆ ಹೇಳಿದ್ದ. ''ಮನೆ ಬಿಟ್ಟು ಬರುವುದಕ್ಕೆ ಭಯ. ನನ್ನನ್ನು ಆತ ಅಂತ ತಿಳಿದುಕೊಂಡು ಜನ ಮಾತನಾಡಿಸುತ್ತಾರೇನೋ ಅಂತ ಒಂದು ತರಹ ದಿಗಿಲು.''

''ಆತನಿಗೂ ಹೆಚ್ಚಿಗೆ ಪರಿಚಯದವರು ಇರಲಿಲ್ಲ. ಅಲ್ಲದೇ ಈಚೆಗೆ ಸ್ನೇಹಿತರೊಡನೆ ಜಗಳವಾಡಿ ಅವರಿಂದ ದೂರವಿದ್ದರು.''

''ಆದರೂ ಈ ಕೆಲಸವನ್ನು ನಿಭಾಯಿಸುವುದು ಕಷ್ಟವೆನಿಸುತ್ತಿದೆ.''

''ಇನ್ನು ಕೆಲವು ದಿನ ನೋಡಿ, ಆಮೇಲೆ ಮತ್ತೇನನ್ನಾದರೂ ಯೋಚಿಸೋಣ.''

ಆ ರಾತ್ರಿ ಗಂಡನ ಹಾದಿ ಕಾದೂ ಕಾದೂ ಸುಸ್ತಾದಳು ವೃಂದಾ. ಊಟದ ಹೊತ್ತಿಗೂ ಬಂದಿರಲಿಲ್ಲ. ಎಲ್ಲಿಗೆ ಹೋದರಪ್ಪಾ? ಮತ್ತೆ ಆ ಚಾಳಿ ಶುರುವಾಯಿತೇ ಅಂತ ಅಂದುಕೊಂಡು, ಭೀಮನಿಗೆ ಊಟ ಹಾಕಿ, ''ನೀನು ಅಲ್ಲೇ ಬಾಗಿಲ ಹತ್ತಿರ ಮಲಗಿರು. ನಾನು, ಒಳಗೆ ಮಲಗಿರ್ತೀನಿ. ಬಂದರೆ ಗೊತ್ತಾಗಲ್ಲ ಎಂದು ಹೇಳಿ, ಅವನು ಇದ್ದ ರೂಮಿಗೆ ಬಂದಳು. ದೀಪ ಹಾಕಿ ನೋಡಿದ ತಕ್ಷಣವೆ ಗೊತ್ತಾಗಿತ್ತು. ಯಾರೋ ಹಾಸಿಗೆಯನ್ನು ಅದಲು ಬದಲು ಮಾಡಿದ್ದಾರೆಂದು, ಹಾಸಿಗೆಯಡಿ ಕೈ ಹಾಕಿ ನೋಡಿದಳು. ಒಂದೇ ಒಂದು ತಾಯಿತ ಕಂಡು ಬರಲಿಲ್ಲ. ಅವಳು ನಡುಗಿ ಹೋದಳು. ಅದರ ಪ್ರಭಾವವೇ ಕಾರಣ, ತನ್ನ ಗಂಡ ಮನೆಯಲ್ಲೇ ಇದ್ದಾನೆಂದು ನಂಬಿದ್ದಳು. ಆದರೆ ಈಗ, ಆ ತಾಯಿತಗಳೂ ಇಲ್ಲ, ಅವನೂ ಇಲ್ಲ. ಎಲ್ಲಿ ಹೋಗಿದಾನೋ, ಮತ್ತೆ ಬರುತ್ತಾನೋ ಇಲ್ಲವೋ ಎಂದುಕೊಂಡು, ಮನದಲ್ಲೇ ದೇವರನ್ನು ಪ್ರಾರ್ಥಿಸಿದಳು ಬೆಳಿಗ್ಗೆ ಸ್ನಾನವಾದ ನಂತರ ಹರಕೆ ಹಣವನ್ನು ಕಟ್ಟಿಡಬೇಕು ಎಂದುಕೊಂಡಳು.

ಮದುವೆಯಾದ ದಿನದಿಂದ ದೇವರನ್ನು ಎಷ್ಟು ಬಗೆಯಲ್ಲಿ ಪ್ರಾರ್ಥಿಸಿದಾಳೋ ಅದೆಷ್ಟು ಹರಕೆ ಹೊತ್ತಿದಾಳೋ, ಇಷ್ಟು ವರ್ಷದ ತಪಸ್ಸು ಫಲಿಸಿದೆ ಎಂದು ಸಂತೋಷ ತರುವಷ್ಟರಲ್ಲೇ ಇದೇನು! ತಾನೆಲ್ಲಿ ತಪ್ಪಿದೆ? ಎಂದಾಗ ಅಳು ಬರುವಂತಾಯ್ತು.

ಮದುವೆಯಾದ ಹೊಸದರಲ್ಲಿ ಆಗಾಗ್ಗೆ ಕಣ್ಣೀರು ಹಾಕುತ್ತಿದ್ದಳು. ಆಗ ಅತ್ತೆಯೇ ಸಮಾಧಾನ ಹೇಳುತ್ತಿದ್ದಳು. ''ನೀನು ಕಣ್ಣೀರು ಹಾಕಬಾರದು. ಈ ಮನೆ ನಿನ್ನಿಂದ ಉದ್ಧಾರವಾಗಲಿ ಎಂದು ನಿನ್ನನ್ನು ಮದುವೆ ಮಾಡಿ ಮನೆ ತುಂಬಿಸಿಕೊಂಡಿರುವುದು. ನಿನಗೆ ಎಷ್ಟೇ ಕಷ್ಟವಾದರೂ, ಸರಿ, ಅವನನ್ನು ಸರಿ ಹಾದಿಗೆ ತಂದು, ಬಾಳುವಂತೆ ಮಾಡ್ತೀನಿ ಅಂತ ಮಾತು ಕೊಡು, ಪತಿವ್ರತೆಯಾದ ಹೆಂಡತಿಯಿಂದ ಯಾವುದೂ ಅಸಾಧ್ಯವಲ್ಲ. ನಿನ್ನ ಧರ್ಮ ನಿಷ್ಠೆ ನಿನಗೆ ಒಳ್ಳೆಯದನ್ನು ಮಾಡುತ್ತದೆ ಎನ್ನುವ ನಂಬಿಕೆ ನನಗಿದೆ. ನಿನಗೆ ಸಾಧ್ಯವಾಗದೇ ಅವನಿಂದ ದೂರ ಹೊರಟು ಹೋದರೆ, ಅವನು ಅನಾಥನಾಗಿ ಬಿಡ್ತಾನೆ. ಯಾವ ತಾಯಿಯೂ ಬಯಸದ ಮಾತು ಅದು..''

ಆ ಸಮಯದಲ್ಲಿ ಅವಳಿಗೆ ಅದು ತನಗೆ ಆದ ದ್ರೋಹ ಎಂದು ತನ್ನಲ್ಲೇ ಕುದಿದು ಮನಸಾರೆ ಅತ್ತಿದ್ದಳು. ಅತ್ತೆ ಸ್ವಾರ್ಥಿ ಎಂದು ಅನ್ನಿಸಿದರೂ, ಅವಳ ವಿಶ್ವಾಸ, ಆದರ, ಇವಳನ್ನು ಮೂಕಿಯನ್ನಾಗಿ ಮಾಡಿದ್ದವು. ವ್ಯಥೆ ಪಟ್ಟುಕೊಂಡು, ಅಪ್ಪನ ಮನೆಗೆ ಹೋಗುವುದು ಅವಳಿಂದಾಗದ ಕೆಲಸ.

ಮದುವೆ ಗೊತ್ತಾದ ನಂತರ, ಯಾರೋ, ಹುಡುಗನ ಗುಣ ನಡತೆ ಚೆನ್ನಾಗಿಲ್ಲ ಅಂದಿದ್ದರಂತೆ. ಮದುವೆ ನಿಂತು ಹೋದರೆ ಅವಮಾನ ಎಂದು ತಂದೆ ಮನೆಯವರೊಡನೆ ಆ ವಿಷಯವನ್ನು ಹೇಳದೇ ಮದುವೆ ಮಾಡಿ ಮುಗಿಸಿದ್ದರು. ಅದನ್ನು ಇವಳು ಮರೆಯುವಂತಿರಲಿಲ್ಲ. ಅಪ್ಪನಿಗೆ ತನ್ನ ಸುಖಕ್ಕಿಂತ, ಮಾನವೇ ಮುಖ್ಯವಾಗಿತ್ತು. ಅದನ್ನು ತಾನೀಗ ಆಡಿದರೂ ಏನೂ ಪ್ರಯೋಜನವಿಲ್ಲ. ಗಂಡನನ್ನು ಬಿಟ್ಟು ಬಂದವಳು ಎಂದು ಜನ ಆಡಿಯೇ ಆಡಿಕೊಳ್ಳಾರೆ. ತಾನು ಅಲ್ಲಿಯೂ ನೆಮ್ಮದಿಯಿಂದ ಇರಲಾರೆ. ಆ ಹಂಗಿನ ತವರಿಗಿಂತ, ಗಂಡನಿಗೆ ಬೇಡವಾದರೂ ಸರಿ, ಇದು ತನ್ನ ಮನೆ ಎಂದು ನಿರ್ಧರಿಸಿಕೊಂಡಳು. ಗಂಡನ ಪ್ರೀತಿಯ ಹೊರತು, ಆ ಮನೆಯಲ್ಲಿ ಯಾವುದಕ್ಕು ಕಡಿಮೆ ಇರಲಿಲ್ಲ. ಅತ್ತೆ ನಿಧಾನವಾಗಿ ಒಂದೊಂದು ಜವಾಬ್ದಾರಿಯನ್ನು ಸೊಸೆಗೆ ವಹಿಸಿಕೊಟ್ಟಳು. ಸಮೀಪದ ಹಳ್ಳಿಯಿಂದ ದವಸಧಾನ್ಯಗಳು ಬರುತ್ತಿದ್ದವು. ಗುತ್ತಿಗೆಗೆ ಗೊತ್ತು ಮಾಡಿದ್ದವರು, ಯಾವ ತಕರಾರೂ ಇಲ್ಲದೇ, ಬೆಳೆದ ಪೈರುಗಳ ಕಟಾವು ಮುಗಿಸಿ, ಪ್ರತಿಯೊಂದು ಕೆಲಸವನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದರು. ಒಂದೊಂದು ಸಲ ಇವಳೇ ಹೋಗಿ ಬರಬೇಕಾಗುತ್ತಿತ್ತು. ಗಂಡನಿಗಾಗಿ ಕಾಯದೇ ತಾನೇ ಹೋಗಿ ಬರುತ್ತಿದ್ದಳು.

ಅತ್ತೆಯೇ, ಮಗನೊಡನೆ ವಾದ ವಿವಾದವೇ ಬೇಡ ಎನ್ನುವಂತೆ, ಕೈಗೆ ಹಣ ಬಂದಾಗ, ಮಗನ ಅಕೌಂಟ್‌ಗೆ ಹಾಕಿ ಬಿಡುತ್ತಿದ್ದಳು. ಅದನ್ನೆಂದು ಖರ್ಚು ಮಾಡುತ್ತಿದ್ದನೋ ಕೇಳುತ್ತಲೇ ಇರಲಿಲ್ಲ. ವಿದ್ಯಾ ಬುದ್ಧಿ ನಯ ವಿನಯ, ಮಮತೆ ವಾತ್ಸಲ್ಯಗಳಿಲ್ಲದ ಈ ಮಗ ಇರುವ ಬದಲು ಇರದಿದ್ದರೇ ಚೆನ್ನಾಗಿತ್ತು, ಅಂತ ಎಷ್ಟೋ ಸಲ ಅನ್ನಿಸಿದ್ದರೂ ಅದನ್ನ ಸೊಸೆಯೊಂದಿಗೆ ಹೇಳಿರಲಿಲ್ಲ.

ನಿನ್ನ ಕಾಲುಗುಣದಿಂದ ನನ್ನ ಮಗ ಸರಿದಾರಿಗೆ ಬರಬಹುದು ಎಂಬ ನಂಬಿಕೆ ನನಗಿದೆ. ಅವನನ್ನು ನಿನ್ನವನನ್ನಾಗಿ ಮಾಡಿಕೊಳ್ಳುವುದು ನಿನ್ನ ಕೈಲಿದೆ. ಇದು ನಿನಗೆ ಸುಲಭವಲ್ಲ ನನಗೆ ಗೊತ್ತು. ಆದರೆ, ನಾನು ನಿನ್ನನ್ನು ನನ್ನ ಮಗನಿಗಿಂತ ಚೆನ್ನಾಗಿ ನೋಡಿಕೊಳ್ತೀನಿ. ಅವನಿಗೆ ಕೊಡದ ಜವಾಬ್ದಾರಿಯನ್ನು ನಿನಗೆ ವಹಿಸುತ್ತೇನೆ. ನಾನು ಇದುವರೆಗೂ ನಡೆಸಿದಂತೆ ನೀನೂ ನಡೆಸಬೇಕು. ಅವನು ಬದುಕಿರುವವರೆಗೂ, ನೀನು ಅವನಿಗಾಗಿ ಕಾಯಬೇಕು. ಇದು ನನ್ನ ಸ್ವಾರ್ಥ.. ಆದರೆ ನನ್ನ ಮಗ ಎಲ್ಲರಂತೆ ಬಾಳಲಿ ಎಂಬ ಆಸೆ ನನಗಿಲ್ಲವೆ! ನನ್ನ ಕೈಲಾಗದ್ದನ್ನ ನೀನು ಮಾಡುತ್ತೀಯೆಂದು ನನಗನ್ನಿಸುತ್ತದೆ. ಒಂದು ವೇಳೆ ನೀನು ಈ ಕಾರ್ಯದಲ್ಲಿ ಸಫಲಳಾಗದಿದ್ದರೂ ಈ ಆಸ್ತಿಯೆಲ್ಲ ನಿನ್ನದು. ಕಡೇವರೆಗೂ ಅವನನ್ನು ನೋಡಿಕೊಳ್ಳುತ್ತೇನೆಂದು ಮಾತುಕೊಡು..'' ದೇವರ ಮುಂದೆ ನಿಂತು ಭಾಷೆ ತಗೊಂಡಿದ್ದಳು.

ಆ ಸಮಯದಲ್ಲಿ ಮೈಯ ರಕ್ತವೆಲ್ಲಾ ಬಸಿದು ಹೋಗಿ ನಿತ್ರಾಣವಾದಂತೆ ಅನ್ನಿಸಿತ್ತು. ಕುಸಿದು ಬೀಳುವಂತೆ ಆಗಾಗ ಗೋಡೆಯನ್ನು ಆಧರಿಸಿ ನಿಂತಿದ್ದಳು. ಅವಳು ಏನಾದರೂ ಹೇಳುವ ಮೊದಲೇ ಅತ್ತೆ ಕುಸಿದು ಬಿದ್ದಿದ್ದಳು. ಕೆಲಸದವಳ ಸಹಾಯದಿಂದ ರೂಮಿನಲ್ಲಿ ಮಲಗಿಸಿ, ಡಾಕ್ಟರನ್ನು ಕರೆಸಿದ್ದಳು. ಡಾಕ್ಟರು, ಇಂಥದೇ ಖಾಯಿಲೆ ಎಂದು ಸರಿಯಾಗಿ ಹೇಳಿರಲಿಲ್ಲ.

ಮಾತನಾಡಲು ಇಷ್ಟವಿರಲಿಲ್ಲವೋ, ಮಾತನ್ನ ಆಡುವ ಶಕ್ತಿಯನ್ನು ಕಳೆದುಕೊಂಡಿದ್ದಳೋ, ಅನಂತರ ಐದಾರು ತಿಂಗಳು ಬದುಕಿದ್ದರೂ, ಏನನ್ನೂ ಆಡಿರಲಿಲ್ಲ. ಅದು ಅತಿ ವಿಚಿತ್ರ ಎನಿಸಿತ್ತು. ಅದನ್ನೆಲ್ಲ ಹೇಳಿಕೊಳ್ಳಲು ಗಂಡ ಸಹ ಸಿಗುವದಿಲ್ಲವೆಂದು ಅವಳು ಬಲ್ಲಳು. ಸಹನೆ ಅವಳನ್ನು ರಕ್ಷಿಸಿತ್ತು. ಕೆಲಸದವಳ ಸಹಾಯದಿಂದ ಅತ್ತೆಯ ಶುಶ್ರೂಷೆಯನ್ನು ಮಾಡುತ್ತಿದ್ದಳು. ಗಂಡನ ಕೆಲಸ ಕಾರ್ಯಗಳಿಗೆ ಒಬ್ಬ ಹುಡುಗನನ್ನು ಗೊತ್ತು ಮಾಡಿದ್ದಳು. ಅವನ ಗೊಡವೆಗೆ ಇವಳು ಹೋಗುತ್ತಿರಲಿಲ್ಲ. ಅವನೂ ಇವಳ ಕಡೆ ತಿರುಗಿ ನೋಡುತ್ತಿರಲಿಲ್ಲ. ಹಾಗೆ ಬಾಳುವುದಕ್ಕಿಂತ ಆತ್ಮಹತ್ಯೆ ವಾಸಿ ಎಂದು ಎಷ್ಟೋ ಸಲ ಅನ್ನಿಸಿದ್ದುಂಟು. ಆದರೆ ಆ ಧೈರ್ಯ ಬರುತ್ತಿರಲಿಲ್ಲ. ಕಡೇ ಪಕ್ಷ ಅತ್ತೆ ಬದುಕಿರುವವರೆಗೂ ತಾನು ಯಾವ ರೀತಿಯಿಂದಲೂ ದುಃಖಿಸಬಾರದು ಎಂದು ತನ್ನನ್ನೇ ಅಂದುಕೊಳ್ಳುತ್ತಿದ್ದಳು. ಅದರಲ್ಲಿ ಅವಳ ಸ್ವಾರ್ಥವೂ ಇತ್ತು. ಇಲ್ಲಿಯ ಯಜಮಾನಿಕೆ. ತವರಿನಲ್ಲಿ ತನಗೆ ಇಲ್ಲ ಎನ್ನುವುದನ್ನು ಬಲ್ಲಳು.

ಆದರೆ, ಚಿಕ್ಕಪ್ಪ ಆಗೀಗ ಡೈವೋರ್ಸ್ ತೆಗೆದುಕೊಳ್ಳುವ ಸಲಹೆಯನ್ನು ಕೊಡುತ್ತಲೇ ಇದ್ದರೂ ಅವಳು ಎಂದೂ ಅದರ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ಮದುವೆಯಾದ ಈ ಮೂರು ವರ್ಷಗಳಲ್ಲಿ ಅವಳೆಂದೂ ಗಂಡನ ಬಳಿಗೆ ಹೋಗಿರಲಿಲ್ಲ. ಅವನೂ ಅವಳನ್ನೆಂದೂ ಬಯಸಿರಲಿಲ್ಲ. ಆ ವಿಷಯ, ಅವಳಿಗೆ ಅರ್ಥವಾದದ್ದು ಮದುವೆಯಾದ ರಾತ್ರಿಯಂದು.

ಶಾಸ್ತ್ರೋಕ್ತವಾಗಿ ಮದುವೆಯಾಗಿ, ಹಿರಿಯರ ಸಮ್ಮುಖದಲ್ಲಿ ಅವರಿಬ್ಬರೂ, ತಮಗಾಗಿ ಸಜ್ಜುಗೊಳಿಸಿದ್ದ ಕೋಣೆಯಲ್ಲಿದ್ದಾಗಲೂ, ಅವನು ಅವಳನ್ನು ಬಯಸಲಿಲ್ಲ. ಇವಳೂ ಬೇಡಿಕೊಂಡಿರಲಿಲ್ಲ. ನಾನು ಅವನಿಗೆ ಬೇಡವಾದುದಕ್ಕೆ ಏನೋ ಕಾರಣವಿರಬೇಕು. ಅದನ್ನು ನಾನಾಗಿಯೇ ಕೇಳಿ ತಿಳಿದುಕೊಂಡು, ಬಲಾತ್ಕಾರವಾಗಿ ಅವನನ್ನೊಪ್ಪಿಸುವುದು ಅವಮಾನ, ಅವನಾಗಿಯೇ ನನ್ನ ಬಳಿಗೆ ಬರುವವರೆಗೂ ನಾನು ತಡೆದುಕೊಳ್ಳುತ್ತೇನೆ. ಮದುವೆಗೆ ಮುಂಚೆ ಹೇಗೆ ಇದ್ದೆನೋ, ಹಾಗೇ ಇರಲು ಪ್ರಯತ್ನಿಸುತ್ತೇನೆ ಎಂದು ತನ್ನಲ್ಲೇ ನಿರ್ಧರಿಸಿಕೊಂಡಿದ್ದಳು. ಅದನ್ನು ಇದುವರೆಗೂ ನಡೆಸಿಕೊಂಡು ಬಂದಿದ್ದಳು. ತನ್ನ ಸಹನೆ, ತನ್ನ ತಾಳ್ಮೆ, ಗಂಡನ ಮನಸ್ಸನ್ನು ಬದಲಾಯಿಸಬಹುದೇನೋ ಎಂಬ ಆಸೆ.

ತಮ್ಮ ಮನೆಗೆ ಬಂದ ಮೇಲೂ ಅಷ್ಟೇ ಅವರವರ ಪಾಡಿಗೆ ಅವರಿರುತ್ತಿದ್ದರು. ಎಷ್ಟೋ ದಿನ, ರಾತ್ರಿ ಅವನು ಮನೆಗೇ ಬರುತ್ತಿರಲಿಲ್ಲ. ಅವಳು ಅವನಿಗಾಗಿ ಕಾದು ಕಣ್ಣೀರು ಹರಿಸುತ್ತಿರಲಿಲ್ಲ. ಅತ್ತೆಯೇ ಎಷ್ಟೋ ಸಲ, "ನೀನು ಬಂದ ಮೇಲೆ ಅವನು ಬದಲಾಗುತ್ತಾನೆ

ಎಂದುಕೊಂಡಿದ್ದೆ. ಯಥಾಪ್ರಕಾರ, ಅದೇ ಚಾಳಿ. ನಿನ್ನ ಪ್ರೀತಿ, ನಿನ್ನ ಆಕರ್ಷಣೆ ಅವನನ್ನು ಬದಲಾಯಿಸಿಲ್ಲವೆಂದರೇ.. ಆ ಮಾಯಾವಿನಿ ಏನೋ ಮಾಟ ಮಾಡಿಸಿರಬೇಕು.'' ಎಂದುದೂ ಉಂಟು.

ಅವಳು ಯಾರೋ ಕ್ರಿಶ್ಚಿಯನ್ನರಳಂತೆ, ಇವನೇನು ಕಾಲೇಜು ಮೆಟ್ಟಿಲು ಹತ್ತಲಿಲ್ಲ. ಆದರೂ ಇವರಿಬ್ಬರ ಸ್ನೇಹ ಹೇಗೆ ಪ್ರಾರಂಭವಾಯಿತೋ, ಇವನು ಹಣವಂತ ಅನ್ನುವುದನ್ನು ಅವಳು ತಿಳಿದುಕೊಂಡಿದಾಳೆ. ಇವನು ಅವಳನ್ನು ಪ್ರೀತಿಸ್ತಾನಂತೆ. ಅದೆಂತಹ ಪ್ರೀತಿಯೋ ನನಗೆ ತಿಳಿಯದು. ನನಗೆ ತಿಳಿದದ್ದೇ ಬಹಳ ತಡವಾಗಿ.... ಅವನನ್ನು ಏಕೆ ಅನ್ನಲಿ! ಅವನ ಅಪ್ಪನಿಗೂ ಅದೇ ಚಾಳಿ.. ಆದರೆ ಅವರು ನನಗೆ ಎಂದೂ ಏನೂ ಕಡಿಮೆ ಮಾಡಲಿಲ್ಲ. ನನ್ನನ್ನು ಪ್ರೀತಿಯಿಂದ ನೋಡಿಕೊಂಡರು. ಅವಳು ಸತ್ತುಹೋದಮೇಲೆ, ಅವರಿಗೆ ನಾನೇ ಬೇಕಾಯ್ತು. ಆಮೇಲೆ ಹುಟ್ಟಿದವನು ಇವನು.

ಅಪ್ಪ ತೀರಿಕೊಂಡಾಗ ಇವನಿಗೆ ಹತ್ತು ವರ್ಷ. ಅವನಿಗೆ ಯಾವ ಕಷ್ಟವು ಗೊತ್ತಾಗಬಾರದೆಂದು ನಾನೇ ಎಲ್ಲಾ ಮಾಡಿದೆ. ಮೊದಮೊದಲು ನನ್ನ ಮೈದುನಂದಿರು ನನಗೆ ಸಹಾಯ ಮಾಡಿದರು. ಆದರೆ ಅವರ ಸಂಸಾರ ಬೆಳೆಯುತ್ತಿದ್ದಂತೇ ಅವರವರ ಕಷ್ಟ ಅವರವರಿಗೆ.

ಅಪರೂಪಕ್ಕೊಮ್ಮೆ ಬರುತ್ತಿದ ಅವರುಗಳು, ಅತ್ತೆ ಸತ್ತುಹೋದಮೇಲೆ ಬರುವುದನ್ನೇ ನಿಲ್ಲಿಸಿದ್ದರು. ಯಾರಾದರೂ ಬಂದರೆ, ತಾನು ಏನಾದರೂ ಸಲಹೆ ಪಡೆಯಬಹುದು ಎಂದುಕೊಂಡಿದ್ದಳು. ಆದರೆ ಅವರುಗಳು ಬರದೇ ಇರುವುದಕ್ಕೆ ತನ್ನ ಗಂಡನೇ ಕಾರಣ ಎಂದು ನಂತರ ತಿಳಿದಿತ್ತು. ವಿನಾ ಕಾರಣ ತನ್ನ ಮೇಲೆ ರೇಗಿ, ''ಅವರುಗಳು ಯಾರಾದರೂ ಬಂದದ್ದೇ ಆದರೆ, ನೀನೂ ಅವರ ಜತೆ ಹೋಗಬಹುದು. ನನಗೆ ನಿನ್ನ ಅಗತ್ಯವಿಲ್ಲ'' ಎಂದಿದ್ದ.

ನನ್ನ ಅಗತ್ಯ ನಿಮಗೆ ಇಲ್ಲವೇ ಇಲ್ಲ ಎಂದು ಹೇಳಬೇಕೆಂದುಕೊಂಡವಳು, ಏನೇ ಆಗಲಿ ತಾನು ಅವನ ಪತ್ನಿ ಅವನಿಗೆ ಬೇಡವಾದವರನ್ನು ತಾನೇಕೆ ಆದರಿಸಬೇಕು ಎಂದುಕೊಂಡು, ಅವರುಗಳು ಬರದಂತೆ ನೋಡಿಕೊಂಡಿದ್ದಳು.

ಒಂದಿಬ್ಬರು ಕೆಲಸದವರು, ಇವಳು, ಮನಸ್ಸಿಗೆ ಬಂದರೆ ಮನೆಗೆ ಬರುತ್ತಿದ್ದ ಗಂಡ,...ಕ್ರಮೇಣ, ಹಾಗೇ ಮುಂದುವರೆಯಿತು. ಅವನೆದುರಿಗೆ ನಿಂತು ಅವನನ್ನು ಏನೂ ಪ್ರಶ್ನಿಸುವ ಗೋಜಿಗೇ ಹೋಗುತ್ತಿರಲಿಲ್ಲ. ಅತ್ತೆ ಸಾಯುವ ಮೊದಲು, ವಿಲ್ ಬರೆಸಿದ್ದರು, ಅದರ ಪ್ರಕಾರ ಈಗಿನಂತೆಯೇ, ಅವನ ಅಕೌಂಟ್‌ಗೆ ಹಣ ಹೋಗುತ್ತಿತ್ತು. ಉಳಿದ ಆಸ್ತಿಯನ್ನೆಲ್ಲಾ ಮಾರಿ, ಬಂದ ಹಣವನ್ನು ಸೊಸೆಯ ಹೆಸರಿಗೆ ಮಾಡಿದ್ದಳು. ಮಗ ಅದಕ್ಕೆ ಗಲಾಟೆ ಮಾಡುತ್ತಾನೆಂದು ಬಲ್ಲ ಅವಳು, ಅದನ್ನು ವಿವರವಾಗಿ ಬರೆಸಿದ್ದಳು.

ನನ್ನನ್ನು ಕಡೇ ಕಾಲದವರೆಗೂ ಚೆನ್ನಾಗಿ ನೋಡಿಕೊಳ್ಳುವ ಸೊಸೆ, ನನಗೆ ಮಗನಿಗಿಂತ ಹೆಚ್ಚು...ಹೆಚ್ಚಿನ ಹಣ ಅವಳ ಹೆಸರಿನಲ್ಲಿದ್ದರೂ ಸಹ, ಎಲ್ಲದಕ್ಕೂ ಅವನೇ ವಾರಸುದಾರ.

ಆದರೆ ಈ ಮನೆಗೆ ಸೊಸೆಯಾಗಿ ಬಂದ ಆ ಹುಡುಗಿಗೆ ಯಾವ ರೀತಿಯಿಂದಲೂ ಅನ್ಯಾಯವಾಗಬಾರದು ಅಂತ ನನ್ನ ಇಚ್ಛೆ. ಅವನಿಗೆ ಹಣದ ಕೊರತೆ ಇಲ್ಲದಿರುವುದರಿಂದ, ಇವಳ ತಂಟೆಗೆ ಬರುವುದು ಬೇಡ. ಅವಳು ಬದುಕಿರುವವರೆಗೂ, ಅವನ ಅಗತ್ಯಗಳನ್ನು ನನಗಿಂತ ಚೆನ್ನಾಗಿ ಪೂರೈಸುತ್ತಾಳೆ ಎಂಬ ನಂಬಿಕೆ ನನಗಿದೆ. ಅವಳು ಯಾವುದೇ ಕಾರಣಕ್ಕೂ ಈ ಮನೆಯಿಂದ ಹೊರಗೆ ಹೋಗಬಾರದು.

ಈ ಉಯಿಲು ಸ್ವಲ್ಪ ವಿಚಿತ್ರವಾಗಿದೆ ಎನಿಸಿದರೂ, ಅದರಲ್ಲಿ ಅರ್ಥವಿತ್ತು. ಯಾವ ಕೆಲಸ ಕಾರ್ಯಗಳಿಲ್ಲದೇ ಬ್ಯಾಂಕಿನಿಂದ ಸಿಗುವ ಹಣದಿಂದ, ತನಗೆ ಬೇಕಾದಂತೆ ಜೀವನ ನಡೆಸುತ್ತಿದ್ದವನು, ಎಲ್ಲಾ ಹಣ ಕೈಗೆ ಸಿಕ್ಕಿದ ಮೇಲೆ ಹೆಂಡತಿಯನ್ನು ಮನೆಯಲ್ಲಿ ಇಟ್ಟುಕೊಳ್ಳುತ್ತಾನೆಂಬ ಧೈರ್ಯ ಯಾರಿಗೂ ಇರಲಿಲ್ಲ. ತಾಯಿ ತನಗೆ ಮೋಸ ಮಾಡಿದಳು ಎಂದು ಅವನು ಕೂಗಾಡಿ ರಂಪ ಮಾಡಿದರೂ, ಕೇಸ್ ಹಾಕಲಿಲ್ಲ. ಹೆಂಡತಿಯ ಮೇಲೆ ಆರೋಪಣೆ ಹೊರಿಸಲಿಲ್ಲ. ಇದು ಇನ್ನು ವಿಚಿತ್ರ.

ಈ ವಿಚಿತ್ರಗಳಿಗಿಂತಲೂ ವಿಚಿತ್ರವಾದುದು, ಹದಿನೈದು ದಿನಗಳಿಂದ ಗಂಡ ಮನೆಯಲ್ಲಿಯೇ ಇರುವುದು. ಗಂಡನ ಒಳಿತಿಗಾಗಿ ಅವಳು ಮಾಡದ ಪೂಜೆ ಪುನಸ್ಕಾರಗಳಿರಲಿಲ್ಲ. ಹರಕೆ, ತಾಯಿತಗಳಿಗಂತೂ ಲೆಖ್ಖವೇ ಇಲ್ಲ. ನೋಡಿದವರು, ಅವಳನ್ನು ಹುಚ್ಚಿ ಎಂದೇ ಹೇಳಬೇಕು. ಅಷ್ಟು ವಿಪರೀತ. ಅದರ ಫಲವೇ ಇರಬೇಕು, ತನ್ನ ಗಂಡ ತನ್ನ ಮನೆಯಲ್ಲೇ ಇರುವಂತೆ ಆಗಿದೆ...ಕ್ರಮೇಣ ಅವನು ತನ್ನವನೂ ಆಗಬಹುದು ಎಂಬ ಆಶಾಕಿರಣವೂ ಕಂಡಿತ್ತು.

ಆದರೆ ಈ ದಿನ...ಆ ತಾಯಿತಗಳು ಇಲ್ಲ, ಅವನೂ ಮನೆಗೆ ಬಂದಿಲ್ಲ. ಹಾಸಿಗೆಯನ್ನು ಅದಲು ಬದಲು ಮಾಡಿದವರ್ಯಾರು! ಭೀಮನನ್ನು ಕರೆದು ಕೇಳಿದಳು.

ಅವನು ನನಗೇನೂ ಗೊತ್ತಿಲ್ಲ ಎಂದ. ಭೀಮ ಒಳ್ಳೆಯ ಹುಡುಗ. ಅವಳು ಹೇಳಿದಂತೆ ಕೇಳುತ್ತಿದ್ದ. ಅಂತಹ ಒಬ್ಬ ಚೂಟಿಯಾದ ಹುಡುಗನಿದ್ದರೆ, ತನ್ನ ದಿನನಿತ್ಯದ ವ್ಯವಹಾರಕ್ಕೆ ಅನುಕೂಲ ಎಂದು ಅವಳಿಗೆ ಗೊತ್ತು.

ಕೈಗೆ ಬಂದ ತುತ್ತು ಬಾಯಿಗೆ ಇಲ್ಲದಂತೆ ಆಗಬಾರದು. ಈ ಬದಲಾವಣೆಗೆ ಏನೋ ಬಲವಾದ ಕಾರಣವಿರಬಹುದು. ತಾನು ಅದನ್ನು ತಿಳಿಯುವ ಬಗೆ ಹೇಗೆ? ಮೊಟ್ಟಮೊದಲ ಬಾರಿಗೆ ಕುತೂಹಲ ಮೂಡಿತು. ಆದರೆ ಅವನನ್ನು ನೇರವಾಗಿ ಕೇಳುವಂತಿಲ್ಲ. ಅವನಿಗೆ ತಿಳಿಯದಂತೆ ತಾನು ತಿಳಿದುಕೊಳ್ಳಬೇಕು. ಆದರೆ ಹೇಗೆ...? ಎಲ್ಲಿಂದ ಪ್ರಾರಂಭಿಸಬೇಕು. ಅವನ ಸ್ನೇಹಿತರು ಯಾರೋ, ಎಲ್ಲಿದಾರೋ, ಯಾರನ್ನು ಎಂದೂ ಮನೆಗೆ ಕರೆತಂದಿರಲಿಲ್ಲ...ಅಥವಾ ಇವನು ಎಲ್ಲಿಗೆ ಹೋಗುತ್ತಾನೆ. ಯಾರನ್ನು ಭೇಟಿಯಾಗುತ್ತಾನೆ ಎನ್ನುವುದು ಸಹ ಇವಳಿಗೆ ತಿಳಿಯದು.

ಇಷ್ಟು ದಿನಗಳಲ್ಲಿ ಎಂದೂ ಮಾಡದವಳು, ಬೀರು ತೆಗೆದು, ತಡಕಾಡಿದಳು ಬ್ಯಾಂಕಿನ ಪಾಸ್‌ಬುಕ್, ಚೆಕ್‌ಬುಕ್, ಕೆಲವು ಯಾವುದೋ ಬಸ್ಸಿನ ಟಿಕೇಟುಗಳು, ಯಾವುದೋ

ಹೋಟೆಲ್ಲಿನ ಪೇಪರ್ ನ್ಯಾಪಕಿನ್‌ಗಳು.. ಒಂದು ಕವರಿನಲ್ಲಿ ಸ್ವಲ್ಪ ನೋಟುಗಳು. ಅದರ ಕೆಳಗೆ ಒಂದು ಮಡಿಚಿದ ಹಾಳೆ ಇತ್ತು. ಅದರಲ್ಲಿ ಒಂದೆ ಒಂದು ಫೋನು ನಂಬರನ್ನು ಬರೆಯಲಾಗಿತ್ತು. ಅಕ್ಕಪಕ್ಕ ಯಾವ ಹೆಸರೂ ಇರಲಿಲ್ಲ. ಅದರಿಂದ ತನಗೇನಾದರೂ ಲಾಭವಾಗಬಹುದು, ಆದರೆ ಅದನ್ನೇ ತೆಗೆದಿಟ್ಟುಕೊಂಡರೆ ತನ್ನ ಗಂಡನಿಗೆ ಅನುಮಾನ ಬರಬಹುದು ಎಂದುಕೊಂಡು, ಅದನ್ನು ಅಡಿಗೆ ಮನೆಯ ಗೋಡೆಯ ಮೇಲೆ, ಬೇರೆ ಯಾರಿಗೂ ಕಾಣದಂತೆ ಬರೆದಿಟ್ಟುಕೊಂಡಳು. ಮತ್ತೆ ಎಷ್ಟೇ ತಡಕಾಡಿದರೂ ಇನ್ನೇನೂ ಸಿಗಲಿಲ್ಲ. ಸರಸರನೆ, ಮೊದಲು ಹೇಗಿತ್ತೋ ಹಾಗೆ ಜೋಡಿಸಿ, ಹೊರಗೆ ಬಂದಳು. ಅಂಗಡಿಗೆ ಹೋದ ಭೀಮ ಇನ್ನು ಬಂದಿರಲಿಲ್ಲ. ಅವನು ಬರುವುದನ್ನೇ ಕಾದಿದ್ದು ''ಭೀಮ, ಫೋನು ಎಂದರೆ ಏನು ಅಂತ ಗೊತ್ತೇನೋ'' ಕೇಳಿದಳು. ''ಹುಂ, ಅಕ್ಕಾ ಗೊತ್ತು, ಅಂಗಡೀಲಿ ನೋಡಿದೀನಿ...ಪುಸ್ತಕದಲ್ಲಿ ಓದಿದೀನಿ...''

''ಅದರಲ್ಲಿ ಮಾತನಾಡೋಕ್ಕೆ ಬರುತ್ತೇನೋ''

''ಇಲ್ಲ, ಅಕ್ಕ, ಎಂದೂ ಮಾತನಾಡಿಲ್ಲ''

''ನಾನು ದುಡ್ಡು ಕೊಡ್ತೀನಿ, ಅದರಲ್ಲಿ ಮಾತನಾಡುವಂತೆ''

''ಯಾರ ಹತ್ತಿರ ಮಾತನಾಡಲಿ!.. ನನಗೆ ಯಾರ ಮನೆಯಲ್ಲಿ ಫೋನು ಇದೆಯೋ ಅಂತ ಸಹ ತಿಳಿಯದು..''

''ನಾನು ನಂಬರ‍್ರು ಕೊಡ್ತೀನಿ. ನೀನು ಅಂಗಡಿಯವನಿಗೆ ಹೇಳಿ, ಆ ನಂಬರನ್ನು ತಿರುಗಿಸು. ಅಂಗಡಿಯವನನ್ನೇ ಕೇಳು, ಹೇಗೆ ಇಟ್ಟುಕೋಬೇಕು.. ಹೇಗೆ ಮಾತನಾಡಬೇಕು ಅಂತ ಅವನು ಹೇಳ್ತಾನೆ..''

''ಸರಿ, ಆದರೆ ಏನು ಮಾತನಾಡಲಿ!''

''ಏನು ಮಾತನಾಡಬೇಕೆಂದು ಅವಳಿಗೂ ಗೊತ್ತಿರಲಿಲ್ಲ. ಹೋಗಲಿಬಿಡು'' ಎಂದಳು ನಿರಾಶೆಯಿಂದ.

''ಅಕ್ಕಾ, ಶ್ರೀಮಂತರ ಮನೆಯಲ್ಲಿ ಫೋನು ಇಟ್ಟುಕೊಂಡಿರುತ್ತಾರೆ. ನಿಮ್ಮ ಮನೇಲಿ ಯಾಕಿಲ್ಲ'' ಕೇಳಿದ್ದ.

ಅದೊಂದು ಕಮ್ಮಿ ಈ ಮನೆಗೆ ಅಂತ ಗೊಣಗಿಕೊಂಡು... ''ನೀನು ದೊಡ್ಡ ಆಫೀಸರು ಆದ ಮೇಲೆ, ಹಾಕಿಸಿ ಕೊಡುವಂತೆ'' ಎಂದು ನಕ್ಕಿದ್ದಳು.

ಆದರೆ ಭೀಮನಿಗೆ ಹೊಸ ಆಸೆ ಹುಟ್ಟಿಕೊಂಡಿತ್ತು. ತಾನು ಯಾರ ಹತ್ತಿರವಾದರೂ ಮಾತನಾಡಿ, ಅದರ ಮಜ ಪಡೆಯಬೇಕೆಂದು ಚಿಂತಿಸಿದ. ಮನಸ್ಸನ್ನು ಅದು ನಾಟಿ ಬಿಟ್ಟಿತು. ''ಅಕ್ಕ ದುಡ್ಡು ಕೊಡಿ, ಒಂದೇ ಒಂದು ಸಲ ಮಾತನಾಡಿ ನೋಡ್ತೀನಿ. ಅದು ಹೇಗಿರುತ್ತೆ ಅಂತ..'' ಅವಳನ್ನು ಪೀಡಿಸಿದ. ಕಡೆಗೂ ಅವಳು [illegible] ಆ ನಂಬರನ್ನು ಬರೆದುಕೊಟ್ಟಳು, ಅವನ ಕೈಗೆ ಒಂದೆರಡು ರೂಪಾಯಿಗಳನ್ನು [illegible]ಳು. ಭೀಮ ಓಡಿ ಹೋದ.

ಕಾಲು ಗಂಟೆಯಲ್ಲಿ ಭೀಮ ಓಡಿ ಬಂದ. ಉದ್ವೇಗದಿಂದ ಅವನು ಕೆಂಪಾಗಿದ್ದ. ಓಡಿ ಬಂದಿದ್ದರಿಂದ ಏದುಸಿರು ಬರುತ್ತಿದ್ದ. ''ಏನಾಯ್ತೋ'' ಗಾಭರಿಯಿಂದ ಕೇಳಿದ್ದಳು. ತಾನು ಕಳಿಸಿದ್ದು ತಪ್ಪಾಯಿತೇನೋ ಎನ್ನುವ ಭಾವನೆ ಇಣುಕಿತ್ತು.

''ಅಕ್ಕಾ, ನಾನು ಮಾತನಾಡಿದೆ ಎಂದ'' ಏದುಸಿರು ಬಿಡುತ್ತಾ.

''ಯಾರ ಹತ್ತಿರವೋ..?''

''ಫೋನಿನಲ್ಲಿ...'' ಒಂದು ಗಳಿಗೆ ತಟಸ್ಥವಾದಳು..

''ಏನಂದೆ? ಯಾರು ಮಾತನಾಡಿದರು. ಹೆಂಗಸೋ, ಗಂಡಸೋ.''

''ಹೆಂಗಸ್ರು..'' ಅವಳ ಉಸಿರು ನಿಂತಂತಾಯಿತು. ಅವನೇ ಮಾತನಾಡಿದ.

''ಚೆನ್ನಾಗಿ ಮಾತನಾಡಿಸಿದ್ರಾ... ಯಾರಪ್ಪಾ ನೀನು! ನಿನ್ನ ಹೆಸರೇನು, ಏನು ಬೇಕಾಗಿತ್ತು ಅಂತ ಕೇಳಿದ್ರು. ನಾನು ಎಲ್ಲಾ ಹೇಳಿಬಿಟ್ಟೆ''

''ಏನು ಎಲ್ಲಾ ಹೇಳಿದೆ? ಏನು ಮಾತನಾಡಿದ್ಯೋ..?'' ಗದರಿದಳು.

''ನಾನು ಭೀಮ ಅಂತ, ಅಕ್ಕ ಮಾತನಾಡು ಅಂದ್ರು ಅಂತ ಹೇಳಿದೆ. ಅದಕ್ಕೆ ಅವರು ಅಕ್ಕ ಯಾರು ಎಲ್ಲಿದ್ದಾರೆ ಅಂತ ಕೇಳಿದರು. ನಾನು ನಿಮ್ಮ ಹೆಸರು, ಮನೆ ಎಲ್ಲಿದೆ ಅಂತ ಎಲ್ಲಾ ಹೇಳಿದೆ..''

ಅವನನ್ನು ಚೆನ್ನಾಗಿ ಥಳಿಸುವಷ್ಟು ಕೋಪ ಬಂತು ಅವಳಿಗೆ, ಆದರೂ ತಡೆದುಕೊಂಡು, ''ನನ್ನ ಹೆಸರು, ವಿಳಾಸ ಯಾಕೆ ಹೇಳಿದ್ಯೋ... ಅವರು ನಮ್ಮ ಮನೆಗೆ ಬಂದು ಬಿಟ್ಟರೇ, ಅವರು ಒಳ್ಳೆಯವರೋ ಕೆಟ್ಟವರೋ ನಮಗೇನು ಗೊತ್ತು? ಅಲ್ಲದೇ ಅಣ್ಣ ಏನಂತಾರೋ..?''

''ಅವರೆಲ್ಲಿ ಬರ್ತಾರೆ ಬಿಡಿ ಅಕ್ಕಾ..? ಸುಮ್ಮನೆ ಹಾಗಂದಿರುತ್ತಾರೆ. ಒಂದು ವೇಳೆ ಅವರು ಬಂದರೂ, ನಾನು ಹೇಳ್ತೀನಿ, ನಾನು ತಮಾಷೆಗೆ ಫೋನು ಮಾಡಿದೆ. ತಪ್ಪಾಯ್ತು ಅಂತ. ಕೆಟ್ಟವರಾಗಿದ್ರೆ ಅಷ್ಟು ಹೊತ್ತು ನನ್ನ ಹತ್ತಿರ ಮಾತನ್ನಾಡುತ್ತಿದ್ರಾ?''

''ಇನ್ನೇನೇನಂದ್ರು?''

''ಇನ್ನೇನಾದ್ರೂ ಹೇಳೋದು ಇದೆಯಾ ಅಂದ್ರು. ಇಲ್ಲ ಅಂದೆ. ಇಡು ಅಂದ್ರು ಇಟ್ಟೆ ಓಡಿ ಬಂದೆ.

''ಅಂಗಡಿಯವನಿಗೆ ದುಡ್ಡು ಕೊಟ್ಟೆಯಾ?''

''ಓ ಮರೆತೇ ಹೋಯ್ತು. ಕೊಟ್ಟು ಬರ್ತೀನಿ'' ಮತ್ತೆ ಭೀಮ ಓಡಿಹೋದ. ಅವನು ಆ ಕಡೆ ಹೋದ. ಈ ಕಡೆ ಇವರ ಮನೆ ಮುಂದೆ ಒಂದು ಆಟೋ ನಿಂತಿತು. ಆಟೋದಿಂದ ಒಬ್ಬಾಕೆ ಇಳಿದಳು. ನೋಡಿದರೆ ಇವಳಿಗಿಂತ ದೊಡ್ಡವಳಿರಬಹುದು ಅಂತ ಅನ್ನಿಸಿತು. ಅನುಮಾನದಿಂದ, ಗಾಭರಿಯಿಂದ ನೋಡುತ್ತಿದ್ದಾಗ ಅವಳೇ ವಿಚಾರಿಸಿದಳು.

"ನೀವು ವೃಂದಾ ತಾನೇ..." ಹೌದು ಎನ್ನುವಂತೆ ತಲೆ ಆಡಿಸಿದಳು.

"ನಾನು ಸ್ವಲ್ಪ ನಿಮ್ಮ ಹತ್ತಿರ ಮಾತನ್ನಾಡಬೇಕು. ಒಳಗೆ ಬರಲೇ?

"ಬನ್ನಿ" ಎಂದಳು. ಇಬ್ಬರೂ ಒಳಗೆ ಬಂದರು.

"ನಾನು ಯಾರು ಅಂತ ನಿಮಗೆ ಗೊತ್ತಿಲ್ಲ. ಆದರೆ ನೀವು ಯಾರು ಅಂತ ನನಗೆ ಗೊತ್ತು. ನನ್ನ ಹೆಸರು ಕಮಲಿನಿ ಅಂತ..."

"ನೀವ್ಯಾರು ಅಂತ ನನಗೆ ಗೊತ್ತಾಗಲಿಲ್ಲ"

"ನೀವೆಷ್ಟು ಮುಗ್ಧರು ಅಂತ ನನಗೀಗ ಅರ್ಥವಾಗುತ್ತಿದೆ. ನಾನು ಏನು ಹೇಳ್ತೀನಿ ಎನ್ನುವುದನ್ನು ಮೊದಲು ಮನವಿಟ್ಟು ಕೇಳಿಕೊಳ್ಳಿ... ಮನೆಯಲ್ಲಿ ಇನ್ಯಾರೂ ಇಲ್ಲ ತಾನೆ."

"ಇಲ್ಲಿ ಯಾರೂ ಇಲ್ಲ, ನಾನೊಬ್ಬಳೇ.."

"ಭೀಮನೂ ಇಲ್ಲವೆ? ಅವನಿಗೆ ಫೋನು ನಂಬರ್ರು ಕೊಟ್ಟವರು ನೀವೇ ತಾನೇ.."

"ಅಂದರೆ ನೀವು... ಯಾರು! ಇಲ್ಲಿಗೇಕೆ ಬಂದಿದೀರಿ...?" ಅಸಹನೆ ಮೂಡಿತ್ತು.

"ನಾನು ಎಲ್ಲಾ ಹೇಳ್ತೀನಿ, ಮೊದಲು ನೀವು ಸ್ವಲ್ಪ ಸುಮ್ಮನಿದ್ದರೇ, ನೀವು ಹೋಗು ಅಂತ ಹೇಳಿದರೂ ನಾನು ಹೋಗುವುದಿಲ್ಲ. ಇವತ್ತು ಎಲ್ಲಾ ಹೇಳಿಬಿಡಬೇಕೆನ್ನುವ ಉದ್ದೇಶದಿಂದ ಬಂದಿದೀನಿ."

ವೃಂದಾ ಕೆಟ್ಟಮುಖ ಮಾಡಿಕೊಂಡು ನಿಂತಳು..

"ನೋಡಿ ನಾನು ನಿಮಗೆ ಅನ್ಯಾಯ ಮಾಡಕ್ಕೆ ಬಂದಿಲ್ಲ. ನೀವು ನಗುನಗುತ್ತಾ ಮಾತನಾಡದಿದ್ದರೂ ಪರವಾಗಿಲ್ಲ. ಆದರೆ ಹೀಗೆ ಕೆಟ್ಟಮುಖ ಹಾಕಿಕೊಳ್ಳಬೇಡಿ" ಎಂದು ನಗುತ್ತಾ ಶುರು ಮಾಡಿದಳು.

ನನಗೂ, ನಿಮ್ಮ ಯಜಮಾನರಿಗೂ, ಸುಮಾರು ಏಳೆಂಟು ವರ್ಷಗಳಿಂದ ಸ್ನೇಹವಿತ್ತು. ನಾನು ಒಂದು ಬ್ಯಾಂಕಿನಲ್ಲಿ ಕೆಲಸದಲ್ಲಿದೀನಿ. ನನಗೂ ಮದುವೆಯಾಗಿದೆ. ನನಗೂ ಮಕ್ಕಳಿದಾರೆ. ನಮ್ಮಿಬ್ಬರ ಸ್ನೇಹ ಪ್ರಾರಂಭವಾದದ್ದು ಒಂದು ಹೋಟೆಲಿನಲ್ಲಿ, ಆ ಹೋಟೆಲಿನಲ್ಲಿ ಮ್ಯಾನೇಜರ್ ನಮ್ಮ ಯಜಮಾನರ ಸ್ನೇಹಿತ. ಆ ಹೋಟೆಲಿನಲ್ಲಿ ಒಂದು ನೈಟ್ ಕ್ಲಬ್ ಸಹ ಇದೆ. ಅಲ್ಲಿ ಏನೇನೋ ವ್ಯವಹಾರಗಳು ನಡೆಯುತ್ತವೆ. ಆ ಮ್ಯಾನೇಜರ್ ಹಾಗೂ ನಿನ್ನ ಯಜಮಾನ ಸೇರಿ, ನನ್ನ ಗಂಡನ ಮೇಲೆ ಪಿತೂರಿ ನಡೆಸಿ, ಜೈಲಿಗೆ ಕಳಿಸುವುದರಲ್ಲಿದ್ದರು. ಆದರೆ ವಿಷಯ ತಿಳಿದ ನಾನು, ಅದನ್ನು ಹೇಗಾದರೂ ತಪ್ಪಿಸುವಂತೆ ಕೇಳಿಕೊಂಡೆ. ಅವರು ಒಪ್ಪಿದರು. ಆದರೆ ಒಂದು ಷರತ್ತಿನ ಮೇಲೆ, ನಾನು ಅವರ ನೈಟ್ ಕ್ಲಬ್‌ನಲ್ಲಿ ಕುಣಿಯಬೇಕು ಅಥವಾ ನಿಮ್ಮ ಗಂಡನ ಮಾತಿಗೆ ಒಪ್ಪಬೇಕು ಅಂತ. ನೈಟ್ ಕ್ಲಬ್‌ನಲ್ಲಿ ಅರೆಬೆತ್ತಲೆ ಕುಣಿದು, ಎಲ್ಲರ ಕಣ್ಣಿಗೂ ನಗ್ನಳಾಗಿ ಕಾಣುವುದಕ್ಕಿಂತ, ನಿಮ್ಮ ಗಂಡನ ಪ್ರೇಯಸಿಯಾಗಿರುವುದು ವಾಸಿ ಎನಿಸಿ ಅದಕ್ಕೆ ಒಪ್ಪಿದೆ. ನಿಮ್ಮ ಗಂಡ ನನಗಿಂತ ವಯಸ್ಸಿನಲ್ಲಿ

ಚಿಕ್ಕವರು. ಆದರೆ ಅವರಿಗೆ ಯಾಕೆ ಆ ದುರ್ಬುದ್ಧಿ ಹುಟ್ಟಿತೋ ನನಗೆ ತಿಳಿಯದು. ಅವರ ಕ್ರೂರತನಗಳನ್ನು ಸಹಿಸಿಕೊಂಡು, ಅವರು ಹೇಳಿದಂತೆ ಕೇಳುತ್ತಿದ್ದೆ. ನನಗೆ ಅವರ ಹಣ ಕಾಸು ಯಾವುದೂ ಬೇಕಿರಲಿಲ್ಲ.

ಈ ಸಮಯದಲ್ಲಿ ಅವರ ಮದುವೆ ನಡೆಯಿತೆಂದು ಸಂತೋಷಿಸಿದೆ. ಆದರೆ ಆಗಲೂ ನನ್ನ ಸಹವಾಸ ಬಿಡಲಿಲ್ಲ. ತಾಯಿಯನ್ನು ನೋಡಿಕೊಳ್ಳಲು ಯಾರೂ ಇಲ್ಲದಿರುವುದರಿಂದ ಮದುವೆಯಾಗಿದೇನೆ. ನನಗೂ ಅವಳಿಗೂ ಯಾವ ಸಂಬಂಧವೂ ಇಲ್ಲ ಎಂದು ಹೇಳಿದರು. ನಾನು ತಿಳುವಳಿಕೆ ಹೇಳಿ, ಅವರನ್ನು ಮನೆಗೆ ಕಳಿಸಲು ಮಾಡಿದ ಪ್ರಯತ್ನ ಈಡೇರಲಿಲ್ಲ. ನನ್ನಿಂದ ತಪ್ಪಿಸಿಕೊಂಡರೂ, ಆ ಹೋಟೇಲ್ಲಿನ ಮ್ಯಾನೇಜರ್ ಕೈನಿಂದ ನೀನು ತಪ್ಪಿಸಿಕೊಳ್ಳಲಾರೆ, ಎಂದು ಹೆದರಿಸಿ, ಅವರು ಹೇಳಿದಂತೆ ಕೇಳಲು ಬಲವಂತ ಮಾಡಿದರು. ಅಂದಿನಿಂದ ಇಂದಿನವರೆಗೂ ನಾನು ನಿಮಗೆ ಅನ್ಯಾಯ ಮಾಡಿದೇನೆ. ದಯವಿಟ್ಟು ನನ್ನನ್ನು ಕ್ಷಮಿಸಿ, ಇನ್ನು ಮೇಲೆ ಅವರು ನಿಮ್ಮವರು. ಅವರು ನಿಮ್ಮ ಬಳಿಗೆ ಬಂದಿದಾರೆ.. ಅವರಿಗೆ ಪ್ರೀತಿ ವಿಶ್ವಾಸದ ಅಗತ್ಯವಿದೆ. ಅದನ್ನು ನೀವು ಅವರಿಗೆ ಕೊಡಬೇಕು. ಇಲ್ಲದಿದ್ದರೆ ಅವರು ಬದುಕಲು ಸಾಧ್ಯವೇ ಇಲ್ಲ. ಅವರು ಒಂದು ಕಷ್ಟಕ್ಕೆ ಸಿಕ್ಕಿ ಬಿದ್ದಿದ್ದಾರೆ..''

''ಏನು ಕಷ್ಟ'' ಎಂದು ಇವಳು ಕೇಳಲಿಲ್ಲ, ಅವಳೂ ಹೇಳಲಿಲ್ಲ.

''ಅವರನ್ನು ನಿಮ್ಮ ಬಳಿಗೆ ವಾಪಸ್ಸು ಕಳಿಸುತ್ತೇನೆ.. ಅವರು ಮತ್ತೆ ನನ್ನ ಬಳಿಗೆ ಬರದಂತೆ ನೋಡಿಕೊಳ್ಳುವುದು ನಿಮ್ಮ ಕೈಲಿದೆ..''

''ಈಗ ಅವರು ನಿಮ್ಮ ಮನೆಯಲ್ಲಿದಾರೆಯೆ!''

''ಇಲ್ಲಿ, ಹೋಟೆಲ್ಲಿನಲ್ಲಿದಾರೆ.. ನನ್ನದೊಂದು ಮಾತು, ನೀವುಗಳು ಈ ಊರನ್ನೇ ಬಿಟ್ಟು ಹೊರಟು ಹೋಗಿ. ಎಲ್ಲಾ ಮರೆತು ಹೊಸ ಬಾಳು ಶುರುಮಾಡಿ.. ನಾನು ಬರ್ತೀನಿ. ನಾನು ಇದುವರೆಗೂ ನಿಮಗೆಂದೂ ಕೆಡುಕನ್ನು ಬಯಸಿರಲಿಲ್ಲ. ನಾನೂ ಯಾವುದೋ ಒಂದು ಇಕ್ಕಟ್ಟಿಗೆ ಸಿಕ್ಕಿಬಿದ್ದಿದ್ದೆ. ಇನ್ನು ಆ ಭಯ ನನಗಿಲ್ಲ, ನಾನು ನಿಮಗೆ ಎಲ್ಲಾ ಒಳ್ಳೇದಾಗಲಿ ಎಂದು ಏಸುವಿನಲ್ಲಿ ಪ್ರಾರ್ಥಿಸುತ್ತೇನೆ, ಎಂದು ಹೇಳಿ ಕ್ರಾಸ್‌ನ್ನು ಕೈಯಲ್ಲಿ ಮಾಡಿ, ಅಲ್ಲಿ ನಿಲ್ಲದೇ ಹೊರಟು ಹೋದಳು.

ಇವಳು ಹಾಗೇ ಎಷ್ಟು ಹೊತ್ತು ನಿಂತಿದ್ದಳೋ, ಅವಳ ಚಿಕ್ಕಪ್ಪ ಹಾಗೂ ಭೀಮ ಒಳಗೆ ಬಂದಿದ್ದರು. ಭೀಮ ''ಅಕ್ಕಾ, ಅಕ್ಕಾ'' ಎಂದು ಕೂಗುತ್ತಿದ್ದ. ''ಯಾರಮ್ಮ ಈಗ ಇಲ್ಲಿಂದ ಹೋದರಲ್ಲ'' ಚಿಕ್ಕಪ್ಪ ಕೇಳಿದ್ದರು.

''ಯಾರೋ ನನಗೆ ಗೊತ್ತಿಲ್ಲ..'' ಎಂದಷ್ಟೇ ಹೇಳಿ, ಒಳಗೆ ಹೊರಟು ಹೋದಳು. ಭೀಮ ಅವಳ ಹಿಂದೆ ನಡೆದ. ಅವಳ ಮನಸ್ಸು ಅಲ್ಲೋಲ ಕಲ್ಲೋಲವಾಗಿತ್ತು. ಕೆಲವೇ ನಿಮಿಷಗಳ ಹಿಂದೆ ನಡೆದ ಮಾತುಕತೆಯನ್ನು, ನಿಜವೋ, ಸುಳ್ಳೋ ಎಂದು ನಂಬಲೂ ಅಸಾಧ್ಯವೆನಿಸುವಂತಿತ್ತು. ಎಷ್ಟೋ ವರ್ಷಗಳ ಸ್ನೇಹವನ್ನು ಅವಳು ಅಷ್ಟು ಸುಲಭವಾಗಿ ಬಿಟ್ಟು ಬಿಡುತ್ತಾಳೆಯೇ ಅವಳ ಮಾತನ್ನು ನಾನು ಹೇಗೆ ನಂಬಲಿ ಅಂತ ಅನ್ನಿಸಿದರೂ,

ಅವಳು ಒಳ್ಳೆಯವಳಂತೆ ಮಾತನಾಡಿದ್ದಳು ಇಷ್ಟು ವರ್ಷಗಳ ನಂತರ ಅವರಿಬ್ಬರಲ್ಲಿ ಭಿನ್ನಾಭಿಪ್ರಾಯ ಮೂಡಿರಬಹುದೆ! ಅಥವಾ ಇವಳಿಗೇ ಅವನ ಸಹವಾಸ ಬೇಡವಾಗಿರಬಹುದೆ! ಏನಾದರಾಗಲಿ ತನ್ನ ಗಂಡ ತನ್ನ ಮನೆಗೆ ವಾಪಸ್ಸು ಬರುವಂತಾದರೆ ಸಾಕು ಎಂದುಕೊಂಡಳು.

ಅವಳು ಇನ್ನು ಅದೇ ಆಲೋಚನೆಯಲ್ಲಿರುವಾಗಲೇ, ಅವನು ಮನೆಗೆ ಬಂದ, ಇವಳು ಹಿಂದೆ ಸರಿದು, ಒಳಬಾಗಿಲಿನಲ್ಲಿ ನಿಂತು ಅವನನ್ನೇ ನೋಡಿದಳು. ಈ ಮುಂಚೆ ಎಂದೂ ಹೀಗೆ ಅವನನ್ನು ನೋಡಿರಲಿಲ್ಲ. ಏನೋ ಒಂದು ಭಯವಿರುತ್ತಿತ್ತು. ಇವತ್ತು ಆ ಭಯವಿಲ್ಲವೆನ್ನುವುದು ಅವಳಿಗೇ ಅರಿವಾಗಿತ್ತು.

''ಭೀಮ, ಅವರ ಸ್ನಾನ ಊಟ ಆಗಿದೆಯೋ ಇಲ್ಲವೋ ಕೇಳಿ ತಿಳಿದುಕೊಂಡು ಬಾ ಎಂದಳು. ಚಿಕ್ಕಪ್ಪಾ ಊಟಕ್ಕೇಳಿ ಬಡಿಸ್ತೀನಿ'' ಎಂದಳು.

''ಇಲ್ಲಮ್ಮ ನನ್ನದು ಊಟ ಆಗಿದೆ. ನಾನು ಒಂದು ಗಳಿಗೆ ಮಲಗಿರ್ತೀನಿ''. ಚಿಕ್ಕಪ್ಪ ಮಲಗುವುದಕ್ಕೆಂದು ಹೊರಟಾಗ ಇವಳಿಗೆ ನಿರಾಳವೆನಿಸಿತ್ತು. ಆದರೆ ಇವನೂ ಊಟಕ್ಕೆ ಬರುವುದಿಲ್ಲವೆಂದು ಹೇಳಿ ಕಳಿಸಿದಾಗ ಅವಳಿಗೆ ನಿರಾಶೆ ಎನಿಸಿತ್ತು. ಅಷ್ಟು ವರ್ಷಗಳಲ್ಲಿ ಎಂದೂ ಅವಳಿಗೆ ಅಷ್ಟು ದುಃಖವಾಗಿರಲಿಲ್ಲ.

ಗಂಡನಿಗೆ ಅವಳಿಂದ ಬಿಡುಗಡೆ ದೊರಕಿದೆ? ಆದರೆ.. ಅವನ ಮನಸ್ಸಿನಲ್ಲಿ ಏನಿದೆಯೋ, ನಾನು ಬೇಡವಾಗಿದ್ದರೆ, ನಾನೇನು ತಾನೇ ಮಾಡಬಲ್ಲೆ! ಅವಳಿಗೆ ಯಾವ ಉಪಾಯವೂ ಹೊಳೆಯಲಿಲ್ಲ, ಎದ್ದು ಕಾಫಿಗೆ ನೀರನ್ನಿಟ್ಟು, ಮಧ್ಯಾಹ್ನದ ತಿಂಡಿ ಮಾಡಿದಳು ಅಷ್ಟು ಹೊತ್ತಿಗೆ ಚಿಕ್ಕಪ್ಪ ಎದ್ದು ಒಳಗೇ ಬಂದರು.

''ನಿನ್ನ ಗಂಡ ಮನೇಲೇ ಇದಾನೆ ಏನಂತೆ!'' ಕುಹಕದಿಂದ ಕೇಳಿದ್ದರು.

''ನಂಗೊತ್ತಿಲ್ಲ ಚಿಕ್ಕಪ್ಪಾ..'' ಅವಳು ಏನನ್ನು ಹೇಳಲು ಇಷ್ಟಪಡಲಿಲ್ಲ.

''ಒಟ್ಟಿನಲ್ಲಿ ನಿನ್ನ ಹಣೇ ಬರಹ ಹೀಗೆ ಆಯ್ತು. ನನ್ನ ಮಾತನ್ನು ಕೇಳುವುದಿಲ್ಲ ನೀನು.. ನಿನ್ನ ಗಂಡನ ಜಾತಕ ಇದ್ದರೆ ಕೊಡು, ಇಲ್ಲಿ ನನ್ನ ಪರಿಚಯದವರೊಬ್ಬರು ಹೊಸದಾಗಿ ಜ್ಯೋತಿಷ್ಯ ನೋಡಲು ಪ್ರಾರಂಭಿಸಿದ್ದಾರೆ..''

''ನಿಮಗೆ ಅದರಲ್ಲಿ ನಂಬಿಕೆ ಇಲ್ಲ ಅಂತ ಅಂದಿದ್ದಿರಿ..''

''ಈಗಲೂ ನಂಬಿಕೆ ಇಲ್ಲ, ಆದರೆ ನಿನ್ನ ಮನಸ್ಸಿನ ನೆಮ್ಮದಿಗೋಸ್ಕರ..ನೋಡೋಣ ನಿನ್ನ ಗ್ರಹಗತಿ ಏನು ಹೇಳುತ್ತೆ ಅಂತ.''

''ಹುಂ ಕೊಡ್ತೀನಿ..''

ಅವರು ಹೊರಗೆ ಹೊರಟಾಗ, ಅವಳು ಮರೆಯದೇ, ತನ್ನ ಹಾಗೂ ತನ್ನ ಗಂಡನ ಜಾತಕದ ಪ್ರತಿಗಳನ್ನು ಕೊಟ್ಟಳು. ಅವರು ಹೊರಟು ಹೋದರು. ಭೀಮನ ಕೈಲಿ ತನ್ನ ಗಂಡನಿಗೆ ತಿಂಡಿ ಕಾಫಿಗಳನ್ನು ಕಳಿಸಿದಳು. ಭೀಮ ಕೊಟ್ಟು ಬಂದ.

ರಾತ್ರಿ ಸ್ವಲ್ಪ ಲೇಟಾಗಿ ಬಂದ ಚಿಕ್ಕಪ್ಪಾ, ಸೀದಾ ಒಳಗೆ ಬಂದರು. ಅಡಿಗೆ ಕೆಲಸದಲ್ಲಿ ಮಗ್ನಳಾಗಿದ್ದ ಅವಳನ್ನು ನೋಡಿ, ಅವರ ಅಂತಃಕರುಳು ಮಿಡಿಯಿತು. ವೃಂದಾ.. ಎಂದು ಹತ್ತಿರ ಹೋಗಿ ಮೈದಡವುವ ಮನಸ್ಸಾಯಿತು. ಆದರೂ ತಡೆದುಕೊಂಡರು. ಅವರು ಮುದ್ದು ಮಾಡಿ ಬೆಳೆಸಿದ್ದ ಹುಡುಗಿ ಅವಳು..ಆದರೂ..

''ನನ್ನ ಸ್ನೇಹಿತನ ಮನೇಲಿ ಹೊಟ್ಟೆ ತುಂಬಾ ತಿಂಡಿ ತಿಂದು ಬಿಟ್ಟೆ ಹಸಿವೇ ಇಲ್ಲ, ಬಿಸಿಯಾಗಿ ಒಂದು ಲೋಟ ಹಾಲು ಕೊಡು, ಕುಡಿದು ಮಲಗ್ತೀನಿ. ಬೆಳಿಗ್ಗೆ ಬೇಗ ಏಳಬೇಕು..''

ಆ ರಾತ್ರಿ ಚಿಕ್ಕಪ್ಪ ಚೆನ್ನಾಗಿ ನಿದ್ರಿಸಲಿಲ್ಲವೆಂದು ವೃಂದಳಿಗೆ ತಿಳಿದಿತ್ತು. ಹೊರಳಾಡಿದಾಗಲೆಲ್ಲಾ ಮಂಚ ಕಿರ್ ಎಂದು ಸದ್ದು ಮಾಡುತ್ತಲೇ ಇತ್ತು.

ಬೆಳಿಗ್ಗೆ ಬೇಗನೇ ಎದ್ದು ಸ್ನಾನ ಇತ್ಯಾದಿಗಳನ್ನು ಮುಗಿಸಿ, ಕೈಯಲ್ಲಿ ಪೇಪರನ್ನು ಹಿಡಿದು, ಅವನ ರೂಮಿನ ಕಡೆಗೇ ಆಗಾಗ್ಗೆ ನೋಡುತ್ತಿದ್ದರು. ಭೀಮನನ್ನು ಕರೆದು, ಅಣ್ಣಾ ಎದ್ದಿದಾನೇನೋ..'' ಕೇಳಿದ್ದರು. ಅವನು, ಹೂಂ, ಎದ್ದಿದಾರೆ ಎಂದಾಗ, ಎದ್ದು ತಾನೇ ಅವನ ರೂಮಿನ ಬಾಗಿಲಿಗೆ ಬಂದು ನಿಂತರು.

''ನಾನು ನಿನ್ನ ಹತ್ತಿರ ಮುಖ್ಯವಾದ ವಿಷಯವೊಂದನ್ನು ಮಾತನಾಡಬೇಕು.. ಆದರೆ ಮನೆಯಲ್ಲಿ ಬೇಡ.. ಬಸ್‌ಸ್ಟಾಂಡ್ ಹತ್ತಿರ ಬಾ..'' ಅವನು ಕುಳಿತಿದ್ದವನು ಕತ್ತೆತ್ತಿ ನೋಡುವಷ್ಟರಲ್ಲಿ ಅದಷ್ಟನ್ನು ಹೇಳಿ, ಬಂದಿದ್ದರು.

ಅವನಿಗೆ ಆ ಮಾತು ಕೇಳಿಸಿತ್ತು. ಆದರೆ ಅವರು ತನ್ನನ್ನೇಕೆ ಕರೆದಿರಬಹುದು? ಎನಿಸಿ ಗಾಬರಿಯಾಗತೊಡಗಿತು. ಏನು ಮಾತನಾಡಲು ಇದೆಯೋ, ಈ ದಿನ ತನ್ನ ರಹಸ್ಯ ಹೊರಬೀಳುವುದು ಖಂಡಿತಾ ಎನಿಸಿ, ಮುಂದೇನು ಎಂಬ ಚಿಂತೆಯೂ ಕಾಡತೊಡಗಿತು. ಸ್ವಲ್ಪ ಹೊತ್ತು ಹಾಗೇ ಕುಳಿತಿದ್ದ. ತಾನು ಹೋಗದಿದ್ದರೆ ಇವರೇನು ಮಾಡಬಲ್ಲರು! ಅಂತ. ಎಷ್ಟೇ ಹೊತ್ತಿನ ಮೇಲೆ ಜ್ಞಾನೋದಯವಾದವನಂತೆ, ತನ್ನಲ್ಲಿಯೇ ಎಂದುಕೊಂಡ. ಹೇಗೂ ಈ ರಹಸ್ಯ ಒಂದಲ್ಲ ಒಂದು ದಿನ ಯಾರಿಗಾದರೂ ತಿಳಿಯಲೇಬೇಕು. ಅದು ಈ ದಿನವೇ ಏಕಾಗಬಾರದು! ಅವರೇ ಒಂದು ಸಲಹೆಯನ್ನು ನೀಡಲಿ. ತಾನು ಅದರಂತೆ ನಡೆದುಕೊಳ್ಳುತ್ತೇನೆ. ಆದರೆ ನಿರಪರಾಧಿಯಾಗಿ ಜೈಲಿಗೆ ಮಾತ್ರ ಹೋಗಲಾರೆ. ಅದದ್ದಾಗಲಿ, ನಡೆದದ್ದನ್ನೆಲ್ಲಾ ಹೇಳಿ, ಅವರ ಕ್ಷಮಾಪಣೆ ಕೇಳಿ, ತಾನು ಎಲ್ಲಿಯಾದರೂ ಹೊರಟು ಹೋಗಬೇಕು, ಹೀಗೇ ಏನೇನನ್ನೋ ಚಿಂತಿಸುವಷ್ಟರಲ್ಲಿ ಭೀಮ ಬಂದಿದ್ದ.

''ನೀವು ಏನು ಮಾಡ್ತಿದೀರಿ ಅಂತ ನೋಡಿಕೊಂಡು ಬಾ ಎಂದ್ರು'' ಎಂದ ಹೆದರುತ್ತಾ.

''ನೀನು ಹೋಗು, ನಾನು ಈಗಲೇ ಹೊರಟೆ,'' ಎಂದು ಎದ್ದು ಬೇರೆ ಬಟ್ಟೆಯನ್ನು ಹಾಕಿಕೊಂಡು, ಮನೆಯಿಂದ ಹೊರಹೊರಟ. ಬಸ್‌ಸ್ಟಾಪ್‌ನಲ್ಲಿ ನಿಂತಿದ್ದ ಆತನನ್ನು ಇವನು ಗುರುತಿಸಲಿಲ್ಲ, ಇವನು ಅವರನ್ನು ಸರಿಯಾಗಿ ನೋಡಿದ್ದರೆ ತಾನೇ.. ಆದರೂ ಅತ್ತಿತ್ತ ನೋಡುತ್ತಾ ಬಂದವನ ಎದುರಿಗೆ ಆತ ಪ್ರತ್ಯಕ್ಷರಾದರು. ಒಂದು ಗಳಿಗೆ ನೇರವಾಗಿ ಅವನನ್ನೇ ನೋಡಿದರು.. ತನಗೇನೋ ಅನುಮಾನ? ಅವನಲ್ಲವೆಂದು ತಾನು ಹೇಗೆ ಹೇಳಲಿ!

ಆದರೆ.. ನೆನ್ನೆಯಿಂದ ನನ್ನಲ್ಲಾಗುತ್ತಿರುವ ತಳಮಳ. ಇವನನ್ನೇ ಕೇಳಿದರೆ ನಿಜ ಹೇಳುತ್ತಾನೆಂದು ಹೇಗೆ ಹೇಳಲಿ.. ಅವನು ಅತ್ತ ಸರಿಯುವುದರಲ್ಲಿದ್ದ. ನಿಂತ್ಕೋ ಎಂದರು, ದರ್ಪದಿಂದ ನಿಂತ. ಅದೇ ಧ್ವನಿ.. ''ನಾನು ಯಾರು ಅಂತ ಗೊತ್ತಾಗಲಿಲ್ಲವೋ'' ಅಥವಾ...? ''ಗೊತ್ತಾಯ್ತು'' ಎಂದ. ಕ್ಷೀಣವಾದ ಸ್ವರದಲ್ಲಿ ಧ್ವನಿ ಅವನದಲ್ಲ ಎಂದು ಅವರಿಗೆ ಅನುಮಾನ ಬಂತು.

''ನನಗೆ ಕೆಲವು ಅನುಮಾನಗಳಿವೆ. ನಾನು ಅದನ್ನು ಬಗೆಹರಿಸಿಕೊಳ್ಳಬೇಕು, ಎಲ್ಲಿ ಮಾತನಾಡೋಣ ನೀನೇ ಹೇಳು..'' ಎಂದರು. ಇವನಿಗೆ ಅವರನ್ನು ತಲೆ ಎತ್ತಿ ನೋಡಲು ಧೈರ್ಯವಾಗಲಿಲ್ಲ, ತಲೆ ತಗ್ಗಿಸಿಯೇ ಹೇಳಿದ.

''ನಾನು ಒಬ್ಬರಿಗೆ ಫೋನು ಮಾಡಬೇಕು, ಈಗ ಬರ್ತೀನಿ''

''ನಾನು ಇಲ್ಲೇ ಕಾಯ್ತಾ ಇರ್ತೀನಿ ಬೇಗ ಬಾ..'' ಅವನು ನೇರವಾಗಿ ನಡೆದು ಹೋದಾಗ, ಮನ ಏನನ್ನೋ ಲೆಖ್ಖ ಹಾಕುತ್ತಿತ್ತು.

ಪಿನಾಕಿ ಕಮಲಿನಿಗೆ ಫೋನು ಮಾಡಿದ. ''ಈಗಲೇ ಬನ್ನಿ.. ನಾನು ಸಮಸ್ಯೆಗೆ ಸಿಕ್ಕಿ ಬಿದ್ದಿದ್ದೇನೆ,'' ಎಂದ. ಅವಳು ಬರುವವರೆಗೂ ತಾನು ಆತನ ಎದುರಿಗೆ ನಿಂತಿರಲು ಮುಜುಗರವೆನಿಸಿ, ಒಂದಿಷ್ಟು ಬಾಳೆ ಹಣ್ಣುಗಳನ್ನು ಕೊಂಡ. ಒಂದು ದಿನಪತ್ರಿಕೆಯನ್ನು ಕೊಂಡು ಓದತೊಡಗಿದ. ಚಿಕ್ಕಪ್ಪ ನಡುಗುತ್ತಾ ಅವನ ಬಳಿಗೆ ಬಂದರು.

''ಫೋನು ಮಾಡಿದೀನಿ, ಅವರು ಇನ್ನೇನು ಬಂದುಬಿಡ್ತಾರೆ..''

''ಯಾರು! ಯಾರು ಬರಬೇಕು..?'' ದರ್ಪದಿಂದ ಕೇಳಿದರು.

''ಕಮಲಿನಿ ಅಂತ. ವಿಷ್ಣುವಿನ ಸ್ನೇಹಿತೆ'' ಚಿಕ್ಕಪ್ಪ ಸುಮ್ಮನಾದರು, ಓ.. ಏನೋ ಮಸಲತ್ತು ನಡೀತಿದೆ. ಅವಳೂ ಇದರಲ್ಲಿ ಶಾಮೀಲಾಗಿದಾಳೆ, ಅವಳೂ ಬರಲಿ, ಚೆನ್ನಾಗಿ ಒದರಿ ಬಿಡ್ತೀನಿ ಎಂದು ತನ್ನಲ್ಲೇ ನಿಶ್ಚಯಿಸಿಕೊಂಡರು. ಅಷ್ಟರಲ್ಲಿ ಅವರ ಪಕ್ಕದಲ್ಲಿ ಒಂದು ಕಾರು ನಿಂತಿತು. ಅದರಿಂದ ಕಮಲಿನಿ ಇಳಿದು ಬರುವಷ್ಟರಲ್ಲಿ ಪಿನಾಕಿ ಅವಳ ಬಳಿಗೆ ಬಂದಿದ್ದ.

''ಇವರೇ ವೃಂದಾಳ ಚಿಕ್ಕಪ್ಪಾ..'' ಪಿಸುದನಿಯಲ್ಲಿ ಹೇಳಿದ್ದ, ಕಮಿಲಿನಿ ಯಾವ ಅಳುಕೂ ಇಲ್ಲದೇ ನಮಸ್ಕಾರ ಎಂದಿದ್ದಳು, ''ಹುಂ, ಹುಂ'' ಆತ ತಲೆ ಆಡಿಸಿದ್ದರು.

''ನೀವು ಏನೋ ಮಾತನ್ನಾಡಬೇಕು ಅಂದ್ರಂತೆ..''

''ನಿಮ್ಮ ಹತ್ತಿರ ಅಲ್ಲ, ಇವನ ಹತ್ತಿರ..''

''ಇವರು ವಿಷ್ಣು ಅಲ್ಲ ಅನ್ನುವ ಅನುಮಾನ ನಿಮಗೆ ಬಂದಿರಬೇಕಲ್ಲವೆ?''

''ಹೌದು, ಹೌದು, ಇವನು ಯಾರು! ಇದೆಲ್ಲ ಏನು! ಅವನು ಎಲ್ಲಿ?''

''ಎಲ್ಲಾ ಪ್ರಶ್ನೆಗಳಿಗೂ ಉತ್ತರ ಹೇಳ್ತೀನಿ, ನನ್ನ ಮಾತನ್ನು ನಂಬುವುದಾದರೆ, ಇಲ್ಲದಿದ್ದರೆ ನಮ್ಮ ಪಾಡಿಗೆ ನಮ್ಮನ್ನು ಬಿಟ್ಟುಬಿಡಿ.. ನಿಮಗೆ ಯಾವ ತೊಂದರೆಯೂ ಇಲ್ಲ.''

"ಏನು ಬಿಡೋದು! ಪೋಲಿಸರಿಗೆ ತಿಳಿಸ್ತೀನಿ.." ಬೆದರಿಸಿದರು.

"ನಿಮಗೆ ಅದೇ ಸರಿ ಎನಿಸಿದರೆ ಹಾಗೇ ಮಾಡೋರಂತೆ, ಆದರೆ ಮೊದಲು ನಾವು ಹೇಳುವುದನ್ನು ಕೇಳಿಕೊಳ್ಳಬೇಕು.."

"ನೀನು ನನ್ನ ಮಗಳ ಸಂಸಾರವನ್ನು ಹಾಳು ಮಾಡಿದವಳು, ನಿನ್ನ ಮಾತನ್ನೇನು ನಾನು ಕೇಳುವುದು!"

"ನೋಡಿ ನೀವು ದೊಡ್ಡವರು.. ನನಗೆ ನಿಮ್ಮ ಬಗ್ಗೆ ಗೌರವವಿದೆ.. ಆದರೆ ನಿಮ್ಮ ಅಳಿಯ ನಿಮ್ಮ ಮಗಳ ಜತೆ ಸಂಸಾರ ಮಾಡುತ್ತಿರಲಿಲ್ಲ ಎನ್ನುವ ವಿಚಾರ, ನಿಮಗೂ ತಿಳಿದಿರಬಹುದು ಅಲ್ಲವೆ! ಆದರೆ ನನ್ನನ್ನು ಮಾತ್ರ ದೂಷಿಸಬೇಡಿ.."

"ಮತ್ಯಾರನ್ನು ದೂಷಿಸಲಿ! ನಿನ್ನಿಂದಲೇ ಅವನು ಕೆಟ್ಟಿದ್ದು.."

"ಇಲ್ಲ, ಅವನಿಂದ ನಾನು ಕೆಟ್ಟೆ, ನನ್ನ ಸಂಸಾರದಲ್ಲಿ ನೆಮ್ಮದಿ ಇಲ್ಲದಂತೆ ಮಾಡಿದವನು ಅವನೇ.. ನಾನು ಅವರು ಸುಖವಾಗಿರಲಿ ಎಂದು ಎಷ್ಟೋ ಸಲ ಪ್ರಯತ್ನಪಟ್ಟೆ, ಆದರೆ ಅವರು ಎಂದೂ ನನ್ನ ಮಾತನ್ನು ಕೇಳಲಿಲ್ಲ.. ಆದರೆ, ನಾನು ನಿಮಗೆ ಮಾತು ಕೊಡ್ತೀನಿ.. ನಾನು ನಿಮ್ಮ ಮಗಳ ಹತ್ತಿರ ಎಲ್ಲಾ ಮಾತನ್ನಾಡಿದೀನಿ.."

"ಅವಳ ಹತ್ತಿರ ನೀನು ಮಾತನಾಡುವ ಅವಶ್ಯಕತೆ ಏನಿತ್ತು!"

"ಅವರು ನಿಮಗೆ ಹೇಳಲಿಲ್ಲವೆ!"

"ಇಲ್ಲ, ಅವಳು ತಾನೇ ಸಾಧ್ವೀಮಣಿ ಅಂತ ತಿಳಿದುಕೊಂಡು, ತನ್ನ ಸಂಸಾರವನ್ನು ತಾನೇ ಹಾಳು ಮಾಡಿಕೊಳ್ಳುತ್ತಿದಾಳೆ. ಇದಕ್ಕೆಲ್ಲಾ ಕಾರಣ ನೀನೇ.."

"ಇನ್ನು ಮೇಲೆ ಅವರ ಸಂಸಾರವೂ ಸರಿಯಾಗಿರುತ್ತೆ, ನಾನೂ ನೆಮ್ಮದಿಯಿಂದ ಇರುತ್ತೇನೆ. ಯಾರಿಗೂ ಅವರ ಕಾಟವೇ ಇಲ್ಲ, ಅವರು.. ವಿಷ್ಣು ಸತ್ತು ಇವತ್ತಿಗೆ ಮೂರು ವಾರಗಳಾಯಿತು.."

ಚಿಕ್ಕಪ್ಪ ಸ್ತಂಭವಂತೆ ನಿಂತು ಬಿಟ್ಟರು..

"ಏನು ಹೇಳ್ತಿದೀಯಾ ನೀನು! ವಿಷ್ಣು ಸತ್ತು ಹೋದನೆ! ಯಾವಾಗ! ನೀನು ನಿಜ ಹೇಳ್ತಿದೀಯಾ ಅಂತ ನಾನು ಹೇಗ ನಂಬಲಿ! ಮೊದಲೆ ಯಾಕೆ ತಿಳಿಸಲಿಲ್ಲ!"

"ನಾನು ನಿಜವನ್ನೇ ಹೇಳ್ತಿದೀನಿ.. ಆದರೆ ಈ ವಿಷಯ ವೃಂದಳಿಗೆ ಗೊತ್ತಿಲ್ಲ,

"ಅವಳಿಗೆ ತಿಳಿಸಿಲ್ಲ ತಾನೇ..?" ಅವರ ಮನಸ್ಸು ಸರಸರನೇ ಏನನ್ನೇ ಲೆಖ್ಖ ಹಾಕಿತು.

"ಇಷ್ಟೆಲ್ಲಾ ನಡೆದಿದೆ. ಮನೆಯವರು, ನಮಗೆ ತಿಳಿದಿಲ್ಲ ಅಂದರೆ ಏನರ್ಥ? ಏನು ನಡೀತು ಅಂತ ವಿವರವಾಗಿ ಹೇಳು. ಇಲ್ಲೇ ಹತ್ತಿರದಲ್ಲಿ ಒಂದು ದೇವಸ್ಥಾನವಿದೆ. ಅಲ್ಲಿ ಕಟ್ಟೆಯ ಮೇಲೆ ಕುಳಿತು ಮಾತನಾಡೋಣ."

"ಹುಂ, ನಡೀರಿ" ಮೂವರೂ ದೇವಸ್ಥಾನದ ಅಂಗಳವನ್ನು ಹೊಕ್ಕು ಅಲ್ಲಿದ್ದ ವಿಶಾಲವಾದ ಕಟ್ಟೆಯ ಮೇಲೆ ಕುಳಿತರು. ಕಮಲಿನಿಯೇ ಮಾತಿಗೆ ಪ್ರಾರಂಭಿಸಿದಳು.

ನಾನು ಕಮಲಿನಿ, ಇಲ್ಲಿಯ ಬ್ಯಾಂಕೊಂದರಲ್ಲಿ ಕೆಲಸದಲ್ಲಿದೀನಿ. ನನ್ನ ಗಂಡ ಹೋಟೆಲ್ಲೊಂದರಲ್ಲಿ ಮ್ಯಾನೇಜರ್ ಆಗಿದಾರೆ. ನನ್ನ ಯಜಮಾನರಿಗೂ ವಿಷ್ಣುವಿಗೂ ಇದ್ದ ಸ್ನೇಹ, ಎಂತಹುದು ಅಂತ ನನಗೆ ತಿಳಿಯದು. ನನ್ನ ಯಜಮಾನರೇ ವಿಷ್ಣುವನ್ನು ನನಗೆ ಪರಿಚಯಿಸಿದರು. ಆ ಪರಿಚಯ, ಸ್ನೇಹ, ಮುಂದೆ ಎಲ್ಲೆಲ್ಲಿಗೋ ಹೋಗಿ ತಲುಪಿತು. ವಿಷ್ಣು ಒಂದು ದಿನ ಬಲಾತ್ಕಾರದಿಂದ ನನ್ನನ್ನು ವಶ ಪಡಿಸಿಕೊಂಡರು. ಆಮೇಲೆ ಅದರಲ್ಲಿ ನನ್ನ ಗಂಡನೂ ಶಾಮೀಲಾಗಿದ್ದಾರೆಂದು ತಿಳಿಯಿತು. ನನಗೆ ಇಬ್ಬರು ಮಕ್ಕಳೂ ಇರುವುದರಿಂದ ನಾನು ಮಕ್ಕಳ ಭವಿಷ್ಯ ಹಾಳಾಗಬಾರದು ಎನ್ನುವ ಉದ್ದೇಶದಿಂದ ಇದನ್ನೆಲ್ಲ ಸಹಿಸಬೇಕಾಯಿತು. ಆದರೂ ನಮ್ಮಿಬ್ಬರ ನಡುವೆ ಮನಸ್ತಾಪ ದಿನದಿನಕ್ಕೆ ಜಾಸ್ತಿಯಾಯಿತು. ನಾನು ನನ್ನ ಮಕ್ಕಳನ್ನು ನನ್ನ ತಾಯಿಯ ಮನೆಯಲ್ಲಿ ಬಿಟ್ಟು ಓದಿಸುತ್ತಿದ್ದೇನೆ.

ಈಗೊಂದು, ಐದಾರು ವಾರಗಳ ಕೆಳಗೆ, ಇದ್ದಕ್ಕಿದ್ದಂತೇ ನಮ್ಮ ಮನೆಗೆ ವಿಷ್ಣು ಬಂದರು. ನನಗೆ ಆ ದಿನ ಬ್ಯಾಂಕಿಗೆ ರಜವಿತ್ತು. ಹೊರಗೆ ಎಲ್ಲಾದರೂ ಸುತ್ತಾಡಿ ಬರೋಣವೆಂದು ಆಗ್ರಹಪಡಿಸಿ ನನ್ನನ್ನು ಕರೆದುಕೊಂಡು ಸೀದಾ ಹಿಲ್‌ವ್ಯೂ ರೆಸಾರ್ಟ್‌ಗೆ ಬಂದು ಅಲ್ಲಿನ ಒಂದು ರೂಮಿನಲ್ಲಿ ಇಳಿದುಕೊಂಡೆವು. ಆ ರಾತ್ರಿ ಅಲ್ಲಿಯೇ ಇರುವ ಕಾರ್ಯಕ್ರಮವಿದೆಯೆಂದು ತಿಳಿದಾಗ ನನಗೆ ಅಸಹನೆಯುಂಟಾಯಿತು. ನಾನು ಆತನನ್ನು ಚೆನ್ನಾಗಿ ಬೈದೆ. ತಾನೂ ಬಾಯಿಗೆ ಬಂದಂತೆ ಬೈದು, ಹೀಗೆಲ್ಲಾ ನೀನು ಆಡಿದರೆ, ನಾನು ಹೇಳಿದಂತೆ ಕೇಳದಿದ್ದರೆ, ನಿನ್ನ ಗಂಡನನ್ನು ಕೊಂದು ಬಿಡ್ತೇನೆ. ನಿನ್ನ ಮಕ್ಕಳಿಗೆ ಎಲ್ಲಾ ಹೇಳಿ ಬಿಡ್ತೇನೆ, ಎಂದು ಹೆದರಿಸಿದರು. ಆದರೂ ನನಗೆ ಆ ದಿನ ಆತನ ಮೇಲೆ ಅತಿ ಕೋಪ ಬಂದಿತ್ತು. ಏನೇ ಆದರೂ ಈ ರಾತ್ರಿ ನಾನು ಇಲ್ಲಿ ನಿಮ್ಮ ಜತೆ ಇರುವುದಿಲ್ಲವೆಂದು ಜಗಳವಾಡಿದೆ. ನನ್ನನ್ನು ಚೆನ್ನಾಗಿ ಹೊಡೆದು ಬಡಿದು ತನ್ನ ಆಸೆಯನ್ನು ಪೂರೈಸಿಕೊಂಡರು. ಕುಡಿಯುವ ಚಟವೂ ಇದ್ದುದರಿಂದ ಸಾಕಷ್ಟು ಕುಡಿದೂ ಇದ್ದರು. ಅಷ್ಟಾದರೂ ನನ್ನನ್ನು ಹೀನಾಮಾನ ಬೈಯುತ್ತಲೇ ಇದ್ದರು. ನನಗೂ ತುಂಬಾ ಬೇಸರ, ಅವಮಾನವಾಗಿತ್ತು. ಇಂತಹ ಜೀವನಕ್ಕಿಂತ ಆತ್ಮಹತ್ಯೆಯೇ ವಾಸಿ ಎನಿಸಿತ್ತು. "ನಾನು ಬದುಕಿದ್ದರೆ ಹೀಗೇ ಗೋಳು ಹುಯ್ದುಕೊಳ್ಳುತ್ತೀರಿ.. ಈ ದಿನ ನಾನು ಸತ್ತು, ನೀವು ನರಳುವಂತೆ ಮಾಡ್ತೀನಿ" ಎಂದು ಹೇಳಿ, ರೂಮಿನಿಂದ ಹೊರಗೆ ಹೊರಟೆ..

ಸುಮಾರು ಹತ್ತು ಹನ್ನೊಂದು ಗಂಟೆಯ ಸಮಯವಿರಬಹುದು.. ಅಕ್ಕಪಕ್ಕದ ರೂಮುಗಳಲ್ಲಿ ಯಾರಿದ್ದರೋ ಯಾರು ಇಲ್ಲವೋ ತಿಳಿಯದು. ನನ್ನ ಪಾಡಿಗೆ ನಾನು, ಅತಿ ಕತ್ತಲೆಯಿಂದ ಕಾಣುತ್ತಿದ್ದ ಜಾಗಕ್ಕೆ ಹೋಗಿ, ಅಲ್ಲಿದ್ದ ಒಂದು ಕಲ್ಲಿನ ಮೇಲೆ ಕುಳಿತೆ. ಹಿಂದಿನಿಂದ ತೂರಾಡುತ್ತಾ ಆತನೂ ಬಂದ. ನಾನು ಮುಂದೆ ಮುಂದೆ ಹೋದೆ. ಹಿಂದೆ ಹಿಂದೆ ಆತ.. ಸ್ವಲ್ಪ ದೂರ ಹೋದಮೇಲೆ, ಹಿಂದೆ ಏನೋ ದೊಪ್ಪನೆ ಬಿದ್ದಂತೆ ಸದ್ದಾದಾಗ ಹೆದರಿ, ನಿಂತು, ಹಿಂತಿರುಗಿ ನೋಡಿದೆ. ಈತ ಕಾಣಲಿಲ್ಲ, ಕತ್ತಲೆಯಲ್ಲಿ ಎಲ್ಲಿ ಹೋದರು

ಎಂದೂ ಸರಿಯಾಗಿ ಕಾಣಲಿಲ್ಲ. ಏನು ಮಾಡುವುದೆಂದು ತೋಚದೇ ಹಾಗೇ ನಿಂತಿದ್ದೆ. ಅಷ್ಟರಲ್ಲಿ ನನ್ನ ಹಿಂದೆ ಯಾರೋ ನರಳಿದಂತೆ ಕೇಳಿಸಿತು. ಕಿರುಚಲೂ ಧೈರ್ಯವಿಲ್ಲದೇ ಹಾಗೇ ನಿಂತಿದ್ದೆ. ಆಮೇಲೆ ಸ್ವಲ್ಪ ಸ್ವಲ್ಪವಾಗಿ ಚಂದ್ರನ ಬೆಳಕು ಬೀಳಲಾರಂಭಿಸಿತು. ಮತ್ತೆ ಹೆದರಿಕೆಯಾಗಿ, ಹಾಗೇ ಕಣ್ಣು ಮುಚ್ಚಿ ಮಲಗಿದೆ ಹುಲ್ಲಿನ ಮೇಲೆ.

ಒಂದು ಹೊತ್ತಿನಲ್ಲಿ ತಣ್ಣನೆಯ ಗಾಳಿ ಬೀಸಿ, ಎಚ್ಚರವಾಯಿತು. ಕಣ್ಣುಬಿಟ್ಟು ಸುತ್ತಲೂ ನೋಡಿದೆ. ನನ್ನ ಹಿಂದೆ ಇದ್ದ ಒಂದು ಮರದ ಬಳಿ ಯಾರೋ ನಿಂತಂತೆ ಕಂಡಿತು. ಹತ್ತಿರ ಹೋಗಿ ನೋಡಲು ಭಯವೆನಿಸಿದರೂ, ಅವನ ಸಹಾಯದಿಂದ ತಾನು ಬೆಟ್ಟ ಇಳಿದು ಹೋಗಬಹುದೆಂಬ ಕಿರು ಆಸೆಯಿಂದ ಅವನ ಬಳಿಗೆ ಬಂದೆ. ಹತ್ತಿರದಿಂದ ನೋಡಿದೆ, ಯಾರೋ ಒಬ್ಬ ವ್ಯಕ್ತಿಯನ್ನು ಮರಕ್ಕೆ ಕಟ್ಟಿ ಹಾಕಿದ್ದರು, ಹೊಡೆತದಿಂದ ಮೈಕೈಯೆಲ್ಲಾ ಮುಖವೆಲ್ಲಾ ಊದಿದಂತಾಗಿತ್ತು. ಸಣ್ಣ ಸಣ್ಣ ಗಾಯಗಳಾಗಿದ್ದವು. ಮಾತನಾಡಲೂ ತ್ರಾಣವಿಲ್ಲದವನಂತೆ ಇದ್ದ ಅವನ ಕೈಕಾಲುಗಳ ಕಟ್ಟನ್ನು ಬಿಚ್ಚಿದೆ.. ಅವನೇ ಇವನು.." ಪಿನಾಕಿಯ ಕಡೆ ಕೈ ಮಾಡಿ ನುಡಿದಳು ಕಮಲಿನಿ.

ಚಿಕ್ಕಪ್ಪ ಈ ಕಟ್ಟು ಕತೆಯನ್ನು ನಂಬದವರಂತೆ, ಅವನ ಕಡೆ ನೋಡಿದರು. ಪಿನಾಕಿಗೆ ಸ್ವಲ್ಪ ಧೈರ್ಯ ಬಂದಿರಬೇಕು. ಅವನು ಮಾತಿಗೆ ಪ್ರಾರಂಭಿಸಿದ.

ನನ್ನ ಹೆಸರು ಪಿನಾಕಿ. ನಾನೊಬ್ಬ ಟ್ಯಾಕ್ಸಿ ಡ್ರೈವರ್. ನನ್ನ ತಂದೆ ತಾಯಿ, ಹಳ್ಳಿಯಲ್ಲಿದಾರೆ. ಹೆಚ್ಚಿಗೆ ಓದುವ ಆಸೆಯಿಂದ ನಾನು ಈ ಊರಿಗೆ ಬಂದೆ. ಆದರೆ ಹಣವಿಲ್ಲದ ನನಗೆ ಯಾವ ಕಾಲೇಜಿನಲ್ಲೂ ಸೀಟು ಸಿಗಲಿಲ್ಲ. ಆ ಸಮಯದಲ್ಲಿ ನಾನು ಒಂದು ಗ್ಯಾರೇಜಿನಲ್ಲಿ ಕೆಲಸಕ್ಕೆ ಸೇರಿಕೊಂಡೆ. ಅಲ್ಲಿಯ ಮಾಲೀಕರು ಒಳ್ಳೆಯವರು. ಅವರು ನನಗೆ ಓದಲು ಸಹಾಯ ಮಾಡುವುದಾಗಿ ಹೇಳಿದ್ದರು. ನಾನು ಅವರ ಮನೆಯಲ್ಲಿಯೇ ಕೆಲಸಕ್ಕೆ ಸೇರಿಕೊಂಡೆ. ಕೆಲವು ದಿನಗಳ ನಂತರ ನಾನು ಒಂದು ಟ್ಯಾಕ್ಸಿ ಓಡಿಸಬೇಕೆಂಬ ಆಸೆ ಪ್ರಬಲವಾಯಿತು. ನನ್ನ ಆಸೆ ತಿಳಿದ ಅವರು ನನಗೆ ಬ್ಯಾಂಕ್‌ನಿಂದ ಸಾಲ ಕೊಡಿಸಿ, ನಾನು ಒಂದು ಟ್ಯಾಕ್ಸಿಯನ್ನು ಕೊಳ್ಳುವಂತೆ ಮಾಡಿದರು. ಅನಂತರ ಬಿಡುವಿನ ಹೊತ್ತಿನಲ್ಲಿ ಕಾಲೇಜಿಗೂ ಹೋಗಿ ಓದುತ್ತಿದ್ದೆ.

ಈ ಮಧ್ಯೆ, ಈಗ್ಗೆ ಮೂರು ವಾರಗಳ ಹಿಂದೆ, ಯಾರೋ ಇಬ್ಬರು ದಾಂಡಿಗರು ಬಂದು ಟ್ಯಾಕ್ಸಿ ಹತ್ತಿದರು. ಅವರು ಹೇಳಿದ ಜಾಗಕ್ಕೆ ಓಡಿಸಿದೆ. ನಡುರಸ್ತೆಯಲ್ಲಿ ಅವರು ಗಾಡಿ ನಿಲ್ಲಿಸುವಂತೆ ಹೇಳಿದರು. ಯಾರೋ ಒಬ್ಬ ಒಬ್ಬ ಹುಡುಗಿಯನ್ನು ನಡೆಸಿಕೊಂಡು ಬರುತ್ತಿದ್ದ. ಅವರಿಬ್ಬರು ನಮ್ಮ ಗಾಡಿಗೆ ಹತ್ತಿದರು. ಆ ಹುಡುಗಿ ಖಾಯಿಲೆಯವಳಂತೆ ಕಂಡು ಬಂದಳು. ನಾನೂ ಹೆಚ್ಚಿಗೆ ಮಾತನಾಡದೇ ಸುಮ್ಮನಾದೆ. ಸ್ವಲ್ಪ ದೂರ ಬಂದಮೇಲೆ, ನನಗೇಕೋ ದಿಗಿಲಾಯಿತು. ಆದರೂ ಏನೂ ಹೇಳುವಂತಿರಲಿಲ್ಲ. ಹತ್ತಿರದ ಒಂದು ಪೆಟ್ರೋಲ್ ಬಂಕ್‌ನಲ್ಲಿ, ಒಬ್ಬ ಇಳಿದು, ಒಂದು ಡಬ್ಬ ಪೆಟ್ರೋಲನ್ನು ತಂದ. ಅನಂತರ ಅವರು ಹೇಳಿದಂತೆ ನಾನು ಈ ಬೆಟ್ಟಕ್ಕೆ ಟ್ಯಾಕ್ಸಿ ಓಡಿಸಿದೆ. ಬೆಟ್ಟ ಹತ್ತುವುದು ಬೇಡವೆನಿಸಿದಾಗ, ಅವರನ್ನು ಇಳಿಯುವಂತೆ ಕೇಳಿಕೊಂಡೆ. ಸುಮ್ಮನೇ ನಡಿ..ಇಲ್ಲದಿದ್ದರ ಪೆಟ್ರೋಲ್ ಸುರಿದು,

ಟ್ಯಾಕ್ಸಿಯ ಸಮೇತ ನಿನ್ನನ್ನು ಸುಟ್ಟು ಬಿಡುತ್ತೇನೆ ಎಂದು ಹೆದರಿಸಿದರು.. ಸ್ವಲ್ಪ ದೂರ ಬೇಸರದಿಂದ ನಡೆಸಿದೆ. ಒಂದು ಕಡೆ ''ನಿಲ್ಲಿಸು'' ಎಂದರು. ''ಸಧ್ಯ'' ಎಂದುಕೊಂಡು ನಿಲ್ಲಿಸಿದೆ. ನಾಲ್ಕು ಜನರು ಇಳಿದರು. ಆ ಹುಡುಗಿ ಹಾಗೇ ಅರೆಜ್ಞಾನದಲ್ಲೇ ಇದ್ದಳು. ಇಬ್ಬರು ಅವಳನ್ನು ನಡೆಸಿಕೊಂಡು ಮರಗಳ ನಡುವೆ ಮರೆಯಾದರು. ಇನ್ನೊಬ್ಬ, ''ಅವರುಗಳು ನಡೆದುಕೊಂಡು ಬರ್ತಾರೆ ನೀನು ನಡೆ'' ಎಂದು ಟ್ಯಾಕ್ಸಿ ಹತ್ತಿದ. ನಿಧಾನವಾಗಿ ನಾವು ಬೆಟ್ಟ ಹತ್ತಿದೆವು. ಅಷ್ಟು ಹೊತ್ತಿಗೆ ಸಂಜೆಗತ್ತಲಾಗಿತ್ತು. ಅಷ್ಟು ಹೊತ್ತಿಗೆ ಮರಗಳ ನಡುವೆ ಮರೆಯಾಗಿದ್ದವರಲ್ಲಿ ಒಬ್ಬ ವ್ಯಕ್ತಿ, ಎಲ್ಲಿಂದಲೋ ಪ್ರತ್ಯಕ್ಷನಾದ, ನನ್ನ ಜತೆಯಲ್ಲಿದ್ದವನು, ಹುಬ್ಬು ಹಾರಿಸಿ ನಕ್ಕ. ಅವನೂ ನಕ್ಕ. ಅವನು ನನ್ನ ಜತೆ ಕುಳಿತ.. ನನ್ನ ಜತೆ ಇದ್ದವನು, ಮತ್ತೆಲ್ಲೋ ಮಾಯವಾದ. ಆಗ ನನಗೆ ಏನೋ ಅನುಮಾನ ಬರಲಾರಂಭಿಸಿತು. ಅಲ್ಲಿಂದ ಹೋದರೆ ಸಾಕು ಎಂದುಕೊಂಡು, ''ನನ್ನ ಛಾರ್ಜು ನನಗೆ ಕೊಟ್ಟುಬಿಡಿ. ನಾನು ಹೋಗ್ತೀನಿ'' ಎಂದೆ. ಹೋಗೂವಂತೆ, ''ನಾವೂ ಬರ್ತೀವಿ..'' ಎಂದ ಕೆಟ್ಟ ನಗೆ ನಕ್ಕ. ನಾನು ಸುಮ್ಮನಿರಲಾರದೇ.. ''ಆ ಹುಡುಗಿ ಯಾರು! ಈಗ ಅವಳೆಲ್ಲಿ? ಅವಳಿಗೇನಾಯ್ತು'' ಅಂತ ಕೇಳಿದೆ.

''ಆ ಹುಡುಗಿ ಮೇಲೆ ನಿನ್ನ ಕಣ್ಣು ಬಿತ್ತಾ! ಆ ಹುಡುಗಿ ಯಾರಾದರೆ, ನಮಗೇನು! ನಿನಗೇನು! ಅವಳನ್ನು ಇಲ್ಲಿ ನಿನಗೋಸ್ಕರ ಬಿಟ್ಟು ಹೋಗ್ತೀನಿ, ನಿನಗೆ ಹೇಗೆ ಬೇಕೋ ಹಾಗೆ ಮಜಾ ಮಾಡು..'' ಎಂದ ಮತ್ತೆ ಕೆಟ್ಟ ನಗೆ ನಗುತ್ತಾ.

''ಮನುಷ್ಯರಾ ನೀವು! ತಡೀರಿ.. ಈಗಲೇ ಹೋಗಿ ಪೋಲಿಸ್ ಕಂಪ್ಲೆಂಟ್ ಕೊಡ್ತೀನಿ ಎಂದೆ..'' ಹುಂಕಾರ ಮಾಡಿ.

ಅವನು ಮತ್ತೆ ನಕ್ಕ.. ''ಹುಂ, ಹೋಗುವಂತೆ, ಹೋಗುವಂತೆ, ಪೋಲಿಸ್ ಸ್ಟೇಷನ್‌ಗೆ ಹೋಗೊವನು ನೀನೇ.. ಎಂದು, ಅದೇನು ತೆಗೆದುಕೊಂಡು ಹೊಡೆದನೋ ನಾನು ಕೆಳಗೆ ಬಿದ್ದೆ'' ನನಗೆ ಅಷ್ಟೇ ನೆನಪು.

ಎಚ್ಚರವಾದಾಗ ಚೆನ್ನಾಗಿ ಕತ್ತಲಾಗಿತ್ತು. ನನ್ನ ಕೈಕಾಲುಗಳನ್ನು ಅಲ್ಲಾಡಿಸಲು ಆಗದಂತೆ ಕಟ್ಟಿ ಹಾಕಿದ್ದರು. ಬಾಯಿಗೆ ಬಟ್ಟೆ ತುರುಕಿದ್ದರು. ಮೈಕೈಯೆಲ್ಲಾ ನೋಯುತ್ತಿತ್ತು. ನಾನೆಲ್ಲಿದ್ದೇನೆ, ನನಗೇನಾಗಿದೆ ಎಂದು ತಿಳಿಯಲು ನನಗೆ ಸಾಕಷ್ಟು ಸಮಯ ಹಿಡಿಯಿತು.

ಬೆಳಗಾಗುವುದನ್ನೇ ಎದುರು ನೋಡುತ್ತಾ ಎಚ್ಚರ ಅರೆಎಚ್ಚರದಲ್ಲಿ ಆ ರಾತ್ರಿ ಕಳೆದೆ. ಆಮೇಲೆ ಈಕೆ ಬಂದು ನನ್ನ ಕಟ್ಟುಗಳನ್ನು ಬಿಚ್ಚಿದರು. ನಾನು ನನ್ನೊಂದಿಗೆ ನಡೆದ ಅನ್ಯಾಯವನ್ನೆಲ್ಲಾ ತಿಳಿಸಿ, ''ಇಲ್ಲೇ ಎಲ್ಲೋ ನನ್ನ ಟ್ಯಾಕ್ಸಿ ಇರಬೇಕು ನೋಡ್ತೀನಿ'' ಎಂದು ಹುಡುಕಲು ಹೊರಟೆ. ''ಈಕೆ, ನಾನೂ ನಿಮ್ಮ ಜತೆ ಬರ್ತೀನಿ'', ''ನಾನು ಇಲ್ಲಿರಲಾರೆ'' ಎಂದು ಹೊರಟಳು. ಸ್ವಲ್ಪ ದೂರ ಹೊರಟು ಬಂದಿದ್ದೆವು. ನಮ್ಮ ಮುಂದೆ ಅಡ್ಡಲಾಗಿ ಯಾರೋ ಮಲಗಿದ್ದಂತೆ ಕಂಡಿತು. ನಾನು ಬಗ್ಗಿ ನೋಡಿ, ಅಂಗಾತನಾಗಿ ಮಲಗಿಸಲು ನೋಡಿದೆ. ದೇಹ ಕೊರಡಿನಂತೆ ಆಗಿತ್ತು. ಅಷ್ಟರಲ್ಲಿ ಈಕೆ ''ವಿಷ್ಣು'' ಎಂದು ಆತನನ್ನು ಗುರುತಿಸಿದ್ದರು. ಆಕೆಯ ಗಾಬರಿ, ನನ್ನ ಗಾಬರಿಗಿಂತ ಹೆಚ್ಚಾಗಿತ್ತು. ಸರಸರನೆ, ನನ್ನ ಕೈ

ಹಿಡಿದು ಮರದ ಬಳಿಗೆ ಕರೆದುಕೊಂಡು ಬಂದರು. ಇನ್ನು ಜನ ಸಂಚಾರವಿರಲಿಲ್ಲ, ನಡೆದದ್ದನ್ನೆಲ್ಲಾ ಹೇಳಿದರು. ನಾನು ಆಕೆಯ ಮಾತನ್ನು ನಂಬಿದೆ. ಅನಂತರ ಈಕೆಯ ಉಪಾಯದಂತೆ, ನನ್ನ ಖಾಕಿ ಬಟ್ಟೆಯನ್ನು ಆ ದೇಹಕ್ಕೆ ತೊಡಿಸಿ, ಆತನ ಕೊಳಕಾಗಿದ್ದ ಬಟ್ಟೆಯನ್ನು ನಾನು ಧರಿಸಿ, ನಾವಿಬ್ಬರೂ, ಅವರುಗಳು ಇಳಿದುಕೊಂಡಿದ್ದ ರೂಮಿಗೆ ಬಂದೆವು. ಅನಂತರ ಚೆನ್ನಾಗಿ ಮುಖ ತೊಳೆದು, ಅವರು ಬಂದಿದ್ದ ಕಾರಿನಲ್ಲಿ ವಾಪಸ್ಸು ಬೆಟ್ಟ ಇಳಿದು ಬಂದು ಬಿಟ್ಟೆವು.

ನಾವು ಮಾಡಿದ್ದು ತಪ್ಪು. ಆದರೆ ಆ ಗಳಿಗೆಯಲ್ಲಿ ನಾವು ಅಲ್ಲಿಂದ ಓಡಿಬರುವುದಷ್ಟೇ ನಮ್ಮಿಬ್ಬರಿಗೂ ಇದ್ದ ಉಪಾಯ. ನಾವಿಬ್ಬರೂ ಸೀದಾ ಆ ಹೋಟೆಲ್ಲಿಗೆ ಬಂದೆವು. ಅಲ್ಲಿನ ಒಂದು ರೂಮಿನಲ್ಲಿ ನಾನು ಇರಲು ಅನುವು ಮಾಡಿಕೊಟ್ಟಳು. ತಾನು ಯಾರೊಡನೆಯೂ ಮಾತನಾಡಬಾರದೆಂದು ತಿಳಿಸಿ, ತಾನು ಮನೆಗೆ ಹೋದರು.

ಆ ನಂತರ, ತಾನೇ ಒಂದೆರಡು ಸೆಟ್ ಬಟ್ಟೆಗಳನ್ನು ತಂದುಕೊಟ್ಟು, ಊಟ ತಿಂಡಿ ಕಾಫಿಯ ವ್ಯವಸ್ಥೆ ಮಾಡಿಕೊಟ್ಟರು. ಮಾರನೇ ದಿನದ ಎಲ್ಲಾ ಪೇಪರ್ರುಗಳಲ್ಲೂ ಈ ವಿಷಯ ಪ್ರಕಟವಾಗಿತ್ತು. ಯಾನಿಫಾರಂನಲ್ಲಿದ್ದ ನನ್ನ ಲೈಸೆನ್ಸ್, ನನ್ನ ಫೋಟೋ, ವರದಿಗಾರರಿಗೆ ಸುಲಭವಾಗಿತ್ತು.

''ಟ್ಯಾಕ್ಸಿ ಡ್ರೈವರನ ಅಪಹರಣ, ಕೊಲೆ ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದ್ದ ವಿಷಯವನ್ನು ಓದಿ ಮೂರ್ಛೆ ಬರುವಂತಾಗಿತ್ತು. ಬದುಕಿದ್ದೂ ನಾನು ಸತ್ತವನಾಗಿದ್ದೆ. ಸತ್ತವನು ನಾನಲ್ಲ ಎಂದು ನಾನೇ ಹೋಗಿ ಪೋಲಿಸರಿಗೆ ಹೇಳುವ ಧೈರ್ಯವನ್ನು ಕಳೆದುಕೊಂಡಿದ್ದೆ. ಹಾಗಾದರೆ ನೀನು ಯಾರು! ನಿನ್ನ ಮತ್ತು ಸತ್ತವನ ಸಂಬಂಧವೇನು ಎಂದು ಮುಂತಾದ ಪ್ರಶ್ನೆಗಳು ಏಳುವುದು ಖಚಿತ. ತಲೆ ತಪ್ಪಿಸಿಕೊಂಡು ಇರಬೇಕಾದದ್ದು ನನ್ನ ಕರ್ಮ ಎಂದುಕೊಂಡು ಇರತೊಡಗಿದೆ. ಆ ರಾತ್ರಿಯೇ ಆಕೆ ನನ್ನನ್ನು ಒಬ್ಬ ಹೆಸರಾಂತ ಸರ್ಜನ್ ಬಳಿಗೆ ನನ್ನನ್ನು ಕರೆದುಕೊಂಡು ಹೋದರು. ನನ್ನ ಮುಖದ ಮೇಲಿನ ಗಾಯಗಳು ವಾಸಿಯಾಗುತ್ತಿದ್ದಂತೆಯೇ, ನನ್ನ ಮುಖದ ಲಕ್ಷಣವೂ ಬದಲಾಗಿತ್ತು. ನಾನು ಪೂರಾ ವಿಷ್ಣುವಿನ ಪ್ರತಿ ರೂಪವಲ್ಲದಿದ್ದರೂ, ಅಲ್ಪಸ್ವಲ್ಪ ಹೋಲಿಕೆ ಬರುವಂತೆ ಆಗಿತ್ತು. ಇದಕ್ಕಾಗಿ ಈಕೆ ಎಷ್ಟು ಖರ್ಚುಮಾಡಿದರೋ ನನಗೆ ತಿಳಿಯದು. ಆದರೆ ನನ್ನನ್ನು ಕೊಲೆಯ ಆಪಾದನೆಯಿಂದ ಬಚಾವು ಮಾಡಿದ್ದರು.

''ಇದರಲ್ಲಿ ನನ್ನ ಸ್ವಾರ್ಥವೂ ಇದೆ, ನಾನು ನನ್ನ ಕತೆಯನ್ನು ಪೋಲಿಸರಿಗೆ ಹೇಳಿದ್ದರೆ, ಅವರು ನನ್ನನ್ನು ಖಂಡಿತಾ ನಂಬುತ್ತಿರಲಿಲ್ಲ. ನಾನೂ ಬಚಾವಾಗಬೇಕಾಗಿತ್ತು. ನಾನೂ ಕೊಲೆಗಾರಳಲ್ಲ..'' ಕಮಲಿನಿ ಮತ್ತೊಮ್ಮೆ ಹೇಳಿದ್ದಳು.

ಇವರಿಬ್ಬರ ಮಾತುಗಳನ್ನು ಕೇಳಿ ಚಿಕ್ಕಪ್ಪ ಶಿಲೆಯಂತೆ ಕುಳಿತುಬಿಟ್ಟರು. ಗೊಂದಲದ ಕೊಳದಲ್ಲಿ ಮುಳುಗಿ ಹೋಗಿದ್ದರು. ಮೇಲೆದ್ದು ಬರಲು ಸಾಕಷ್ಟು ಸಮಯ ಹಿಡಿಯಿತು.

''ನೀವಿಬ್ಬರೂ ತಪ್ಪಿತಸ್ಥರೇ.. ನಿಮಗೆ ಶಿಕ್ಷೆಯಾಗಬಹುದು.. ಆದರೆ ನೀವು

ಕೊಲೆಗಾರರಲ್ಲ. ಆದರೂ ನೀವು ನನಗೆ ಯಾವ ಧೈರ್ಯದ ಮೇಲೆ ಈ ವಿಷಯಗಳನ್ನು ತಿಳಿಸಿದಿರಿ? ನಾನು ಪೋಲಿಸರಿಗೆ ತಿಳಿಸಿದರೆ..?''

''ನೀವು ಜಡ್ಜ್ ಅಲ್ಲ, ನಿಮ್ಮ ಹತ್ತಿರ ಯಾವ ಸಾಕ್ಷಿಗಳೂ ಇಲ್ಲ., ನಮ್ಮ ಮಾತನ್ನು ನೀವು ನಂಬಿದರೂ, ಕಾನೂನು ನಂಬುವುದಿಲ್ಲ. ಆದರೆ ಯಾರಿಗಾದರೂ ಈ ವಿಷಯ ತಿಳಿಸಲೇ ಬೇಕಾಗಿತ್ತು, ಅದೂ ವಿಷ್ಣುವಿನ ಮನೆಯವರಿಗೆ.. ಈ ವಿಷಯವನ್ನು ವೃಂದಳಿಗೆ ನನ್ನಿಂದ ತಿಳಿಸುವುದು ಸಾಧ್ಯವಿಲ್ಲ. ನೀವು ಬೇಕಾದರೆ ತಿಳಿಸಬಹುದು..''

''ಪಾಪ.. ಅವಳು ಇವನನ್ನೇ ಗಂಡನೆಂದು ತಿಳಿದಿದ್ದಾಳೆ..''

''ಹೋಟೆಲಿನಲ್ಲಿ ಒಂದು ವಾರಕ್ಕಿಂತಲೂ ಹೆಚ್ಚಿನ ದಿನಗಳು ಇದ್ದರೆ ಅನುಮಾನ ಬರಬಹುದೆಂದು ನಾನೇ ಇವರಿಗೆ ಧೈರ್ಯ ಹೇಳಿ ಕಳಿಸಿದೆ. ಅದು ತಪ್ಪು ಅಂತ ನನಗೂ ಗೊತ್ತು. ಆದರೆ ಈತನಿಂದ ಏನೂ ಅಚಾತುರ್ಯ ನಡೆದಿಲ್ಲವೆಂದು ಭಾವಿಸಿದ್ದೇನೆ.''

ಪಿನಾಕಿಗೆ ನಾಚಿಕೆ ಎನಿಸಿತು. ತಾನು ವೃಂದಳನ್ನು ಕಣ್ತುಂಬಾ ಸಹ ನೋಡಿಲ್ಲ, ತನ್ನ ಮೇಲೆ ಅಪವಾದ ಬರುವುದಾದರೂ ಹೇಗೆ?

ಚಿಕ್ಕಪ್ಪ ಬೇರೇನನ್ನೋ ಯೋಚಿಸುತ್ತಿದ್ದರು. ಇಬ್ಬರಿಗೂ ಸಂದೇಹ. ಅವರೇನು ಹೇಳುತ್ತಾರೋ ಎಂದು ಇಬ್ಬರೂ ಅವರನ್ನೇ ನೋಡುತ್ತಿದ್ದರು.

ಜಾತಕ ಸುಳ್ಳಾಗುವುದಿಲ್ಲ, ಎನ್ನುವುದಕ್ಕೆ ಇದೇ ಉದಾಹರಣೆ. ಅವರು ಯೋಚಿಸುತ್ತಿದ್ದರು. ಹಿಂದಿನ ದಿನ, ಅವರು ಜಾತಕದ ಪ್ರತಿಗಳನ್ನು ಜ್ಯೋತಿಷಿಗೆ ತೋರಿಸಿದ್ದರಷ್ಟೇ.. ಅವರು ವಿಷ್ಣುವಿನ ಜಾತಕವನ್ನು ನೋಡಿ ಮುಖವನ್ನು ಹುಳ್ಳಗೆ ಮಾಡಿದ್ದರು.. ಕಹಿ ಸತ್ಯವನ್ನು ಹೇಳುವುದು ಹೇಗೆ ಎಂದು ಯೋಚಿಸಿ, ''ಈಗ ಎರಡು ತಿಂಗಳ ಹಿಂದೆ ಭಾರೀ ಗಂಡಾಂತರವಿತ್ತು, ಬದುಕಿ ಉಳಿಯುವ ಸಾಧ್ಯತೆಯೇ ಕಡಿಮೆ.. ದುರ್ಮರಣಕ್ಕೆ ತುತ್ತಾಗುವ ಸಂಭವ ಇತ್ತು ! ಅನುಮಾನದ ದನಿಯಲ್ಲಿ ನುಡಿದರು. ಏನಾದರೂ ಶಾಂತಿ, ಹೋಮ ಮಾಡಿಸಿದೀರಾ!''

ಇವರಿಗೆ ತಿಳಿದಂತೆ ಶಾಂತಿ, ಹೋಮ ಯಾವುದೂ ನಡೆದಿರಲಿಲ್ಲ. ಅದನ್ನು ಅಷ್ಟಕ್ಕೇ ಬಿಟ್ಟು ವೃಂದಾಳ ಜಾತಕವನ್ನು ತೋರಿಸಿದ್ದರು. ಅದನ್ನು ನೋಡಿ, ಅವರು ಚ್ಚು ಚ್ಚು ಎಂದು ಲೊಚಗುಟ್ಟಿದ್ದರು. ಭಾರಿ ಆತಂಕದ ಗೆರೆ ಅವರ ಮುಖದ ಮೇಲೆ ಮೂಡಿತ್ತು. ಇವರೇ ಬಲವಂತ ಮಾಡಿದ ಮೇಲೆ ಬಾಯಿ ಬಿಟ್ಟಿದ್ದರು. ಗ್ರಹಗಳು ಏನೇನೂ ಅನುಕೂಲವಾಗಿಲ್ಲ. ವಿಧವೆಯಾಗುವ ಯೋಗವನ್ನು ತಪ್ಪಿಸಲು ಸಾಧ್ಯವೇ ಇಲ್ಲ. ಈಗ ಈಕೆ ಹೇಗಿದಾರೆ! ಆತ ಕೇಳಿದ್ದರು.

ಇವರಿಗೆ ಆಶ್ಚರ್ಯವಾಗಿತ್ತು.. ಕ್ರೂರಿಯಂತೆ ವರ್ತಿಸುತ್ತಿದ್ದ ವಿಷ್ಣು ಯಾವ ತಂಟೆಗೂ ಬರದಂತೆ ರೂಮಿನ ಒಳಗೇ ಕೂತಿರುತ್ತಿದ್ದುದು ಇವರ ಅನುಮಾನವನ್ನು ಹೆಚ್ಚಿಸಿತ್ತು. ಮನೆಗೆ ಬರುವ ಮನಸ್ಸಾಗದೇ ಎಲ್ಲೆಲ್ಲೋ ತಿರುಗಾಡಿ, ಹೊತ್ತಾಗಿ ಮನೆಗೆ ಬಂದಿದ್ದರು. ವೃಂದಾಳನ್ನು ಏನನ್ನಾದರೂ ಕೇಳುವ ಮನಸ್ಸಾಗಿರಲಿಲ್ಲ. ಭೀಮನನ್ನು ಕರೆದು ಕೆಲವು

ವಿಷಯಗಳನ್ನು ಸಂಗ್ರಹಿಸಿದ್ದರು. ಆಯುಸ್ಸೇ ಇಲ್ಲದ ವಿಷ್ಣು ಬದಲಾಗಿರುವುದು ಎಂದರೇನು! ಏನಾದರೂ, ಅವನು ಭೂತವಾಗಿ ಬಂದು ಸೇರಿಕೊಂಡಿದಾನೆಯೇ.. ದುರ್ಮರಣಕ್ಕೀಡಾಗಿರಬಹುದೇನೋ ಎಂದು ಜ್ಯೋತಿಷಿಗಳು ಹೇಳಿದ್ದರಲ್ಲ ಎನ್ನುವ ಅನುಮಾನವೂ ಸೇರಿಕೊಂಡಿತ್ತು.

ಅವನ ರೂಮಿನ ಬಾಗಿಲಿನಲ್ಲಿ ನಿಂತು, ಏನನ್ನೋ ಯೋಚಿಸುತ್ತಾ ಮಲಗಿದ್ದವನನ್ನು ಒಂದು ಗಳಿಗೆ ದಿಟ್ಟಿಸಿ ನೋಡಿದ್ದರು. ಹರಕಲು ಗಡ್ಡ ಮೀಸೆಯಡಿಯಲ್ಲಿ ವಿಷ್ಣುವಿನಂತೇ ಕಾಣುವ ಇವನು ಯಾರು ಎಂಬ ಅನುಮಾನ ಇಣುಕಿತ್ತು. ಆ ಕ್ಷಣ ವೃಂದಾಳ ಮೇಲೂ ಸಂದೇಹ ಮೂಡಿತ್ತು. ಎಷ್ಟು ದಿನದಿಂದ ಇವನು ಇಲ್ಲಿದ್ದಾನೋ.. ಇವನು ಏನೋ ಮೋಡಿ ಮಾಡಿರಬೇಕು. ಇವನನ್ನು ಡೈವೋರ್ಸ್ ಮಾಡುವ ವಿಷಯವನ್ನು ಎತ್ತಿದಾಗಲೆಲ್ಲಾ ಸರಿಯಾಗಿ ಉತ್ತರವನ್ನು ಕೊಡುತ್ತಿರಲಿಲ್ಲವಲ್ಲ ಎನಿಸಿದರೂ, ವೃಂದಾ ಒಳ್ಳೆ ಹುಡುಗಿ. ಅವಳಿಗೆ ಏನೋ ಮೋಸವಾಗಿದೆ ಅವಳು ಪೂರ್ಣ ಮೋಸ ಹೋಗುವ ಮೊದಲು ಇವನ ಬಗ್ಗೆ ವಿಚಾರಿಸಿ, ಇವನನ್ನು ಇಲ್ಲಿಂದ ಓಡಿಸಬೇಕು ಎಂದುಕೊಂಡು, ಅವನನ್ನು ಹೊರಕ್ಕೆ ಕರೆಸಿದ್ದರು.

ತಮ್ಮ ಅನುಮಾನ ಸ್ವಲ್ಪ ಮಟ್ಟಿಗೆ ನಿಜವಾದುದರ ಜೊತೆಗೆ, ಇದರ ಹಿಂದೆ ಇಂತಹ ಒಂದು ಘಟನೆ ನಡೆದಿರಬಹುದು ಎಂದು ತಿಳಿದು ಆಶ್ಚರ್ಯವಾಗಿತ್ತು. ಆದರೆ ತಕ್ಷಣಕ್ಕೆ ಏನನ್ನು ಹೇಳುವುದಕ್ಕೆ ಹಿಂಜರಿದಿದ್ದರು.

ಪಿನಾಕಿ ಹೇಳಿದ್ದ ''ಈಗ ನಿಮ್ಮ ಎದುರಿಗೆ ಎಲ್ಲಾ ಹೇಳಿದ್ದರಿಂದ ನನಗೂ ನಿರಾಳವಾಗಿದೆ. ನನ್ನಿಂದ ತಪ್ಪಾಗಿದೆ ನಿಜ. ಆದರೆ ನನ್ನಿಂದ ಯಾವ ಕೆಡಕೂ ಆಗಿಲ್ಲ. ನನ್ನ ಮಾತನ್ನು ನಂಬಿ. ನಾನು ನಿರಪರಾಧಿ.. ಹಳ್ಳಿಯಲ್ಲಿ ವಯಸ್ಸಾದ ನನ್ನ ತಂದೆ ತಾಯಿ ಇದಾರೆ, ನಾನು ಅಲ್ಲಿಗೇ ಹೊರಟು ಹೋಗುತ್ತೇನೆ. ನನಗೆ ಈ ಪಟ್ಟಣದ ಸಹವಾಸ ಸಾಕು.''

ಕಮಲಿನಿ ಹೇಳಿದ್ದಳು. ''ಇಷ್ಟು ಹೊತ್ತಿಗೆ ನಿಮ್ಮ ಹಳ್ಳಿಗೂ, ಆ ಪೇಪರಿನ ಸುದ್ದಿ ಹರಡಿರುತ್ತೆ. ನಿಮ್ಮ ತಂದೆ ತಾಯಿಗೆ ದುಃಖವಾಗಿರುತ್ತೆ ನಿಜ. ಆದರೆ ಈಗ ನೀವು ಎದುರಿಗೆ ಹೋಗಿ ನಿಂತು ಅವರನ್ನು ನೀವು ಬದುಕಿರುವುದಕ್ಕೆ ಏನು ಸಾಬೀತನ್ನು ತೋರಿಸಬಲ್ಲಿರಿ? ಅವರು ನಿಮ್ಮ ಮಾತನ್ನು ಸುಳ್ಳು ಎನ್ನಬಹುದು.''

''ಇಲ್ಲ, ನನ್ನ ತಂದೆ ತಾಯಿ ಅಂತಹವರಲ್ಲ, ನನ್ನ ಮಾತಿನ ಮೇಲೆ ನಂಬಿಕೆ ಹುಟ್ಟುತ್ತೆ.''

''ನೀವು ಅಲ್ಲಿರುವುದು ಬಹಿರಂಗವಾದರೆ ಪೋಲಿಸರು ನಿಮ್ಮನ್ನು ಸುಮ್ಮನೇ ಬಿಡುತ್ತಾರೆಯೇ.. ಹಳ್ಳಿಯವರು ನಿಮ್ಮನ್ನು ಸುಮ್ಮನೇ ಬಿಡುತ್ತಾರೆಯೇ ನಿಮ್ಮ ಗ್ಯಾರೇಜಿನ ಮಾಲೀಕರಿಗೆ ವಿಷಯ ತಿಳಿದರೆ ನಿಮ್ಮನ್ನು ಅವರು ಖಂಡಿತಾ ನಂಬುವುದಿಲ್ಲ, ಈಗ ಪೇಪರ್ರಿನ ಸುದ್ದಿ ಪ್ರಕಾರ, ಟ್ಯಾಕ್ಸಿ ಡ್ರೈವರ್ ಪಿನಾಕಿಯನ್ನು ಕೇಡಿಗಳು ಅಪಹರಿಸಿಕೊಂಡಿದಾರೆ, ಅಂತ. ಅದು ಸುಳ್ಳು ಅಂತ ನೀವು ಯಾವ ಸಾಕ್ಷಿಯನ್ನು ತಂದು ಸಾಧಿಸಬಲ್ಲಿರಿ! ಆಗಲೂ ವಿಷ್ಣುವಿನ ಕೊಲೆಯ ಆಪಾದನೆ ನಿಮ್ಮ ಮೇಲೇ ಬರುತ್ತೆ. ನಾನೂ ಶಾಮೀಲಾಗುತ್ತೇನೆ. ನಮ್ಮಿಬ್ಬರನ್ನು

ಬಚಾವು ಮಾಡುವಂತಹ ಯಾವ ಸಾಕ್ಷಿಗಳೂ ಇಲ್ಲ. ನನ್ನ ಮಕ್ಕಳ ಗತಿಯೇನು! ನಿಮ್ಮ ವೃದ್ಧ ತಂದೆತಾಯಿಗಳ ಗತಿ ಏನು? ಇದನ್ನೆಲ್ಲಾ ಯೋಚಿಸಿದೀರಾ!

ಪಿನಾಕಿ ಮೊದಲ ಬಾರಿಗೆ ಗಳಗಳನೆ ಅತ್ತ.

''ಹೆಂಗಸು, ನಾನೇ ಅಳುತ್ತಿಲ್ಲ ನೀವು ಅಳುವಂತಹದ್ದೇನನ್ನು ಮಾಡಿಲ್ಲ. ಈಗ ನೀವು ಅಲ್ಲಿಗೂ ಹೋಗದಿದ್ದರೆ, ವೃಂದಾಳ ನಂಬಿಕೆ ಕುಸಿಯುತ್ತದೆ. ಆಕೆಯ ಎದುರಿಗೆ ನಿಂತು, ಆಕೆಯ ಗಂಡನ ಸಾವಿನ ಬಗ್ಗೆ ತಿಳಿಸಲು ನಿಮ್ಮಿಂದ ಸಾಧ್ಯವಾಗುವುದಾದರೆ ಹೇಳಿ, ನನ್ನಿಂದಂತೂ ಸಾಧ್ಯವಿಲ್ಲ.''

''ನಾನೇಕೆ ಹೇಳಲಿ! ಈಗ ಇವರಿಗೆ ಎಲ್ಲಾ ತಿಳಿದಿದೆಯಲ್ಲ, ಅವರು ಹೇಳಿಕೊಳ್ಳಲಿ..'' ಅವನು ಚಿಕ್ಕಪ್ಪನ ಕಡೆ ಕೈ ಮಾಡಿದ.

''ಅ ಏನಂದೆ!'' ಆತ ಎಚ್ಚೆತ್ತರು.

''ಈಗ ವೃಂದಾಳಿಗೆ ಎಲ್ಲಾ ವಿಷಯವನ್ನು ತಿಳಿಸುವುದು ನಿಮ್ಮ ಜವಾಬ್ದಾರಿ, ಮುಂದೆ ಅದೇನೇನಾಗಿ ಹೋಗುತ್ತೋ ಆಗಿ ಹೋಗಲಿ.''

''ನಾನು? ನಾನು ಹೇಳಲಾರೆ, ನನ್ನಿಂದ ಸಾಧ್ಯವಿಲ್ಲ''

''ಹಾಗಾದರೆ ಯಾರೂ ಏನೂ ಹೇಳುವುದೇ ಬೇಡ, ಸುಮ್ಮನಿದ್ದು ಬಿಡಿ'' ಕಮಲಿನಿ ಮತ್ತೆ ನುಡಿದಳು, ಒಂದು ಗಳಿಗೆ ಸರಿ ಎನಿಸಿದರೆ, ಮರುಗಳಿಗೆಯೇ ಅದು ತಪ್ಪು ಎಂದು ಇಬ್ಬರಿಗೂ ಅನ್ನಿಸಿತ್ತು.

ಕಡೆಗೆ, ಚಿಕ್ಕಪ್ಪ ಒಂದು ತೀರ್ಮಾನಕ್ಕೆ ಬಂದರು. ಹೇಗೂ ದೇವಸ್ಥಾನಕ್ಕೆ ಬಂದಿದೇವೆ, ದೇವರೇ ನಮಗೆ ಮಾರ್ಗವನ್ನು ನೀಡಲಿ.

''ನಮ್ಮ ಚರ್ಚುಗಳಲ್ಲಿ, ಕನ್‌ಫೆಷನ್ ಬಾಕ್ಸ್‌ನಲ್ಲಿ ಕುಳಿತು, ನಾವು ನಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುತ್ತೇವೆ, ಫಾದರ್ ನಮ್ಮನ್ನು ಕ್ಷಮಿಸುತ್ತಾರೆ, ಆ ರೀತಿ ಹಿಂದೂ ದೇವಾಲಯಗಳಲ್ಲಿ ಏಕಿಲ್ಲ..''

''ಇಲ್ಲಿ ನಾವು ಮಾಡಿದ ತಪ್ಪುಗಳನ್ನು ದೇವರೇ ಕ್ಷಮಿಸುತ್ತಾನೆ. ಅದಕ್ಕೇ ನಮಗೆ ಕನ್‌ಫೆಷನ್ ಬಾಕ್ಸ್‌ದಾಗಲೀ, ಫಾದರ್‌ನ ಅಗತ್ಯವಾಗಲೀ ಇಲ್ಲ. ''ಚಿಕ್ಕಪ್ಪ ನುಡಿದಾಗ, ಅವರ ಮಾತಿನ ಅಂತರಾಳವನ್ನು ತಿಳಿಯುವವನಂತೆ ಪಿನಾಕಿ ಓರೆಗಣ್ಣಿನಿಂದ ಅವರನ್ನು ನೋಡಿದ.

''ಇಲ್ಲಿ ಒಳಗೆ ನಾವು ಬರಬಹುದೋ ಹೇಗೆ?'' ಕಮಲಿನಿ ಕೇಳಿದಳು.

''ಬನ್ನಿ ಪರವಾಗಿಲ್ಲ, ದೇವರು ಸರ್ವಾಂತರಯಾಮಿ.. ಅವನು ಇಲ್ಲಿಯೂ ಇದಾನೆ, ನಾವೇನೂ ಹೇಗೂ ಗರ್ಭಗುಡಿಯೊಳಗೆ ಹೋಗುವುದಿಲ್ಲ.''

''ಹೌದು, ದೇವರಿಗೆ ಜಾತಿ, ಭೇದ ಯಾವುದೂ ಇಲ್ಲ, ಆದರೆ ಅರ್ಚಕರಿಗೆ

ಇದೆಯಲ್ಲ, ಅವರಿಗೆ ಮುಜುಗರವಾಗುವ ಕೆಲಸವನ್ನು ನಾನು ಮಾಡಲಾರೆ. ನಾನು ಇಲ್ಲೇ ನಿಂತು ದೇವರನ್ನು ಪ್ರಾರ್ಥಿಸುತ್ತೇನೆ. ನನಗೆ, ಏಸು, ವಿಷ್ಣು ಎಲ್ಲಾ ಒಂದೇ.''

ಅವಳ ಮಾತಿಗೆ ಚಿಕ್ಕಪ್ಪ ಬೆರಗಾದರು. ಈಕೆಯಲ್ಲಿ ಯಾವ ದುರ್ಗುಣವೂ ಇಲ್ಲ. ಆದರೆ ವಿಷ್ಣುವಿನಂತಹ ಕ್ರೂರಿಯ ಅತ್ಯಾಚಾರಕ್ಕೆ ಹೇಗೆ ಒಳಗಾದಳು! ವೃಂದಾ ಒಂದು ತರಹ ಗಂಡನಿಂದ ಕಷ್ಟವನ್ನು ಸಹಿಸಿದರೆ, ತನ್ನ ಗಂಡನಲ್ಲದ ಪರಪುರುಷನ ಪಂಜರದೊಳಗೆ ಸಿಕ್ಕಿ ಬಿದ್ದ ಈಕೆ ಎಷ್ಟು ಕಷ್ಟ ಪಟ್ಟಿರಬಹುದು? ಎಂದುಕೊಂಡಾಗ ಅವಳ ಬಗ್ಗೆ ಮರುಕವೆನಿಸಿತು.

''ನೀವು ಇಲ್ಲೇ ಇರಿ. ನಾನೀಗ ಬರ್ತೀನಿ'' ಎಂದು ಹೇಳಿ, ಅರ್ಚಕರನ್ನು ಹುಡುಕಿಕೊಂಡು ಹೊರಟರು. ಅರ್ಚಕರೊಡನೆ ಮಾತನಾಡಿ ಕೆಲವು ಸಂದೇಹಗಳನ್ನು ಪರಿಹರಿಸಿಕೊಂಡರು. ಅರ್ಚಕರು ದೇವರಿಗೆ ಮಂಗಳಾರತಿ ಎತ್ತಿ, ಎಲ್ಲರಿಗೂ ಮಂಗಳಾರತಿ ತೀರ್ಥ ಪ್ರಸಾದಗಳನ್ನು ಕೊಟ್ಟರು. ಚಿಕ್ಕಪ್ಪ ಭಕ್ತಿಯಿಂದ ಕಣ್ಣಿಗೊತ್ತಿಕೊಂಡಿದ್ದನ್ನು ನೋಡಿದ ಪಿನಾಕಿ, ಕಮಲಿನಿಯರೂ ಅದೇ ರೀತಿ ಮಾಡಿದರು. ಇಬ್ಬರಿಗೂ ಏನೋ ಸಮಾಧಾನವಾಗಿತ್ತು. ತಮ್ಮ ಮನಸ್ಸಿನ ದುಗುಡದ ಅರ್ಧ ಭಾರವನ್ನು ಕಡಿಮೆ ಮಾಡಿಕೊಂಡಿದ್ದರು.

ಎಲ್ಲರೂ ಅಲ್ಲಿಂದ ಹೊರಟರು. ಕಮಲಿನಿ ತನ್ನ ಮನೆಗೆ ಹೊರಟು ಹೋದಳು. ಚಿಕ್ಕಪ್ಪ ಅವನನ್ನು ಮುಂದಾಗಿ ಕಳಿಸಿ, ಪೇಟೆಯಲ್ಲಿ ಒಂದಿಷ್ಟು ಹೂವು ಹಣ್ಣುಗಳನ್ನು ಕೊಂಡು ಕೊಂಡರು. ಹೂವಿನ ಮಾಲೆಗಳನ್ನು ಕೈಗೆತ್ತಿಕೊಳ್ಳುವಾಗ ಅವರ ಕೈ ನಡುಗಿತ್ತು. ಒಂದು ರೀತಿಯಲ್ಲಿ ದೇವರು ಅವಳಿಗೆ ಅನ್ಯಾಯ ಮಾಡಿದ್ದಾನೆ. ಅದೇ ದೇವರು ಈಗ ಅವಳಿಗೆ ನ್ಯಾಯವನ್ನು ದೊರಕಿಸಿ ಕೊಡಬೇಕು ಎಂದು ಮನದಲ್ಲೇ ಪ್ರಾರ್ಥಿಸಿ, ಮನೆಗೆ ಬಂದರು.

ಏನೂ ನಡೆದಿಲ್ಲವೆಂಬಂತೆ ವೃಂದಾಳೊಡನೆ ಮಾತನಾಡಲು ಪ್ರಯತ್ನಿಸಿ ಸೋತರು.. ಕಡೆಗೆ ಮಾತುಗಳನ್ನು ಹುಡುಕಿ ಹೇಳಿದರು.. ''ನಿನ್ನ ಗಂಡ ಯಾವುದೋ ಕಷ್ಟದಲ್ಲಿ ಸಿಕ್ಕಿಬಿದ್ದಿದಾನೆ, ಬಿಡುಗಡೆಯಾಗಬೇಕಾದರೆ, ಹದಿನೈದು ಇಪ್ಪತ್ತು ಸಾವಿರವಾದರೂ ಖರ್ಚಾಗುತ್ತೆ ಅಂತ ಲಾಯರ್ರು ಹೇಳಿದರು.

''ಯಾವ ಲಾಯರ್ರು? ನನಗೇನೂ ಹೇಳಿಲ್ಲವಲ್ಲ''

''ನನ್ನ ಸ್ನೇಹಿತರು, ನಿನ್ನ ಗಂಡ ಅವರ ಹತ್ತಿರ ಹೋಗಿದ್ನಂತೆ, ಹಣ ಹೊಂದಿಸಲಾಗದೇ ಲಾಟರಿ ಹೊಡೀತಿದಾನಂತೆ.''

''ನನಗೆ ಒಂದ್ಮಾತು ತಿಳಿಸಬಾರದಾಗಿತ್ತೇ! ಈ ಆಸ್ತಿ ಈ ಹಣ ಎಲ್ಲಾ ಅವರದ್ದೇ ತಾನೇ..?

''ಮುಖವಿಲ್ಲ, ತಾನಾಗಿಯೇ ತನ್ನ ಬಾಳನ್ನು ಹಾಳು ಮಾಡಿಕೊಂಡ..''

"ಈಗ ಎಷ್ಟು ಬೇಕೋ, ಹೇಳಿ, ನಾನು ಚೆಕ್ ಬರೆದುಕೊಡ್ತೀನಿ."

"ನೀನು ಬರೆದು ಕೊಡ್ತೀಯಾ.. ಆದರೆ ಅದರಿಂದ ನಿನಗೇನು ಲಾಭ?"

"ಯಾವ ಲಾಭದ ಆಸೆಯೂ ನನಗಿಲ್ಲ ಚಿಕ್ಕಪ್ಪಾ.. ಇದು ಇವರ ಮನೆ. ಇವರ ಆಸ್ತಿ.. ಇವರ ಕಷ್ಟ ನೀಗಿದರೆ ಸಾಕು.. ನನಗೆ ಅಷ್ಟೇ ಸಾಕು.."

"ಅಂತಹವನ್ನಿಗೆ ನೀನೇಕೆ ಹೀಗೆ ಒದ್ದಾಡುತ್ತೀಯೋ ನಾನು ಕಾಣೆ?"

"ಇವರು ಒಂದಲ್ಲ ಒಂದು ದಿನ ಖಂಡಿತಾ ಸರಿ ದಾರಿಗೆ ಬರುತ್ತಾರೆ ಅನ್ನುವ ನಂಬಿಕೆ ನನಗಿದೆ.. ನೆನ್ನೆ ದಿನ ಆ ಹೆಂಗಸು ಬಂದಿದ್ದಳು.

"ಯಾವ ಹೆಂಗಸು?"

"ಅದೇ ಇವರ ಸ್ನೇಹಿತೆ ಕಮಲಿನಿಯಂತೆ"

"ಅವಳೇಕೆ ಬಂದಿದ್ದಳು! ಏನಾದರೂ ಹಣ ಕೇಳಿದಳಾ!"

"ಛೇ ಇಲ್ಲ, ಹಣದಾಸೆ ಅವಳಿಗಿಲ್ಲ."

"ಮತ್ತೆ! ನಿನ್ನ ಹತ್ತಿರ ಅವಳ ಮಾತೇನು!"

"ಅವಳು ಹೇಳಿದ್ದನ್ನು ನಂಬಲು ಕಷ್ಟವಾಗುತ್ತಿದೆ. ನಿನ್ನ ಗಂಡನ್ನ ನೀನು ಜೋಪಾನ ಮಾಡಿಕೋ.. ನಿನಗೆ ವಹಿಸಿದ್ದೇನೆ ಎಂದಳು ಅವರು ಯಾವುದೋ ಕಷ್ಟಕ್ಕೆ ಸಿಕ್ಕಿ ಬಿದ್ದಿದ್ದಾರೆ ಎಂದಳು. ಎಂತಹ ಕಷ್ಟ ಎಂದು ನಾನು ಕೇಳಲಿಲ್ಲ, ಅವಳೂ ಹೇಳಲಿಲ್ಲ.

"ಒಳ್ಳೆದಾಯ್ತು ಬಿಡು, ಮನೆ ಬಿಟ್ಟು ಲಫಂಗರ ಹಾಗೆ ತಿರುಗಿದರೆ ಕಷ್ಟವಲ್ಲದೇ ಇನ್ನೇನು ಸಿಗುತ್ತೆ? ಅನುಭವಿಸಲಿ."

"ಹಾಗೆನ್ನಬೇಡಿ ಚಿಕ್ಕಪ್ಪ, ಅವರ ಕಷ್ಟಕ್ಕೆ ಸಹಾಯ ಮಾಡದಿದ್ದ ಮೇಲೆ ನಮ್ಮ ಹತ್ತಿರ ಹಣವಿದ್ದೂ ಏನುಪಯೋಗ?"

"ಅವಳು ಕೊಡುವುದಿಲ್ಲ ಎಂದಳೇನೋ.. ಎಷ್ಟಾಗಲೀ ಅವಳು ಇಟ್ಟುಕೊಂಡವಳು.." ಕಮಲಿನಿಯ ಬಗ್ಗೆ ಅಂತಹ ಭಾವನೆ ಇಲ್ಲದಿದ್ದರೂ, ಹಾಗೆ ಮಾತನಾಡಿದ್ದರು.

"ಅದೇನೇ ಇರಲಿ. ಆಕೆಯೂ ಮರ್ಯಾದಸ್ಥೆಯಂತೆ ಕಂಡುಬಂದಳು. ನನ್ನ ಗಂಡನನ್ನು ನನಗೆ ಒಪ್ಪಿಸಿದ್ದಾಳೆ, ಅವಳ ಉಪಕಾರವನ್ನು ಮರೆಯಲಾರೆ."

"ಅಷ್ಟು ಉತ್ಸುಕಳಾಗ ಬೇಡ ವೃಂದಾ. ಅವನು ಮತ್ತೆ ಮನೆ ಬಿಟ್ಟು ಅವಳ ಹತ್ತಿರ ಹೋಗುವುದಿಲ್ಲ ಅಂತ ಏನು ಗ್ಯಾರಂಟಿ?"

"ಅದಕ್ಕೆ ಒಂದು ಉಪಾಯವಿದೆ, ನಾವು ಈ ಊರನ್ನೇ ಬಿಟ್ಟು ಬೇರೆ ಊರಿಗೆ ಹೋಗಿ ನೆಲಸುವುದು ಸರಿ ಎಂದು ಆಕೆಯೇ ಸಲಹೆ ನೀಡಿದ್ದಾಳೆ"

"ಅವನು ಒಪ್ಪದಿದ್ದರೇ.."

''ಅವರು ಒಪ್ಪುತ್ತಾರೆ ಎಂಬ ನಂಬಿಕೆ ನನಗಿದೆ.''

''ನಂಬಿಕೆ, ನಂಬಿಕೆ.. ಈ ನಂಬಿಕೆಯೇ ನಿನಗೆ ದೇವರು. ಆ ದೇವರು ನಿನಗೆ ಒಳ್ಳೆಯದನ್ನು ಮಾಡಲಿ.'' ಎಂದು ಮನಸ್ಸಿನಲ್ಲಿ ಹೇಳಿಕೊಂಡರು.

''ಚಿಕ್ಕಪ್ಪಾ ಅವರಿಗೆ ಹೇಳಿ.. ಅವರಿಗೆ ಯಾವ ಚಿಂತೆಯೂ ಬೇಡ. ಅತ್ತೆಯವರು ಬಿಟ್ಟು ಹೋದ ಹಣ ಬೇಕಾದಷ್ಟಿದೆ. ಏನೇ ತೊಂದರೆ ಇದ್ದರೂ ಅದನ್ನು ನಿವಾರಿಸಿಕೊಳ್ಳಲಿ ಹಾಗಂತ ಹೇಳಿ..''

''ಹಣ' ವಿಷಯದಲ್ಲಿ ನಾನು ತಲೆ ಹಾಕುವುದಿಲ್ಲ. ನೀನೇ ಹೇಳಿಬಿಡು.''

''ನಾನೇ? ನಾನು ಹೇಗೆ ಹೇಳಲಿ! ಅವರೆದುರಿಗೆ ನಿಂತು ಎಂದು ಮಾತನಾಡಿದೀನಿ! ನೀವೇ ಹೇಳಿ..''

''ಇಂದು ಮಾತನಾಡು, ನೋಡೋಣ ಏನನ್ನುತಾನೆ ಅಂತ?''

ಅವಳ ಕೈಕಾಲುಗಳು ಶಕ್ತಿಯನ್ನು ಕಳೆದುಕೊಂಡಂತೆ ಅನ್ನಿಸಿತು. ತಾನು ತನ್ನ ಗಂಡನೆದುರಿಗೆ ನಿಂತು ಹಾರ ಹಾಕಿದ್ದು ಮಾತ್ರ ನೆನಪಿದೆ.. ಮುಂದೆಂದೂ ಅಂತಹ ದಿನಗಳು ಬಂದಂತೆ ಇಲ್ಲ. ಈಗ ತಾನು ಹೋಗಿ ಕೇಳುವುದು ಸುಳ್ಳು. ಅವರಿಗೆ ಹಣ ಬೇಕಿದ್ದರೆ ಅವರೇ ಕೇಳಲಿ ಎಂದುಕೊಂಡು ಸುಮ್ಮನಾದಳು.

ಆ ರಾತ್ರಿ ತಮಗೆ ನಿದ್ದೆ ಬರುವವರೆಗೂ, ಚಿಕ್ಕಪ್ಪ ಕುತೂಹಲದಿಂದ ವೃಂದಾಳ ಚಲನವಲನವನ್ನೇ ಗಮನಿಸುತ್ತಿದ್ದರು. ಈ ನೆಪದಲ್ಲಿ ಅವಳು ಗಂಡನ ಬಳಿಗೆ ಹೋದರೆ.. ಹೊರಗೆ ಮುಂದೇನಾಗಬಹುದು ಎನ್ನುವ ಕುತೂಹಲ.. ಆದರೆ ಅಷ್ಟರಲ್ಲಿ ಅವರಿಗೆ ನಿದ್ದೆ ಬಂದು ಬಿಟ್ಟಿತು.

ಆ ರಾತ್ರಿ ಪಿನಾಕಿಗೆ ನಿದ್ದೆ ಇಲ್ಲ. ತಂದೆ ತಾಯಿಗಳ ನೆನಪು ಬಂದೂ ಬಂದೂ ಕಾಡುತ್ತಿತ್ತು. ತಂದೆ ತಾಯಿಗೆ ಅವನೊಬ್ಬನೇ ಮಗನಲ್ಲ. ಆದರೂ, ತನ್ನ ಬಗ್ಗೆ ಬಂದ ವಾರ್ತೆಯಿಂದ ಅವರುಗಳು ಹೇಗೆ ಪ್ರತಿಕ್ರಿಯಿಸಿರಬಹುದು ಎಂದು ಊಹಿಸುವುದಕ್ಕೂ ಹೆದರುತ್ತಿದ್ದ.

ಹಳ್ಳಿಯ ಜೀವನ. ಇಬ್ಬರೂ ಕಷ್ಟ ಜೀವಿಗಳು. ತಮ್ಮಂತೆ ತಮ್ಮ ಮಕ್ಕಳು ಕಷ್ಟ ಪಡಬಾರದು ಎನ್ನುವ ಉದ್ದೇಶದಿಂದ ಮಕ್ಕಳನ್ನು ಸ್ಕೂಲಿಗೆ ಸೇರಿಸಿದ್ದರು. ವಿದ್ಯಾವಂತರಾಗಿ ದೊಡ್ಡ ಹುದ್ದೆಯಲ್ಲಿದ್ದು ಅನುಕೂಲವಂತರಾಗಿ ಬಾಳಲಿ ಎಂದು ಆಸೆ ಅವರದ್ದು. ಹಿರಿಯ ಮಗ ಓದಿದ, ಕೆಲಸಕ್ಕೆ ಸೇರಿದ, ಅಲ್ಲೇ ನೆಲೆಸಿದ. ಎರಡನೆಯವನಿಗೆ ವಿದ್ಯೆ ಹತ್ತದಿದ್ದರೂ, ಪಟ್ಟಣ ಸೇರಿ, ಬಿಸಿನೆಸ್ ಪ್ರಾರಂಭಿಸಿ, ಅನುಕೂಲವಾಗಿದ್ದ. ಆದರೆ ತನಗೆ ಸಾಲ ಸೋಲದ ಕಷ್ಟ ಎಂದೇ ಹೇಳಿಕೊಳ್ಳುತ್ತಿದ್ದ. ನಂತರದ ಇಬ್ಬರು ಹೆಣ್ಣು ಮಕ್ಕಳಲ್ಲಿ ಇಬ್ಬರಿಗೂ ಮದುವೆಯಾಗಿತ್ತು. ಇನ್ನೊಬ್ಬಳು ಗಂಡನ ಮನೆಯಲ್ಲಿ ಸುಖವಾಗಿರಲಿಲ್ಲ. ಕಷ್ಟದಲ್ಲಿದ್ದಳು, ಸ್ಥಿತಿವಂತರಲ್ಲದ ಅವಳ ಗಂಡನ ಮನೆಯವರು ಹಣ ಕಾಸಿನ ತೊಂದರೆ ಬಂದಾಗ ಅವಳನ್ನು

ಪೀಡಿಸುತ್ತಿದ್ದರು. ಅವಳು ಅಪ್ಪನ ಮನೆಗೆ ಬಂದು ತನ್ನ ಕಷ್ಟವನ್ನು ಹೇಳಿಕೊಂಡು ಗೋಳಾಡಿ, ಹಣ ವಸೂಲು ಮಾಡಿಕೊಂಡು ಹೋಗುತ್ತಿದ್ದಳು. ಈ ಕಷ್ಟವನ್ನು ನೋಡಿ, ಕೊನೆಯವಳು ತಾನು ಮದುವೆಯನ್ನು ಆಗುವುದಿಲ್ಲವೆಂದು ಹಠ ಹಿಡಿದಿದ್ದಳು. ಹೈಸ್ಕೂಲು ಮುಗಿಸಿ, ಹೊಲಿಗೆ ಕೆಲಸ ಕಲಿತು, ಒಂದಿಷ್ಟು ಸಂಪಾದಿಸುವುದಕ್ಕೆ ಶ್ರಮಿಸುತ್ತಿದ್ದಳು, ಇದು ಹಳ್ಳಿಯವರಿಗೆ ತಮಾಷೆಯ ವಿಷಯ. ಮಗಳಿಗೆ ಲಗ್ನ ಮಾಡುವುದನ್ನು ಬಿಟ್ಟು ಹೊಲಿಗೆ ಕೆಲಸವೇ ಹೆಚ್ಚಂತೆ ಎಂದು ಆಡಿಕೊಳ್ಳುತ್ತಿದ್ದರಂತೆ. ಅವರೆಲ್ಲರಿಗಿಂತ ಚಿಕ್ಕವನು ಪಿನಾಕಿ. ಪಟ್ಟಣಕ್ಕೆ ಬಂದು ಸೇರಿದ. ಸರಕಾರಿ ಕೆಲಸದಲ್ಲಿದ್ದ ಅಣ್ಣನಾಗಲೀ, ಬಿಸಿನೆಸ್ ಮಾಡುತ್ತಿದ್ದ ಅಣ್ಣನಾಗಲೀ, ಅವನಿಗೆ ಅನುಕೂಲ ಮಾಡಿಕೊಡುವುದಿಲ್ಲವೆಂದು ತಿಳಿದ ಇವನು, ಹೇಗೋ ಮಾಡಿ, ಆಟೋಗ್ಯಾರೇಜಿಗೆ ಬಂದು ಸೇರಿಕೊಂಡಿದ್ದ. ಅಲ್ಲಿದ್ದ ಮಾಲೀಕರು, ಅವನನ್ನು ತಮ್ಮ ಮಕ್ಕಳಿಗಿಂತ ಹೆಚ್ಚಾಗಿ ಇವನನ್ನು ನೋಡಿಕೊಂಡಿದ್ದರು. ಈಗ ಅವರ ಬಳಿಗೆ ಹೋಗಿ, ತನ್ನ ಟ್ಯಾಕ್ಸಿ ಅಪಹರಣದ ಕತೆ ಹೇಳಿದರೆ ಅವರಿಗೆ ಏನನ್ನಿಸಬಹುದು! ಅದೂ ಇಷ್ಟು ದಿನದ ಮೇಲೆ, ಅಥವಾ ಒಂದು ವೇಳೆ ನಂಬಿದರೂ, ಮುಂಚಿನ ವಿಶ್ವಾಸ ಉಳಿಯುತ್ತದೆಯೇ, ಟ್ಯಾಕ್ಸಿಗಾಗಿ ತೆಗೆದುಕೊಂಡ ಸಾಲವನ್ನು ಅವರೇ ತೀರಿಸಬೇಕಾಗಬಹುದು. ನನ್ನ ಹತ್ತಿರ ಅಷ್ಟು ಹಣ ಎಲ್ಲಿದೆ? ಛೆ ಎಂತಹ ಸ್ಥಿತಿ ಒದಗಿತು! ಏನನ್ನು ಹೇಳಲಾಗದ, ಯಾವುದನ್ನು ಒಪ್ಪಿಕೊಳ್ಳಲಾಗದ ತ್ರಿಶಂಕು ಸ್ಥಿತಿಗೆ ತಂದಿಟ್ಟೆಯಲ್ಲಪ್ಪಾ ಭಗವಂತಾ ಎಂದುಕೊಂಡು ಹೊರಳಾಡುತ್ತಿದ್ದ.

ತಾನು ಈ ಮನೆಯಲ್ಲಿ ಅನ್ನದಂಡನಾಗಿ ಇರುವುದು ವೃಥಾ ತಪ್ಪು. ಇದು ನ್ಯಾಯವಲ್ಲ, ಯಾರದೋ ಮನೆ, ಯಾರದೋ ಹಣ, ಕಮಲಿನಿಯ ಮಾತಿಗೆ ತಾನು ಒಪ್ಪಬಾರದಿತ್ತು. ಪೋಲಿಸರ ಕೈಗೆ ಸಿಕ್ಕಿಬಿದ್ದು ಶಿಕ್ಷೆ ಅನುಭವಿಸುವುದನ್ನು ತಪ್ಪಿಸಿಕೊಳ್ಳಲು ಹವಣಿಸಿದೆ, ಆದರೆ ಈ ಶಿಕ್ಷೆಯೂ ಸಹ ಕಡಿಮೆ ಏನಲ್ಲ.

ಎಲ್ಲಾ ತಿಳಿದೂ ಈ ಚಿಕ್ಕಪ್ಪ ಏಕೆ ಸುಮ್ಮನಿದಾರೆ? ಮಗಳಿಗೆ ಆ ದುರಂತದ ಬಗ್ಗೆ ತಿಳಿಸಲು ಅಂಜಿಕೆಯೇ! ಹಾಗಾದರೆ, ಅಳಿಯನ ಬದಲಿಗೆ ನಾನು ಇಲ್ಲಿರುವುದು ಅವರಿಗೆ ಸಮ್ಮತವೇ.. ಅವರೇಕೆ ಏನನ್ನು ಸರಿಯಾಗಿ ಹೇಳಲಿಲ್ಲ! ವೃಂದಳಿಗೆ ಏನು ಹೇಳಿರಬಹುದು! ಭೀಮನನ್ನು ಕರೆದು ಇದನ್ನೆಲ್ಲ ಕೇಳಲಾಗುವುದಿಲ್ಲ.

ಚಿಕ್ಕಪ್ಪ ಎದ್ದು ತಮ್ಮ ಬೆಳಗಿನ ಕೆಲಸಗಳನ್ನು ಪೂರೈಸಿಕೊಂಡು ಹೊರಟರು. ವೃಂದಾ ಚೆಕ್‌ಪುಸ್ತಕದ ಒಂದೆರಡು ಹಾಳೆಗಳ ಮೇಲೆ, ಸಹಿ ಹಾಕಿ ಅದನ್ನು ಅವರ ಕೈಗಿತ್ತಳು. ಈ ಹಣವನ್ನು ಅವರಿಗೆ ಕೊಡಿ ಚಿಕ್ಕಪ್ಪ.. ಎಷ್ಟು ಖರ್ಚಾದರೂ ಪರವಾಗಿಲ್ಲ, ಅವರ ಕಷ್ಟ ಬಗೆಹರಿದರೆ ಸಾಕು'' ಎಂದಳು.

''ನೀನೇ ಕೊಟ್ಟು ಬಾಮ್ಮ..''

''ಇಲ್ಲ ಚಿಕ್ಕಪ್ಪಾ.. ಅವರಾಗಿಯೇ ನನ್ನನ್ನು ಮಾತನಾಡಿಸದ ಹೊರತು, ನಾನು ಮಾತನಾಡಲಾರೆ. ನಾನೀಗ ಹಣ ಕೊಡುತ್ತೇನೆಂದರೆ, ಅವರಿಗೆ ಸಂಕೋಚವೆನಿಸಬಹುದು. ನನ್ನಿಂದ ಇದು ಸಾಧ್ಯವಿಲ್ಲ, ನೀವೇ ಮಾತನಾಡಿ..''

ಚಿಕ್ಕಪ್ಪ ಸುಮ್ಮನಾದರು. ಹತ್ತು ಹತ್ತು ಸಾವಿರಕ್ಕೆ ಎರಡು ಚೆಕ್‌ಗಳನ್ನು ಬರೆದು ತೆಗೆದಿಟ್ಟುಕೊಂಡರು. ಮೊದಲು, ಪಿನಾಕಿ ಕೆಲಸದಲ್ಲಿದ್ದ ಗ್ಯಾರೇಜಿನ ಮಾಲೀಕರನ್ನು ಭೇಟಿಯಾದರು.

ಆತ ಸಂಭಾವಿತನಂತೆ ಕಂಡು ಬಂದರೂ, ಮಾತಿನಲ್ಲಿ ಅತೀ ಸ್ಟ್ರಿಕ್ಟು ಎಂದು ಅನ್ನಿಸಿತು. ''ಪಿನಾಕಿ ಒಳ್ಳೆಯ ಹುಡುಗ.. ಪಾಪ ಅವನಿಗೆ ಇಂತಹ ಸಾವು ಬರಬಾರದಾಗಿತ್ತು.. ಎಂತಹ ಕೆಟ್ಟ ಜನ ಇರುತ್ತಾರೆ ನೋಡಿ ಈ ಪ್ರಪಂಚದಲ್ಲಿ? ಅಂದ ಹಾಗೆ ನೀವು ಅವರಿಗೆ ಏನಾಗಬೇಕು?'' ಮತ್ತೊಮ್ಮೆ ಪ್ರಶ್ನಿಸಿದ್ದರು.

''ನಾನು ಅವನ ಸೋದರಮಾವ. ಅವನು ಟ್ಯಾಕ್ಸಿ ಓಡಿಸುತ್ತಿದ್ದ. ಅದರ ಮಾಲೀಕ ನೀವು ಅಂತ ಹೇಳಿದ್ದ. ಅದಕ್ಕಾಗಿ ಬ್ಯಾಂಕಿನಿಂದ ಹಣ ತೆಗೆಸಿ ಕೊಟ್ಟಿದ್ದರು ಅಂತ ಸಹ ಹೇಳಿದ್ದ. ಈಗ ಏನು ಮಾಡಬೇಕೋ ತಿಳಿಯುತ್ತಿಲ್ಲ.''

''ಹಣ ಬರುತ್ತೆ ಹೋಗುತ್ತೆ.. ಅಂತಹ ಹುಡುಗ ನನಗೆ ಮತ್ತೆ ಸಿಗುತ್ತಾನೆಯೇ, ನಾನು ಗಾಡಿಗೆ ಇನ್ಶೂರ್ ಮಾಡಿಸಿದ್ದೆ. ಅದರ ಹಣ ನನಗೆ ಸಿಗುತ್ತದೆ. ಆದರೆ ಪಾಪ, ಅವನ ತಂದೆ ತಾಯಿಗಳ ಬಗ್ಗೆ ಯೋಚಿಸಿದರೆ ವ್ಯಥೆ ಆಗುತ್ತದೆ. ಪಾಪ ಹೇಗಿದಾರೋ ಏನೋ.' ಅವರುಗಳನ್ನು ಇಲ್ಲಿಗೆ ಕರೆಸಿಕೊಳ್ಳಬೇಕೆಂಬ ಆಸೆ ಅವನಿಗಿತ್ತು. ಅವರು ಬರಲಿಲ್ಲ. ಬಾಡಿಯನ್ನು ಗುರುತಿಸಿದವನು ನಾನು, ಅದೂ ಎರಡು ದಿನದ ಮೇಲೆ. ಆ ಹಳ್ಳಿಯಿಂದ ಅದನ್ನು ಕಡೇ ಸಲ ನೋಡಲು, ಅವರಿಂದ ಬರಲಾಗಲಿಲ್ಲ, ಅವನ ಅಣ್ಣ ಅತ್ತಿಗೆ ಬಂದಿದ್ದರು. ಅಂದ ಹಾಗೆ ನೀವೇಕೆ ಬರಲಿಲ್ಲ!.

''ನನಗೆ ತಿಳಿದದ್ದೇ ಬಹಳ ತಡವಾಗಿ.. ನಾನು ಊರಿನಲ್ಲಿರಲಿಲ್ಲ.''

''ಪಾಪ, ಅವರ ತಂದೆ ತಾಯಿ ಎಷ್ಟು ಕಷ್ಟದಲ್ಲಿದಾರೋ ಏನೋ, ನಾನು ಅವರಿಗೆ ಹಣದ ಸಹಾಯ ಮಾಡಬೇಕು ಅಂತ ನನ್ನ ಅಂತರಾತ್ಮ ಹೇಳ್ತಿದೆ. ನಾನು ಒಂದಿಷ್ಟು ಹಣ ಕೊಡ್ತೀನಿ. ಅವರಿಗೆ ತಲುಪಿಸ್ತೀರಾ?''

ಚಿಕ್ಕಪ್ಪನಿಗೆ ಆಶ್ಚರ್ಯವೆನಿಸಿತು. ಈ ಮನುಷ್ಯ ನಿಜಕ್ಕೂ ಇಷ್ಟು ಒಳ್ಳೆಯವನೇ, ಅಥವಾ ಇದರ ಹಿಂದೆ ಏನಾದರೂ ಮರ್ಮ ಅಡಗಿರಬಹುದೆ? ಅಥವಾ ಪಿನಾಕಿ, ಹಣ ಕೂಡಿಟ್ಟಿದ್ದು, ಆ ಹಣ ಇವರ ಬಳಿ ಇರಬಹುದೆ! ಏನೇ ಆಗಲಿ, ಈತ ತಾನಾಗಿಯೇ ಹಣ ಕೊಡ್ತೀನಿ ಎಂದಾಗ ತಾನೇಕೆ ಬೇಡವೆನ್ನಬೇಕು. ಇದರಿಂದ ಅವನ ತಂದೆ ತಾಯಿಗಳಿಗೆ ಲಾಭವಾಗುವುದಾದರೆ ಆಗಲಿ ಎಂದುಕೊಂಡ.

''ಅವನದ್ದು ಅಂತ ಏನಾದರೂ ಸಾಮಾನು ಸರಂಜಾಮುಗಳಿದ್ದರೆ, ಅದನ್ನ ತೆಗೆದುಕೊಂಡು ಹೋಗ್ತೀನಿ..''

''ಓ ಧಾರಾಳವಾಗಿ, ಅದನ್ನು ಇಟ್ಟುಕೊಂಡು ನಾನೇನು ಮಾಡಲಿ! ಇಲ್ಲೇ ಹಿಂದಿನ ರೂಮಿನಲ್ಲಿ ವಾಸವಾಗಿದ್ದ. ಬನ್ನಿ ಎಂದು ಅವರನ್ನು ಒಳಗೆ ಕರೆದುಕೊಂಡು ಹೋದ ಆತ.

ನೀವು ಇಲ್ಲೇ ಇರಿ. ನಾನು ಒಬ್ಬ ಹುಡುಗನನ್ನು ಕಳಿಸ್ತೀನಿ. ಅವನು ಇದನ್ನೆಲ್ಲ ಕಟ್ಟಿಕೊಡ್ತಾನೆ' ಎಂದು ಒಳಗೆ ಹೋದರು.

ಬರುವಾಗ ಒಬ್ಬ ಹುಡುಗ ಅವರ ಜತೆಯಲ್ಲಿದ್ದ. ಅವನ ಕೈಯಲ್ಲಿನ ತಟ್ಟೆಯಲ್ಲಿ ಎರಡು ಲೋಟಗಳಲ್ಲಿ ಕಾಫಿ ಇತ್ತು.

''ಕಾಫಿ ತಗೊಳ್ಳಿ, ಹೋಟೆಲ್ಲಿಂದ ತರಿಸಿದ್ದು. 'ಚಿಕ್ಕಪ್ಪ ಏನೂ ಮಾತನಾಡದೇ ಗಟಗಟನೆ ಕಾಫಿ ಕುಡಿದರು. ಆ ಹುಡುಗನ ಸಹಾಯದಿಂದ ಅಲ್ಲಿದ್ದ ಟ್ರಂಕಿಗೆ ಬಟ್ಟೆ, ಪುಸ್ತಕ ಇತ್ಯಾದಿಗಳನ್ನು ತುರುಕಿದರು. ಉಳಿದ ಚಿಕ್ಕಪುಟ್ಟ ವಸ್ತುಗಳನ್ನು ಕೈಚೀಲಕ್ಕೆ ತುಂಬಿ ಅದನ್ನು ಹೊತ್ತು ಹೊರಟರು.' ಆತ ಇವರ ಕೈಗೆ ಐದು ಸಾವಿರದ ನೋಟುಗಳ ಕಟ್ಟನ್ನಿತ್ತ. ''ಇದನ್ನು ನನ್ನ ಕಡೆಯಿಂದ ಅವರುಗಳಿಗೆ ತಲುಪಿಸಿಬಿಡಿ.''

ಚಿಕ್ಕಪ್ಪ ಮಾತಿಲ್ಲದೇ ಅದನ್ನು ಹೊತ್ತು ಹೊರಟರು. ಬಸ್‌ಸ್ಟಾಂಡಿನಲ್ಲಿ ಸಾಮಾನುಗಳನ್ನು ಇಟ್ಟು, ಪರಿಚಯದವರೊಬ್ಬರ ಅಂಗಡಿಯ ಹುಡುಗನನ್ನು ಅವುಗಳನ್ನು ನೋಡಿಕೊಳ್ಳುವಂತೆ ಕೂರಿಸಿ, ಸೀದಾ ಮನೆಗೆ ಬಂದರು.

ನಾನೀಗಲೇ ಹಾಸನಕ್ಕೆ ಹೋಗಬೇಕು. ಸ್ವಲ್ಪ ಕೆಲಸವಿದೆ. ಕೆಲಸ ಬೇಗ ಮುಗಿದರೆ, ರಾತ್ರಿಗೆ ಬಂದು ಬಿಡ್ತೀನಿ. ಇಲ್ಲದಿದ್ದರೆ ನಾಳೆ ಬರ್ತೀನಿ, ''ಅವಸರವರಸರವಾಗಿ ಮತ್ತೆ ಬಸ್‌ಸ್ಟಾಂಡಿಗೆ ಬಂದು, ಹಾಸನದ ಬಸ್ಸನ್ನು ಹತ್ತಿದರು.''

ಹಾಸನದಲ್ಲಿಳಿದು, ಪಿನಾಕಿಯ ತಂದೆಯ ಮನೆಯನ್ನು ಹುಡುಕಿಕೊಂಡು ಹೊರಟರು. ಅವರ ಮನೆಗೆ ಬೀಗ ಹಾಕಿತ್ತು. ಅಕ್ಕ ಪಕ್ಕದವರನ್ನು ವಿಚಾರಿಸಿದಾಗ ಅವರೆಲ್ಲ ರಾಮನಾಥ ಪುರದ ಆತನ ತಂಗಿಯ ಮನೆಯಲ್ಲಿದ್ದಾರೆಂದು ತಿಳಿಯಿತು. ಬಂದ ಕೆಲಸವಾಗಲಿಲ್ಲವೆಂದು ಬೇಸರವಾದರೂ, ಮತ್ತೆ ಬಸ್ಸು ಹತ್ತಿ ರಾಮನಾಥಪುರಕ್ಕೆ ಹೋಗಿ ಬರುವ ಮನಸ್ಸು ಮಾಡಿ, ಅವರಿಂದ ವಿಳಾಸವನ್ನು ಪಡೆದರು. ಅವರು ಮನೆಯ ರಸ್ತೆ, ತಂಗಿಯ ಗಂಡನ ಹೆಸರನ್ನು ಮಾತ್ರ ಹೇಳಿ, ''ಊರು ಚಿಕ್ಕದು, ನಿಮಗೆ ಹುಡುಕಲು ಕಷ್ಟವಾಗುವುದಿಲ್ಲ'' ಎಂದು ಹೇಳಿದರು.

ಹೆಚ್ಚಿಗೆ ದೂರವಲ್ಲದಿದ್ದರೂ, ರಾಮನಾಥಪುರದಲ್ಲಿ ಬಸ್ಸು ನಿಂತಾಗ, ಸಾಯಂಕಾಲವಾಗುತ್ತಾ ಬಂದಿತು. ಅಲ್ಲಿದ್ದ ಪೆಟ್ಟಿಗೆ ಅಂಗಡಿಯಲ್ಲಿ ಆ ವಿಳಾಸ ಕುರಿತು ಕೇಳಿದಾಗ, ಅವನು ಸರಿಯಾದ ವಿವರಗಳನ್ನು ಹೇಳಿದ್ದ, ಅಂತೆಯೇ ನೇರವಾಗಿ ಆ ಮನೆಗೇ ಬಂದರು. ಬಾಗಿಲು ತೆಗೆದವರು ಪಿನಾಕಿಯ ತಂದೆಯೋ, ಸೋದರತ್ತೆಯ ಗಂಡನೋ, ತಿಳಿಯಲಿಲ್ಲ.

''ನಾನು ಬೆಂಗಳೂರಿನಿಂದ ಬಂದಿದೀನಿ. ನಾನು ಎಲ್.ಐ.ಸಿ. ಏಜೆಂಟ್, ನಾನು ಸ್ವಲ್ಪ ಪಿನಾಕಿಯ ತಂದೆಯ ಹತ್ತಿರ ಮಾತನ್ನಾಡಬೇಕು'' ಎಂದರು.

''ಅವರ ಆರೋಗ್ಯ ಹದಗೆಟ್ಟಿದೆ. ನಾನು ಅವರ ಅಮ್ಮನನ್ನು ಕರೆಯುತ್ತೇನೆ'' ಚಿಕ್ಕಪ್ಪ ಅಲ್ಲಿದ್ದ ಆಸನದ ಮೇಲೆ ಕೂತರು.

ಒಳಗಿನಿಂದ ಲಕ್ಷಣವಾದ ಒಬ್ಬ ಮುತ್ತೈದೆ ಬಂದು ಅವರೆದುರಿಗೆ ನಿಂತಾಗ ಚಿಕ್ಕಪ್ಪ ವಿನಯದಿಂದ ಎದ್ದು ಕೈ ಮುಗಿದರು. ಆಕೆ ಎಷ್ಟೇ ತಡೆದುಕೊಂಡಿದ್ದರೂ, ಆತನೆದುರು ನಿಂತಾಗ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದಾಗ, ಅಲ್ಲಿದ್ದವರೆಲ್ಲರಿಗೂ ಮುಜುಗರವಾಯಿತು. ನಾದಿನಿ ಬಂದು ಅವರನ್ನು ತಬ್ಬಿ ಹಿಡಿದು ಒಳಗೆ ಕರೆದುಕೊಂಡು ಹೋದಳು.

''ಆ ದುರಂತ ನಡೆದಂದಿನಿಂದ ಹೀಗೆ ಆಗಿದೆ. ಗಂಡ ಹೆಂಡತಿ ಇಬ್ಬರೂ ಜೀವಂತ ಶವವಾಗಿದಾರೆ. ಮನೆಯಾತ ಹೇಳಿದಾಗ, ಚಿಕ್ಕಪ್ಪನಿಗೆ, ತಾನೆಂತಹ ಕೆಲಸ ಮಾಡುತ್ತಿದ್ದೇನೆ ಅಂತ ಅನ್ನಿಸದೇ ಇರಲಿಲ್ಲ, ನಿಜವಾದ ವಿಷಯ ತಿಳಿದರೆ, ಅದರ ಪರಿಣಾಮ ಇನ್ನೇನಾಗಿರುತ್ತದೋ ಎಂದುಕೊಂಡರು. ಇದು ತಾನು ಶುರುಮಾಡಿದ್ದಲ್ಲ, ಇದಕ್ಕೆ ಕಾರಣ ಸ್ವತಃ ಕಮಲಿನಿ, ಹಾಗೂ ಪಿನಾಕಿ.. ತಾನೇನಿದ್ದರೂ, ಅದನ್ನು ಬಹಿರಂಗ ಪಡಿಸದೇ ಇನ್ನೂ ಮುಚ್ಚಿಡುತ್ತಿದ್ದೇನೆ.''

ಮಗ ಬರುತ್ತಿದ್ದಾನೆ ಎಂದು ತಿಳಿದರೆ, ಅದಕ್ಕಿಂತ ಹೆಚ್ಚಿನ ಸಂತೋಷ ಈ ವೃದ್ಧರಿಗೆ ಬೇರೇನಿಲ್ಲ, ಈ ಬಗ್ಗೆ ಪಿನಾಕಿ ಏಕೆ ಚಿಂತಿಸಲಿಲ್ಲ! ಆ ಗಳಿಗೆಯಲ್ಲಿ ತಾನು ಪಾರಾದರೆ ಸಾಕು ಎನ್ನುವ ಆಲೋಚನೆಯೇ ಅಧಿಕವಾಗಿ ಕಂಡಿರಬೇಕು. ಈಗೊಂದು ವೇಳೆ, ತಾನು ನಿಜವನ್ನು ತಿಳಿಸಿದ್ದೇ ಆದರೆ, ಅದರಿಂದ, ವೃಂದ, ಪಿನಾಕಿ ಕಮಲಿನಿ ಮೂರು ಜನರ ಬಾಳೂ ಹಾಳಾಗುತ್ತದೆ. ಮೂವರೂ ನಿರಪರಾಧಿಗಳೇ. ಯಾವ ಪಾಪವನ್ನೂ ಮಾಡದ ವೃಂದಾಳ ಬಾಳಿನಲ್ಲಿ ಅಂಧಕಾರ ಕವಿಯುತ್ತದೆ. ಅವಳ ನಂಬಿಕೆಯ ಬುಡವೇ ಕಳಚಿ ಹೋಗಿ, ಅವಳು ಏನಾಗಿಬಿಡುತ್ತಾಳೋ..?

ಈಗ ಹೇಗೂ ತಿಂಗಳಿಗಿಂತ ಹೆಚ್ಚಿನ ದಿನಗಳು ಕಳೆದು ಹೋಗಿದೆ. ದುಃಖ ಅಸಹನೀಯವಾದರೂ ದಿನಗಳು ಸರಿದಿದೆ. ಹೀಗೇ ಕ್ರಮೇಣ ದುಃಖ ಕಡಿಮೆಯಾಗಬಹುದು. ಈಗ ಈ ತಂದೆ ತಾಯಿಗಳಿಗೆ ಮಗನನ್ನು ಪುನಃ ಬದುಕಿಸಿಕೊಡುವುದಂತೂ ಅಸಾಧ್ಯ. ಅದಕ್ಕೆ ಬೇರೇ ನಾಟಕವನ್ನೇ ಆಡಬೇಕಾಗುತ್ತದೆ. ತಾನು ಬಂದ ಉದ್ದೇಶವೇ ಬೇರೆ. ಅದನ್ನು ಮುಗಿಸಿ ಇಲ್ಲಿಂದ ಹೊರಟು ಬಿಡುತ್ತೇನೆ ಎಂದುಕೊಂಡ.

''ಪಿನಾಕಿ, ಜೀವವಿಮೆ ಮಾಡಿಸಿದ್ದ, ಅದರ ಹಣ, ತಾಯಿಗೆ ಸೇರಬೇಕು, ಹಾಗೇ, ಅವನು ಕೆಲಸ ಮಾಡುತ್ತಿದ್ದ ಮಾಲೀಕರು, ಅವನಿಗೆ ಕೊಡಬೇಕಾಗಿದ್ದ ಸಂಬಳವನ್ನು ಕೊಟ್ಟಿದ್ದಾರೆ, ತಗೊಳ್ಳಿ..''

ಮತ್ತೆ ಆಕೆ ಒಳಗಿನಿಂದ ಬಂದಳು. ಚಿಕ್ಕಪ್ಪ ಬಾಗಿ ಆಕೆಯ ಕಾಲು ಮುಟ್ಟಿ ನಮಸ್ಕರಿಸಿದರು. ಅದು ಅಂತರಂಗದಿಂದ ಉಕ್ಕಿದ ಪ್ರೇರಣೆ. ಮತ್ತೆ ಆಕೆಯ ದುಃಖವನ್ನು ಹೆಚ್ಚಿಸಬಾರದು ಎಂದುಕೊಂಡು, ಆಕೆಯ ಕೈಗೆ ತಾವು ತಂದಿದ್ದ ಹಣದ ಕಟ್ಟನ್ನು, ಚೆಕ್‌ಗಳನ್ನು ಕೊಟ್ಟರು. ಆಕೆ ಕುಸಿದು ಬೀಳುತ್ತಾಳೇನೋ ಎಂದುಕೊಳ್ಳುತ್ತಿರುವಂತೆಯೇ ಆಕೆಯನ್ನು ಒಳಗೆ ಕರೆದುಕೊಂಡು ಹೋಗಿದ್ದರು.

"ನಾನಿನ್ನು ಬರ್ತೀನಿ, ನನ್ನ ಕೆಲಸವಾಯಿತು.." ಚಿಕ್ಕಪ್ಪ ಹೊರಟಾಗ ಮನೆಯಾತ ಕರೆದಿದ್ದರು. "ಈ ರಾತ್ರಿ ಹೇಗೆ ಹೋಗ್ತೀರಿ.. ಹಾಸನಕ್ಕೆ ಹೋಗುವ ಕಡೇ ಬಸ್ಸು ಹೊರಟು ಹೋಗಿರುತ್ತದೆ. ಈ ರಾತ್ರಿ ಇಲ್ಲಿಯೇ ಇದ್ದು ನಾಳೆ ದಿನ ಹೊರಟರೆ ಆದೀತು", ವಿಧಿ ಇಲ್ಲದೇ ಚಿಕ್ಕಪ್ಪ ಉಳಿದುಕೊಂಡರು. ಬಿಸಿಬಿಸಿ ಅಡಿಗೆಯ ಊಟವಾದ ನಂತರ, ಮಲಗುವ ಸಿದ್ಧತೆ ನಡೆಸಿದರು.

ಆ ರಾತ್ರಿ ಮನೆಯಾತ ನಿದ್ದೆ ಬರುವವರೆಗೂ ಏನೋ ಮಾತನ್ನಾಡುತ್ತಿದ್ದರು.

"ನಮಗೆ ಹತ್ತಾರು ಎಕರೆ ಗದ್ದೆ ಇದೆ. ಕಾವೇರಿ ತಾಯಿಯ ಕರುಣೆಯಿಂದ ಎಲ್ಲಾ ಹೇಗೋ ಸಾಗುತ್ತಿದೆ. ಆದರೂ ಕಾಲ ಕಷ್ಟ ಕೂಲಿಯಾಳುಗಳನ್ನು ಹಿಡಿದು, ಎಲ್ಲಾ ಮಾಡಿಸುವುದು ಎಂದರೆ ಪ್ರಯಾಸವೇ. ನನ್ನ ಮಗಳನ್ನು ಪಿನಾಕಿಗೆ ಕೊಟ್ಟು ಮನೆಯ ಅಳಿಯನನ್ನಾಗಿ ಮಾಡಿಕೊಳ್ಳುವ ಆಸೆ ಇತ್ತು. ಆದರೆ ತಾಯಿ ಮೀನಾಕ್ಷಿಯ ಮನಸ್ಸಲ್ಲಿರುವುದೇ ಬೇರೆ ಆಗಿತ್ತೇನೋ.. ಹಾಸನದ ಕಾಲೇಜಿಗೆ ಓದಲು ಹೋಗುತ್ತಿದ್ದ ನನ್ನ ಮಗಳು ಅಲ್ಲಿಯ ಲೆಕ್ಚರರ್‌ನ ಪ್ರೀತಿಸಿ ಮದುವೆಯಾದಳು. ಬೇಕಾದಷ್ಟು ರಂಪ ರಾದ್ಧಾಂತವಾಯಿತು. ಆದರೂ ಮಗಳು ನೋಡಿ, ಅವಳ ಮಾತಿಗೆ ಒಪ್ಪಿ ಅವಳನ್ನು ಧಾರೆ ಎರೆದು ಕಳಿಸಿಕೊಟ್ಟೆವು. ಹಾಗಾದದ್ದೇ ಒಳ್ಳೆದಾಯ್ತೇನೋ ಅಂತ ಈಗ ಅನ್ನಿಸ್ತಿದೆ."

ಚಿಕ್ಕಪ್ಪನಿಗೆ ಆತನ ಮಾತು ಬೇಕಿರಲಿಲ್ಲ. ನಿದ್ದೆ ಬಂದವರಂತೆ ನಟಿಸಿದಾಗ ಆತ ಮಾತನಾಡುವುದನ್ನು ನಿಲ್ಲಿಸಿದರು.

ಬೆಳಿಗ್ಗೆ ಕತ್ತಲೆ ಕತ್ತಲೆ ಆಗಿರುವಾಗಲೇ ಮನೆಯವರು ಎದ್ದು ದಿನನಿತ್ಯದ ಕೆಲಸಗಳಲ್ಲಿ ತೊಡಗಿದ್ದರು. ಬಿಸಿ ಕಾಫಿಯನ್ನು ತಂದಿತ್ತು ಮನೆಯಾತ ಕೇಳಿದ್ದರು.

"ಮನೆಯಲ್ಲಿ ಬಿಸಿ ನೀರಿನಲ್ಲಿ ಸ್ನಾನ ಮಾಡ್ತೀರೋ. ಅಥವಾ ನದೀ ಸ್ನಾನ ಮಾಡ್ತೀರೋ."

"ಪುಣ್ಯಕ್ಷೇತ್ರಕ್ಕೆ ಬಂದಿದೀನಿ. ನದೀ ಸ್ನಾನಾನೇ ಮಾಡ್ತೀನಿ."

"ನದೀಲಿ ಭಾರಿ ಭಾರಿ ಮೀನುಗಳಿವೆ. ಅದನ್ನು ಮೊಸಳೆ ಎಂದು ತಿಳಿದು ನದೀಗೆ ಇಳಿಯದೇ ಹೋದೀರಿ.."

"ಇಲ್ಲ, ಇಲ್ಲ, ಒಂದು ವೇಳೆ ಮೊಸಳೆಯೇ ಬಂದು ನನ್ನನ್ನು ಹಿಡಿದರೂ, ಪಿನಾಕಿ ನನ್ನನ್ನು ರಕ್ಷಿಸುತ್ತಾನೆ." ಎಂದಿದ್ದರು ನಗುತ್ತಾ. ಆ ಮಾತಿಗೆ ಯಾವ ಅರ್ಥವೂ ಇಲ್ಲವೆಂದುಕೊಂಡು, ಮನೆಯಾತ ನಕ್ಕು ಸುಮ್ಮನಾಗಿದ್ದರು.

ಕೈಯಲ್ಲಿ ಚೊಂಬನ್ನು ಹಿಡಿದು, ತುಂಡು ಪಂಚೆಯುಟ್ಟು ನದಿಗೆ ಇಳಿದವರಿಗೆ ಎದ್ದು ಬರುವ ಮನಸ್ಸೇ ಇಲ್ಲ. ಇಡೀ ದಿನವನ್ನು ಈ ನದಿಯಲ್ಲೇ ಕಳೆಯಬಹುದು... ತನಗೆ ಈಜಲು ಬರುವಂತಿದ್ದರೆ ಎಷ್ಟು ಚೆನ್ನಾಗಿತ್ತು ಎಂದುಕೊಂಡರು. ತನಗೆಲ್ಲಾ ಗೊತ್ತು, ತಾನು ಜಾಣನೆಂಬ ಅಹಂ ಅವರಿಗಿತ್ತು. ಆದರೆ ನದಿಯ ವಿಶಾಲತೆಯನ್ನು ನೋಡಿದಾಗ, ತಾನು ಕುಬ್ಜ ಎಂದೆನಿಸಿತು. ಈಜಲು ಬಾರದಿದ್ದರೂ, ನದಿಗೆ ಇಳಿದ ತಾನು ಈಗ ಮುಳುಗಿದರೂ,

ತನ್ನನ್ನು ಎತ್ತಿ ರಕ್ಷಿಸಿ, ದಡ ಮುಟ್ಟಿಸುವುದು ಈ ಮಹಾಮಾತೆಯ ಕೈಲಿದೆ ಎಂದುಕೊಂಡು, ಮೂಗು ಮುಚ್ಚಿ ಮೂರು ಮುಳುಗು ಹಾಕಿ ಮೇಲೆದ್ದರು. ಗಂಗೇಚ, ಯಮುನೇಚೈವ್ಯಾ.. ಶ್ಲೋಕವನ್ನು ಹೇಳಿಕೊಂಡು, ಚೊಂಬಿನಿಂದ ನೀರನ್ನು ಮೈಮೇಲೆ ಹಾಕಿಕೊಂಡು , ಮನೆಯಲ್ಲಿ ಮಾಡುವ ಸ್ನಾನವೆಲ್ಲಿ..? ಮಹಾಮಾತೆಯ ಮಡಿಲಿನಲ್ಲಿರುವ ಈ ಆನಂದವೆಲ್ಲಿ? ಎಂದು ಯೋಚಿಸುತ್ತಾ ಚೊಂಬನ್ನು ಮರೆತೇಬಿಟ್ಟಿದ್ದರು. ತೇಲುತ್ತಾ ತೇಲುತ್ತಾ ಚೊಂಬು ಮಾಯವಾಯಿತು. ಈಜಾಡುತ್ತಿದ್ದ ಒಬ್ಬ ಹಳ್ಳಿಯ ಹುಡುಗ, ಚೊಂಬನ್ನು ಅವರ ಬಳಿಗೆ ತಂದುಕೊಟ್ಟ. ಎಚ್ಚೆತ್ತವರು, ತಾನಿನ್ನು ದಡಕ್ಕೆ ಬರುವುದು ಒಳ್ಳೆಯದು ಎಂದುಕೊಂಡು ಮೆಟ್ಟಿಲುಗಳನ್ನು ಹತ್ತಿದರು. ಷರಟಿನ ಜೇಬಿನಲ್ಲಿದ್ದ ಪುಡಿಗಾಸನ್ನು ತೆಗೆದು, ಅಲ್ಲಿಯೇ ಮಾರುತ್ತಿದ್ದ ಪುರಿ, ಸೌತೆಕಾಯಿಗಳನ್ನು ಕೊಂಡು, ಮೀನುಗಳ ಸಮುದಾಯಕ್ಕೆ ಎಸೆದರು. ಸೂರ್ಯನ ಎಳೆ ಬಿಸಿಲಿಗೆ, ಫಳ

ಫಳನೆ ಹೊಳೆಯುತ್ತಾ ತಮ್ಮ ಬೆಳ್ಳಿಯ ಮೈಯನ್ನು ಬಳುಕಿಸುತ್ತಾ, ವೇಗವಾಗಿ ಚಲಿಸುತ್ತಿದ್ದ ಮೀನುಗಳನ್ನೇ ನೋಡುತ್ತಾ ನಿಂತಿದ್ದವರನ್ನು ಮನೆಯಾತ ಬಂದು ಕರೆದಿದ್ದರು.

''ಬನ್ನಿ, ತಿಂಡಿ ತಿನ್ನೋರಂತೆ, ಹೊತ್ತಾತು..'' ಒಣಗಿದ ಬಟ್ಟೆಯನ್ನುಟ್ಟು ಮನೆ ಕಡೆಗೆ ನಡೆದರು. ಬಿಸಿಯಾದ ಕಾಯಿ ಕಡುಬು, ಕಾಯಿ ಚಟ್ನಿಯೊಂದಿಗೆ ಹೊಟ್ಟೆತುಂಬಿಸಿಕೊಂಡು ಹೊರಟರು. ಪಿನಾಕಿಯ ತಂದೆ ತಾಯಿಗೆ ತಿಳಿಸಿ ಹೊರ ನಡೆದರು.

''ದೇವಸ್ಥಾನಕ್ಕೆ ಹೋಗಿ ಬರೊಲ್ವೇ..?''

''ಹೋಗದೇ ಉಂಟೆ? ದೇವಿಗೆ ಕೈ ಮುಗಿದು ಹಾಗೇ ಪ್ರಯಾಣ ಮಾಡ್ತೀನಿ.''

ಇಬ್ಬರೂ ಮನೆಯಿಂದ ಸ್ವಲ್ಪವೇ ದೂರದಲ್ಲಿದ್ದ ದೇವಸ್ಥಾನಕ್ಕೆ ಬಂದರು. ಭವ್ಯವಾದ ಮೀನಾಕ್ಷಿ ದೇವಾಲಯವನ್ನು ನೋಡಿ, ಮಧುರೆ ಮೀನಾಕ್ಷಿ ದೇವಾಲಯವನ್ನು ಸಂದರ್ಶಿಸಿದಷ್ಟೇ ಆನಂದವಾಗಿತ್ತು.

''ಇಲ್ಲಿ ಅಕ್ಷಯ ತದಿಗೆ ದಿನ ವಿಶೇಷವಾದ ಪೂಜೆ. ಸುಮಂಗಲಿಯರೆಲ್ಲ ಸ್ವತಃ ತಾವೇ ಕೈಯಾರೆ ದೇವಿಗೆ ಪೂಜಿಸುವ ಅವಕಾಶವಿರುತ್ತದೆ.''

ಒಳಗೆ ಬಂದು ಕೈ ಮುಗಿದು, ದೇವಿಯನ್ನು ಮನಸಾರೆ ಬೇಡಿದರು.

ಇಲ್ಲಿ ಇನ್ನು ಒಂದೆರಡು ದೇವಾಲಯಗಳು ನದಿಯ ಆ ದಡದಲ್ಲಿದೆ. ಹೋಗಿ ಬರಬಹುದಾಗಿತ್ತು.

ದೇವಿಯಲ್ಲಿ ಬೇಡಿಕೊಂಡಿದ್ದೇನೆ. ಮತ್ತೊಮ್ಮೆ ನಿನ್ನ ದರ್ಶನಕ್ಕೆ ಬರುವ ಅವಕಾಶವನ್ನು ನೀನೇ ಅನುಗ್ರಹಿಸಬೇಕು ತಾಯಿ ಅಂತ. ಆಕೆಯ ಅನುಗ್ರಹವಿದ್ದರೆ, ಖಂಡಿತಾ ಬರುತ್ತೇನೆ. ನಿಮ್ಮಗಳ ಸ್ನೇಹ, ಉಪಚಾರ, ಈ ಮಹಾತಾಯಿಯ ಭವ್ಯದರ್ಶನ, ಕಾವೇರಿ ತಾಯಿಯ ಮಡಿಲು, ಸದಾ ನನ್ನ ನೆನಪಿನಲ್ಲಿ ಉಳಿಯುವಂತಹುದು. ನಾನು ಇನ್ನು ಬರಲೇ? ಕೈ ಮುಗಿದು, ಬಸ್ಸು ಹತ್ತಿದರು. ಅಲ್ಲಿಂದ ಹಾಸನಕ್ಕೆ ಬಂದು, ಹಾಸನದಿಂದ ಬೆಂಗಳೂರಿಗೆ ಬರುವ ಹೊತ್ತಿಗೆ ರಾತ್ರಿಯಾಗಿತ್ತು. ಭೀಮನೇ ಬಂದು ಬಾಗಿಲು ತೆಗೆದ. ಪಿನಾಕಿಯ ಮೇಲೆ

ನಂಬಿಕೆ ಇದ್ದುದರಿಂದ, ಭೀಮನೂ ಜತೆಯಲ್ಲಿದ್ದುದರಿಂದ ಅವರಿಗೆ ಯಾವ ಅನುಮಾನವೂ ಇರಲಿಲ್ಲ.

ಇದುವರೆಗೂ ನಡೆದದ್ದೆಲ್ಲಾ ಸುಳ್ಳೋ ನಿಜವೋ ಎಂದು ಅನುಮಾನ ಪಡುವಷ್ಟು ಅವರ ಮನಸ್ಸು ಗೊಂದಲಕ್ಕೊಳಗಾಗಿತ್ತು.

ತಾವು ತಂದಿದ್ದ ಪ್ರಸಾದವನ್ನು ವೃಂದಾಳ ಕೈಗಿತ್ತು. ''ಹೋಗು ನಿನ್ನ ಗಂಡನಿಗೂ ಕೊಟ್ಟು ಬಾ..'' ಎಂದರು. ಅವಳು ಭೀಮನ ಕಡೆ ತಿರುಗುವ ಮೊದಲೇ, ಇಲ್ಲ ನೀನೇ ಹೋಗಿ ಕೊಟ್ಟು ಬಾ..'' ಎಂದರು.

ವೃಂದಾ, ನಾಚಿಕೆ, ದಿಗಿಲುಗಳಿಂದ ಚಿಕ್ಕಪ್ಪನ ಮುಖ ನೋಡಿದಳು.

''ಪ್ರಸಾದವನ್ನು ತಿರಸ್ಕರಿಸುವಷ್ಟು ಮೂರ್ಖತನ ಯಾರಲ್ಲೂ ಇರುವುದಿಲ್ಲ, ಪರವಾಗಿಲ್ಲ ಹೋಗಿ ಕೊಟ್ಟು ಬಾ..''

ಈ ಮಾತುಗಳನ್ನು ಒಳಗೇ ಇದ್ದ ಪಿನಾಕಿ ಕೇಳಿಸಿಕೊಂಡಿದ್ದ. ತನ್ನ ರೂಮಿಗೆ ವೃಂದಾ ಬರುವುದು ಸರಿಯಾಗಿ ಕಾಣಲಿಲ್ಲ. ತಾನೇ ಎದ್ದು ಬಂದ. ವೃಂದಾಳ ಎದುರಿಗೆ ನಿಂತ. ಅವಳು ಅವನನ್ನು ಕತ್ತೆತ್ತಿ ನೋಡುವ ಸಾಹಸ ಮಾಡಲಿಲ್ಲ. ಅವಳು ಪ್ರಸಾದದ ಪೊಟ್ಟಣವನ್ನು ಅವನ ಎದುರಿಗೆ ಹಿಡಿದಳು. ಇವನು ಕುಂಕುಮವನ್ನು ಹಚ್ಚಿಕೊಂಡು, ಒಂದು ಚೂರು ಕಲ್ಲು ಸಕ್ಕರೆಯನ್ನು ಬಾಯಿಗೆ ಹಾಕಿಕೊಂಡ. ವೃಂದಾಳ ಎದೆ ಉದ್ವೇಗದಿಂದ ಹೊಡೆದುಕೊಳ್ಳುತ್ತಿತ್ತು. ಆನಂದವನ್ನು ತಡೆಯಲಾರದೇ ಅಡಿಗೆ ಮನೆಗೆ ಓಡಿ ಹೊರಟು ಹೋದಳು. ಭೀಮ ತನ್ನ ಪಾಡಿಗೆ ತಾನು ಮಲಗಿದ್ದ. ಪಿನಾಕಿ ಮತ್ತೆ ತನ್ನ ರೂಮಿಗೆ ಹೊರಟು ಹೋಗಿದ್ದ.

''ವೃಂದಾ ಕತ್ತೆತ್ತಿ ನೋಡಿದ್ದರೇ, ಅವಳಿಗೆ, ತನ್ನ ಬಗ್ಗೆ ಸಂದೇಹ ಮೂಡಿದ್ದರೇ, ತಾನು ಎಲ್ಲವನ್ನು ಹೇಳಿ ಬಿಡಬಹುದಾಗಿತ್ತು'' ಎಂದು ಹತ್ತಾರು ಬಾರಿ ಅಂದುಕೊಂಡ.

ಚಿಕ್ಕಪ್ಪ ಅಡಿಗೆ ಮನೆಗೆ ಹೋದರು. ''ನಾನು ಬೆಳಿಗ್ಗೆ ತಿಂಡಿ ತಿಂದಿದ್ದು, ಅಡಿಗೆ ಉಳಿದಿದ್ದರೆ ಬಡಿಸು.. ಇಲ್ಲದಿದ್ದರೆ ಏನಾದರೂ ಹಣ್ಣು ಹಾಲು ತಿಂತೀನಿ..''

''ಸ್ವಲ್ಪ ಮಿಕ್ಕಿದೆ ಬಡಿಸ್ತೀನಿ, ಹಾಲೂ ಹಣ್ಣು ಇದೆ..'' ಎಂದು ಉತ್ಸಾಹದಿಂದ ಅಡಿಗೆಯನ್ನು ಬಿಸಿ ಮಾಡತೊಡಗಿದಳು, ಚಿಕ್ಕಪ್ಪನ ಮನಸ್ಸು ಬೇರೇನನ್ನೋ ಯೋಚಿಸುತ್ತಿತ್ತು.

ಮೈಸೂರಿನ ಹತ್ತಿರದ ಒಂದು ಸಣ್ಣ ಊರಿನಲ್ಲಿದ್ದ ಅವರು ಊರಿಗೇ ಚಿಕ್ಕಪ್ಪ, ಅವರ ಹೆಸರು, ಮಂಜಪ್ಪ ಎಂದಾದರೂ, ಎಲ್ಲರೂ ಚಿಕ್ಕಪ್ಪನೆಂದೇ ಕರೆಯುತ್ತಿದ್ದರು. ಚಿಕ್ಕವಯಸ್ಸಿನಲ್ಲೇ ಮದುವೆಯಾಗಿದ್ದ ಅವರಿಗೆ ಮಕ್ಕಳಾಗಿರಲಿಲ್ಲ. ಅಣ್ಣನಿಗೆ ಬರೀ ಹೆಣ್ಣು ಮಕ್ಕಳು, ಕಡೆಯವಳು ವೃಂದಾ. ತುಳಸಿ ಹಬ್ಬದ ದಿನ ಹುಟ್ಟಿದವಳು. ಬರೀ ಮನೆ ತುಂಬ ಹೆಣ್ಣು ಮಕ್ಕಳು ಎಂದು ತಂದೆ ತಾಯಿ ಉದಾಸೀನ ತೋರಿದಾಗ, ಚಿಕ್ಕಪ್ಪನಿಗೆ ವ್ಯಥೆಯಾಗುತ್ತಿತ್ತು, ತಮಗೆ ಆ ಭಾಗ್ಯವೂ ಇಲ್ಲವಲ್ಲ ಎಂದು ಮರುಗುತ್ತಿದ್ದರು.

ಕಡೆಯವಳಾಗಿ ಹುಟ್ಟಿದ ವೃಂದಾ ಚಿಕ್ಕಪ್ಪನ ಪ್ರೀತಿಯ ಕೂಸಾಗಿ ಬೆಳೆದಳು. ಹಿರಿಯ ಅಕ್ಕಂದಿರಿಗೆ ಮದುವೆಯಾಗಿ ಗಂಡನ ಮನೆಗೆ ಹೊರಟುಹೋಗಿದ್ದರು. ಇನ್ನಿಬ್ಬರ ಮದುವೆಗೆ ಖರ್ಚಿಗೆ ಹೊಂದಿಸಲಾಗದೇ, ಅಣ್ಣ ಅತ್ತಿಗೆ ಹೆಣಗಾಡುತ್ತಿದ್ದರು. ಅವರ ಕಷ್ಟ ನೋಡಲಾರದೇ ಚಿಕ್ಕಪ್ಪ, ತಮ್ಮ ಭಾಗದ ಆಸ್ತಿಯನ್ನು ಮಾರಿ, ಆ ಹೆಣ್ಣು ಮಕ್ಕಳ ಮದುವೆಗೆ ನೆರವಾಗಿದ್ದರು. ತಂದೆ ತಾಯಿಯ ಆ ಬವಣೆ ವೃಂದಾಳಿಗೆ ಬೇಸರವನ್ನುಂಟು ಮಾಡಿತ್ತು. ಬಡವರ ಮನೆಯಲ್ಲಿ ಮಾತ್ರ ಹೆಣ್ಣು ಮಕ್ಕಳಾಗಿ ಹುಟ್ಟಬಾರದು ಎಂದು ತನಗೆ ತಾನೇ ಹೇಳಿಕೊಳ್ಳುತ್ತಿದ್ದಳು.

ಸದಾ ಚಿಕ್ಕಪ್ಪನ ಸಹವಾಸದಲ್ಲೇ ಇರುತ್ತಿದ್ದ ಅವಳು, ಅವರಿಗೆ ಹೇಳುತ್ತಿದ್ದಳು, "ನಾನು ಮದುವೆಯಾದರೆ ಶ್ರೀಮಂತನನ್ನೇ ಮದುವೆಯಾಗುವುದು. ಇಲ್ಲದಿದ್ದರೆ ಹೀಗೇ ಇದ್ದು ಬಿಡುತ್ತೀನಿ ಅಂತ. ಅವಳು ಹಠವಾದಿಯಲ್ಲದಿದ್ದರೂ, ಅವಳನ್ನು ಸಂತೋಷಪಡಿಸಲೆಂದು ಹಾಗೇ ಹೇಳಿದ್ದರು.

"ನಿನಗೆ ಶ್ರೀಮಂತ ಗಂಡನನ್ನು ನೋಡುವುದು ನನ್ನ ಜವಾಬ್ದಾರಿ.."

ಅದರಂತೆ, ದೂರ ಸಂಬಂಧಿ, ಸಾತು ವಿಷ್ಣು ಮದುವೆಗಿದ್ದಾನೆಂದು ತಿಳಿಸಿದಾಗ, ತಾನೇ ಖುದ್ದಾಗಿ ಬಂದು ವಿಚಾರಿಸಿದ್ದರು. ಅವನ ತಾಯಿ ಒಪ್ಪಿದರು. ಯಾವ ಖರ್ಚು ಇಲ್ಲದೇ ಮದುವೆ ನೆರವೇರುವ ಅವಕಾಶವನ್ನು ಉಪಯೋಗಿಸಿಕೊಂಡು, ಮದುವೆಗೆ ಸಿದ್ಧತೆಗಳನ್ನು ನಡೆಸಿದರು. ಕೆಲವು ಗಾಳಿ ಮಾತು ಕೇಳಿಬಂದರೂ, ಅದನ್ನ ಕಿವಿಗೆ ಹಾಕಿಕೊಳ್ಳದೇ ಮದುವೆಯ ಕಾರ್ಯವನ್ನು ಮುಗಿಸಿದ್ದರು.

ವೃಂದಾಳಿಗೆ ಗಂಡನ ವರ್ತನೆ ಅರ್ಥವಾಗಿರಲಿಲ್ಲ. ತನ್ನದೇನು ತಪ್ಪಿರಬಹುದೆಂದು ತಿಳಿಯಲಿಲ್ಲ. ಕಾಡಿ, ಬೇಡಿ, ಗಂಡನ ಪ್ರೀತಿಯನ್ನು ಪಡೆಯಬಾರದೆಂದು ತೀರ್ಮಾನಿಸಿದಳು. ಗಂಡನ ಮನೆಯವರು ಶ್ರೀಮಂತರು. ಯಾವ ಆಧುನಿಕತೆಯೂ ಇರಲಿಲ್ಲ. ತಿನ್ನಲು ಉಣ್ಣಲು, ಉಡಲು ತೊಡಲು ಕೊರತೆ ಇರಲಿಲ್ಲ ಅಷ್ಟೆ. ಅತ್ತೆ ಮಾತ್ರ ಕೇಳಿಕೊಂಡಿದ್ದರು. ಇನ್ನು ಮೇಲೆ ಈ ಮನೆಗೆ ನೀನೇ ಆಧಾರ. ನನ್ನಿಂದಂತೂ ಅವನನ್ನು ಬದಲಾಯಿಸಲು ಸಾಧ್ಯವಾಗಲಿಲ್ಲ."

ಆ ಮಾತುಗಳನ್ನು ಕೇಳಿ ಅವಳು ಕಲ್ಲಾಗಿದ್ದಳು. ಶ್ರೀಮಂತ ಗಂಡನೊಡನೆ ಮೆರೆದು, ಅಕ್ಕಂದಿರು ಕಣ್ಣರಳಿಸುವಂತೆ ಮಾಡಬೇಕು ಎಂದುಕೊಂಡಿದ್ದಳು. ಆದರೆ ಈಗ? ಈ ಶ್ರೀಮಂತಿಕೆಯನ್ನು ಏಕೆ ಬಯಸಿದೆನೋ ಎನ್ನುವಷ್ಟು ನಿರಾಶೆಯಾಗಿತ್ತು. ದಿಕ್ಕು ತಪ್ಪಿದವಳಂತೆ ದೇವರ ಮೊರೆ ಹೊಕ್ಕಿದ್ದಳು. ತಾಯಿ ಮಗನಲ್ಲಿ ವಾದ ವಿವಾದಗಳು ನಡೆದರೂ, ಇವಳು ಇಣುಕಿ ನೋಡುತ್ತಿರಲಿಲ್ಲ. ದೇವರ ಮನೆಗೆ ಹೋಗಿ ಬಾಗಿಲನ್ನು ಹಾಕಿಕೊಂಡು ಕುಳಿತಿರುತ್ತಿದ್ದಳು.

ಚಿಕ್ಕಪ್ಪನಿಗೆ ಯಾರಿಂದಲೋ ವಿಷಯ ತಿಳಿದು, ಅವನನ್ನು ಬಿಟ್ಟು ಬರುವಂತೆ ಸಲಹೆ ನೀಡಿದ್ದಾಗ ನಿರಾಕರಿಸಿದ್ದಳು. ತಾನು ಗಂಡನ ಮನೆಯಿಂದ ತವರು ಮನೆಗೆ ಹೋಗಿ,

ಅಕ್ಕಂದಿರ ಹಾಸ್ಯಕ್ಕೆ ಗುರಿಯಾಗುವುದಕ್ಕಿಂತ, ಈ ಅತ್ತೆಯ ಸೊಸೆಯಾಗಿ ಇರುವುದು ವಾಸಿ ಎನಿಸಿತ್ತು. ತಾನು ಮಾಡಿದ ಪೂಜೆ ಪುನಸ್ಕಾರಗಳಿಗೆ ಪ್ರತಿಫಲ ಸಿಗುವ ಕಾಲ ಬಂದಿದೆ. ಗಂಡ ತನ್ನವನೇ ಆಗುವ ಅವಕಾಶ ಒದಗಲಿದೆ, ಎಂದುಕೊಂಡರೂ, ಗಂಡ ಎಂತಹ ಕಷ್ಟಕ್ಕೆ ಸಿಕ್ಕಿಬಿದ್ದಿರಬಹುದು? ಅದರಿಂದ ಹೊರಗೆ ಬರುವನೆ? ಈಗ ಈ ಸಮಸ್ಯೆ ಕಾಡತೊಡಗಿತ್ತು. ಇಷ್ಟಾದರೂ ಗಂಡನ ಎದುರಿಗೆ ನಿಂತು ಮಾತನಾಡುವ ಧೈರ್ಯ ಬರಲೇ ಇಲ್ಲ. ತಾನು ಇದುವರೆಗೂ ತನ್ನ ಗಂಡನ ಮುಖವನ್ನು ಸರಿಯಾಗಿ ನೋಡಿಯೇ ಇಲ್ಲ ಅಂತ ಎಂದುಕೊಂಡಾಗ, ಅವನ ಫೋಟೋ ಎಲ್ಲಾದರೂ ಇದ್ದರೆ ಅದನ್ನು ನೋಡಬೇಕು ಎಂದುಕೊಂಡಳು. ಆದರೆ ಮದುವೆಯಾದ ಹೊಸತರಲ್ಲಿ, ಹೊಸದಂಪತಿಗಳಂತೆ ತಾವು ಜೀವನ ನಡೆಸದಿದ್ದಾಗ, ತಾನು ನಿರಾಶೆಗೊಂಡು, ಫೋಟೋಗಳನ್ನು ಅಟ್ಟದ ಮೇಲೆ ಎಸೆದಿದ್ದು ನೆನಪಿಗೆ ಬಂತು. ಅದನ್ನು ಹುಡುಕಿ ನೋಡುವ ಆಸೆ ಉಂಟಾಗಲಿಲ್ಲ.

ಒಂದೆರಡು ದಿನಗಳ ನಂತರ ಒಂದು ದಿನ ಚಿಕ್ಕಪ್ಪ ಒಂದು ಕರಿಮಣಿ ಸರ, ಹಾಗೂ ಎರಡು ತಾಳಿಗಳನ್ನು ತಂದು ಅವಳ ಕೈಗಿತ್ತರು.

''ಇದೇನಿದು!'' ಕೇಳಿದಳು.

''ಈ ಕರಿಮಣಿ ಸರ ಇರುವವರೆಗೂ ನಿನಗೆ ಸುಖವಿಲ್ಲ. ಅದನ್ನು ತೆಗೆದು ಇದನ್ನು ಹಾಕಿಕೋ..''

ವೃಂದಾ ಬೆಚ್ಚಿದಳು ''ಇದೆಂತಹ ಮಾತನಾಡ್ತಿದೀರಿ.. ನಾನು ಈ ಕೆಲಸ ಮಾಡಲಾರೆ. ಅದು ನನ್ನ ಗಂಡ ನನಗೆ ಶುಭ ಮುಹೂರ್ತದಲ್ಲಿ ಕಟ್ಟಿದ್ದು.''

''ಯಾವ ಶುಭ ಮುಹೂರ್ತ! ಆ ಮುಹೂರ್ತ ನಿನಗೇನು ಸುಖವನ್ನು ಕೊಟ್ಟಿದೆ? ಅದರಿಂದಾಗಿರುವ ಅನ್ಯಾಯವೇ ಹೆಚ್ಚು.''

''ಹಾಗೆಲ್ಲಾ ಹೇಳಬೇಡಿ.. ನ್ಯಾಯ ಅನ್ಯಾಯಗಳ ವಿಷಯ ನನಗೆ ಬೇಕಿಲ್ಲ.''

''ನಿನ್ನ ಒಳ್ಳೇದಕ್ಕೇ ಹೇಳ್ತಿದೀನಿ, ವೃಂದಾ.. ನಾನು ನಿನ್ನ ಕಷ್ಟ ನೋಡಲಾರದೇ ನಾನು ಒಬ್ಬ ಜ್ಯೋತಿಷಿಗಳನ್ನು ಕಂಡು ಮಾತನಾಡಿದೆ. ಅವರದ್ದೇ ಈ ಸಲಹೆ. ನಿನಗೆ ಅವುಗಳ ಮೇಲೆ ನಂಬಿಕೆ ಇದೆ ಅಲ್ಲವೆ!''

''ಹಾಗಾದರೆ ಒಂದು ಮಾತು. ಈ ಕರಿಮಣಿ ಸರವನ್ನು ನನ್ನ ಗಂಡ ಅವರ ಕೈಯಾರೆ ತೊಡಿಸಿದರೆ ಮಾತ್ರ ನಾನು ನಂಬುತ್ತೇನೆ.''

ಇದೇನು ಹುಡುಗಾಟ ಎನಿಸಿದರೂ, ಅದೂ ಸರಿ ಎನಿಸತೊಡಗಿತ್ತು ನಿಧಾನವಾಗಿ. ಇದೇ ಸುಸಮಯ, ಅವನು ಕಟ್ಟಿದ ಈ ತಾಳಿಯನ್ನು ಕಿತ್ತುಹಾಕಿ, ಪಿನಾಕಿಯ ಕೈಯಲ್ಲಿ ಈ ಕರಿಮಣಿ ಸರ ಹಾಕಿಸಿದರೆ, ಅವಳಿಗೆ ನಂಬಿಕೆ ಬರುತ್ತದೆ. ಅವನನ್ನು ಗಂಡನೆಂದು ಒಪ್ಪಿಕೊಳ್ಳುತ್ತಾಳೆ. ಈಗ ಈ ಕೆಲಸಕ್ಕೆ ಪಿನಾಕಿಯನ್ನು ಒಪ್ಪಿಸಬೇಕು. ಅವನು ಒಪ್ಪಬಹುದು. ಆದರೆ ಈ ಕಾರ್ಯವನ್ನು ಮನೆಯಲ್ಲಿ ನಡೆಸುವ ಬದಲು ಯಾವುದಾದರೂ ದೇವಸ್ಥಾನದಲ್ಲಿ

ದೇವರ ಸಮ್ಮುಖದಲ್ಲಿ, ನಾಲ್ಕು ಜನರ ಎದುರಿಗೆ ಮಾಡಿದರೆ ಹೇಗೆ ಎಂದು ಅನಿಸಿದ ತಕ್ಷಣ, ಅವರಿಗೆ ರಾಮನಾಥಪುರದ ಮೀನಾಕ್ಷಿ ದೇವಾಲಯ ನೆನಪಿಗೆ ಬಂತು. ಆದರೆ ಬೇರೆಯೇ ನುಡಿದರು.

''ನಿನ್ನದು ಇದೇನು ಹಠ ಅಂತೀನಿ.. ಮೊದಲೇ ಅವನು ಹಾರಾಡುತ್ತಾನೆ. ನಾನು ಹೇಳಿದಂತೆ ಕೇಳ್ತಾನ?''

''ಕೇಳಿದರೂ ಸರಿ, ಕೇಳದಿದ್ದರೂ ಸರಿ, ನಾನು ಈ ಹೊಸ ಸರವನ್ನು ಅವರೇ ಕೈಯಾರ ತೊಡಿಸುವವರೆಗೂ ಕಾಯ್ತೀನಿ..''

ಹುಚ್ಚು ಹುಡುಗಿ ಎಂದು ಬೈದುಕೊಂಡರು ತಮ್ಮಲ್ಲೇ.. ಅನಂತರ ಪಿನಾಕಿಯೊಡನೆ ವೃಂದಾಳಿಗೆ ತಿಳಿಯದಂತೆ ಪ್ರತ್ಯೇಕವಾಗಿ ಮಾತನಾಡಿದರು.

''ನಿನ್ನ ತಂದೆ ತಾಯಿ ರಾಮನಾಥಪುರಕ್ಕೆ ಹೋಗಿದಾರೆ ಗೊತ್ತೆ?''

''ಹೇಗಿದಾರೆ?'' ಆತುರವಾಗಿ ಕೇಳಿದ.

''ತುಂಬಾ ಕುಂದಿ ಹೋಗಿದಾರೆ, ಆದರೆ ನಿಮ್ಮ ಸೋದರತ್ತೆ ಮನೆಯವರು ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದಾರೆ.''

''ನಾನೆಂತಹ ಪಾಪಿ, ವಿನಾಕಾರಣ ಅವರಿಗೆ ದುಃಖವನ್ನು ಕೊಟ್ಟಿದ್ದೇನೆ. ಒಂದಿಷ್ಟು ಹಣದ ಸಹಾಯ ಮಾಡುವಂತಿದ್ದರೇ.. ಈಗ ನನ್ನ ಹತ್ತಿರ ಹಣವೂ ಇಲ್ಲ.''

''ನೀನು ಯೋಚಿಸಬೇಡ, ನಾನು ಅವರಿಗೆ ಹಣ ಕೊಟ್ಟು ಬಂದಿದೀನಿ.''

''ನಿಮಗೆ ಈ ಕೆಲಸ ಮಾಡೊಕ್ಕೆ ಯಾರು ಹೇಳಿದರು! '' ಕೋಪದಿಂದ ಕೇಳಿದ.

''ಯಾರೇಕೆ ಹೇಳಬೇಕು! ನಾನೇ ಮಾಡಿದೆ! ಅವರುಗಳನ್ನು ನೋಡಿಕೊಂಡು ಬಂದು, ಅವರ ಯೋಗಕ್ಷೇಮದ ಬಗ್ಗೆ ನಿನಗೆ ತಿಳಿಸುತ್ತಿದೀನಲ್ಲ.''

''ಹಾಗಾದರೆ ನನಗೆ ಇದರಿಂದ ಬಿಡುಗಡೆಯೇ ಇಲ್ಲವೆ?''

''ನಿನಗೆ ಇಲ್ಲಿಂದ ಬಿಡುಗಡೆ ಬೇಕು ಅಂತ ಇದ್ದರೆ, ನೀನು ಧಾರಾಳವಾಗಿ ಹೋಗಬಹುದು. ನೀನಾಗಿಯೇ ಹೋಗಿ, ನೀನು ಬದುಕಿರುವುದನ್ನು ಹೇಳಿಕೊಂಡರೆ, ನಿನ್ನ ತಂದೆ ತಾಯಿ ನಂಬಬಹುದು. ಆದರೆ ಬರೀ ಇದಿಷ್ಟಕ್ಕೇ ಮುಗಿಯುವುದಿಲ್ಲ. ನಾನು ನಿನ್ನನ್ನು ಬೆದರಿಸುತ್ತಿಲ್ಲ, ನಾನು ನಿನಗೆ ರಕ್ಷಣೆ ನೀಡಿದ್ದೇನೆ..''

''ಎಲ್ಲಾ ತಿಳಿದೂ ನೀವೇಕೆ ರಕ್ಷಣೆ ನೀಡುತ್ತಿದೀರೋ ನನಗೆ ತಿಳಿಯದು. ಎಷ್ಟು ದಿನಾಂತ ಈ ಅಜ್ಞಾತವಾಸದಲ್ಲಿರಲಿ..?''

''ಈ ಅಜ್ಞಾತವಾಸದಿಂದ ನಾನು ನಿನಗೆ ಬಿಡುಗಡೆ ಕೊಡಿಸ್ತೀನಿ. ಆದರೆ ನೀನು ನಾನು ಹೇಳಿದ ಹಾಗೆ ಕೇಳಬೇಕು..''

''ನನಗೆ ತೊಂದರೆ ಏನಿಲ್ಲ ಅಂದರೆ, ನಾನು ಒಪ್ತೀನಿ..''

"ನೀನು ವೃಂದಾಳನ್ನು ಮದುವೆಯಾಗಬೇಕು.."

"ಇಲ್ಲ, ಇದು ನನ್ನಿಂದ ಸಾಧ್ಯವಿಲ್ಲ."

"ಏಕೆ ಸಾಧ್ಯವಿಲ್ಲ? ನೀನು ಈ ಮನೆಗೆ ಯಾವ ಧೈರ್ಯದಿಂದ ಬಂದೆ? ಬಂದವನು, ಅವಳ ಗಂಡನಲ್ಲವೆಂದು ಏಕೆ ತಿಳಿಸಲಿಲ್ಲ? ರಕ್ಷಣೆಗಾಗಿ ಸುಳ್ಳು ಹೇಳಿ, ಈಗ ತಪ್ಪಿಸಿಕೊಳ್ಳಲು ನೋಡುತ್ತಿದೀಯಲ್ಲ."

"ಆ ಸಮಯದಲ್ಲಿ ನಾನು ಹೆದರಿ, ಕಮಲಿನಿಯ ಮಾತಿಗೆ ಒಪ್ಪಿದೆ. ಆದರೆ ಈಗ ಅದು ತಪ್ಪು ಅಂತ ಅನ್ನಿಸ್ತಿದೆ."

"ನಿನ್ನಿಂದ ಒಂದು ತಪ್ಪು ನಡೆದುಹೋಗಿದೆ ನಿಜ. ಆದರೆ ಈಗ ಈ ತಪ್ಪನ್ನು ಸರಿಪಡಿಸಬೇಕಾದ ಸಮಯ ಒದಗಿದೆ. ಈಗ ಇದು ನಿನ್ನಿಂದ ಮಾತ್ರ ಸಾಧ್ಯ."

"ಆಕೆ ಪತಿವ್ರತೆ, ಸಾಧ್ವಿ.. ನಾನು ಆಕೆಗೆ ಮೋಸ ಮಾಡಲಾರೆ.."

"ಹಾಗಾದರೆ ಈಗಲೇ ಅವಳ ಎದುರಿಗೆ ನಿಂತು, ನಾನು ನಿನ್ನ ಗಂಡನಲ್ಲ ಎಂದು ಹೇಳಿ ಬಾ.."

"ನಾನು ಹೋಗಿ ಹೇಳಲಾರೆ."

"ಹಾಗೂ ಮಾಡಲಾರೆ. ಹೀಗೂ ಮಾಡಲಾರೆ.. ಆದರೆ ನಿನಗೆ ಯಾವ ಸ್ಥಿತಿಯೂ ಇಲ್ಲ ಎನ್ನುವುದನ್ನು ತಿಳಿ. ಇದ್ದರೆ, ಇರುವುದಾದರೆ ಇಲ್ಲಿ ಇವಳ ಗಂಡನಾಗಿ ಇರಬಹುದು. ಆದರೆ ಇಲ್ಲಿಂದ ಹೊರಗೆ ಹೋಗಿ, ನೀನು ಮತ್ತೆ ನಿನ್ನ ತಂದೆ ತಾಯಿಗಳಿಗೆ ಮಗನಾಗಿ ಇರಲಾರೆ.. ಅದರ ಪರಿಣಾಮಗಳೇ ಬೇರೆ. ಇದನ್ನೆಲ್ಲ ನೀನು ಇಲ್ಲಿಗೆ ಬರುವುದಕ್ಕೆ ಮುಂಚೆಯೇ ಯೋಚಿಸಬೇಕಾಗಿತ್ತು."

"ಹೌದು, ಅನರ್ಥವಾಗಿ ಹೋಯ್ತು.. ನಾನು ಹಾಳಾಗಿ ಹೋದೆ."

"ನೀನು ಹಾಳಾಗಿಲ್ಲ, ನಿನಗೆ ಮತ್ತೆ ಹೊಸದಾಗಿ ಬಾಳುವ ಅವಕಾಶವನ್ನು ನಾನಾಗಿಯೇ ಕೊಡುತ್ತಿದ್ದೇನೆ; ನೀನೇಕೆ ಬೇಡ ಎನ್ನುತ್ತೀಯೋ ನನಗೆ ತಿಳಿಯದು."

"ನನಗೆ ಸ್ವಲ್ಪ ಕಾಲಾವಕಾಶ ಕೊಡಿ. ನಾನು ಮೊದಲು ನನ್ನ ತಂದೆ ತಾಯಿಯರನ್ನು ನೋಡಿ ಬರಬೇಕು.."

"ಧಾರಾಳವಾಗಿ ಹೋಗಿ ಬಾ.. ಒಬ್ಬನೇ ಹೋಗುತ್ತೀಯೋ ಹೇಗೆ?"

"ಭೀಮನನ್ನು ಕರೆದುಕೊಂಡು ಹೋಗುತ್ತೇನೆ."

"ಭೀಮ ನಿನ್ನ ಅಂಗರಕ್ಷಕ. ಅಲ್ಲವೆ?"

"ಅವನಿದ್ದರೆ, ವಸ್ತುಸ್ಥಿತಿಯು ನೆನಪಿನಲ್ಲಿರುತ್ತದೆ."

"ಈ ವಿಷಯದಲ್ಲಿ ಭೀಮ ನಿನಗೆ ಏನು ಸಹಾಯ ಮಾಡಿಯಾನು? ನೀನು ದುಡುಕದೇ, ಉದ್ವೇಗಗೊಳ್ಳದೇ ವರ್ತಿಸಿದರೆ ಆಯಿತು. ಆದರೆ ಹೀಗೆ ಹೇಳ್ತೀನಿ ಅಂತ

ಭಾವಿಸಬೇಡ. ವೇಷ ಭೂಷಣಗಳು, ಪಿನಾಕಿಯದು ಆಗಿರದೇ ಭಿನ್ನವಾಗಿದ್ದರೆ ಯಾರಿಗೂ ಯಾವ ಅನುಮಾನವೂ ಬರಲಾರದು.'' ಪಿನಾಕಿ ಏನನ್ನು ಹೇಳಲಿಲ್ಲ.

ಪಿನಾಕಿ, ಭೀಮನೊಡನೆ ಹೋದರೂ, ವಾಪಸ್ಸು ಬರದಿದ್ದರೆ ತಾವು ಏನೂ ಬಲವಂತಮಾಡಲಾಗುವುದಿಲ್ಲ ಎನ್ನುವ ಚಿಂತೆ ಅವರನ್ನು ಕಾಡತೊಡಗಿತು. ಆದರೂ ಆದದ್ದಾಗಲೀ, ದೇವರಿದ್ದಾನೆ, ವೃಂದಾಳ ಹಣೆಯಲ್ಲಿ ಸುಖ ಬರೆದಿದ್ದರೆ, ಅವನು ಖಂಡಿತಾ ವಾಪಸ್ಸು ಬರುತ್ತಾನೆ ಎಂದುಕೊಂಡರು.

ಪಿನಾಕಿ, ಕಮಲಿನಿಗೆ ವಿಷಯ ತಿಳಿಸಿದಾಗ, ಅವಳು ಹೆದರಿದಳು, ಅವನು ಚತುರನಲ್ಲ, ಯಾರಿಗಾದರೂ ಏನಾದರೂ ಅನುಮಾನ ಬಂದು ಸಿಕ್ಕಿಬಿದ್ದರೆ, ತಾನೂ ಸಿಕ್ಕಿ ಬೀಳುವುದು ಖಂಡಿತಾ ಎಂದುಕೊಂಡು, ''ನಾನು ಬರಲೇ'' ಅಂತ ಕೇಳಿದ್ದಳು.

ಅವಳ ಮಾತಿನ ಇಂಗಿತ ಅವನಿಗೆ ಅರ್ಥವಾಗಿತ್ತು. ತನ್ನ ಮೇಲೆ ನಂಬಿಕೆ ಇಲ್ಲ ಎನಿಸಿದಾಗ, ತನ್ನ ಸ್ಥಿತಿಗೆ ಬೇಸರವಾಯಿತು. ಸ್ವತಂತ್ರವೇ ಇಲ್ಲ, ತಾನು ಬರುವುದಾದರೂ ಹೇಗೆ? ತಾನು ಬದುಕಿ ಏನು ಮಾಡಬೇಕು, ಎಂದುಕೊಂಡ.

ಪಿನಾಕಿ, ಭೀಮನೊಡನೆ ಹೊರಟಾಗ, ವೃಂದಾಳಿಗೆ ಅವನು ಹೊರಟಿರುವ ವಿಚಾರ ತಿಳಿಯಿತು. ತನಗೊಂದು ಮಾತು ತಿಳಿಸಲಿಲ್ಲವಲ್ಲ ಎಂದು ಬೇಸರವೆನಿಸಿತ್ತು, ಚಿಕ್ಕಪ್ಪನೇ ಸಮಾಧಾನ ಮಾಡಿದ್ದರು.

''ಹೋಗಿ ಬರಲಿ ಬಿಡು, ತಿಂಗಳಾಯಿತು, ಅವನು ಹೊರಗೆ ಹೋಗಿಲ್ಲ ಅಂತ ನಿನಗೇ ಗೊತ್ತು.. ಬೇಡ ಎಂದರೆ ಬಿಡುವವನಲ್ಲ ಅವನು.. ಹೇಗೂ ಭೀಮ ಜತೆಗೆ ಹೊರಟಿದ್ದಾನಲ್ಲ.''

ಈ ಮುಂಚೆ ಅವನೆಂದೂ, ಮನೆಯ ಕೆಲಸದವರನ್ನು ಜತೆಗೆ ಎಂದೂ ಕರೆದುಕೊಂಡು ಹೊರಟಿರಲಿಲ್ಲ, ಅದು ವಿಚಿತ್ರವೆನಿಸಿತ್ತು. ತನ್ನನ್ನು ಕರೆದಿದ್ದರೇ.. ಎಂದೂ ಸಹ ಅನ್ನಿಸಿತ್ತು ಅವಳ ಮನಸ್ಸನ್ನು ಓದಿಕೊಂಡವರಂತೆ ಚಿಕ್ಕಪ್ಪ ನುಡಿದಿದ್ದರು.

''ಮುಂದೆ, ನಿನ್ನನ್ನು ಹೊರಗೆ ಕರೆದುಕೊಂಡು ಹೋಗುವ ದಿನ ಬಂದರೂ ಬರಬಹುದು..''

ಅದು ಹೇಗೆ ಬಂದೀತು! ಆರು ವರ್ಷದಿಂದ ತನ್ನ ಹತ್ತಿರ ಒಂದು ವಿಶ್ವಾಸದ ಮಾತನ್ನಾಡಿಲ್ಲ ಎಂದು ತನ್ನಲ್ಲೇ ಹೇಳಿಕೊಂಡಳು. ಆದರೂ ಆಸಕ್ತಿಯಿಂದ ಬಸ್ಸಿಗೆಂದು ತಿಂಡಿ, ಹಣ್ಣುಗಳನ್ನು ಕಟ್ಟಿಕೊಟ್ಟಳು. ರೂಮಿನ ಬಾಗಿಲಿನಲ್ಲಿ ಮರೆಯಲ್ಲಿ ನಿಂತು ಅವಳನ್ನು ಒಂದೆರಡು ಸಲ ನೋಡಿದ.

''ಈ ಮನೆಗೆ ಮತ್ತೆ ತಾನು ಬರುತ್ತೇನೆಯೋ ಇಲ್ಲವೋ, ಕೆಲವು ದಿನಗಳು ತನಗೆ ಈ ಮನೆಯಲ್ಲಿ ಆಶ್ರಯ ಸಿಕ್ಕಿದೆ. ಇವಳು ಆದರಣೆಯಿಂದ ತನಗೆ ಬಂದ ತನ್ನ ಯೋಗಕ್ಷೇಮವನ್ನು ನೋಡಿಕೊಂಡಿದ್ದಾಳೆ'' ಯಾವ ಥಳುಕಿನ ಅಲಂಕಾರವಿಲ್ಲದೇ ಸಾದಾ ಸೀದವಾಗಿದ್ದ ಅವಳು

ಗರತಿಯಂತೆ ಕಂಡು ಬಂದಳು ಕಮಲಿನಿಯಂತೆ, ಯಾವ ಪೆಚ್ಚಿನ ಫ್ಯಾಷನ್ ಇಲ್ಲ ಎನ್ನುವುದನ್ನು ಗಮನಿಸಿದ್ದ.

ಮನೆಯಿಂದ ಹೊರ ಹೊರಟಾಗ, ಚಿಕ್ಕಪ್ಪನಾಗಲೀ, ವೃಂದಾಳಾಗಲೀ ಬಾಗಿಲಿನ ತನಕ ಬರಲಿಲ್ಲ, ಇವನೂ ಯಾರಿಗೂ ಹೇಳಲಿಲ್ಲ, ಅವನು ಮುಂದೆ, ಮುಂದೆ, ಅವನ ಹಿಂದೆ ಭೀಮ. ಬಸ್‌ಸ್ಟಾಂಡಿನಲ್ಲಿ ಕಮಲಿನಿ ಇವರಿಗಾಗಿ ಕಾಯುತ್ತಾ ಇದ್ದಳು. ಮೂವರೂ ಹಾಸನದ ಬಸ್ಸನ್ನು ಹತ್ತಿದರು. ಭೀಮ ಜತೆಯಲ್ಲಿದ್ದುದರಿಂದ ಪೆಚ್ಚಿಗೆ ಮಾತನಾಡುವಂತಿರಲಿಲ್ಲ. ಕಿಟಕಿಯ ಬಳಿ ಕುಳಿತ ಭೀಮ ಹೊರಗಿನ ದೃಶ್ಯಗಳನ್ನು ನೋಡುತ್ತಿದ್ದ. ಪಿನಾಕಿ ತನ್ನಲ್ಲೇ ಏನನ್ನೋ ಆಲೋಚಿಸುತ್ತಿದ್ದ.

ಈಗ್ಗೆ ಒಂದೂವರೆ ತಿಂಗಳ ಹಿಂದೆ ತಾನು ಪಿನಾಕಿಯಾಗಿದ್ದೆ. ತನ್ನ ಹತ್ತಿರ ಒಂದು ಆಟೋ ರಿಕ್ಷಾ ಇತ್ತು. ಈಗ ತಾನು ಪಿನಾಕಿಯಲ್ಲ. ನನ್ನ ಹತ್ತಿರ ಟ್ಯಾಕ್ಸಿ ಇಲ್ಲ. ತನ್ನದು ಅಂತ ಹೇಳಿಕೊಳ್ಳುವುದಕ್ಕೆ ಏನೂ ಇಲ್ಲ. ಆ ಮನೆ ತನ್ನದಲ್ಲ. ವೃಂದ ತನ್ನವಳಲ್ಲ. ಆದರೂ ತಾನೇಕೆ ಅಲ್ಲಿದ್ದೇನೆ? ನಾನು ಹುಟ್ಟಿ ಬೆಳೆದ ಮನೆಯಲ್ಲಿ ತಾನೀಗ ಅಪರಿಚಿತನಂತೆ ನಡೆದುಕೊಳ್ಳಬೇಕಾಗಿದೆ. ಅಂತಹ ಪರಿಸ್ಥಿತಿ ಒದಗಿದ್ದು ವಿಷಾದವೆನಿಸಿತ್ತು.

ಏನು ಹೋಗಿ ಏನಾಯ್ತು? ತನ್ನ ಪಾಡಿಗೆ ತಾನು ಇದ್ದವನು. ತನ್ನನ್ನು ವಿಧಿ, ಯಾರೋ ಪರಿಚಯವಿಲ್ಲದವರ ಮನೆಗೆ ತಂದು ಸೇರಿಸಿದೆ.. ಅದನ್ನೆಲ್ಲ ಒಪ್ಪಿಕೊಳ್ಳುವ ಮನಸ್ಸು ನನಗಿಲ್ಲ. ಆದರೆ ಅದನ್ನು ಬಿಟ್ಟರೆ ಬೇರೆ ವಿಧಿಯೇ ಇಲ್ಲ. ಆ ವ್ಯಕ್ತಿ ಸತ್ತು ತನ್ನನ್ನೇಕೆ ಈ ಸ್ಥಿತಿಗೆ ತಂದನೋ..ಈ ವೃಂದಾ ಯಾರು! ಅವಳು ತನಗೇನಾಗಬೇಕು? ಈ ಚಿಕ್ಕಪ್ಪ ಯಾರು? ಅವರ ಮನಸ್ಸಿನಲ್ಲಿ ಏನಿದೆ? ಮೊದಮೊದಲು ತನಗೆ ಕೇಳಿಸುವಂತೆ, ತನ್ನ ಬಗ್ಗೆ ಅವಳ ಹತ್ತಿರ ಮಾತನಾಡುತ್ತಿದ್ದರು. ಆದರೆ ಈಚೆಗೆ, ತಾನು ನಡೆದ ಘಟನೆಯನ್ನೆಲ್ಲ ತಿಳಿಸಿದ ಮೇಲೆ ಸುಮ್ಮನಾಗಿದಾರೆ.. ನನ್ನ ಮಾತಿನ ಮೇಲೆ ಅವರಿಗೆ ವಿಶ್ವಾಸ ಮೂಡಿದೆಯೇನೋ, ಸ್ವಂತ ಅಳಿಯನ ಮೇಲೆ ಇಲ್ಲದ ವಿಶ್ವಾಸ ನನ್ನ ಮೇಲೆ ಮೂಡಿದೆ!

ತಾವುಗಳು ಈ ವಿಷಯ ತಿಳಿಸಿ, ಹದಿನೈದು ದಿನಗಳ ಮೇಲಾಯಿತು. ಆದರೂ ವೃಂದಳಿಗೆ ಅದರ ಬಗ್ಗೆ ಹೇಳಿಲ್ಲ ಅಂತ ಕಾಣಿಸುತ್ತೆ. ಅವಳ ಮುಖದಲ್ಲಿ ದುಃಖ, ಖೇದ ಏನೂ ಕಂಡು ಬರಲಿಲ್ಲ. ಚಿಕ್ಕಪ್ಪನ ಮನಸ್ಸಿನಲ್ಲಿ ಏನಿದೆಯೋ? ನಿನ್ನ ಗಂಡ ಊರಾಚೆ, ಯಾವುದೋ ಬೆಟ್ಟದಲ್ಲಿ ಸತ್ತು ಬಿದ್ದಿದ್ದ ಎಂದು ಅವಳಿಗೆ ತಾನಾಗಿಯೇ ಹೇಳಲು ಇಷ್ಟವಿಲ್ಲವೇನೋ ಬಹಿರಂಗವಾಗಿ, ನನಗೆ ಏನನ್ನು ಹೇಳದಿದ್ದರೂ, ತಾನು ಅಲ್ಲಿ ಅವಳ ಗಂಡನ ಜಾಗದಲ್ಲಿರುವುದನ್ನು ಒಪ್ಪಿಕೊಂಡಿದ್ದಾರೆ.. ನಾನು ಹಾಗೇ ಮುಂದುವರಿಯಲಿ ಅಂತ ಅವರ ಆಸೆಯೇ! ಇದು ಸರಿಯೇ ? ಮುಂದೇನು ?

ಆದರೆ ಎಂದೂ, ನೀನು ಅವಳ ಗಂಡ, ಅವಳೊಡನೆ ಪ್ರೀತಿಯಿಂದ, ವಿಶ್ವಾಸದಿಂದ ಇರು ಎನ್ನುವಂತೆ ಮಾತನಾಡಿಲ್ಲ, ಹಾಗಾದರೆ ಸುಮ್ಮನೇ ಇದೇ ರೀತಿ ಎಷ್ಟು ವರ್ಷಗಳು ನಾನು ಆ ಮನೆಯಲ್ಲಿ ಕಾಲ ಹಾಕಬೇಕು?

ಕಮಲಿನಿ ಹೇಳಿದ್ದಳು, ವಿಷ್ಣುವಿಗೆ ಹೆಂಡತಿಯ ಮೇಲೆ ಪ್ರೀತಿ ಇರಲಿಲ್ಲ. ಅವಳನ್ನು ಹೆಂಡತಿಯಂತೆ ಒಂದು ದಿನವೂ ನಡೆಸಿಕೊಂಡಿಲ್ಲ ಅಂತ. ತಾನೂ ಅವಳ ಗಂಡನಲ್ಲ. ತಾನು ಹೇಗೆ ಇದೇನೋ ಅಲ್ಲಿ, ಅವಳ ಮೇಲೆ ತನಗೆಂದೂ ಆಸೆ ಹುಟ್ಟಿಲ್ಲ. ತಾನು ಅವಳ ಬಳಿಗೆ ಹೋದರೂ ತನ್ನನ್ನು ತಡೆಯುವರ್‍ಯಾರೂ ಇಲ್ಲ , ವೃಂದಳಿಗೆ ಸಂತೋಷವೇ ಆಗಬಹುದು... ಆದರೆ ತಾನು ಅವಳನ್ನು ಬಲಾತ್ಕಾರದಿಂದ ಕೆಡಿಸಿದಂತೆ ಆಗುತ್ತದೆ. ಅದು ತನ್ನ ವ್ಯಕ್ತಿತ್ವಕ್ಕೇ ಅವಮಾನ. ತನ್ನಿಂದ ಅಂತಹ ಅಚಾತುರ್ಯ ನಡೆಯುವುದು ಸಾಧ್ಯವಿಲ್ಲ.. ಛೆ.. ತಾನೇಕೆ ಈ ವಿಷಯವನ್ನು ಯೋಚಿಸುತ್ತಿದೇನೆ ಎಂದೂ ಈ ಆಲೋಚನೆ ತನಗೆ ಬಂದಿರಲಿಲ್ಲ. ಬರುವಾಗ, ಅವಳ ಮುಖ ನೋಡಿದ್ದರಿಂದ ಹಾಗೆನ್ನಿಸಿರಬಹುದೇ.. ಭೀಮನಿಲ್ಲದೇ ಇದ್ದಿದ್ದರೆ, ಕಮಲಿನಿಯ ಹತ್ತಿರ ಮಾತನಾಡಬಹುದಾಗಿತ್ತು ಎನಿಸಿತು.

ಒಂದೂವರೆ ತಿಂಗಳಿನಿಂದ ತಾನು ಆ ಮನೆಯಲ್ಲಿ ಕಳೆದ ದಿನಗಳನ್ನು ನೆನೆಸಿಕೊಂಡ ತಾನು ತಾನಾಗಿಲ್ಲದೇ, ಯಾರೋ ಆಗಿ ಬದುಕುವ ಆ ಜೀವನದಲ್ಲಿ ಯಾವ ಸೊಗಸೂ ಕಂಡು ಬರಲಿಲ್ಲ. ಈ ಅಜ್ಞಾತವಾಸ ನನಗೇಕೆ ?

ತನ್ನ ಸಂಗಾತಿ ಟ್ಯಾಕ್ಸಿ ಇಲ್ಲ , ಮನ ಬಂದಂತೆ ಓಡಿಸಿ, ಕಾಲ ಕಳೆಯುವ ಕೆಲಸವೇ ಇಲ್ಲ. ಪೇಟೆ ಬೀದಿಗಳಲ್ಲಿ ತಿರುಗುವುದು ಇಲ್ಲವಾಗಿದೆ. ಮನೆ, ಊಟ, ತಿಂಡಿ, ಬಿಟ್ಟರೆ ಕೆಲವು ಸಲ ಕಮಲಿನಿಯ ಹತ್ತಿರ ಮಾತು, ಹೋಟೆಲ್ಲಿನಲ್ಲಿ ಸ್ವಲ್ಪ ಹೊತ್ತು ಕಳೆಯುವುದು, ಇದಿಷ್ಟನ್ನು ಬಿಟ್ಟರೆ ಬೇರೇನಿದೆ? ನಾನು ಸೋಮಾರಿಯಲ್ಲ. ಆದರೂ ಈ ತರಹದ ಆರಾಮ ಜೀವನ ನನಗೆ ಸರಿಬರುವುದಿಲ್ಲ. ಕೈ ತುಂಬಾ ಕೆಲಸ ಬೇಕು, ನೆಮ್ಮದಿ ಬೇಕು.

ಊಟ ತಿಂಡಿ ಯಾವುದಕ್ಕೂ ಕೊರತೆ ಇಲ್ಲ. ನನ್ನ ಕೆಲಸಗಳನ್ನೆಲ್ಲ ಭೀಮ ಮಾಡಿಕೊಡುತ್ತಾನೆ. ಕೂತು ತಿಂದರೂ, ನೆಮ್ಮದಿ ಇಲ್ಲ. ಶಾಂತಿ ಇಲ್ಲ, ಯಾರೊಡನೆಯೂ ಹೇಳಿಕೊಳ್ಳುವಂತಿಲ್ಲ. ತನ್ನ ಪಕ್ಕದ ಸೀಟಿನಲ್ಲಿ ಕುಳಿತಿದ್ದ ಕಮಲಿನಿಯ ಕಡೆ ನೋಡಿದ. ಅವಳು ನಿಶ್ಚಿಂತೆಯಿಂದ ಇರುವಂತೆ ತೋರುತ್ತಿತ್ತು. ಅವಳನ್ನೇ ದಿಟ್ಟಿಸಿ ನೋಡಿದ. ಅಗತ್ಯಕ್ಕಿಂತ ಹೆಚ್ಚಿನ ಅಲಂಕಾರದಿಂದ ಅವಳು ಎಲ್ಲರ ಮಧ್ಯದಲ್ಲಿ ಎದ್ದು ಕಾಣುವಂತಿದ್ದಳು. ಅವಳನ್ನು ವೃಂದಾಳಿಗೆ ಹೋಲಿಸಿ ನೋಡಿದ. ಅತಿ ಸಾಧಾರಣ ಹೆಂಗಸಿನಂತೆ ಅಂತೆನಿಸಿತು.

ಇದೇ ಕಾರಣವಿರಬಹುದೆ? ವಿಷ್ಣು ತನ್ನ ಹೆಂಡತಿಯಿಂದ ದೂರವಿದ್ದುದಕ್ಕೆ? ಹೆಂಡತಿಗೂ ಹೀಗೇ ಇರುವಂತೆ ಹೇಳಿ, ತನಗೆ ಹೇಗೆ ಬೇಕೋ ಹಾಗೇ ತಿದ್ದಬಹುದಾಗಿತ್ತು. ಅದು ಬಿಟ್ಟು, ಇವಳನ್ನು ಒಲಿದು, ತನ್ನ ಜೀವನವನ್ನು ಹಾಳು ಮಾಡಿಕೊಂಡ, ನನ್ನ ಜೀವನವನ್ನು ಹಾಳು ಮಾಡಲು ಕಾರಣನಾದ ಎಂದೆನಿಸಿದಾಗ, ಸತ್ತುಹೋದ ಅವನ ಮೇಲೆ ಕೋಪ ಹೆಚ್ಚಿತ್ತು.

ಇಷ್ಟು ದಿನಗಳು, ತಾನು ಬಂದಿಯಂತೆ ಆ ಮನೆಯಲ್ಲಿ ಹೇಗೆ ಕಾಲ ಕಳೆದೆ! ಈಗ ಹೇಗೂ ಹೊರಗೆ ಬಂದಾಗಿದೆ! ಇನ್ನು ತಾನು ಅಲ್ಲಿಗೆ ಹೋಗದಿದ್ದರೆ.. ಅಜ್ಞಾತವಾಗಿರಲು ಆ ಮನೆಯೇ ಆಗಿರಬೇಕೆ! ಎಲ್ಲಿ ಬೇಕಾದರೂ ಇರಬಹುದು. ಆದರೆ ಹೊಸದಾಗಿ ತಾನು

ಮತ್ತೆ ಜೀವನವನ್ನು ಪ್ರಾರಂಭಿಸುವುದು ಹೇಗೆ! ತನ್ನ ಹತ್ತಿರ ಸರ್ಟಿಫಿಕೆಟ್‌ಗಳಿಲ್ಲ. ಹಣವಿಲ್ಲ. ದಿನಗೂಲಿ ಮಾಡಬೇಕು ಅಷ್ಟೆ..ನೋಡೋಣ. ಮೊದಲು ಅಪ್ಪ ಅಮ್ಮನ್ನ ನೋಡಿ, ನಂತರ ಮುಂದಿನ ಆಲೋಚನೆ..ಅಮ್ಮ ತನ್ನನ್ನ ಗುರುತಿಸಿದರೆ.. ಯಾರು ಏನೇ ಹೇಳಲಿ, ಏನೇ ಮಾಡಲಿ, ನಾನು ಅವಳ ಜತೆಯೇ ಇದ್ದುಬಿಡುತ್ತೇನೆ ಎಂದು ತನ್ನಲ್ಲೇ ನಿಶ್ಚಯಿಸಿಕೊಂಡ.

ರಾಮನಾಥಪುರ ಅವನಿಗೆ ಪರಿಚಯದ ಊರು. ಕೆಲವಾರು ವರ್ಷಗಳ ಹಿಂದೆ ಬಂದಿದ್ದ. ಆದರೂ ಇಳಿದೊಡನೆ ಸೀದಾ ತನ್ನ ಸೋದರ ಮಾವನ ಮನೆಗೆ ಹೋಗುವುದು ಸರಿಯಲ್ಲ ಎನಿಸಿತ್ತು. ಜೊತೆಗೆ ಇವರಿಬ್ಬರೂ ಇದ್ದರಲ್ಲ.

ಅಲ್ಲಿಯ ಕೆಲವರ ಮನೆಯಲ್ಲಿ ರಾತ್ರಿಯ ಹೊತ್ತು ತಂಗಲು, ಅನುಕೂಲವಾಗುವಂತೆ ರೂಮುಗಳನ್ನು ಕಟ್ಟಿಸಿದ್ದರು. ಆ ವಿಷಯ ಇವನಿಗೆ ತಿಳಿದಿತ್ತು. ಅಲ್ಲಿ ಹೋಗಿ ವಿಚಾರಿಸಿದ. ರೂಮು ಸಿಕ್ಕಿತ್ತು. ಅವರೇ ಊಟವನ್ನು ಹಾಕಲು ಸಿದ್ಧರಿದ್ದರು.

ಕೈಕಾಲು ಮುಖ ತೊಳೆದು, ಅವರು ಕೊಟ್ಟ ಕಾಫಿ ಕುಡಿದು, ಬಟ್ಟೆ ಬದಲಾಯಿಸಿ, ಇವನು ತನ್ನ ಸೋದರ ಮಾವನ ಮನೆಯ ಕಡೆ ಹೊರಟ. ಅವನು ಬೇಡವೆಂದರೂ ಕಮಲಿನಿ ಹೊರಟಳು. ನನ್ನ ಸ್ವಂತ ವಿಚಾರಕ್ಕೆ ತಲೆ ಹಾಕಲು ಇವಳಿಗೇನು ಅಧಿಕಾರ ಎಂದು ಕೋಪ ಬಂದರೂ ತಡೆದುಕೊಂಡ.

ಸೋದರಮಾವ ಮನೆಯಲ್ಲಿರಲಿಲ್ಲ. ಅವರ ಪತ್ನಿ ಇದ್ದಳು. ಅವಳಿಗೆ ಇವನ ಗುರುತು ಸಿಗಲಿಲ್ಲ. ಮುಖದ ತುಂಬಾ ಬೆಳೆದಿದ್ದ ಗಡ್ಡ ಮೀಸೆ, ಅವನ ರೂಪವನ್ನೇ ಬದಲಾಯಿಸಿತ್ತು. ಯಾರಪ್ಪಾ ನೀವುಗಳು ಎಂದು ಆಕೆ ಕೇಳಿದಾಗ, ಇವನಿಗೆ ಮಾತನಾಡಲು ಕಷ್ಟವೆನಿಸಿತ್ತು. ಕಮಲಿನಿಯೇ ಮಾತನಾಡಿದಳು.

''ನಾವು ಪಿನಾಕಿಯ ತಂದೆ ತಾಯಿಯರನ್ನು ನೋಡಲು ಬಂದಿದ್ದೇವೆ.''

''ಕೂತ್ಕೊಳ್ಳಿ ಹೇಳ್ತೀನಿ'' ಎನ್ನುತ್ತಾ ಆಕೆ ಒಳಗೆ ಹೋದಳು. ಇವನು ಉಸಿರು ಬಿಗಿ ಹಿಡಿದು ಕೂತಿದ್ದ. ತಾಯಿಯನ್ನು ಕಂಡೊಡನೆ ಉದ್ವೇಗದಿಂದ ಪಿನಾಕಿ ಎದ್ದು ನಿಂತಿದ್ದ. ರಾತ್ರಿಯ ಬೆಳಕಿನಲ್ಲಿ ಸರಿಯಾಗಿ ಆಕೆಯ ಮುಖ ಕಾಣದಿದ್ದರೂ, ತಾಯಿಯನ್ನು ಗುರುತಿಸಿದ್ದ. ಬಾಯಿಯ ಮೇಲೆ ಕೈ ಇರಿಸಿ, ಬಲವಾಗಿ ಮುಚ್ಚಿಕೊಂಡಿದ್ದ.

''ಅಮ್ಮ..ಹೇಗಿದೀರಿ?'' ಕಮಲಿನಿಯೇ ಪ್ರಶ್ನಿಸಿದ್ದಳು.

''ಇದೀನಮ್ಮ.. ಹೀಗೇ.. ನಿವ್ಯಾರೋ ತಿಳಿಯಲಿಲ್ಲ..''

''ನಾವು ಪಿನಾಕಿ ವಾಸವಾಗಿದ್ದ ಪಕ್ಕದ ಮನೆಯವರು.. ನಮಗೆ ವಿಷಯ ತಿಳಿದ ದಿನದಿಂದ ನಿಮ್ಮನ್ನು ನೋಡಬೇಕೆಂದು ಕೊಂಡಿದ್ದೆವು..''

''ಏನು ಮಾಡ್ತೀರಿ? ಹಣೇ ಬರಹ. ಕೊನೆಗಾಲದಲ್ಲಿ ಭಗವಂತ ನಮಗೆ ಇಂತಹ ಶಿಕ್ಷೆ ಕೊಟ್ಟುಬಿಟ್ಟ.''

''ಯಜಮಾನರು ಹೇಗಿದಾರೆ?''

''ಈಗ ಪರವಾಗಿಲ್ಲ. ಈ ಊರಿಗೆ ಬಂದಮೇಲೆ ಅವರ ಆರೋಗ್ಯ ಸುಧಾರಿಸಿದೆ. ಯಾರೋ ಪುಣ್ಯಾತ್ಮ, ಪಿನಾಕಿಯ ಲೈಫ್ ಇನ್ಸೂರೆನ್ಸ್ ಹಣ ಎಂದು ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೊಟ್ಟು ಹೋದರು. ಅವನೇ ಇಲ್ಲದಿದ್ದ ಮೇಲೆ, ಅವನ ಹಣ ನಮಗೇಕೆ ಅಂತ ಅನ್ನಿಸಿದರೂ, ನಾವು ಬದುಕಿರುವಷ್ಟು ದಿನ ನಮಗೆ ಹಣ ಬೇಡವೆ? ವಿಧಿ ಇಲ್ಲದೇ ತಗೊಂಡೆವು. ಹೊಟ್ಟೆಯ ಸಂಕಟ ಮುಚ್ಚಿಟ್ಟು ಬದುಕುತ್ತಿದ್ದೇವೆ.''

ಯಾಕೋ ಈ ಮಾತುಗಳನ್ನು ಪಿನಾಕಿಯಿಂದ ಕೇಳಲಾಗಲಿಲ್ಲ. ಎದ್ದು ಹೊರಗೆ ಬಂದು ನಿಂತ.'' ಇವನು ನನ್ನ ತಮ್ಮ.. ಪಿನಾಕಿ ಇವನೂ ಸ್ನೇಹಿತರು..ಅವನನ್ನು ಕಳೆದುಕೊಂಡಿದ್ದು ಇವನಿಗೆ ಬೇಸರವಾಗಿದೆ.'' ಕಮಲಿನಿ ಹೇಳಿದ್ದಳು.

''ಹೊಟ್ಟೇಲಿ ಹುಟ್ಟಿದವನನ್ನು ಕಳೆದುಕೊಂಡು, ನಾವಿನ್ನು ಬದುಕಿದ್ದೇವೆ. ಏನೂ ಮಾಡುವುದು? ವಿಧಿ ಹೀಗೆ ಆಡಿಸುತ್ತೆ.. ಯಾರೂ ಅವನನ್ನು ಮರೆಯಲು ಆಗುವುದಿಲ್ಲ, ಆದರೆ ಅವನ ನೆನಪಿನಲ್ಲೇ ಜೀವನವೂ ಸಾಗುವುದಿಲ್ಲ.''

ತಾಯಿ ವೇದಾಂತಿಯಂತೆ ಈ ಮಾತುಗಳನ್ನಾಡಿದಾಗ ಅವನಿಗೆ ಹೊಟ್ಟೆಯ ಸಂಕಟ ಅತಿಯಾಯಿತು. ತಾಯಿ ಮಗನನ್ನು ನೆನೆಸಿಕೊಂಡು, ಅತಿಯಾಗಿ ಗೋಳಾಡಿದ್ದರೆ ಇವನೂ ತಡೆಯಲಾರದೇ..''ಅಮ್ಮ'' ಎಂದು ಕೂಗಿ ಅವಳನ್ನು ಹಿಡಿದು, ಎಲ್ಲಾ ಹೇಳಿಬಿಡುತ್ತಿದ್ದನೋ ಏನೋ.. ಆದರೆ ಅವನ ತಾಯಿಯ ಮಾತುಗಳು ಅವನನ್ನು ಅಚ್ಚರಿಗೊಳಿಸಿದವು..

ತಾನೇ ಪಿನಾಕಿ ಅಂತ ತಿಳಿದಿದ್ದರೆ, ತಂದೆ ಎದ್ದು ಬರುತ್ತಿದ್ದುದು ಖಂಡಿತಾ ಎಂದುಕೊಂಡ.. ತಾಯಿಯ ಅಂತರಂಗವೇ ಮಗನನ್ನು ಗುರುತಿಸಲಿಲ್ಲವೆಂದ ಮೇಲೆ, ಪೊರೆ ಬಂದ ಕಣ್ಣುಗಳಿಂದ ತಂದೆ ತನ್ನನ್ನೇನು ಗುರುತಿಸಿಯಾರು ಎಂದುಕೊಂಡಾಗ, ಅವನಲ್ಲಿ ವಿಚಿತ್ರ ವೇದನೆಯುಂಟಾಯಿತು. ಅಲ್ಲಿ ನಿಲ್ಲಲು ಮನಸ್ಸಾಗದೇ ನದೀ ತೀರಕ್ಕೆ ಬಂದ. ಹೆಚ್ಚಿಗೆ ಜನ ಸಂಚಾರವಿರಲಿಲ್ಲ. ಅಲ್ಲೇ ಮೆಟ್ಟಿಲ ಮೇಲೆ ಕೂತ.

''ತಾನೆಂತಹ ಪೆದ್ದ.. ತಾನು ಮೂರ್ಖನಾದೆ'' ಎಂತೆನ್ನಿಸಿದರೂ, ಅಮ್ಮ ಹೀಗೇಕೆ ಮಾತನಾಡಿದಳು? ನನ್ನ ಮೇಲೆ ಅವಳಿಗೆ ಪ್ರೀತಿ ಇರಲಿಲ್ಲವೆ! ತಾನು ಕೈಯಾರ ಬೆಳೆಸಿದ ಮಗನ ಮೇಲೆ ವಾತ್ಸಲ್ಯವಿರಲಿಲ್ಲವೆ! ತಮಗಾಗಿ ಅವಳು ಕಷ್ಟಪಡುತ್ತಿದ್ದುದು ಅವನಿಗೆ ಚೆನ್ನಾಗಿ ನೆನಪಿನಲ್ಲಿದೆ. ಮಕ್ಕಳು ತಮ್ಮಂತೆ ಹಳ್ಳಿಯಲ್ಲಿದ್ದುಕೊಂಡು ಕಷ್ಟಪಡಬಾರದು, ಚೆನ್ನಾಗಿ ಓದಿ ವಿದ್ಯಾವಂತರಾಗಿ ಒಳ್ಳೆಯ ನೌಕರಿಗೆ ಸೇರಿ, ಸುಖವಾಗಿರಲಿ ಎಂದು ಆಸೆ ಪಡುತ್ತಿದ್ದಳು. ಮನೆತುಂಬಾ ಮಕ್ಕಳು, ಖರ್ಚು, ತಾಯಿ ತಂದೆಗೆ ಸಾಕು ಸಾಕಾಗಿರಲೇಬೇಕು. ಅದರಂತೇ ಹಿರಿಯವರಿಬ್ಬರೂ ಕೆಲಸಕ್ಕೆ ಸೇರಿ, ಮನೆಯಿಂದಲೂ ದೂರವಾದರು. ಅಕ್ಕಂದಿರಿಬ್ಬರಿಗೂ ಮದುವೆಯಾಗಿತ್ತು. ಅವರೂ ಹೆಚ್ಚಿಗೆ ಬಂದು ಹೋಗಿ ಮಾಡುತ್ತಿರಲಿಲ್ಲ, ನಂತರದವನು, ಹುಟ್ಟಿನಿಂದಲೇ ಪೆಳವನಾಗಿದ್ದ. ತಾಯಿಗೆ ಅವನನ್ನು ನೋಡಿಕೊಳ್ಳುವುದರಲ್ಲೇ ಹೆಚ್ಚಿಗೆ ಸಮಯ ಕಳೆದು ಹೋಗುತ್ತಿತ್ತು. ಅವನ ನಂತರ ಪಿನಾಕಿ. ಇವನಿಗೂ ತಾನು ಓದಿ ಕೆಲಸಕ್ಕೆ

ಸೇರಿ ಪಟ್ಟಣಕ್ಕೆ ಹೋಗಬೇಕೆಂಬ ಆಸೆ. ಅವನ ಸಂಪಾದನೆ ಅವನ ಖರ್ಚಿಗೆ ಸಾಕಾಗುತ್ತಿತ್ತು. ಉಳಿದ ಅಲ್ಪಸ್ವಲ್ಪ ಹಣವನ್ನು ಮಾಲೀಕರ ಕೈಯಲ್ಲಿ ಕೊಟ್ಟಿದ್ದ. ತಂಗಿ ಹೊಲಿಗೆ ಕಲಿತಿದ್ದಳು. ತನಗೊಂದು ಹೊಲಿಗೆಯಂತ್ರ ಬೇಕೆಂದು ಹೇಳಿದ್ದಳು. ಅದನ್ನು ತೆಗೆಸಿಕೊಟ್ಟಿರಲಿಲ್ಲ. ಅವರಿಬ್ಬರೂ ಹೇಗಿದ್ದಾರೋ? ಎಲ್ಲಿದ್ದಾರೋ, ಯಾರನ್ನು ಕೇಳುವುದು ಎಂದುಕೊಂಡ. ತಮ್ಮ ಮನೆಯ ಅಕ್ಕಪಕ್ಕದವರು ಒಳ್ಳೆಯ ಜನ ಅವರುಗಳನ್ನು ನೋಡಿಕೊಂಡಿರಬಹುದು ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡ. ಒಂದು ದಿನವೂ ಅಮ್ಮ ಆ ಮಗನಿಂದ ದೂರವಿದ್ದವಳಲ್ಲ. ಈಗ ಇಲ್ಲಿಗೆ ಹೇಗೆ ಬಂದು ಇದಾಳೆ? ಮಾವನನ್ನು ಕೇಳಿದರೆ ಹೇಗೆ ಎಂದುಕೊಂಡ. ಯಾರೋ, ತನಗೇಕೆ ಕುತೂಹಲ ಎಂದುಕೊಂಡರೇ ಎಂದುಕೊಂಡು ಸುಮ್ಮನಾದ.

ಚೆನ್ನಾಗಿ ಕತ್ತಲಾಗಿತ್ತು. ಕಡೆಯ ಮೆಟ್ಟಿಲ ಮೇಲೆ ಕೂತು, ಕಾಲುಗಳನ್ನು ನೀರಿನೊಳಕ್ಕೆ ಇಳಿದು ಬಿಟ್ಟು ಆಟವಾಡತೊಡಗಿದ. ಹಿಂದೆ ಇಲ್ಲಿಗೆ ಬಂದಿದ್ದಾಗ ಎಷ್ಟೋ ಸಲ, ಹೀಗೆ ಕೂತು ನೀರಿನೊಡನೆ ಚೆಲ್ಲಾಟವಾಡುತ್ತಿದ್ದುದು ನೆನಪಿಗೆ ಬಂತು. ಆಗೆಲ್ಲಾ ಅವನ ಜತೆಯಲ್ಲಿ ಮಾವನ ಮಗಳು ಲಕ್ಷ್ಮಿ ಇರುತ್ತಿದ್ದಳು. ಅವಳನ್ನು ಕೀಟಲೆ ಮಾಡಿ, ಅವಳ ಬಟ್ಟೆಗಳನ್ನು ಒದ್ದೆ ಮಾಡಿದಾಗ, ಅವಳು ಅಳುತ್ತಾ ಮಾತನಾಡದೆ ಇವನ ಮೇಲೆ ಹೇಳುತ್ತಿದ್ದ ಚಾಡಿ ಮಾತುಗಳು ನೆನಪಿಗೆ ಬಂದವು.

ಆ ದಿನಗಳೇ ಚೆನ್ನ. ಯಾರ ಆತಂಕವೂ ಇಲ್ಲದೇ ಹಾಯಾಗಿದ್ದೆವು ಈಗ ಇಲ್ಲಿ ಚೆಲ್ಲಾಟವಾಡುವ ಮನಸ್ಸು ತನಗಿಲ್ಲ. ಜತೆಗೂ ಯಾರಿಲ್ಲ. ಲಕ್ಷ್ಮಿ ಹಾಸನದಲ್ಲಿ ತಾನು ಓದುತ್ತಿದ್ದ ಕಾಲೇಜು ಲೆಕ್ಚರರನ್ನೇ ಪ್ರೀತಿಸಿ ಮದುವೆಯಾದಳಂತೆ ಎಂದು ಅಮ್ಮ ತಿಳಿಸಿದ್ದಳು. ಆಗ ತನಗೇನೂ ಅನ್ನಿಸಿರಲಿಲ್ಲ. ಯಾಕೆಂದರೆ, ತಾವೇನು ಅವಳ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ಅಮ್ಮನ ಮನಸ್ಸಿನಲ್ಲಿ ಏನು ಆಸೆ ಇತ್ತೋ ನಾಲ್ಕಾರು ಸಾರಿ ಅದೇ ಮಾತನ್ನು ಆಡಿದ್ದಳು. ಅವಳು ಮಾಡಿದ್ದು ತಪ್ಪು. ಅಪ್ಪ ಅಮ್ಮ ನಿಂತು ಮದುವೆ ಮಾಡುತ್ತಿರಲಿಲ್ಲವೇ ಅಂತ.

ಅಪ್ಪ ಅಮ್ಮನೇ ನೋಡಿ ಮದುವೆ ಮಾಡಿದರೂ, ಅಕ್ಕಂದಿರು, ಅಣ್ಣಂದಿರು ಎಷ್ಟು ನೆಮ್ಮದಿಯಿಂದ ಇರಬಹುದು ಎಂದು ಚಿಂತಿಸಿದಾಗ ನಗು ಬಂದಿತ್ತು. ತಾನು ಮದುವೆಯನ್ನೇ ಆಗಬಾರದು ಎಂದು ನಿಶ್ಚಯಿಸಿದ್ದ. ತನ್ನ ಜವಾಬ್ದಾರಿ ಹೆಚ್ಚು ಎಂದೆನಿಸಿತ್ತು. ತಿಳುವಳಿಕೆಯೇ ಇಲ್ಲದ ಅಣ್ಣನೊಬ್ಬ. ಮದುವೆಯ ಆಸೆಯನ್ನು ಹೊತ್ತಿರುವ ತಂಗಿ, ವಯಸ್ಸಾದ ತಂದೆ ತಾಯಿಯರನ್ನು ತಾನೇ ನೋಡಿಕೊಳ್ಳಬೇಕು ಎಂದುಕೊಂಡಿದ್ದ.

ಆದರೆ ನಡೆದದ್ದೇ ಬೇರೆ.. ಈಗ ಅವರುಗಳು ತಾನಿಲ್ಲದೆಯೂ ಬದುಕಬಲ್ಲರು ಎನ್ನುವ ನಿಜದ ಅರಿವಾದಾಗ, ಮನಸ್ಸು ಚಿಕ್ಕದಾಗಿತ್ತು, ಅವರುಗಳಿಗೆ ತಾನು ಬೇಡವೆಂದಲ್ಲ.. ತನ್ನ ಕಡೆಯಿಂದ ಸಿಕ್ಕಿರುವ ಇಪ್ಪತ್ತೈದು ಸಾವಿರ ರೂಪಾಯಿಗಳಲ್ಲಿ ಅವರು ಕೆಲವು ದಿನವಾದರೂ ಸುಖವಾಗಿರಬಹುದು.. ಆದರೆ ಅದೇ, ತಾನೀಗ ಹೋಗಿ, ತಾನು

ಬದುಕಿದ್ದೇನೆ ಎಂದರೆ ಏನೇನಾಗಬಹುದು? ಎಂದು ತನಗೆ ತಾನೇ ಪ್ರಶ್ನಿಸಿಕೊಂಡಾಗ ಸರಿಯಾದ ಉತ್ತರ ಸಿಗಲಿಲ್ಲ. ಎಲ್ಲಾ ಗೊಂದಲಮಯ.

ತಣ್ಣನೆಯ ನೀರು ಹಿತವೆನಿಸಿದಾಗ, ನೀರಿಗೆ ಇಳಿದು ಸ್ವಲ್ಪ ದೂರ ಈಜಾಡಿ ಬರಬೇಕೆಂಬ ಬಯಕೆ ಹುಟ್ಟಿತು. ಕತ್ತಲೆಯ ಹೊತ್ತಿನಲ್ಲಿ ನದಿಯಲ್ಲಿ ಇಳಿಯುವುದು ತಪ್ಪು ಯಾರಾದರೂ ಕಂಡರೆ ಚೆನ್ನಾಗಿ ಬೈದಾರು ಎನಿಸಿದರೂ, ಏನೋ ಒಂದು ಆಸೆಯಿಂದ, ಮೇಲಿನ ಬಟ್ಟೆಗಳನ್ನು ಕಳಚಿ, ಮೆಟ್ಟಿಲ ಮೇಲೆ ಸುತ್ತಿಟ್ಟು ನಿಧಾನವಾಗಿ ಇಳಿದು ಮುಂದೆ ಮುಂದೆ ಹೋದ.

ಕತ್ತಲೆಯಲ್ಲಿ ಯಾವ ದಿಕ್ಕಿನಲ್ಲಿ ಈಜುತ್ತಿದ್ದೇನೆ ಎಂದು ಗೊತ್ತಾಗದಿದ್ದರೂ, ಹರಿಯುವ ನೀರು ಎಳೆವ ದಿಕ್ಕಿಗೆ ಸುಲಭವಾಗಿ ಈಜುತ್ತಾ ಈಜುತ್ತಾ ಮುಂದೆ ಹೋದ.

ತಾನು ತುಂಬಾ ದೂರ ಬಂದು ಬಿಟ್ಟಿದ್ದೇನೆ, ಹಿಂದೆ ತಿರುಗಿ ಹೊರಟು ಬಿಡಬೇಕು ಎನ್ನುವಷ್ಟರಲ್ಲಿ ಯಾರೋ ''ಪಿನಾಕಿ, ಪಿನಾಕಿ ಎಂದು ಕರೆದಂತಾಯ್ತು. ಕತ್ತನ್ನು ತಿರುಗಿಸಿ ನೋಡಿದ ಯಾರೂ ಕಾಣಲಿಲ್ಲ. ಸುತ್ತಲಿನ ಕತ್ತಲಿನಲ್ಲಿ ಭಯ ಆವರಿಸಿಕೊಂಡಿತು. ನೀರಿನಲ್ಲಿದ್ದೂ ಬೆವತು ಹೋದ. ಹೃದಯದ ಗತಿ ಹೆಚ್ಚಿದಂತೆ ಅನ್ನಿಸಿತು. ಅಕ್ಕ ಪಕ್ಕ ನೋಡದೇ, ದಿಕ್ಕು ತಪ್ಪಿದವನಂತೆ ಎತ್ತೆತ್ತಲೋ ಈಜಿ ಈಜಿ ಮುಂದೆ ಸರಿದ. ಹಿಂದಿನಿಂದ ಯಾರೋ ''ಪಿನಾಕೀ, ಪಿನಾಕೀ'' ಎಂದು ಕೂಗುತ್ತಿರುವುದು ಕೇಳಿಸುತ್ತಲೇ ಇತ್ತು. ನೀರಿನ ಆಳ ಕಡಿಮೆಯಾದೊಡನೆ, ದಡ ಹತ್ತಿರದಲ್ಲೇ ಇದೆ ಎಂದು ತಿಳಿದ. ಸ್ವಲ್ಪ ಧೈರ್ಯ ಬಂತು. ಹಸಿಯ ಮಣ್ಣಿನ ನೆಲದ ಮೇಲೆ ಕಾಲನ್ನಿಡುತ್ತಾ ದಡಕ್ಕೆ ಬಂದು ತಲುಪಿದ.

ತಾನು ಎಷ್ಟು ದೂರ ಬಂದಿರಬಹುದು ಎಂಬ ಅಳತೆ ಗೊತ್ತಾಗಲಿಲ್ಲ. ನಿರ್ಜನವಾದ ಪ್ರದೇಶ ಅವನ ಭಯವನ್ನು ಕ್ಷಣ ಕ್ಷಣಕ್ಕೂ ಹೆಚ್ಚಿಸಿತ್ತು. ಹಾಗೇ ಕತ್ತಲಿನಲ್ಲೇ ತಡಕಾಡುತ್ತಾ ತೊಡರುತ್ತಾ ಮುಂದೆ ಮುಂದೆ ನಡೆದ.

ಸ್ವಲ್ಪ ದೂರ ಹೋದ ಮೇಲೆ, ಬೆಳಕಿನ ಕಿಡಿ ಕಾಣಿಸಿತು. ಯಾರೋ ಬೀಡಿಯೋ, ಸಿಗರೇಟನ್ನೋ ಸೇದುತ್ತಿರಬಹುದು.. ಎಂದುಕೊಂಡು ಹತ್ತಿರ ಹೋದ.. ಅಲ್ಲಿ ಯಾರೋ ಒಂದಿಬ್ಬರು ಕೂತಿರುವಂತೆ ಕಂಡಿತು. ಮನುಷ್ಯರೇ ಇರಬಹುದು ಎಂದುಕೊಂಡು, ಇನ್ನು ಹತ್ತಿರ ಹೋದ. ಮಲಗಿದ್ದವರು ಎದ್ದು ಕೂತರು. ''ಯಾರದು, ಯಾರದು! ಎಂದರು, ತಮ್ಮ ಬಳಿ ಇದ್ದ ಲಾಟೀನಿನ ಬೆಳಕನ್ನು ದೊಡ್ಡದು ಮಾಡುತ್ತಾ.. ಬೆಳಕನ್ನು ಅವನ ಮುಖದ ಮುಂದೆ ಹಿಡಿದು ಯಾರು ಎಂದರು. ಅರೆ ಬೆತ್ತಲೆಯಲ್ಲಿ ನಿಂತಿರುವ ಅವನನ್ನು ನೋಡಿ ಹೆದರಿಕೆಯೂ ಆಗಿರಬೇಕು.

''ಇಷ್ಟೊತ್ತಲ್ಲಿ ಯಾರಯ್ಯಾ ನೀನು? ಎಲ್ಲಿಂದ ಬಂದೆ?'' ಅವರಲ್ಲೊಬ್ಬ ಧೈರ್ಯ ವಹಿಸಿ ಕೇಳಿದ.

ಇಷ್ಟು ಹೊತ್ನಲ್ಲಿ ನೀರಿಗೆ ಈಜಲು ಇಳಿದಿದ್ದೆ ಎಂದರೆ ಬೈದಾರೆಂದುಕೊಂಡು ಸ್ನಾನಕ್ಕೆ ಇಳಿದಿದ್ದೆ. ದಾರಿ ತಪ್ಪಿ ಹೋಯ್ತು. ಊರು ಯಾವ ಕಡೆ ಇದೆ ಅಂತ ಗೊತ್ತಾಗ್ತಿಲ್ಲ.

"ಯಾವುದು!"

"ರಾಮನಾಥಪುರ.."

"ಶಾನೇ ದೂರ ಬಂದು ಬಿಟ್ಟಿದೀಯ.. ಅದು ಆಚೆದಡದಲ್ಲಿದೆ. ದಡದಲ್ಲೇ ನಡೆದು ಹೋದರೂ ನಾಲ್ಕೈದು ಮೈಲಿ ದೂರ ಆಗುತ್ತೆ. ಈಗ ಹೆಂಗೆ ಹೋಗ್ತೀಯಾ? ನಿನ್ನ ಬಟ್ಟೆಗಳು ಎಲ್ಲಿ?

"ದಡದಲ್ಲಿಟ್ಟಿದ್ದೆ..ಈಗೇನು ಮಾಡಲಿ!"

"ಈಗೇನೂ ಮಾಡೊಕ್ಕೆ ಆಗೊಲ್ಲ ಬೆಳಿಗ್ಗೇನೇ ಹೋಗೋದು ಸೈ.."

"ಆದರೆ.. ನಮ್ಮವರು ಕಾಯ್ತಾ ಇರ್ತಾರೆ ಅಲ್ಲಿ"

"ಯಾರು ಎಲ್ಲಿಯೇ ಕಾದರೂ ಸರಿ. ನದೀಗೆ ಇಳಿಯುವ ಹಂಗಿಲ್ಲ, ಸುತ್ತ ಮುತ್ತ ಕಾಡುಗತ್ತಲೆ.. ಹೆಜ್ಜೆ ಇಡೂ ಹಂಗೇ ಇಲ್ಲ"

"ಬೀಡೀ ಸೇದ್ತೀಯಾ?" ಇನ್ನೊಬ್ಬ ಕೇಳಿದ.

"ಇಲ್ಲ ನಂಗೆ ಅಭ್ಯಾಸವಿಲ್ಲ, ನೀವು ಯಾರು! ಇದೇ ಊರಿನವರಾ!"

"ಹೂಂ ಇದೇ ಹಳ್ಳಿಯವರೇ.. ಮಲಗೂ ಹಂಗಿದ್ರೆ ಇಲ್ಲೇ ಹಂಗೇ ಮಲಕ್ಕೋ ಬೆಳಿಗ್ಗೆ ಎದ್ದು ಹೋಗುವಂತೆ.. ತಮ್ಮ ಹತ್ತಿರವಿದ್ದ ಒಂದು ಗೋಣೀಚೀಲವನ್ನು ಕೊಡವಿ ಹಾಸಿದರು. ಒಬ್ಬ ಧಾರಾಳವಾಗಿ ತಾನು ಹೊದೆದಿದ್ದ ದುಪ್ಪಟೆಯನ್ನು ಕೊಟ್ಟ, "ಚಳಿಯಾಗ್ತೈತೆ...ಅಂಗೀನೂ ಇಲ್ಲ ಹೊದ್ಕೋ.."

ಪಿನಾಕಿ ಅವನು ಕೊಟ್ಟ ದುಪ್ಪಟಿಯನ್ನು ಹೊದ್ದು ಗೋಣೀಚೀಲದ ಮೇಲೆ ಕೂತ. ತನ್ನ ದುರವಸ್ಥೆಗೆ ಜಿಗುತ್ಸೆಯಾಯಿತು. "ಪಾಪಿ ಸಮುದ್ರ ಹೊಕ್ಕರೆ ಮೊಣಕಾಲುದ್ದ ನೀರು ಅಂತಾರೆ..ಹಾಗೇ ನೀರಿನಲ್ಲಿ ತಾನು ಇಳಿದಿದ್ದೂ ತಪ್ಪಾಯಿತೇನೋ ಎನ್ನಿಸಿದಾಗ, ಆ ಕೂಗು..ಯಾರದ್ದಿರಬಹುದು. ಹೆಂಗಸಿನ ಧ್ವನಿ..ಯಾವ ಹೆಂಗಸು, ಈ ನಿಶಿಯಲ್ಲಿ?.."

ಚಿಕ್ಕವಯಸ್ಸಿನಲ್ಲಿ ಮಾವ ಹೇಳುತ್ತಿದ್ದ ಮಾತುಗಳು ನೆನಪಾದವು.

ಕತ್ತಲೆ ಹೊತ್ನಲ್ಲಿ ಮೋಹಿನಿ ತಿರುಗಾಡುತ್ತಿರುತ್ತಾಳೆ..ಒಂಟಿಯಾದ ಗಂಡಸರನ್ನು ಕಂಡರೆ ಕೂಗುತ್ತಾಳಂತೆ.. "ಆಂ" ಎಂದು ಉತ್ತರ ಕೊಟ್ಟರೆ ಸಾಕು, ಹಿಂದಿನಿಂದ ಬಂದು ಹಿಡಿದು ಬಿಡ್ತಾಳಂತೆ.. ಸಧ್ಯ ಆ ಕೂಗಿಗೆ ತಾನು "ಆಂ" ಎನ್ನಲಿಲ್ಲ ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡರೂ, ತನ್ನ ಅನಿಸಿಕೆಗೆ ನಗು ಬಂದಿತ್ತು.

ತಾನು ಅಂತಹ ಕಟ್ಟು ಕತೆಯನ್ನು ನಂಬುವ ವಯಸ್ಸಿನವನಲ್ಲ..ಆದರೂ, ಆ ಕಾಡುಗತ್ತಲೆಯಲ್ಲಿ ತನ್ನನ್ನು ಯಾರು ಕೂಗಿರಬಹುದು! ಅಥವಾ ತನ್ನ ಭ್ರಮೆಯೆ! ತಾನು ಹೆದರಿ ಇಲ್ಲಿಗೆ ಬರಬಾರದಾಗಿತ್ತು.. ಈ ರಾತ್ರಿಯಲ್ಲಿ ಈ ಕಲ್ಲು ಮಂಟಪದಲ್ಲಿ

ಕಳೆಯುವುದೆಂದರೆ..ಅಲ್ಲಿ ಭೀಮ, ಕಮಲಿನಿ ತನಗಾಗಿ ಕಾಯುತ್ತಿರಬಹುದೇ..ಅಲ್ಲಿ ಏನೇನು ನಡೆದಿದೆಯೋ.

ರಾತ್ರಿಯೆಲ್ಲಾ ಹಾಗೇ ಕೂತು ಕಾಲ ಕಳೆದ. ಸ್ವಲ್ಪ ಬೆಳಗಾಗುತ್ತಿದ್ದಂತೆಯೇ ಅವರುಗಳು ಹೇಳಿದರು.. ''ಈಗ ನದೀಲಿ ಈಜಿಕೊಂಡು ಹೋಗು, ಪರವಾಗಿಲ್ಲ, ದಡದ ಮೇಲೆ ಹೋದರೆ ಶಾನೇ ದೂರ ಆಗ್ತದೆ.. ಅಲ್ಲದೇ ಸ್ನಾನಕ್ಕೆ ಎಷ್ಟೋ ಜನ ಇಳಿದಿರ್ತಾರೆ..''

ಪಿನಾಕಿ ಎದ್ದು ಅವರಿಗೆ ಕೈಮುಗಿದು, ಹೊದೆದಿದ್ದ ದುಪ್ಪಟ್ಟಿಯನ್ನು ಬಿಚ್ಚಿಕೊಟ್ಟು ಹತ್ತು ಹೆಜ್ಜೆ ನಡೆದು ನೀರಿಗೆ ಇಳಿದ.. ನದಿಯ ಆಳ ಕಾಲಿಗೆ ಸಿಗುವ ತನಕ ನಡೆದು, ನೀರಿಗೆ ಧುಮುಕುವ ಮೊದಲು ಹಿಂತಿರುಗಿ ನೋಡಿದ.. ಹಿಂದೆ ಕಲ್ಲು ಮಂಟಪವಾಗಲೀ, ಕಂಬಳಿ ಹೊದೆದ ಆ ವ್ಯಕ್ತಿಗಳಾಗಲೀ ಕಾಣಲಿಲ್ಲ. ಮತ್ತೊಮ್ಮೆ ನೋಡಿದ.. ಅಲ್ಲಿ ಕಲ್ಲುಮಂಟಪ ಇದ್ದ ಸೂಚನೆ ಸಹ ಕಾಣಲಿಲ್ಲ. ಮೈಯೆಲ್ಲಾ ನಡುಗಿದಂತಾಯ್ತು. ಭೀತಿ ಆವರಿಸಿಕೊಂಡಿತು. ಮತ್ತೆ ತಿರುಗಿ ನೋಡುವ ಸಾಹಸ ಮಾಡದೇ ವೇಗವಾಗಿ ಈಜಿ ಈ ದಡ ಸೇರಿದ. ಸ್ವಲ್ಪ ದೂರ ನಡೆದ ಮೇಲೆ ಹಿಂದಿನ ರಾತ್ರಿ ತಾನು ಕೂತಿದ್ದ ಮೆಟ್ಟಿಲುಗಳು ಕಂಡವು. ತಾನು ಬಿಚ್ಚಿಟ್ಟಿದ್ದ ಬಟ್ಟೆಗಳು ಸಹ ಅಲ್ಲೇ ಇದ್ದವು. ಹಾಕಿಕೊಳ್ಳುತ್ತಲೇ ಚಪ್ಪಲಿ ಮೆಟ್ಟಿ ತಾನು ಇಳಿದುಕೊಂಡಿದ್ದ ರೂಮಿನ ಬಳಿಗೆ ಓಡಿದ. ಬಾಗಿಲಿನಲ್ಲಿ ನಿಂತು ಒಂದು ಗಳಿಗೆ, ಇದುವರೆಗೂ ತಾನು ಕಂಡದ್ದು ಕನಸೋ ನಿಜವೋ ಎಂದು ಅರಿಯದೇ ಗೊಂದಲ ಕ್ಕೊಳಗಾದ.

ಬಾಗಿಲಿನ ಸದ್ದು ಕೇಳಿ ಕಮಲಿನಿಯೇ ಬಾಗಿಲನ್ನು ತೆಗೆದಳು. ಇವನು ಒಳಗೆ ಹೋಗಿ ದುಸ್ಸೆಂದು ಕುಳಿತ. ಅವನ ಗಾಬರಿಗೊಂಡ ಮುಖ ನೋಡಿ, ಏನಾಗಿರಬಹುದು ಎಂದು ಊಹಿಸಲು ಕಷ್ಟವಾದರೂ, ಬೆದರಿಸುವಂತೆ ಕೇಳಿದಳು.

''ರಾತ್ರಿಯೆಲ್ಲಾ ಎಲ್ಲಿದ್ರಿ? ನಿಮಗೆ ಏನಾಯ್ತು ಅಂತ ತಿಳಿದುಕೊಳ್ಳಬೇಕು! ಹುಡುಕೋಣ ಅಂದರೆ ಕತ್ತಲೆ ಅಲ್ಲದೇ ಅಪರಿಚಿತ ಸ್ಥಳ.

ಪಿನಾಕಿ ಮಾತನಾಡಲಿಲ್ಲ.

''ಏನಾಯ್ತು! ಯಾಕೆ ಹೀಗಿದೀರಿ! ರಾತ್ರಿಯೆಲ್ಲಾ ಭೀಮ ಅತ್ತು ಅತ್ತು ಈಗ ಮಲಗಿದ.

''ಅಳುವುದಕ್ಕೆ ಇವನಿಗೇನಾಯ್ತು ಅಂತ ಅನ್ನಿಸಿದರೂ, ತನಗಾಗಿ ಅಳುವವನು ಇವನಾದರೂ ಇದಾನಲ್ಲ ಎನಿಸಿ ಹೃದಯ ಹೂವಾಯಿತು. ಮಲಗಿದ್ದ ಭೀಮನ ತಲೆ ಸವರಿ ಎಬ್ಬಿಸಿದ. ಭೀಮ ನೋಡು ನಾನು ಬಂದೆ.. ಊರಿಗೆ ಹೊರಡೋಣ ಏಳು..''

ಕಣ್ಣು ಹೊಸಕಿಕೊಂಡು ಭೀಮ ಎದ್ದ ''ಸಧ್ಯ ಬಂದ್ರಾ ಅಣ್ಣ.. ನಿಮಗೇನಾಯ್ತೋ ಅಂತ ಗಾಬರಿ ಆಗಿತ್ತು. ನಿಮಗೇನಾದರೂ ಆಗಿದ್ರೆ ಅಕ್ಕನಿಗೆ ಏನು ಹೇಳಬೇಕಾಗಿತ್ತು!..''

ಪಿನಾಕಿ ಕಮಲಿನಿಯ ಕಡೆ ನೋಡಿದ.

"ಯಾಕೋ ಎಲ್ಲಾ ಅತಿಯಾಯ್ತು ಅಂತ ಅನ್ನಿಸ್ತಿದೆ. ನಾನು ವೃಂದಾಳಿಗೆ ಎಲ್ಲಾ ಹೇಳಿಬಿಡ್ತೀನಿ, ಏನಾದರೂ ಆಗಲಿ."

"ಆಗಲಿ ಹೇಳೋರಂತೆ, ಈಗ ಭೀಮನ ಎದುರಿಗೆ ಯಾವ ಮಾತೂ ಬೇಡ ಎಂದು ಸಂಜ್ಞೆಯಿಂದ ತಿಳಿಸಿದಳು. ಪಿನಾಕಿಯೂ ಭೀಮನ ಪಕ್ಕದಲ್ಲಿ ಉರುಳಿಕೊಂಡ.

ರಾತ್ರಿ ನಡೆದ ಘಟನೆಗಳನ್ನು ಮತ್ತೆ ಮತ್ತೆ ಜ್ಞಾಪಿಸಿಕೊಂಡ. ನಂಬಲಸಾಧ್ಯವಾದ ಸಂಗತಿ.. ಹೌದೋ ಅಲ್ಲವೋ ಅನ್ನುವಂತೆ ತನಗೇ ಅನುಮಾನ ಬರುತ್ತಿದೆ. ಕನಸಲ್ಲ. ಏಕೆಂದರೆ ರಾತ್ರಿ ತಾನು ಇಲ್ಲಿರಲಿಲ್ಲ. ತಾನು ರಾತ್ರಿ ನದಿಗೆ ಇಳಿದಿದ್ದು ನಿಜ. ಏಕೆಂದರೆ ಬೆಳಿಗ್ಗೆ ಈಗ ತಾನೇ ಬಟ್ಟೆ ಧರಿಸಿದ್ದೇನೆ.. ಆದರೆ..ಆದರೆ ರಾತ್ರಿ ತನ್ನನ್ನು ಕೂಗಿದ ಆ ಹೆಂಗಸಿನ ಧ್ವನಿ ಯಾವುದು! ದಡದಲ್ಲಿ ರಾತ್ರಿ ನನಗೆ ಆಶ್ರಯ ಕೊಟ್ಟ ಆ ವ್ಯಕ್ತಿಗಳು ಯಾರು!

ದೆವ್ವವೇ, ಭೂತವೇ, ಮೋಹಿನಿಯೇ ಪಿಶಾಚಿಯೇ, ಏನು ಅಂತ ಹೇಳಲಿ! ಈ ಮಾತನ್ನು ಯಾರು ನಂಬುತ್ತಾರೆ! ಈ ಹಿಂದೆ ಎಂದೂ ಆಗದ ಅನುಭವ ತನಗಿಂದು ಏಕೆ ಆಯಿತು! ನೀರಿನಲ್ಲಿ ತಾನೇನಾದರೂ ಮುಳುಗಿ ಹೋಗಿ, ಯಾವುದಾದರೂ ಬೇರೆ ಲೋಕಕ್ಕೆ ಹೋಗಿದ್ದೆನೆ! ಅಥವಾ ತನ್ನ ಭ್ರಮೆಯೆ!

ಅದೆಲ್ಲಾ ನಡೆಯುವುದಕ್ಕೆ ಮುಂಚೆ ತಾನು ದಡದಲ್ಲಿ ಕುಳಿತು, ತಾಯಿಯ ಬಗ್ಗೆ ಸೋದರ ಮಾವನ ಬಗ್ಗೆ ಲಕ್ಷ್ಮಿಯ ಬಗ್ಗೆ ಚಿಂತಿಸಿದ್ದನ್ನು ನೆನೆಸಿಕೊಂಡ..ತನಗೆ ಆ ಅನುಭವವಾದದ್ದು ನಿಜ..ತಾನೀಗ ಬದುಕಿ ಬಂದಿರುವುದೂ ನಿಜ. ಆದರೆ ಈ ಮಾತನ್ನು ಹೇಳಿದರೆ ಯಾರೂ ನಂಬುವುದಿಲ್ಲ.

ತನಗೇ ಯಾಕೆ ಇಂತಹ ವಿಚಿತ್ರ ಸಂಗತಿಗಳೂ ಎದುರಾಗುತ್ತವೋ.. ಕೆಲವೇ ದಿನಗಳ ಹಿಂದೆ ನಡೆದ, ರೆಸಾರ್ಟ್‌ಬೆಟ್ಟದ ಆ ಘಟನೆಯನ್ನೇ ತನ್ನಿಂದ ಮರೆಯಲಾಗಲಿಲ್ಲ, ಈಗ ಇದು. ಆ ದಿನ ಟ್ಯಾಕ್ಸಿಯಲ್ಲಿ ಕಂಡ ಹುಡುಗಿ ಸತ್ತು ಈ ರೀತಿ ದೆವ್ವವಾಗಿರಬಹುದೆ? ನನ್ನನ್ನೇ ಹಿಂಬಾಲಿಸಿ ಬಂದು, ನನ್ನಿಂದ ಏನಾದರೂ ಸಹಾಯ ಕೇಳುತ್ತಿರಬಹುದೆ? ಬದುಕಿದ್ದ ಆ ಹುಡುಗಿಗೆ ತನ್ನಿಂದ ಸಹಾಯ ಮಾಡಲಾಗಲಿಲ್ಲ, ಆ ಕ್ರೂರಿಗಳು ಆ ಹುಡುಗಿಗೆ ಏನೇನು ಅನ್ಯಾಯ ಮಾಡಿದರೋ? ತಾನೇ ಅಸಹಾಯಕನಾಗಿ ಅಲ್ಲಿ ಬಿದ್ದಿದ್ದೆ, ಆ ಹುಡುಗಿಯನ್ನು ಕೊಂದು ಎಸೆದಿರಬೇಕು.. ಆ ಹುಡುಗಿ ದೆವ್ವವಾಗಿ ಅವರುಗ ಮೇಲೆ ಪ್ರತೀಕಾರ ತೆಗೆದುಕೊಳ್ಳಲು .. ಅವನಿಂದ ಮುಂದೆ ಯೋಚಿಸಲಾಗಲಿಲ್ಲ.

"ಭೀಮ, ಏಳು, ಈಗಲೇ ಊರಿಗೆ ಹೋಗೋಣ.."

ಭೀಮ ಎದ್ದ. ಆ ಮನೆಯಲ್ಲಿಯೇ ಕಾಫಿ ತಿಂಡಿ ಮುಗಿಸಿ, ಬಸ್‌ಸ್ಟಾಂಡಿಗೆ ಬಂದರು. ಹಾಸನಕ್ಕೆ ಹೊರಟು ನಿಂತಿದ್ದ ಬಸ್ಸನ್ನು ಹತ್ತಿದರು. ಬಸ್ಸು ಹೊರಟಾಗ, ಅಮ್ಮನ್ನ ಇನ್ನೊಂದು ಸಾರಿ ನೋಡಬೇಕಾಗಿತ್ತು ಅಂತ ಅನ್ನಿಸಿತ್ತು. ಹಾಗೇ ನೆನ್ನೆ ನಡೆದ ವಿಚಿತ್ರ ಘಟನೆ ಬಗ್ಗೆ ಏನಾದರೂ ವಿಷಯ ಗೊತ್ತಾಗಬಹುದೇನೋ ಎನ್ನುವ ಕುತೂಹಲ.. ಬಸ್ಸು ಮುಂದಿನ ನಿಲ್ದಾಣದಲ್ಲಿ ನಿಂತಾಗ, ಕಮಲಿನಿಯೊಡನೆ ಹೇಳಿದ್ದ "ನೀವು ಇವನನ್ನು ಅವರ ಮನೆ

ತಲುಪಿಸಿ ಬಿಡಿ, ನಾನು ಒಂದೆರಡು ದಿನ ಇಲ್ಲಿದ್ದು ಬರ್ತೀನಿ. ಒಂದು ಮುಖ್ಯವಾದ ಕೆಲಸವಿದೆ. ಹಾಗಂತ ಅವರುಗಳಿಗೆ ಹೇಳಿಬಿಡಿ.

ಕಮಲಿನಿ ಏನಾದರೂ ಹೇಳುವ ಮೊದಲು, ಭೀಮನಿಗೆ ಹೇಳಿದ್ದ.

''ನೀನು ಚಿಂತಿಸಬೇಡ ಭೀಮ, ನಾನು ಆದಷ್ಟು ಬೇಗ ಬರ್ತೀನಿ. ಹಾಗಂತ ನಿನ್ನ ಅಕ್ಕನಿಗೂ ಹೇಳಿಬಿಡು.'' ಬಸ್ಸಿನಿಂದ ಇಳಿದು ತಾನು ಬಂದ ರಸ್ತೆಯಲ್ಲಿ ನಡೆಯತೊಡಗಿದ. ಬಸ್ಸು ಹೊರಟು ಹೋಯಿತು. ಒಂದೆರಡು ಮೈಲಿ ಹಿಂದಕ್ಕೆ ನಡೆದು ತನ್ನ ಸೋದರ ಮಾವ ಕೆಲಸ ಮಾಡುತ್ತಿದ್ದ ಅಂಗಡಿಗೆ ಬಂದ.

'ಮಾವ', ಕರೆದ. ''ಪಿನಾಕಿ'' ಅವರು ಅವನನ್ನು ಗುರುತಿಸಿದ್ದರು.

ನಾನು ಸ್ವಲ್ಪ ಮಾತನಾಡಬೇಕು.. ಸ್ವಲ್ಪ ಬರ್ತೀರಾ..? ಗರಬಡಿದವರಂತೆ ನಿಂತಿದ್ದವರನ್ನು ಅಲುಗಾಡಿಸಿ ನುಡಿದ. ಇಬ್ಬರೂ ಅಂಗಡಿಯ ಬದಿಗೆ ಬಂದು ನಿಂತರು.

''ನಾನು ಪಿನಾಕೀನೇ, ನಡೆದ ವಿಚಾರವೇ ಬೇರೆ. ನಾನು ಎಲ್ಲಾ ಹೇಳಬೇಕು, ನಾನೀಗ ಒಂದು ಫಜೀತಿಗೆ ಸಿಕ್ಕಿ ಬಿದ್ದಿದ್ದೀನಿ.. ನಿಮ್ಮ ಸಲಹೆ ಬೇಕು.''

''ಮನೆಗೆ ಬಾ.. ನಿನ್ನ ತಾಯಿ ತಂದೆಗೂ ಸಂತೋಷವಾಗುತ್ತೆ.. ನೆನ್ನೆ ದಿನ ನಿನ್ನ ಸ್ನೇಹಿತರೊಬ್ಬರು ಬಂದಿದ್ರಂತೆ ನಾನು ಅವರನ್ನು ಭೇಟಿಯಾಗಲೇ ಇಲ್ಲ.''

''ನಾನೇ ಬಂದಿದ್ದು, ಆದರೆ ಅಮ್ಮ ನನ್ನ ಗುರುತು ಹಿಡಿಯಲಿಲ್ಲ ಏಕೆ? ನಿಮಗೆ ಹೇಗೆ ಗುರುತು ಸಿಕ್ಕಿತು!''

''ನನ್ನನ್ನು ನೀನು ಮಾವ ಅಂತ ಅದೇ ವಿಶ್ವಾಸದಿಂದ ಕೂಗಿದೆ..ಆದರೆ ನಿನ್ನ ಅಮ್ಮನ್ನ, ಅಮ್ಮ ಅಂತ ಪ್ರೀತಿಯಿಂದ ಕರೆದಿದ್ದರೆ..? ಯಾಕೋ ಹೆದರಿದ್ದೆ ನೀನು.''

''ಇರಬಹುದು–ನನ್ನ ಜತೆಗೆ ಅವರಿಬ್ಬರೂ ಇದ್ದರು.. ಅಮ್ಮ ಅಪ್ಪನ್ನ ನೋಡಿದೆ. ಆದರೆ ನಾನು ಅಂದುಕೊಂಡಷ್ಟು ದುಃಖ ಅವರಿಗಾಗಿಲ್ಲ, ಕ್ರಮೇಣ ಅವರು ನನ್ನನ್ನ ಮರೆತರೂ ಮರೆಯಬಹುದು, ಇಲ್ಲಿ ಮಾತನಾಡುವುದು ಬೇಡ..''

''ಬಾ ದೇವಸ್ಥಾನದ ಒಳಗೆ ಜಗುಲಿಯ ಮೇಲೆ ಕೂತು ಮಾತನಾಡೋಣ.''

ಇಬ್ಬರೂ ಸ್ವಲ್ಪ ದೂರ ನಡೆದು ದೇವಸ್ಥಾನದ ಹೆಬ್ಬಾಗಿಲನ್ನು ದಾಟಿ ಒಳಗೆ ಬಂದರು. ಇಬ್ಬರೂ ಕುಳಿತರು. ಪಿನಾಕಿ ಮಾತಿಗೆ ಪ್ರಾರಂಭಿಸಿದ.

ಚಾಚೂ ತಪ್ಪದೇ, ಬೆಟ್ಟದಲ್ಲಿ ನಡೆದ ಘಟನೆಯ ಬಗ್ಗೆ ತಿಳಿಸಿದ, ''ನನ್ನೊಂದಿಗೆ ನಡೆದ ವಿಧಿಯ ಈ ನಾಟಕವನ್ನು ನನ್ನ ಹತ್ತಿರದವರಿಗೆ ಯಾರಿಗಾದರೂ ನಾನು ತಿಳಿಸಲೇ ಬೇಕಾಗಿತ್ತು. ನಾನೀಗ ಆಕೆಯ ಮನೆಯಲ್ಲಿ ಬಂದಿಯ ತರಹ ಇದೇನೆ. ನಾನಾಗಿಯೆ ಬಿಟ್ಟು ಬಂದರೆ, ಪೋಲಿಸರಿಗೆ ಅನುಮಾನ ಬರಬಹುದು ಎನ್ನುವ ಹೆದರಿಕೆ. ನಿರಪರಾಧಿಯಾದ ನಾನು, ನಾನಾಗಿಯೇ ಸಿಕ್ಕಿ ಬೀಳಲಾರೆ..ಇನ್ನೊಂದು ನನ್ನನ್ನೇ ನಂಬಿ ಕೂತಿರುವ ಆ

ಹೆಂಗಸು..ಅವಳ ಪತಿಯಲ್ಲದ ನಾನು, ಅವಳೊಡನೆ ಸಂಸಾರ ನಡೆಸಲಾರೆ.. ಆದರೆ ಹಾಗಂತ ಯಾವ ಸಂಬಂಧವೂ ಇಲ್ಲದೇ ಅಲ್ಲಿರಲಾರೆ.. ಅವರ ಚಿಕ್ಕಪ್ಪನ ಮನಸ್ಸಿನಲ್ಲಿ ಏನಿದೆಯೋ, ಅವರೇ ಬಂದು ಇಲ್ಲಿ ಅಪ್ಪನಿಗೆ ಇನ್ಸೂರೆನ್ಸ ಹಣ ಎಂದು ಹೇಳಿ, ಹಣ ಕೊಟ್ಟವರು.

ಅವರ ಮಾವ ಬಾಯಿಬಿಟ್ಟುಕೊಂಡು ಅವನು ಹೇಳಿದ ಕತೆಯನ್ನು ಕೇಳುತ್ತಿದ್ದರು. ''ಇದು ಕಟ್ಟುಕತೆಯಲ್ಲ.. ನನ್ನ ಮಾತನ್ನು ನಂಬಿ.''

''ನಾನೇನೋ ನಂಬ್ತೀನಿ. ಆದರೆ ಎಲ್ಲರೂ ನಂಬಬೇಕಲ್ಲ, ನಿನ್ನ ತಾಯಿಯೇ ನಂಬುತ್ತಾಳೋ ಇಲ್ಲವೋ.. ಅವಳು ನಂಬಿದರೆ ಕಷ್ಟವೇ ಅತ್ತು ಕರೆದು ರಂಪ ಮಾಡಿ ಊರಿಗೆಲ್ಲಾ ತಿಳಿಯುವಂತೆ ಮಾಡುತ್ತಾಳೆ. ಹಾಗಾದರೆ ನಾವುಗಳು ನಿಂತು ದಹನ ಸಂಸ್ಕಾರ ಮಾಡಿದ ಆ ಶವ..ಅದು?''

''ನಂದಲ್ಲ ಮಾವ, ಖಂಡಿತಾ ನಂದಲ್ಲ.''

''ನಮಗ್ಯಾರಿಗೂ ಯಾಕೆ ಆ ಅನುಮಾನ ಬರಲಿಲ್ಲ? ನಮಗೆಲ್ಲ ತಿಳಿಯುವ ಹೊತ್ತಿಗೆ ಎರಡು ದಿನಗಳಾಗಿದ್ದವು. ಪೋಲಿಸರು ಬಂದು ತಿಳಿಸಿದಾಗ ನಿಜವೆಂದೇ ನಂಬಿದೆವು. ನಿನ್ನ ಗ್ಯಾರೇಜ್ ಮಾಲೀಕ ಸಹ, ಆ ಶವವನ್ನು ಗುರುತಿಸಿದ್ದ.''

''ಇಷ್ಟಕ್ಕೆಲ್ಲ ಆ ಕಮಲಿನಿಯೇ ಕಾರಣ.. ಆಕೆಯದೂ ತಪ್ಪಿಲ್ಲ, ತಾನು ಸಿಕ್ಕಿ ಬೀಳಬಾರದು ಎನ್ನುವ ಉದ್ದೇಶದಿಂದ ಹೀಗೆ ಮಾಡಿದಳು.. ಆ ಸತ್ತ ವ್ಯಕ್ತಿ ನನ್ನನ್ನು ಹೋಲುತ್ತಿದ್ದುದೇ ಶಿಕ್ಷೆಯಾಗಿ ಪರಿಣಮಿಸಿದೆ ನನಗೆ.''

''ಆಗೋದೆಲ್ಲ ಒಳ್ಳೇದಕ್ಕೆ ಅಂತಾರೆ.. ಇನ್ನು ಒಂದಿಷ್ಟು ದಿನ ಕಾದು ನೋಡೋಣ.''

''ಇನ್ನೇನು ಕಾದು ನೋಡುವುದು! ಆ ಮನೆಯಲ್ಲಿ ನನ್ನದಲ್ಲದ ಪಾತ್ರವನ್ನು ನಾನು ನಟಿಸಲಾರೆ. ಆದರೆ ಹಾಗಂತ ಬದಲಾಗಿ ಆ ಚಿಕ್ಕಪ್ಪನೊಡನೆ ಹೇಳಲಾರೆ.''

''ಆ ಚಿಕ್ಕಪ್ಪ ಹೇಗೆ? ಒಳ್ಳೆಯವರೋ ಕೆಟ್ಟವರೋ..?

''ಕೆಟ್ಟವರಾಗಿದ್ದರೆ ನನ್ನನ್ನು ಪೋಲಿಸರಿಗೆ ಹಿಡಿದುಕೊಡುತ್ತಿದ್ದರು, ಅವರೂ ಸ್ವಾರ್ಥಿ ಅಂತ ಎನಿಸುತ್ತೆ. ತಮ್ಮ ಲಾಭದ ಬಗ್ಗೆ ಚಿಂತಿಸುತ್ತಾರೆ ಅಂತ ಅನ್ನಿಸುತ್ತೆ.''

''ಆಕೆಗೆ ಎಂದೂ ನಿನ್ನ ಬಗ್ಗೆ ಅನುಮಾನ ಬಂದಿಲ್ಲವೆ?''

''ನಾನೆಂದೂ ಅವಳೆದುರು ನಿಂತು ಮಾತನಾಡಿಯೇ ಇಲ್ಲ, ಕಮಲಿನಿ ಹೇಳುವ ಪ್ರಕಾರ ಅವಳೆಂದೂ ಗಂಡನನ್ನು ಸರಿಯಾಗಿಯೇ ನೋಡಿಲ್ಲ ಅಂತ ಯಾರಿಗೆ ಗೊತ್ತು?''

''ನಿನಗೆ ಅವಳ ಜೊತೆ ಇರಲು ಕಷ್ಟ ಎನಿಸುತ್ತದೆಯೆ!''

''ಹುಂ ನನ್ನದಲ್ಲದ ಆ ಮನೆಯಲ್ಲಿ, ನನ್ನವಳಲ್ಲದ ಅವಳೊಡನೆ ನಾನು ಹೇಗಿರಲಿ! ನನಗೆ ಸಾಧ್ಯವೇ ಇಲ್ಲ''

''ಅವಳು ಎಂದಾದರೂ ನಿನ್ನ ಬಳಿಗೆ ಬಂದಿದಾಳೆಯೇ!''

''ಇಲ್ಲ, ಅವಳೂ ಬಂದಿಲ್ಲ, ನಾನೂ ಹೋಗಿಲ್ಲ, ನನಗೆ ಆ ಆಸೆಯೂ ಇಲ್ಲ'' ತಲೆ ತಗ್ಗಿಸಿ ನುಡಿದ.

''ನೀನು ಆ ಚಿಕ್ಕಪ್ಪನಿಗೆ ಹೆದರುತ್ತೀಯಾ ಅಂತ ಕಾಣಿಸುತ್ತೆ.'' .

''ಹೆದರಿಕೆ ಅಲ್ಲ ಅದೊಂದು ತರಹ ಬಂಧನ.. ನಾನು ಯಾರಿಗೂ ಹೆದರಬೇಕಾಗಿಲ್ಲ, ಆದರೆ ಆ ಸಂಬಂಧ, ಬಂಧನ ನನಗೆ ಅನೈತಿಕವೆನಿಸುತ್ತದೆ. ನಾನು ಭೀಮನಂತೆ ಆ ಮನೆಯ ಆಳಾಗಿ ಇರಬಲ್ಲೆ, ಆದರೆ ಆ ಮನೆಯ ಯಜಮಾನನಾಗಿ ಇರಲಾರೆ, ಅಧಿಕಾರ ಚಲಾಯಿಸ್ಲಾರೆ.''

''ಆ ಬಗ್ಗೆ ಅವಳ ಚಿಕ್ಕಪ್ಪ ಎಂದಾದರೂ ಮಾತನಾಡಿದಾರೆಯೆ!''

''ಇಲ್ಲ. ಎಂದೂ ಆಡಿಲ್ಲ, ಅದೇ ಬಂದಿರುವ ಕುತ್ತು. ನಾನು ನಡೆದ ವಿಷಯವನ್ನೆಲ್ಲ ತಿಳಿಸಿದರೂ ಆತನಿಗೆ ನನ್ನ ಮೇಲೆ ಸಂದೇಹವಿಲ್ಲ, ನಾನು ಮೋಸಗಾರ ಅಂತ ಅನ್ನಿಸಿಲ್ಲ, ಅದೇ ನನಗೆ ಆಶ್ಚರ್ಯ.. ಚಿಕ್ಕಪ್ಪ ಹೇಳಿದ್ದುದನ್ನು ಮರೆ ಮಾಚಿದ.

''ಅವಳ ಗಂಡನಂತೆ ನೀನು ಕೇಡಿಗನಲ್ಲದಿರುವುದೇ ಕಾರಣ. ನಿನ್ನ ಮೇಲೆ ಅವರಿಗೆ ನಂಬಿಕೆ ಬಂದಿದೆ.''

''ನಾನೊಬ್ಬ ಪರಕೀಯ, ನನ್ನನ್ನು ನಂಬಿದಾರಲ್ಲ..''

''ನೀನು ಹೇಳುವ ಹಾಗೆ ಏನೋ ಸ್ವಾರ್ಥತೆ ಇದೆ..''

''ನಾನು ಅದನ್ನು ತಿಳಿದುಕೊಳ್ಳಬೇಕು.. ನಾನಾಗಿಯೇ ಕೇಳಲಾರೆ..''

''ನಾನು ಕೇಳಲೆ !'' ಮಾವ ಉತ್ಸಾಹದಿಂದಕೇಳಿದ.

''ನೀವು ಮಾಡಿದರೆ ನನಗೆ ಸಂತೋಷ, ನಾನು ಆ ಅಜ್ಞಾತವಾಸದಿಂದ ಹೊರಬರಲು ಆಗದಿದ್ದರೂ, ನನಗೆ ಒಂದು ರೀತಿಯ ಸ್ವಾತಂತ್ರ್ಯ ಬೇಕು.. ನನ್ನ ವ್ಯಕ್ತಿತ್ವಕ್ಕೆ ಒಂದು ಬೆಲೆ ಬೇಕು. ನನ್ನ ಇಷ್ಟವೂ ನಡೆಯಬೇಕು.. ಹಾಗಿದ್ದರೆ ಮಾತ್ರ ನಾನು ಅಲ್ಲಿರುತ್ತೀನಿ.. ಇಲ್ಲದಿದ್ದರೆ ನಾನು ಕಾವೇರಿಗೆ ಹಾರಿಕೊಂಡು ಪ್ರಾಣ ಬಿಡುತ್ತೀನಿ ಅಷ್ಟೇ..''

''ಆಗಲಿ, ನಾನು ಬಂದು ಮಾತನಾಡ್ತೀನಿ.. ನಾನು ಮನೆಗೆ ಹೋಗಿ ಹೇಳಿ ಬರ್ತೀನಿ, ನೀನೂ ಬರ್ತೀಯಾ ಹೇಗೆ!''

''ಹುಂ, ಬರ್ತೀನಿ, ರಾತ್ರಿ ಅಮ್ಮನ್ನ ಸರಿಯಾಗಿ ನೋಡಿ ಮಾತನಾಡಲು ಆಗಲಿಲ್ಲ.''

''ಸುಮ್ಮನೆ ನೋಡಿದರೆ ಸಾಕು, ಏನೂ ಮಾತನಾಡಕೂಡದು.''

''ಹುಂ'' ಎಂದ. ಇಬ್ಬರೂ ಮನೆಗೆ ಬಂದರು. ಅವನು ಒಳಗೆ ಬರಲಿಲ್ಲ, ಸೋದರ ಮಾವ, ತಾನೇ ತಟ್ಟೆಯಲ್ಲಿ ಒಂದಿಷ್ಟು ಕಲಿಸಿದ ಹುಳಿಯನ್ನ, ಮೊಸರನ್ನ ತಂದು ಕೊಟ್ಟರು. ರಾತ್ರಿಯೂ ಏನನ್ನು ತಿಂದಿರಲಿಲ್ಲ, ಗಬಗಬನೆ ತಿಂದ.

ಅವರಿಬ್ಬರೂ ಹೊರಟಾಗ, ಮನೆಯವರೆಲ್ಲಾ ಬಾಗಿಲಿನಲ್ಲಿ ನಿಂತಿದ್ದರು. ಒಂದು ಸಲ ಕಣ್ಣು ಹಾಯಿಸಿ ಅವರುಗಳನ್ನು ನೋಡಿದ. ಅವರ ದೃಷ್ಟಿಯಲ್ಲಿ ಏನಾದರೂ ಬದಲಾವಣೆ ಕಾಣುವ ಮೊದಲೇ ಅಲ್ಲಿಂದ ಹೊರಟಿದ್ದ. ಇಬ್ಬರೂ ತಮ್ಮೂರಿನ ಬಸ್ಸನ್ನೇರಿದರು.

ದಾರಿಯಲ್ಲಿ ಜಿಜ್ಞಾಸೆ, ಅದು ನನ್ನ ಮನೆಯೇನಲ್ಲ, ತಾನೇಕೆ ಅಲ್ಲಿಗೆ ಹೋಗಬೇಕು ಎನಿಸಿದರೂ, ಆ ಪರಿಸ್ಥಿತಿ ಒದಗಿರುವುದಕ್ಕೆ ಮರುಗಿದ. ಇವನನ್ನು ಕಂಡೊಡನೆ ಚಿಕ್ಕಪ್ಪನ ಮುಖದಲ್ಲಿ ನಿರಾಳತೆಯ ಗೆರೆಯನ್ನು ಕಂಡು ಹೂವ ನಗು ನಕ್ಕ. ಅಂತೂ ರಾತ್ರಿಯೆಲ್ಲಾ ತನಗಾಗಿ ಕಾಯುತ್ತಿದ್ದರು ಎಂದು ಕಾಣುತ್ತೆ ಎಂದುಕೊಂಡ. ಒಳಬಾಗಿಲಿನಿಂದ ಯಾರೋ ಸರಿದು ಹೋದಂತಾಯ್ತು. ವೃಂದಳೇ ಇರಬೇಕೆಂದು ಊಹಿಸಿದ.

ಚಿಕ್ಕಪ್ಪನಿಗೆ ಹೊಸದಾಗಿ, ತನ್ನ ಸೋದರಮಾವನನ್ನು ಪರಿಚಯಿಸಿ ಕೊಡಬೇಕಾಗಿರಲಿಲ್ಲ. ಅವನು ಎಲ್ಲಾ ಹೇಳಿದ್ದಾನೆಂದು ಅವರ ಮುಖ ನೋಡಿಯೇ ತಿಳಿಯಬಹುದಾಗಿತ್ತು. ಆದರೂ ತಕ್ಷಣಕ್ಕೆ ಯಾವ ಮಾತುಗಳನ್ನು ಆಡಲಿಲ್ಲ. ಉಪಚಾರಗಳೆಲ್ಲ ಮುಗಿದ ಮೇಲೆ, ಆತನನ್ನು ಕರೆದುಕೊಂಡು ಹೊರಹೊರಟರು. ಭೀಮ ಅಕ್ಕನೊಡನೆ ಏನೋ ಹೇಳುತ್ತಿದ್ದುದನ್ನು ಪಿನಾಕಿ ಗಮನಿಸಿದ್ದ ಇವತ್ತು ನಾಳೆಯಲ್ಲಿ ಏನೋ ಒಂದು ಇತ್ಯರ್ಥವಾಗಿ ಹೋಗುತ್ತದೆ. ಏನಾದರೂ ಆಗಿ ಹೋಗಲಿ ಎಂದುಕೊಂಡ.

ದಾರಿಯಲ್ಲಿ ಒಂದು ಮರದ ಕೆಳಗಿದ್ದ ಕಲ್ಲುಬೆಂಚಿನ ಮೇಲೆ ಇಬ್ಬರೂ ಕೂತರು. ಚಿಕ್ಕಪ್ಪನೇ ಮಾತಿಗೆ ಶುರು ಮಾಡಿದರು.

''ನಿಮ್ಮ ಹುಡುಗ ನಿಮಗೆ ಎಲ್ಲಾ ಹೇಳಿರಬಹುದು. ನಾನೆಷ್ಟು ಸ್ವಾರ್ಥಿ ಎಂದುಕೊಂಡಿರಬಹುದು. ಈ ಸ್ವಾರ್ಥತನ ಕೇವಲ ನಮ್ಮ ಹುಡುಗಿಗಾಗಿ, ನೀವು ಅಂದುಕೊಳ್ಳಬಹುದು, ಯಾರಿಗೂ ಗಂಡಂದಿರು ಹೋಗುವುದೇ ಇಲ್ಲವೆ? ಎಂತೆಂತಹ ಪರಿಸ್ಥಿತಿಗಳಲ್ಲಿ ಗಂಡನನ್ನು ಕಳೆದುಕೊಂಡ ಹೆಂಡತಿಯರಿದಾರೆ.. ಬಹುಶಃ ಪಿನಾಕಿ ಈ ಮನೆಗೆ ಬರದಿದ್ದರೆ, ಇಲ್ಲಿಯೂ ಹಾಗೆ, ವೃಂದಾ ಇಷ್ಟು ಹೊತ್ತಿಗೆ ವಿಧವೆ ಎಂದೆನಿಸಿಕೊಳ್ಳುತ್ತಿದ್ದಳು. ಪಿನಾಕಿ ಸುಳ್ಳು ಹೇಳಿ ಈ ಮನೆಗೆ ಬಂದುದು ತಪ್ಪಿರಬಹುದು; ಯಾವುದೋ ಒಂದು ಧರ್ಮಕರ್ಮ ಸಂಯೋಗವಿಲ್ಲದೇ ಈ ಮನೆಗೆ ಬಂದಿರಲಾರ ಎಂದು ನನ್ನೆಣಿಕೆ. ''ಸ್ವಲ್ಪ ಸ್ವಲ್ಪ ಮಾತಿನ ಅರ್ಥ ಸಿಕ್ಕಿತ್ತು'' ಮಾವನಿಗೆ ಮನಸ್ಸಿನಲ್ಲೇ ನಗು ಉಕ್ಕಿತ್ತು.

''ಈ ಹುಡುಗಿ ಆರುವರ್ಷದಿಂದ ಗಂಡನಿಗಾಗಿ ತಪಸ್ಸು ಮಾಡಿದಾಳೆ. ಅವನು ಈ ಮನೆಯಲ್ಲಿ ತನ್ನ ಎದುರಿಗೆ ಇದ್ದರೆ ಸಾಕು ಎಂದು ಹಂಬಲಿಸಿದ್ದಾಳೆ. ಗಂಡ ತನ್ನವನಾಗಲೀ ಎಂದು ಯಾವ ಹೆಂಗಸಿಗೆ ಆಸೆ ಇರುವುದಿಲ್ಲ ? ಒಂದೇ ಒಂದು ದಿನವೂ ಗಂಡನ ಸುಖವನ್ನು ಅನುಭವಿಸದ ಅವಳು, ತನ್ನ ಗಂಡ ಸತ್ತು ಹೋಗಿದಾನೆ ಎಂದು ತಿಳಿದರೆ ಅವಳಿಗೆ ಎಂತಹ ಆಘಾತವಾಗಬಹುದು? ಅವಳು ಮರುಮದುವೆಯಾಗುವುದಕ್ಕೆ ಖಂಡಿತಾ ಒಪ್ಪುವುದಿಲ್ಲ. ತನ್ನ ಅಕ್ಕಂದಿರ ನಡುವೆ ತನಗೆ ಅವಮಾನವಾಗಬಾರದು

ಎಂದುಕೊಂಡು, ಇಷ್ಟು ದಿನಗಳಲ್ಲಿ ಒಂದು ದಿನವೂ ತವರಿಗೆ ಬಂದವಳಲ್ಲ, ಇನ್ನು ಗಂಡನಿಲ್ಲದೇ ಅವಳು ಎಲ್ಲಿಗೂ ಹೋಗುವುದಿಲ್ಲ. ಹಠ ಸ್ವಾಭಿಮಾನದಿಂದ ಗಂಡನನ್ನು ಒಲಿಸಿಕೊಳ್ಳುತ್ತಿದ್ದೇನೆ ಎಂದೇ ತಿಳಿದಿದ್ದಾಳೆ. ನೀವೇ ಹೇಳಿ ಆ ಹುಡುಗಿಯ ಯೋಚನೆ ತಪ್ಪೇ?''

''ನಾನು ಪಿನಾಕಿಯನ್ನು ಬಲವಂತ ಮಾಡುವುದಿಲ್ಲ. ಯಾವುದೋ ಒಂದು ದೈವಪ್ರೇರಣೆ ಇಲ್ಲದೇ ಅವನು ಈ ಮನೆಗೆ ಬಂದು ಇರಲು ಸಾಧ್ಯವಿಲ್ಲ.. ಅವನು ಒಪ್ಪಿದರೆ ಅವನು ಇಲ್ಲಿ ಅವಳ ಪತಿಯಾಗಿ ಇರಬಹುದು. ಎಲ್ಲಾ ಅಧಿಕಾರ, ಸ್ವಾತಂತ್ರ್ಯ ಅವನಿಗಿರುತ್ತದೆ. ಬಲವಂತವೂ ಇಲ್ಲ. ಒಂದು ವೇಳೆ ಅವನು ಒಪ್ಪದಿದ್ದರೆ ನಾನು ಬೇರೆ ಯಾರಿಗೂ ಈ ವಿಷಯವನ್ನು ತಿಳಿಸುವುದಿಲ್ಲ. ನಿರಪರಾಧಿಗಳಿಗೆ ಶಿಕ್ಷೆ ಆಗುವುದು ನನಗೆ ಒಲ್ಲದ ಸಂಗತಿ. ನಿಜ ಹೇಳುವುದಾದರೆ, ನಮ್ಮ ಅಳಿಯ ವಿಷ್ಣು ಯಾವ ಅರ್ಹತೆಯೂ ಇಲ್ಲದ ಕಾಡು ಮೃಗ. ಒಂದು ದಿನವೂ ಹೆಂಡತಿಯನ್ನು ಆದರಿಸಿ ಮಾತನಾಡಿಲ್ಲ. ಕತ್ತೆತ್ತಿ ನೋಡಿಲ್ಲ. ಅವಳು ಅವನಿಗೆ ಬೇಕಿರಲೇ ಇಲ್ಲ. ಹೇಳಿಕೊಳ್ಳುವಂತಹ ಶ್ರೀಮಂತರಲ್ಲದಿದ್ದರೂ, ಎಲ್ಲರಿಗಿಂತ ಅನುಕೂಲವಾಗಿದಾರೆ, ಒಬ್ಬನೇ ಮಗ ಎನ್ನುವ ದುರಾಸೆಯಿಂದ ಮದುವೆ ಮಾಡಿ ಕೆಟ್ಟೆವು. ಆದರೆ ನಿಜವಾದ ಶಿಕ್ಷೆ ಅನುಭವಿಸುತ್ತಿರುವುದು ನಮ್ಮ ವೃಂದಾ, ಬದುಕುವ ಆಸೆ ಅವಳಿಗಿಲ್ಲವೆ! ಸುಖವಾದ ಜೀವನವನ್ನು ಬಯಸುವುದು ತಪ್ಪು ಅಂತೀರಾ!''

ಅವರ ಮಾತಿನಲ್ಲಿ ನಿಜಾಂಶವಿದೆ ಅಂತ ಎನಿಸಿದರೂ, ಅದನ್ನು ಒಪ್ಪಿಕೊಳ್ಳಲು ಮನಸ್ಸು ಹಿಂಜರಿಯುತ್ತಿತ್ತು.. ''ನೋಡಿ ನಾನು ಇಷ್ಟು ಹೇಳಿದೀನಿ. ಇನ್ನು ನಿಮ್ಮಗಳ ಇಷ್ಟ ನಾನು ಅವನಿಗೆ ಎಲ್ಲಾ ಅನುಕೂಲಗಳನ್ನು ಒದಗಿಸಿ ಕೊಡುತ್ತೇನೆ. ಇಷ್ಟವಿಲ್ಲದಿದ್ದರೆ ಅವರುಗಳು ಈ ಊರಿನಲ್ಲಿರುವುದೇ ಬೇಡ.. ಯಾವ ಕೆಲಸ ಕಾರ್ಯವೂ ವಿಷ್ಣುವಿಗಿರಲಿಲ್ಲ. ಪಿನಾಕಿ ಅವನಿಗಿಂತ ಸಾವಿರ ಪಾಲು ಮೇಲು. ನಾಲ್ಕು ಆಟೋರಿಕ್ಷಾಗಳನ್ನು ಇಟ್ಟು ಓಡಿಸಿದರೂ ಸಾಕು..''

''ನೀವು ಹೇಳುವುದು ಸರಿ. ಅವನಿಗೆ ಬದುಕಲು ಅವಕಾಶ ಮಾಡಿಕೊಡುತ್ತಿದೀರಿ. ಆದರೆ ಅವನೂ ಒಂದು ತರಹ.. ತನ್ನದಲ್ಲದ ವಸ್ತುವನ್ನು ಅವನು ಒಪ್ಪಿಕೊಳ್ಳಲು ಹಿಂಜರಿಯುತ್ತಿದ್ದಾನೆ.. ಅಲ್ಲದೇ ತಲೆ ಮರೆಸಿಕೊಳ್ಳಲು, ಎಲ್ಲಾದಕ್ಕೂ ಸಿದ್ಧನಾಗಿದಾನೆ ಎಂದು ಯಾರಾದರೂ ಆಡಿಕೊಂಡರೆ ಅದು ಅವನಿಗೆ ಸಹನೆಯಾಗುವುದಿಲ್ಲ.''

''ಆಡಿಕೊಳ್ಳಲು ಯಾರಿದ್ದಾರೆ! ಪಿನಾಕಿ ಇಲ್ಲಿಗೆ ಹೊಂದಿಕೊಂಡರೆ, ಕಮಲಿನಿಗೆ ಅನುಕೂಲ. ಇದು ಅವಳದ್ದೇ ಉಪಾಯ. ಇನ್ನು ನಾನು, ನೀವು ..ನನ್ನ ಮಗಳಿಗಾಗಿ ನಾನೇ ಈ ಉಪಾಯವನ್ನು ಯೋಚಿಸಿರುವಾಗ ನನ್ನಿಂದ ಯಾವ ಅಪಾಯವೂ ಇಲ್ಲ. ಇನ್ನು ನಿಮ್ಮೊಡನೆ ಪಿನಾಕಿ ಏನೇನು ಹೇಳಿಧಾನೋ ತಿಳಿಯದು. ಬಹುಶಃ ನಿಮ್ಮ ಸಲಹೆ ಕೇಳಿರಬಹುದು.. ಸುಮಾರು ಒಂದು ತಿಂಗಳಿಗಿಂತ ಹೆಚ್ಚು ದಿನಗಳಿಂದ ಇಲ್ಲಿದಾನೆ. ಆದರೆ ಯಾವತ್ತು ಅನೀತಿಯಿಂದ ನಡೆದುಕ್ಕೊಂಡಿಲ್ಲ. ಅವನು ಶೀಲವಂತ ಎನ್ನುವುದಕ್ಕೆ ಇನ್ನು

ಇದಕ್ಕಿಂತ ಉತ್ತಮ ನಿದರ್ಶನ ಬೇಕಿಲ್ಲ. ಹಾಗೂ ವೃಂದಾಳ ಬಗ್ಗೆಯೂ ಅನುಮಾನ ಬೇಡ.. ಅವಳು ಮದುವೆಯಾಗಿಯೂ ಕುಮಾರಿಯಾಗಿಯೇ ಉಳಿದಿದ್ದಾಳೆ.''

''ನನಗೂ ಏನು ಹೇಳಬೇಕು ಅಂತ ತೋಚುತ್ತಿಲ್ಲ. ಇವನಿಂದ ಒಬ್ಬ ಹುಡುಗಿಯ ಬಾಳು ನೇರವಾಗುವುದಾದರೆ, ಅದನ್ನು ನಾನೇಕೆ ತಪ್ಪಿಸಲಿ! ಆದರೆ ನಾನು ಅವನಿಗೆ ಯಾವ ರೀತಿಯಿಂದಲೂ ಬಲವಂತ ಪಡಿಸಲಾರೆ.''

''ಬಲವಂತ ಬೇಡ. ತಪ್ಪೇನಿಲ್ಲ ಎನ್ನುವಂತೆ ತಿಳುವಳಿಕೆ ಹೇಳಿ.. ಅವನು ನಿಮ್ಮ ಮಾತನ್ನು ಅಲ್ಲಗಳೆಯುವುದಿಲ್ಲ ಅಲ್ಲವೆ!''

''ಸರಿ, ಅವನನ್ನು ಕೂರಿಸಿಕೊಂಡು, ಅವನೆದುರೇ ಎಲ್ಲಾ ವಿಷಯವನ್ನು ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದರೆ?''

''ಹೂಂ, ಅದೂ ಸರಿ..''

ಇಬ್ಬರು ಆತ್ಮೀಯ ಸ್ನೇಹಿತರಂತೆ, ಅವರುಗಳು ಮನೆಗೆ ವಾಪಸ್ಸು ಬಂದಾಗ, ಪಿನಾಕಿ ಬೆರಗಾದ.. ಏನೋ ತನ್ನತನವನ್ನು ಕಳೆದುಕೊಂಡ ಅನುಭವವಾಯಿತು. ವೃಂದಾಳನ್ನು ತಾನು ನೋಡಿಲ್ಲ, ಮಾತನಾಡಿಸಿಲ್ಲ.. ಅವಳ ಅನುಮತಿ ಇಲ್ಲದೇ ತಾನು ಅವಳ ಗಂಡನಾಗಲಾರೆ ಎಂದು ಹೊಸ ದಿಸೆಯಲ್ಲಿ ಚಿಂತಿಸಲು ಆರಂಭಿಸಿದ.

ತಾನು ವಿಷ್ಣು ಅಲ್ಲ, ಪಿನಾಕಿ ಎಂದು ಹೇಳಿದರೂ, ಅವಳು ನಂಬುತ್ತಾಳೋ ಇಲ್ಲವೋ.. ಆದರೆ ತಾನು ಒಂದು ಸಲವಾದರೂ, ಅವಳ ಎದುರಿಗೆ ತಾನು ವಿಷ್ಣುವಲ್ಲ ಎಂದು ಹೇಳಿ ಬಿಡಬೇಕು.. ಆದರೆ ಅವಳೊಡನೆ ಮಾತನಾಡುವುದು ಹೇಗೆ? ಮೊದಲು ಈ ಮಾವಂದಿರು ಏನು ನಿರ್ಣಯ ಮಾಡಿಕೊಂಡು ಬಂದಿದಾರೆ ಎಂದು ತಿಳಿದುಕೊಳ್ಳಬೇಕು ಎಂದುಕೊಂಡ, ಮಾವ ಅವನ ರೂಮಿಗೆ ಬಂದರು. ಕೆಳದನಿಯಲ್ಲಿ ಹೇಳಿದರು.

''ಅವರದ್ದು ಬಲವಂತವೇನಿಲ್ಲ, ಆದರೆ ಹಾಗೇ, ನಿನ್ನನ್ನು ಬಿಟ್ಟುಕೊಡಲೂ ಮನಸ್ಸಿಲ್ಲ, ಏನು ಹೇಳಬೇಕು ಅಂತ ನನಗೂ ತೋಚುತ್ತಿಲ್ಲ.''

''ಈ ಮಾತು ಕತೆ, ಈ ಜಿಜ್ಞಾಸೆಗೆ ಒಂದು ಮುಕ್ತಾಯದ ಗೆರೆಯನ್ನು ನಾನೇ ಎಳೆಯಬೇಕಾಗಿದೆ. ಆದರೂ ನನ್ನದೂ ಕೆಲವು ಕಂಡೀಷನ್‌ಗಳಿವೆ.. ನಾನೂ ಮೊದಲು ವೃಂದಾಳ ಹತ್ತಿರ ಮಾತನ್ನಾಡಬೇಕು.''

''ಏನಂತ ಮಾತನಾಡ್ತೀ ? ನಾನು ಪಿನಾಕಿ, ವಿಷ್ಣು ಅಲ್ಲ ಅಂತ ಮಾತ್ರ ಹೇಳು, ಅಷ್ಟು ಸಾಕು.. ಅವಳು ನಿನ್ನ ಮಾತನ್ನು ನಂಬುವುದಿಲ್ಲ.''

''ಅಂದರೆ, ನಿಜವನ್ನು ಹೇಳಬೇಕು.. ಅವಳು ನಂಬಬಾರದು.''

''ಹೌದು.. ಇದು ಶ್ರೀಕೃಷ್ಣ ಧರ್ಮರಾಯನಿಗೆ ಹೇಳಿದ ನೀತಿಯ ತರಹ..''

''ಯಾವ ನೀತಿಯೋ ನನಗೇನು ಗೊತ್ತು..?''

''ಧರ್ಮರಾಯನ ಕೈಯಲ್ಲಿ ನಿಜವನ್ನೇ ಹೇಳಿಸಿದರೂ, ಶ್ರೀಕೃಷ್ಣ ಪಾಂಚಜನ್ಯವನ್ನು ಊದಿ, ಅರ್ಧಸತ್ಯವನ್ನೇ ಮರೆ ಮಾಚಿದ್ದ.. ಆ ನೀತಿ..''

''ಇದು ಯುದ್ಧರಂಗವಲ್ಲ..''

''ಜೀವನದ ಸಂಘರ್ಷಣೆಗಳೂ ಯುದ್ಧದ ತರಹ.. ಬದುಕು ಒಂದು ರಣರಂಗವೇ. ನೀನು ನಿನ್ನ ನೀತಿಗೆ ಅನುಗುಣವಾಗಿ ನಡೆದುಕೋ.. ಅದು ತಪ್ಪೇನಿಲ್ಲ, ಆದರೆ ಅವಳು ಅವಳ ಕರ್ಮಕ್ಕನುಗುಣವಾಗಿ ಅರ್ಥ ಮಾಡಿಕೊಳ್ಳಬೇಕು. ಅದೂ ತಪ್ಪಾಗುವುದಲ್ಲ.''

''ಇದೆಲ್ಲ ಏನು ಮಾತು ಮಾವ?''

''ಕಾನೂನಿಗೆ ಹೆದರಿ ನೀನು ಇಲ್ಲಿ ಅಡಗಿದೀಯೆ.. ನೀನು ನಿಜವನ್ನೇ ಹೇಳಿದರೂ, ಕಾನೂನು ಅದನ್ನ ನಂಬುವುದಿಲ್ಲ, ನಿಜ ಹೇಳಲು ನೀನು ಸಾಕ್ಷಿಯನ್ನು ಸೃಷ್ಟಿಸಲು ಸಾಧ್ಯವಿಲ್ಲ, ನೀನಾಗಿಯೇ ನೀನು ಪಾರಾಗುವುದಾದರೆ ಈ ದಾರಿ ಬಿಟ್ಟು ಬೇರೆ ದಾರಿಯೇ ಇಲ್ಲ, ನಾನು ಇದಿಷ್ಟನ್ನು ಹೇಳಿದ್ದೇನೆ, ನೀನು ಅದೇನೇನು ಮಾತನಾಡ್ತೀಯೋ ಆಡು.. ಅವಳು ಅಡಿಗೆ ಮನೆಯಲ್ಲಿರಬಹುದು..''

''ಅವಳನ್ನು ಇಲ್ಲಿಗೆ ಕಳಿಸಿ.. ಭೀಮನಿಗೆ ಹೇಳಿ ಕಳಿಸಿ, ಕರೀತಾನೆ.''

''ಹುಂ, ಕಳಿಸ್ತೀನಿ, ನಿನ್ನ ಜಾಣತನ ತೋರಿಸಲು ಹೋಗಿ, ನೀನೇ ಕೈಯಾರೆ ಬದುಕನ್ನು ಹಾಳು ಮಾಡಿಕೊಳ್ಳಬೇಡ ಜೋಕೆ, ಎಂದು ಎಚ್ಚರಿಸಿ, ಹೊರಗೆ ಹೋದರು.

ತತ್‌ಕ್ಷಣವೇ ಅವಳು ಬರಬಹುದೆಂದು ಅವನು ಊಹಿಸಿರಲಿಲ್ಲ, ಬಾಗಿಲಿನಲ್ಲಿ ಅವಳನ್ನು ಕಂಡೊಡನೆ ಗಾಬರಿಯಿಂದ ಎದ್ದು ನಿಂತ.

''ಕರೆದ್ರಂತೆ..'' ಅವಳ ಧ್ವನಿಯಲ್ಲಿ ಯಾವ ಭಾವವಿತ್ತೆಂದು ತಿಳಿಯಲಾಗಲಿಲ್ಲ.''

''ನಾನು.. ನಾನು..'' ಎಂದು ತೊದಲಿದ.. ''ವಿಷ್ಣುವಲ್ಲ'' ಎನ್ನುವ ಮಾತು ಒಳಗೇ ಉಳಿಯಿತು. ನನಗೆ ಗೊತ್ತು.. ಕಮಲಿನಿ ಎಲ್ಲಾ ಹೇಳಿದಾರೆ.. ಅವನು ತಟಸ್ಥನಾದ, ಕಮಲಿನಿ ಯಾವಾಗ ಬಂದಿದ್ದಳು! ಅವಳು ಏನು ಹೇಳಿರಬಹುದು. ಎಲ್ಲಾ ತಿಳಿದೂ ಇವಳು ಇಷ್ಟು ಶಾಂತವಾಗಿದಾಳೆಯೆ! ಹಾಗಾದರೆ ನಾನು ಯಾರೆಂದು ತಿಳಿದೂ ಇವಳು ನನ್ನನ್ನು ಪತಿಯೆಂದು ಒಪ್ಪಿಕೊಂಡಿದಾಳೆಯೇ, ಗೊಂದಲದಲ್ಲಿ ಮುಳುಗಿ ಹೋದ.. ಅಲ್ಲಿಗೆ ಮಾತು ಮುಗಿದಿತ್ತು. ಇವನು ಬರೆಯುವ ಮೊದಲೇ, ಅವಳು ಮುಕ್ತಾಯದ ಗೆರೆಯನ್ನು ಎಳೆದಿದ್ದಳು.''

ಧರ್ಮರಾಯನ ''ಅಶ್ವತ್ಥಾಮೋ.. ಹತಃ ಕುಂಜರಃ ಎನ್ನುವಾಗಿನ, ಕುಂಜರದಂತಹ ದೊಡ್ಡ ಸಮಸ್ಯೆಯನ್ನೇ ಅಳಿಸಿ ಹಾಕಿದ್ದಳು.

''ಈಗ ನಾನು ಏನೇ ಹೇಳಿದರೂ ಅದನ್ನು ನಂಬುವುದಿಲ್ಲ, ಕಮಲಿನಿ ಏನು ಹೇಳಿದ್ದಾಳೋ.. ಅವಳ ಮಾತನ್ನು ನಂಬಿದ್ದಾಳೆ. ಅವಳು ಏನು ಹೇಳಿದ್ದಾಳೆ ಎಂದು ಕೇಳುವ ತವಕವಾದರೂ ಪೆಚ್ಚಾಗಿದ್ದವನ ಬಾಯಿಯಿಂದ ಯಾವ ಮಾತುಗಳೂ ಬರಲಿಲ್ಲ. ಒಂದು

ಗಳಿಗೆ ನಿಂತಿದ್ದ ಅವಳು.. ನಾನು ಹೋಗ್ತೀನಿ ಎಂದು ಹೊರಟಾಗ, ''ಒಂದ್ನಿಮಿಷ'' ಎಂದು ಹೇಳಿ ಕರೆದಿದ್ದ. ಅವಳು ಅವನ ಮಾತಿಗಾಗಿ ಕಾದು ನಿಂತಳು. ಅಳೆದೂ ಅಳೆದೂ ಮಾತನಾಡಿದ.

''ನಾನು ನಿನಗೆ ಇದುವರೆಗೂ ತುಂಬಾ ತೊಂದರೆ ಕೊಟ್ಟಿದ್ದರೆ ನನ್ನನ್ನು ಕ್ಷಮಿಸಿಬಿಡು, ನಿನಗಿಷ್ಟವಿಲ್ಲದಿದ್ದರೆ ನಾನು ಇಲ್ಲಿಂದ ಹೊರಟು ಹೋಗ್ತೀನಿ..''

''ನೀವು ಈ ಮನೆಗೆ ಬರಲಿ ಎಂದು ನಾನು ಹಗಲೂ ರಾತ್ರಿ ಹಂಬಲಿಸಿದೀನಿ.. ನಿಮ್ಮ ಬರವಿಗಾಗಿ ಕಾದಿದೀನಿ.. ಈಗ ನೀವು ಹೊರಟು ಹೋದರೆ ನಾನು ಹೇಗಿರಲಿ! ನನಗೆ ತಾನೇ ಬೇರೆ ಯಾರಿದಾರೆ! ನಿಮಗಾದ್ರೆ..''

ಮುಂದೆ ಅವಳು ಹೇಳಲಿಲ್ಲ. ಕಮಲಿನಿಯನ್ನು ಕುರಿತು ಹೇಳಲು ಹೊರಟಿದ್ದಳು ಎಂದು ಅವನೇ ಊಹಿಸಿದ. ಕಮಲಿನಿಗೂ ನನಗೂ ಯಾವ ಸಂಬಂಧವೂ ಇಲ್ಲ ಎಂದು ಹೇಳಲು ಹೊರಟವನು ತಡೆದ, ಎಂಟು ಹತ್ತು ವರ್ಷಗಳಿಂದ ಗಂಡ ಅವಳ ಸಹವಾಸದಲ್ಲಿದ್ದ ಎನ್ನುವುದನ್ನು ಬಲ್ಲ ಇವಳು ಈಗ ತನ್ನ ಮಾತನ್ನು ಖಂಡಿತಾ ನಂಬುವುದಿಲ್ಲವೆಂದು ಬಲ್ಲ.

''ನನ್ನನ್ನು ಕ್ಷಮಿಸಿದೀನಿ ಅಂತ ಹೇಳಿ ಬಿಡು ಸಾಕು..'' ಇವನ ಮಾತಿನ ಅರ್ಥವೇ ಬೇರೆ ಆಗಿತ್ತು. ಆದರೆ ಅವಳು ತಿಳಿದುಕೊಂಡದ್ದೇ ಬೇರೆ.

''ನಾನು ನಿಮ್ಮನ್ನು ಎಂದೋ ಕ್ಷಮಿಸಿದ್ದೇನೆ. ನೀವು ನಿಮ್ಮ ಇಷ್ಟದಂತೆಯೇ ಇರಬಹುದು. ನಾನು ಯಾವ ಮಾತಿಗೂ ಬರುವುದಿಲ್ಲ'' ಮುಂದೆ ಮಾತನಾಡಲಾರದೇ ಅವಳ ಧ್ವನಿ ಗಂಟಲಿನಲ್ಲೇ ಹೂತು ಹೋದಂತಾದಾಗ, ಅವನಿಗೆ ವ್ಯಥೆ ಅನಿಸಿತು.

''ವೃಂದಾ ನೀನೆಷ್ಟು ದೊಡ್ಡವಳು.. ನಾನು ಪಾಪಿ, ನಿನಗೆ ಮೋಸ ಮಾಡಿದ್ದೇನೆ, ದ್ರೋಹ ಮಾಡಿದ್ದೇನೆ.''

''ನಾನು ಅದನ್ನೆಲ್ಲ ಮರೆತುಬಿಟ್ಟಿದೀನಿ. ನೀವೂ ಮರೆತು ಬಿಡಬೇಕು.''

''ಹುಂ, ಕೆಲವನ್ನೆಲ್ಲಾ ಬಲವಂತವಾಗಿ ಮರೆಯಲೇ ಬೇಕಾಗುತ್ತದೆ. ನನ್ನ ಹಳೆಯ ಜೀವನವನ್ನು ಮುಚ್ಚಿಟ್ಟು ಹೊಸ ಜೀವನವನ್ನು ಪ್ರಾರಂಭಿಸಬೇಕಾದರೆ, ಕೆಲವನ್ನು ಮರೆಯಲೇ ಬೇಕಾಗುತ್ತದೆ. ನಾನು ನಿನ್ನ ಗಂಡ ಎನ್ನುವುದನ್ನು ಮರೆತು ಬಿಡು..''

''ಅಂದರೆ.. ನಿಮ್ಮನ್ನು ಮರೆತು, ನಾನು ಸಾಧಿಸುವುದಾದರೂ ಏನು!''

''ಇಂದಿನಿಂದ ನಾನು ನಿನ್ನ ಹೊಸ ಗಂಡ.. ಆ ಹಳೆಯ ತಾಳಿಯನ್ನು ಕಿತ್ತೆಸೆದು ಬಿಡು. ನಾನು ನಿನಗೆ ಹೊಸ ತಾಳಿಯನ್ನು ಕಟ್ಟುತ್ತೇನೆ.'' ಮಾತುಗಳನ್ನು ತಿದ್ದಿ ಆಡಿದ.

ಅವನ ಮಾತಿನಿಂದ ಅವಳಿಗೆ ಗಾಬರಿಯಾಗಿರಬೇಕು, ಕೈನಿಂದ ಕರಮಣಿಸರವನ್ನು ಬಲವಾಗಿ ಹಿಡಿದುಕೊಂಡಳು.

"ಏನು ಹೇಳ್ತಿದ್ದೀರಿ ನೀವು? ಎಲ್ಲರ ಸಮ್ಮುಖದಲ್ಲಿ ಶುಭ ಮುಹೂರ್ತದಲ್ಲಿ ಕಟ್ಟಿದ ತಾಳಿಯನ್ನು ಕಿತ್ತೆಸೆಯಲು ಹೇಳ್ತಿದ್ದೀರಾ.."

"ಯಾವ ಶುಭ ಮುಹೂರ್ತ..? ಯಾವ ಶುಭ ಮುಹೂರ್ತದಲ್ಲಿ ನಾನು ನಿನಗೆ ತಾಳಿ ಕಟ್ಟಿದೆ? ಅದನ್ನು ಶುಭ ಎಂದು ಹೇಳ್ತೀಯ! ಅದು ನಿನಗೆ ಏನು ಸುಖವನ್ನು ನೀಡಿದೆ! ಯಾವ ನೆಮ್ಮದಿಯನ್ನು ಕೊಟ್ಟಿದೆ! ಅಂದಿನಿಂದ ಇಂದಿನವರೆಗೂ, ನೀನು ಗಂಡನಿದ್ದೂ ವಿಧವೆಯಂತೆ ಬಾಳನ್ನು ಬಾಳಲಿಲ್ಲವೆ? ಆ ತಾಳಿಯಿಂದ ನಿನಗೇನೂ ಒಳ್ಳೆಯದಾಗಿಲ್ಲ. ಮೊದಲು ಅದನ್ನು ತೆಗೆದು ಬಿಸಾಡು.. ನಿನಗೆ ಖಂಡಿತಾ ಒಳ್ಳೆಯದಾಗುತ್ತೆ. "ಚಿಕ್ಕಪ್ಪನೂ ಅದೇ ಮಾತನ್ನು ಆಡಿದ್ದು ನೆನಪಾಯಿತು. ಎಲ್ಲರ ತಲೆ ಕೆಟ್ಟಿದೆ ಎಂದೇ ಅವಳು ಭಾವಿಸಿರಬೇಕು.. "ಚಿಕ್ಕಪ್ಪಾ" ಎಂದು ಕೂಗಿದಳು. ಅವರು ಬಂದೊಡನೆ ಏನನ್ನು ಹೇಳದೇ ಅಳತೊಡಗಿದಳು.

ಚಿಕ್ಕಪ್ಪನಿಗೂ, ಅವನ ಸೋದರಮಾವನಿಗೂ ಹೆದರಿಕೆ ಆಗಿತ್ತು. ಅವನು ಏನೇನು ಆಡಿಬಿಟ್ಟು ಅವಳಿಗೆ ಆಘಾತವನ್ನುಂಟು ಮಾಡಿದನೋ ಎಂದುಕೊಂಡು ಅವನ ಕಡೆ ನೋಡಿದರು. ಅವನ ಮುಖದಲ್ಲಿ ಯಾವ ವ್ಯಥೆಯೂ ಕಂಡು ಬರಲಿಲ್ಲ, ನಿಶ್ಚಿಂತೆಯಿಂದ ಕೂತವನನ್ನು ಕಂಡು ಇಬ್ಬರಿಗೂ ಏನೋ ಅನುಮಾನ.. ಆದರೂ ಇಬ್ಬರೂ ಏನು ನಡೆಯಿತೆಂದು ಕೇಳಲಿಲ್ಲ. ಚಿಕ್ಕಪ್ಪ ಅವಳನ್ನು ಕರೆದುಕೊಂಡು ಹೊರಗೆ ಹೊರಟು ಹೋದರು.

ತಾನು ಅವಳೊಡನೆ ಆಡಿದ ಮಾತನ್ನು ಸೋದರ ಮಾವನಿಗೆ ಹೇಳಿದ. ಅದು ವಿಚಿತ್ರವಾಗಿ ತೋರಿಬಂದರೂ, ಸರಿ ಎಂದೆನಿಸಿತ್ತು. ಆನಂತರ ಅವನು ಹೇಳಿದ ಮಾತುಗಳನ್ನು ಚಿಕ್ಕಪ್ಪನೊಡನೆ ಹೇಳಿದರು. ಅವರಿಗೆ ಜ್ಯೋತಿಷಿ ಹೇಳಿದ ಮಾತುಗಳು ಮತ್ತೆ ನೆನಪಿಗೆ ಬಂದವು.

ತಾವು ಇತ್ತೀಚೆಗೆ ಜ್ಯೋತಿಷಿಯನ್ನು ಭೇಟಿಯಾಗಿದ್ದ ವಿಷಯವನ್ನು ತಿಳಿಸಿದರು.

ಆ ದಿನವೇ ಅವರು, ಅವಳಿಗೆ ವಿಧವೆಯ ಯೋಗವಿದೆ, ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ತಿಳಿಸಿದ್ದರು. ಆ ವಿಷಯ ತಿಳಿಸುವುದಕ್ಕೆ ಮುಂಚೆಯೇ ಪಿನಾಕಿ ಈ ಮನೆಗೆ ಬಂದು ಸೇರಿದ್ದ. ವಿಷ್ಣುವನ್ನು ಹೋಲುತ್ತಿದ್ದರೂ, ಅವನು ವಿಷ್ಣುವಲ್ಲ ಅನ್ನುವ ಅನುಮಾನ ನನಗೆ ಬಂದಿತ್ತು. ಈಗ ಇವನು ಹೇಳುವ ಮಾತಿನಲ್ಲೂ ಅರ್ಥವಿದೆ. ಅವನು ಶುಭ ಮುಹೂರ್ತದಲ್ಲಿ ತಾಳಿಯನ್ನು ಕಟ್ಟಿರಲಿಲ್ಲ. ಅವಳು ಯಾವ ರೀತಿಯಲ್ಲೂ ಸುಖವಾಗಿರಲಿಲ್ಲ. ಗಂಡನಿದ್ದೂ ವಿಧವೆಯಂತೆ ಬಾಳಿದ್ದು ನಿಜ. ಈಗ ಅವನೇ ಇಲ್ಲವಾಗಿದಾನೆ. ಅವಳು, ಈಗ ಆ ತಾಳಿಯನ್ನು ತೆಗೆಯಬೇಕಾದದ್ದು ಸಹಜವೇ.. ಅದನ್ನು ತೆಗೆದು ಹಾಕಿದರೆ ಅವಳ ಬಾಳು ಸುಗಮವಾಗುತ್ತದೆ ಅಂತ ನನಗೂ ಅನ್ನಿಸುತ್ತೆ. ಈ ಮುಂಚೆಯೇ, ನನಗೆ ಈ ಆಲೋಚನೆ ಬಂದಿತ್ತು. ನಾನು ಹೊಸದಾಗಿ ಮಾಡಿಸಿದ್ದ ಮಾಂಗಲ್ಯ ಸರವನ್ನು ತಂದಿದ್ದೆ. "ತಾನು ಹೇಳಿದ್ದೆ ಎಂದು ಹೇಳಲಿಲ್ಲ. ಅಷ್ಟರಲ್ಲಿ ಭೀಮ ಬಂದು ಕರೆದಿದ್ದ. ಮಾತನ್ನು ನಿಲ್ಲಿಸಿ ಅವನ ಕಡೆ ನೋಡಿದರು.

''ಅಡಿಗೆಯಾಗಿದೆಯಂತೆ. ಅಕ್ಕಾ ಹೇಳಿದರು. ಎಲ್ಲರೂ ಊಟಕ್ಕೆ ಬರಬೇಕಂತೆ, ಇಬ್ಬರೂ ಮುಖ ಮುಖ ನೋಡಿಕೊಂಡು, ಊಟಕ್ಕೆ ಎದ್ದರು.. ಎಷ್ಟೋ ದಿನಗಳ ನಂತರ ಊಟದ ಮನೆಯಲ್ಲಿ ಸಾಲಾಗಿ ಎಲೆಗಳನ್ನು ಹಾಕಿ, ಚಾಪೆಗಳನ್ನು ಹಾಸಿದ್ದಳು.

ಅವಳು ಪಾಯಸವನ್ನು ಬಡಿಸಿದಾಗ, ಎಲ್ಲರಿಗೂ ಅವಳಿಗೆ ತುಂಬಾ ಸಂತೋಷವಾಗಿದೆಯೆಂದು ಅರ್ಥವಾಗಿತ್ತು. ಒಂದೇ ಮನೆಯಲ್ಲಿ ಎಷ್ಟೋ ದಿನಗಳಿಂಗ ಇದ್ದರೂ, ಚಿಕ್ಕಪ್ಪ, ಪಿನಾಕಿ ಒಟ್ಟಿಗೇ ಕೂತು ಎಂದೂ ಊಟ ಮಾಡಿರಲಿಲ್ಲ. ಅವನಿಗೆ ಸಂಕೋಚವಾಗದಿರಲಿ ಎಂದು ಭೀಮನಿಗೂ ಅವರುಗಳ ಜತೆಯಲ್ಲಿ ಎಲೆ ಹಾಕಿದ್ದಳು. ಯಾರಿಗೂ ಮಾತು ಬೇಕೆನಿಸಿರಲಿಲ್ಲ. ಮೌನವಾಗಿ ಊಟ ಮಾಡಿದರು. ಅಡಿಗೆ ರುಚಿಯಾಗಿದೆಯೆಂದು ಎಲ್ಲರಿಗೂ ಅನಿಸಿತ್ತು. ಆನಂತರ ಚಿಕ್ಕಪ್ಪ ಮತ್ತು ಮಾವ ಹಳೆಯ ಸ್ನೇಹಿತರಂತೆ ಕೂತು ಮಾತನಾಡಿದರು. ''ಇನ್ನು ಹದಿನೈದು ದಿನಕ್ಕೆ ನಮ್ಮೂರಿನಲ್ಲಿ ರಥೋತ್ಸವ. ಅಕ್ಕಪಕ್ಕದ ಹತ್ತಿರದ ಊರಿನ ಜನರೆಲ್ಲ ಸೇರುತ್ತಾರೆ. ವಿಜೃಂಭಣೆಯಾಗಿರುತ್ತೆ. ನೀವುಗಳೂ ಬನ್ನಿ, ನಾನು ಪಿನಾಕಿಗೂ ಹೇಳ್ತೀನಿ..'' ಅದೇ ಮಧ್ಯಾಹ್ನ ಅವರು ಹೊರಟರು, ತಮ್ಮ ಊರಿಗೆ.

ಹೊಸದಾಗಿ ಬಂದಿದ್ದವರು, ಪಿನಾಕಿ, ಪಿನಾಕಿ ಎಂದು ಮಾತನ್ನಾಡುತ್ತಾರಲ್ಲ. ಯಾರನ್ನಿರಬಹುದು ಎಂದು ಕುತೂಹಲ ತಾಳಲಾರದೇ, ಅವರು ಹೊರಟು ಹೋದ ಮೇಲೆ, ವೃಂದಾ ಕೇಳಿದ್ದಳು, ಪಿನಾಕಿ ಯಾರು!.. ಚಿಕ್ಕಪ್ಪ ಒಂದು ಗಳಿಗೆ ತಬ್ಬಿಬ್ಬಾದರು.

''ಪಿನಾಕಿ..ಅವನೇ ನಿನ್ನ ಗಂಡ ... ಹೆಸರು ಬದಲಾಯಿಸಿಕೊಂಡಿದಾನೆ.''

''ಏಕೆ!''

''ಅವನು ಎಲ್ಲಾ ರೀತಿಯಿಂದಲೂ ಬದಲಾಗಿದಾನೆ ಅಂತ ನಿನಗನ್ನಿಸಲಿಲ್ಲವೆ? ಅವನಿಗೆ ಆ ಹಳೆಯ ಹೆಸರು ಸಹ ಬೇಡವಾಯ್ತು ನೋಡು..''

''ಬಂದಿದ್ದರಲ್ಲ ಅವರು ಯಾರು !''

''ಅವರ ಹತ್ತಿರ ಇವನು ಸಾಲ ತಗೊಂಡಿದ್ದನಂತೆ..ಕೋರ್ಟು ಕಛೇರಿ ವ್ಯವಹಾರಗಳಿಗೆ ಅವರು ಈ ಊರಿಗೆ ಬರುತ್ತಲೇ ಇರ್ತಾರೆ.. ಈ ಸಾರಿ, ಮನೆಗೆ ಕರೆದುಕೊಂಡು ಬಂದಿದಾನೆ.. ಅಷ್ಟಾದರೂ ತಿಳಿಯಿತಲ್ಲ ಇವನಿಗೆ. ಅವರು ಎಲ್ಲಾ ವ್ಯವಹಾರ ತಿಳಿದವರು, ಗುರುತಿನ ಲಾಯರುಗಳಿದಾರೆ.. ಇವನದ್ದು ನಿನ್ನ ಗಂಡಂದು ಒಂದೇ ಎರಡೇ ತಕರಾರು? ಎಲ್ಲಾ ಸರಿಮಾಡಲು ಒಪ್ಪಿಕೊಂಡಿದಾರೆ.. ಇದನ್ನೆಲ್ಲ ಬಿಟ್ಟು ಬೇರೆ ಯಾವುದಾದರೂ ಊರಿಗೆ ಹೋಗೋಣ ಅಂತಿದೀನಿ ಅಂತ ಸಹ ಅಂದನಂತೆ. ಅವನು ಹೇಳೋದು ನಿಜವೇ.. ಇಲ್ಲಿ ಏನಿದೆ ಅಂತ ಇರಬೇಕು? ನೀನು ಕೊಂಡುಕೊಂಡಿರುವ ಜಮೀನನ್ನು ಮಾರಿಬಿಡು.. ಈ ಮನೆ ಮಠವನ್ನು ಮಾರಿಬಿಡು.. ಬೇರೆ ಊರಿಗೆ ಹೋಗಿ ಹೊಸ ಜೀವನ ಪ್ರಾರಂಭಿಸಿ.. ನನಗೂ ಅದೇ ಸರಿ ಅನ್ನಿಸುತ್ತೆ. ''ಕಮಿಲಿನಿ ಹೇಳಿದ ಮಾತುಗಳನ್ನೇ ಎಲ್ಲರೂ ಹೇಳುತ್ತಿದಾರೆ, ತಕ್ಷಣಕ್ಕೆ ಅವಳಿಗೆ ಆ ಮಾತುಗಳೂ ಒಪ್ಪಿಗೆಯಾಗಲಿಲ್ಲ. ಹಿರಿಯರು

ವಾಸವಾಗಿದ್ದ ಮನೆ.. ಇದನ್ನು ಮಾರಿ ತಾವು ಹೋಗುವುದಾದರೂ ಎಲ್ಲಿಗೆ? ತನ್ನ ಗಂಡ ಯಾವುದೋ ಹೋಟೆಲ್ಲಿನಲ್ಲಿ ಕೆಲಸದಲ್ಲಿದ್ದ ಅಂತ ಅತ್ತೆ ಹೇಳಿದ್ದರು. ಅದೂ ನಿಜವೋ ಸುಳ್ಳೋ ಯಾರಿಗೆ ಗೊತ್ತು. ಈಚೆಗೆ ಇವನು ತನ್ನಿಂದ ಹಣವನ್ನು ಕೇಳಿಲ್ಲ. ಬ್ಯಾಂಕಿನ ಹಣವನ್ನು ತೆಗೆದಂತೆ ಕಾಣುವುದಿಲ್ಲ. ಒಂದೆರಡು ದಿನಗಳು ಯೋಚಿಸಿದ ನಂತರ ಹೇಳಿದ್ದಳು.

"ನೀವು ಹೇಳೋದು ಸರಿ ಎನಿಸುತ್ತೆ ಚಿಕ್ಕಪ್ಪಾ.. ನಾವು ಎಲ್ಲಿದ್ದರೇನು? ಅವರ ಮನಸ್ಸೂ ಇನ್ನೂ ಸರಿಯಾಗಿಲ್ಲ.. ಎಲ್ಲಾ ಬಿಟ್ಟು ಹೋದರೆ ಖಂಡಿತಾ ಸರಿಹೋಗಬಹುದು. ನಾವು ನಿಮ್ಮೂರಿಗೆ ಬಂದರೆ ಹೇಗೆ?"

"ನಮ್ಮೂರಿಗೆ ಬೇಡ. ನೆಂಟರಿಷ್ಟರ ಮಧ್ಯೆ ಇದ್ದಷ್ಟೂ ಕ್ಲೇಶ ಹೆಚ್ಚುತ್ತೆ ನೀನು ಅವನನ್ನೇ ಕೇಳು, ಅವನಿಗೆ ಯಾವ ಊರು ಇಷ್ಟವೋ ಅಲ್ಲಿಗೇ ಹೋಗಿದ್ದರಾಯ್ತು."

"ತಾನಾಗಿಯೇ ಅವರು ಏನನ್ನು ಆಡುವುದಿಲ್ಲವಲ್ಲ ಚಿಕ್ಕಪ್ಪಾ.."

"ಅವನ ಮನಸ್ಸಿನ ಅಳುಕು ಕಡಿಮೆ ಆಗಿಲ್ಲ. ನೀನೇ ಹೋಗಿ ಆಗಾಗ್ಗೆ ಮಾತನಾಡಿಸುತ್ತಾ ಇರು. ಕ್ರಮೇಣ ಸರಿ ಹೋಗ್ತಾನೆ."

"ಅವರು ಈ ಕರಿಮಣಿಸರವನ್ನು ತೆಗೆದು ಹಾಕುವಂತೆ ಹೇಳಿದ್ದರು. ನನಗೆ ಇಷ್ಟವಾಗಲಿಲ್ಲ. ಅವರಿಗೆ ಕೋಪವೋ ಏನೋ..ಬೇರೆ ಹೊಸದನ್ನು ತರುತ್ತಾರಂತೆ.."

"ಅವನಿಗೆ ಎಲ್ಲಾ ಹೊಸದಾಗಲಿ ಎಂದು ಆಸೆ.. ನೀನು ಯಾಕೆ ತೆಗೆಯಲಿಲ್ಲ?" ಎದುರಿಗೆ ಅವನೇ ಇರುವಾಗ ಈ ಹಳೇ ಸರ ಬೇಕೆ.. ತೆಗೆದು ಹಾಕಬಾರದಾಗಿತ್ತೇ.."

"ನೀವೂ ಹಾಗೇ ಅಂತೀರಾ!.. ಇದು ಮದುವೆಯಲ್ಲಿ ಕಟ್ಟಿದ್ದು.."

"ಆ ಮದುವೆ ನೆಗೆದು ಬಿತ್ತು.. ಅದರಿಂದ ನಿನಗೇನು ಸುಖ ಸಿಕ್ಕಿತು..? ಈಗ ನಿಜವಾಗಿಯೂ ಸುಖವಾಗಿರುವ ಯೋಗ ಬಂದಿದೆ. ಅವನು ಹೇಳಿದಂತೆ ಕೇಳಿದರೆ ನೀನು ಕಳೆದುಕೊಳ್ಳುವುದಾದರೂ ಏನು! ಅದನ್ನೇ ಮನಸ್ಸಿಗೆ ಹಚ್ಚಿಕೊಂಡು, ಅವನು ಮತ್ತೆ ನಿನ್ನಿಂದ ದೂರ ದೂರವೇ ಇದ್ದರೆ ನೀನು ಅದನ್ನು ಸಹಿಸಬಲ್ಲೆಯಾ!"

"ನಂಗೊಂದು ತಿಳೀತಿಲ್ಲ.. ನನಗೆ ಹೆದರಿಕೆ ಆಗುತ್ತೆ.."

"ಹೆದರಿಕೆ, ಭಯ ಎಲ್ಲಾ ತೀರಿತು ಅಂತ ತಿಳಿದುಕೋ.. ಅವನು ನಿನ್ನ ಗಂಡನಾಗಿ, ನಿನ್ನ ಬಳಿ ಇರುವಾಗ ಭಯ ಹೆದರಿಕೆ ಏಕೆ? ನಾನು ಅವತ್ತೇ ಹೇಳಿದ್ದೆ, ಹೊಸ ಮಾಂಗಲ್ಯದ ಸರ ತಂದು ಕೊಡುತ್ತೀನಿ ಅಂತ. ಹೇಗೂ ಇನ್ನ ಹತ್ತು ಹದಿನೈದು ದಿನಕ್ಕೆ ಅಕ್ಷಯ ತದಿಗೆ ಬರುತ್ತೆ. ಅವತ್ತಿನ ದಿನ ಅತಿ ಶ್ರೇಷ್ಠ ಅವತ್ತಿನ ದಿನ ಯಾವ ಶುಭ ಕೆಲಸವನ್ನೇ ಮಾಡಿದರು ಅದು ಅಕ್ಷಯವಾಗುತ್ತೆ ಅಂತ ಹೇಳ್ತಾರೆ."

ಆ ಮಾತು, ಅವಳ ತಲೆಯನ್ನು ಹೊಕ್ಕಿತು. ಆ ಶುಭದಿನದಂದು, ತಾನು ಕೈಯಾರೆ ತನ್ನ ಗಂಡನಿಂದ ಹೊಸ ಕರಿಮಣಿ ಸರವನ್ನು ತೊಡಿಸಿಕೊಂಡರೆ, ಅದು ಶಾಶ್ವತಭಾಗ್ಯವಾಗಿ ಉಳಿಯುತ್ತೆ.. ಯಾವ ರೀತಿಯ ಭಯವೂ ಇರುವುದಿಲ್ಲ ಎನ್ನಿಸತೊಡಗಿತು.

ಮಾರನೇ ದಿನ, ಭೀಮ ಸ್ಕೂಲಿಗೆ ಹೋಗಿದ್ದ, ಚಿಕ್ಕಪ್ಪ ಹೊರಗೆಲ್ಲೋ ಹೋಗಿದ್ದರು. ಆ ಸಮಯದಲ್ಲಿ ವೃಂದಾ ಅವನ ರೂಮಿಗೆ ಬಂದಳು. ಮಲಗಿದ್ದವನು ಎದ್ದು ಕುಳಿತ.. ''ಏನು ಬೇಕಾಗಿತ್ತು?'' ಎಂದ ಮುಜುಗರದಿಂದ.

''ಸದಾ ಮಲಗಿಯೇ ಇರುತೀರಲ್ಲ.. ರೂಮಿನಲ್ಲೇ ಇರ್ತೀರಿ..ಬೇಜಾರಾಗೋಲ್ವೆ? ಹೊರಗೇಕೆ ಬರಬಾರದು !''

''ಇದನ್ನು ಹೇಳೊಕ್ಕೆ ಬಂದ್ಯಾ!''

ಅವನಿಗೆ ಸಿಟ್ಟು ಬಂದಿರಬಹುದೆಂದು ಭಾವಿಸಿದಳು.

''ಸಿಟ್ಟು ಮಾಡುಕೋ ಬೇಡಿ.. ಗಂಡಸು ಹೀಗೆ ಕೂತು ಕಳೆಯುವುದು ಒಳ್ಳೆಯ ಲಕ್ಷಣವಲ್ಲ ಅಂತಾರೆ.. ನಿಮ್ಮ ಹೋಟೆಲ್ಲಿನ ಕೆಲಸ ಏನಾಯ್ತು!''

''ಅದೆಲ್ಲ ನಿನಗ್ಯಾಕೆ..?''

''ನನಗೆ ಕೇಳುವ ಅಧಿಕಾರವಿದೆ ಅಂತ ಕೇಳ್ತಿದೀನಿ ಅಂತ ಅಂದ್ಕೋಬೇಡಿ..''

''ನಿನಗಿನ್ನು ಆ ಅಧಿಕಾರ ಸಿಕ್ಕಿಲ್ಲ.. ಆ ತಾಳಿ, ಆ ಸರ ತೆಗೆಯದ ಹೊರತು, ನೀನು ನನ್ನ ಹೆಂಡತಿ ಆಗಲಾರೆ..'' ಅದಕ್ಕಿಂತ ಹೆಚ್ಚಿನ ಒತ್ತನ್ನು ಕೊಟ್ಟು ನುಡಿದ.

''ತೆಗೀತೀನಿ, ಅದನ್ನೇ ಹೇಳಲು ಬಂದೆ..''

''ಕೂತ್ಕೋ..'' ಎಂದ, ಹಾಸಿಗೆಯ ಕಡೆ ಕೈ ಮಾಡಿ, ಅವಳು ಅನುಮಾನಿಸುತ್ತಾ ಹಾಸಿಗೆಯ ತುದಿಯಲ್ಲಿ ಕುಳಿತಳು. ಅವನಿಗೆ ನಗು ಬಂತು. ಇಷ್ಟು ಹತ್ತಿರದಲ್ಲಿ ಕೂತಿದಾಳೆ, ತಾನೀಗ ಏನು ಬೇಕಾದರೂ ಮಾಡಬಹುದು. ಯಾರೂ ಏನೂ ಅನ್ನುವಂತಿಲ್ಲ.. ಆದರೆ.. ಆ ಅಧಿಕಾರ ಹೊಸ ತಾಳಿ ಸರವನ್ನು ಹಾಕಿಕೊಂಡ ನಂತರವೇ..

''ನಾನು ಇವತ್ತೇ ಹೋಗಿ ಹೊಸದಾದ ಮಾಂಗಲ್ಯ ಸರ ತರ್ತೀನಿ. ಇವತ್ತೇ ಹಾಕಿಕೊಂಡು ಬಿಡುವಂತೆ..''

''ದಿನಾ, ವಾರ ನೋಡದೇ ಅದನ್ನೆಲ್ಲ ಬದಲಾಯಿಸಬಾರದು ಅಂತಾರೆ.. ಇನ್ನು ಹತ್ತು ದಿನಕ್ಕೆ ಅಕ್ಷಯ ತದಿಗೆ ಅಂತೆ.. ಅವತ್ತು ಪ್ರಶಸ್ತವಾದ ದಿನವಂತೆ..''

''ಹೌದು, ಅಕ್ಷಯ ತದಿಗೆ, ಅವನಿಗೆ ನೆನಪಿಗೆ ಬಂತು, ಅಂದು ರಾಮನಾಥಪುರದಲ್ಲಿ ರಥೋತ್ಸವ.. ತಾಯಿ ಮೀನಾಕ್ಷಿಗೆ ವಿಶೇಷವಾದ ಪೂಜೆ..''

ಅವನು ಏನೋ ಯೋಚಿಸುತ್ತಿದ್ದುದನ್ನು ಕಂಡು ಮಾತು ನಿಲ್ಲಿಸಿದಳು.

''ಸರಿ ಹಾಗಿದ್ರೆ ನಿನ್ನ ಇಷ್ಟ ಆದರೆ ಆದಿನ ನಾವು ಇಲ್ಲಿರುವುದು ಬೇಡ. ಬೇರೆ ಯಾವುದಾದರೂ ಊರಿಗೆ ಹೋಗೋಣ..''

''ಅದೇ ಮಾತನ್ನು ಚಿಕ್ಕಪ್ಪ ಹೇಳಿದರು. ಈ ಊರನ್ನೇ ಬಿಟ್ಟು ಬೇರೆ ಯಾವುದಾದರೂ ಊರಿಗೆ ಹೊರಟು ಹೋಗೋಣ ಅಂತ. ನಿಮಗೂ ಇಷ್ಟವೇ..''

"ಹೌದು-ಹಳೆಯದನ್ನೆಲ್ಲ ಮರೆಯಬೇಕಾದರೆ, ಬೇರೆ ಊರಿಗೆ ಹೋಗಲೇಬೇಕು.. ನಾನು ಕರೆದುಕೊಂಡು ಹೋಗುವ ಊರಿಗೆ ನೀನು ಬರ್ತೀಯಾ..?"

"ಹುಂ", ಎಂದಿದ್ದಳು ಒಪ್ಪಿಗೆ ನೀಡಿ.

"ಹಾಗಾದರೆ ಇವತ್ತೇ ನಿನ್ನ ಚಿಕ್ಕಪ್ಪನಿಗೆ ಹೇಳು, ಹೊಲಗದ್ದೆ ಮನೆ ಎಲ್ಲಾ ಮಾರಿ ಬಿಡುವುದಕ್ಕೆ ಏರ್ಪಾಡು ಮಾಡಲಿ.. ಹೇಗೂ ಎಲ್ಲಾ ನಿನ್ನ ಹೆಸರಿನಲ್ಲಿದೆಯಲ್ಲ..ನೀನೇ ಎಲ್ಲಾ ಮಾರಿ ಬಿಡು.."

"ನಿಮಗೆ ಬೇಜಾರೇನಿಲ್ಲವಲ್ಲ"

"ಬೇಜಾರೇಕೆ, ಎಲ್ಲಾ ಒಳ್ಳೆಯದೇ.. ಬ್ಯಾಂಕಿನಲ್ಲಿ ಏನಾದರೂ ಹಣವಿದ್ದರೆ ಅದನ್ನು ತೆಗೆದು ಕೊಟ್ಟುಬಿಡ್ತೀನಿ.. ಅದನ್ನ ನೀನೇ ಇಟ್ಟುಕೋ.. ನನಗೆ ಏನೂ ಬೇಡ."

"ನಿಜವಾಗಿಯೂ ನಿಮಗೆ ಬೇಜಾರೇನಿಲ್ಲ ತಾನೇ.."

"ಇಲ್ಲ ಅಂದ್ನಲ್ಲ, ಮತ್ತೆ ಮತ್ತೆ ಕೇಳಿದರೆ ಖಂಡಿತಾ ಬೇಸರವಾಗುತ್ತದೆ."

"ಅತ್ತೆ ಬದುಕಿದ್ದರೆ, ಖಂಡಿತಾ ಸಂತೋಷ ಪಡುತಿದ್ದರು" ಎಂದುಕೊಂಡಳು ತನ್ನಲ್ಲೇ.

ಅವಳ ಮಾತುಗಳನ್ನು ಕೇಳಿ ಚಿಕ್ಕಪ್ಪ ಅಡ್ಡಡ್ಡಲಾಗಿ ತಲೆ ಅಲ್ಲಾಡಿಸಿದ್ದರು.

"ಹತ್ತು ಹದಿನೈದು ದಿನಗಳಲ್ಲಿ ಎಲ್ಲಾ ಸೆಟ್ಲ್ ಮಾಡುವುದಕ್ಕೆ ಆಗುವುದಿಲ್ಲ, ಬ್ಯಾಂಕಿನಲ್ಲಿರುವ ಹಣವನ್ನು ತೆಗೆದುಕೊಂಡು, ಬೇರೆ ಊರಿಗೆ ಹೋಗಬಹುದು. ಉಳಿದದ್ದು ನಿಧಾನವಾಗಿ ಆಗಲಿ, ಯಾವ ಊರಿಗೆ ಹೋಗೋಣ ಅಂತ ನಿರ್ಧರಿಸಿದೀರಿ!"

"ಯಾವ ಊರು ಅಂತ ಅವರು ಹೇಳಲಿಲ್ಲ" ಎಂದಳು. ಅವರಿಬ್ಬರ ಮಾತುಗಳನ್ನು ಕೇಳಿಸಿಕೊಂಡಿದ್ದ ಪಿನಾಕಿ ನಂತರ ಆತನಿಗೆ ಹೇಳಿದ್ದ.

"ರಾಮನಾಥಪುರ ಮೊದಲಿನಿಂದಲೂ ನನಗೆ ಇಷ್ಟವಾಗಿದ್ದ ಊರು. ಸ್ಕೂಲಿಗೆ ರಜ ಬಂದಾಗಲೆಲ್ಲಾ ಓಡಿ ಹೋಗ್ತಿದ್ದೆ. ಆ ನದಿ ಆ ದೇವಸ್ಥಾನ ಎಲ್ಲಾ ನನಗೆ ತುಂಬಾ ಇಷ್ಟ ಅಲ್ಲಿ ಒಂದು ಸಣ್ಣ ಸ್ಕೂಲನ್ನು ಶುರು ಮಾಡೋಣ ಅಂತ ಆಸೆ.. ಆ ಸ್ಕೂಲಿನಲ್ಲಿ ವಿದ್ಯಾಭ್ಯಾಸದ ಜತೆಗೆ, ಹುಡುಗರಿಗೆ, ಸಂಸ್ಕೃತಿ, ನಯ, ವಿನಯ, ಸ್ನೇಹ, ಸಹಕಾರ, ಸಹಾಯ ಮಾಡುವ ಉದಾರ ಮನೋಭಾವ ಮುಂತಾದವುಗಳ ಬಗ್ಗೆ ಚಿಕ್ಕ ವಯಸ್ಸಿನಿಂದಲೇ ತಿಳಿಸಿಕೊಡಬೇಕೆಂದು ಆಸೆ.. ಜನರ ಸ್ವಾರ್ಥತನ ನೋಡಿ ನೋಡಿ ಬೇಸರವಾಗಿದೆ.

ಅವನನ್ನೇ ಒಂದು ಗಳಿಗೆ ನೋಡಿದರು. "ನಾನೂ ಸ್ವಾರ್ಥಿಯೇ ಅಲ್ಲವೇನಪ್ಪಾ..?"

"ನಾನು, ನನ್ನದು ಎನ್ನುವ ಅಭಿಮಾನಕ್ಕೂ, ಎಲ್ಲಾ ಬೇಕೆನ್ನುವ ಸ್ವಾರ್ಥತನಕ್ಕೂ ವ್ಯತ್ಯಾಸವಿದೆ. ನಮ್ಮ ಕೈಲಾದಷ್ಟು ನಾವು ಹೇಳಿಕೊಡುವುದು. ಮುಂದೆ ಅವರವರಿಗೆ ತೋಚಿದಂತೆ ಅದರ ಉಪಯೋಗವನ್ನು ಪಡೆಯಲಿ."

"ಉದ್ದೇಶವೇನೋ ತುಂಬಾ ಚೆನ್ನಾಗಿದೆ. ಶಾಲೆ ಶುರು ಮಾಡಬೇಕೆಂದರೆ, ಅದಕ್ಕೆ ಕಟ್ಟಡ, ಸ್ಕೂಲಿಗೆ ಬೇಕಾಗುವ ಸಾಮಾನುಗಳು ಇದನ್ನೆಲ್ಲ ಹೊಂದಿಸಬೇಕಲ್ಲ."

"ನನಗೂ ಗೊತ್ತು. ಈ ತಕ್ಷಣವೇ ಅದು ಆಗುವುದಿಲ್ಲ. ಅದನ್ನು ರಾಮನಾಥಪುರದಲ್ಲಿ ಆರಂಭಿಸಬೇಕು ಅಂತ ನನ್ನ ಆಸೆ, ನಿಮ್ಮ ಮಗಳು ಏನಂತಾಳೋ?"

"ಅವಳು ಒಪ್ಪಿಯೇ ಒಪ್ತಾಳೆ, ಅಲ್ಲಿಗೆ ಯಾವಾಗ ಹೊರಡೋದು ಅಂತ..?"

"ಅಕ್ಷಯತದಿಗೆ ಹೊತ್ತಿಗೆ ಅಲ್ಲಿ ಇರೋಣ ಅಂತ. ಆ ದಿನದ ರಥೋತ್ಸವ, ವಿಶೇಷ ಪೂಜೆ, ಸದಾ ಕಾಲವೂ ಮನದಲ್ಲಿ ಉಳಿಯುವಂತಹುದು.."

"ಹೌದು, ಇದೇ ಮಾತನ್ನು ನಿನ್ನ ಮಾವ ಸಹ ಹೇಳಿದ್ದರು. ರಥೋತ್ಸವಕ್ಕೆ ಬನ್ನಿ ಅಂತ ಸಹ ಆಹ್ವಾನ ಕೊಟ್ಟಿದ್ದಾರೆ.."

"ಆ ದಿನ, ನಾನು ಅಲ್ಲಿ ವೃಂದಳನ್ನು ಮದುವೆಯಾಗ್ತೀನಿ.."

ಅಂ... ಮತ್ತೆ ಯಾಕೆ ಮದುವೆ?

"ನಿಮಗೇ ಗೊತ್ತು, ನಾನು ಇದುವರೆಗೂ ಎಂದೂ ಅವಳೊಡನೆ ಸಲುಗೆಯಿಂದ ಮಾತನ್ನು ಸಹ ಆಡಿಲ್ಲ. ನಾನು ಅವಳ ಜತೆ ಇರಬೇಕಾದ ಪರಿಸ್ಥಿತಿ ಒದಗಿರುವಾಗ, ಸುಮ್ಮನೇ ಯಾವ ಆಧಾರವೂ ಇಲ್ಲದೇ ಇದ್ದಂತೆ ಆಗುತ್ತದೆ. ನೀತಿ ಬಾಹಿರವಾಗಿ ಇರಲು ನನ್ನ ಮನಸ್ಸು ಒಪ್ಪುವುದಿಲ್ಲ. ಮದುವೆಯ ಶಾಸ್ತ್ರ ಆಗಲೇಬೇಕು."

"ಅವಳಿಗೆ ಇದನ್ನು ಹೇಗೆ ಹೇಳುವುದು!"

"ಯಾರೂ ಹೇಳುವುದು ಬೇಡ.. ರಥೋತ್ಸವಕ್ಕೆ ಎಲ್ಲರೂ ಹೋಗೋಣ. ನಮ್ಮ ಮಾವನಿಗೆ ಹೇಳಿದರೆ, ದೇವಸ್ಥಾನದ ಭೋಜನಕ್ಕೆ ಸಿದ್ಧ ಮಾಡುತ್ತಾರೆ.. ಹೆಂಗಸರು, ಮುತ್ತೈದೆಯರು ಸಾಲು ಸಾಲಾಗಿ ಬಂದು ದೇವಿಗೆ ಸ್ವತಃ ಕೈಯಾರೆ ಪೂಜೆ ಮಾಡಿ, ಅರಿಶಿನ ಕುಂಕುಮಗಳ ಸುರಿಮಳೆಯನ್ನೇ ಸುರಿಸ್ತಾರೆ. ಇದಕ್ಕಿಂತ ವಿಶೇಷವಾದ ಸಂಭ್ರಮ ಇನ್ನೇನು ಬೇಕು!" ಅವನು ಹೇಳುತ್ತಿದ್ದಂತೆ ಅವನು ಯಾವುದೋ ಉದ್ವೇಗಕ್ಕೆ ಒಳಗಾದವನಂತೆ ಕಂಡು ಬಂದ.. ರಥೋತ್ಸವದ ಉತ್ಸಾಹವೋ.. ಅಥವಾ ಆ ದಿನ ಅವಳನ್ನು ಮದುವೆಯಾಗಲಿದ್ದೇನೆ ಎನ್ನುವ ಉತ್ಸಾಹವೋ.. ಅವರಿಗೆ ತಿಳಿಯಲಿಲ್ಲ.

"ನಾನು ಒಂದೆರಡು ದಿನ ಮುಂಚಿತವಾಗಿ ಅಲ್ಲಿಗೆ ಹೋಗ್ತೀನಿ. ನೀವು ವೃಂದಾಳನ್ನು, ಕಮಲಿನಿಯನ್ನು ಕರೆದುಕೊಂಡು ಬನ್ನಿ.. ನಾನು ಭೀಮನನ್ನು ನನ್ನ ಜತೆಗೆ ಕರೆದುಕೊಂಡು ಹೋಗ್ತೀನಿ."

"ನಿನ್ನ ಹತ್ತಿರ ಹಣ ಇದೆಯೆ?" ಅದು ಸರಿ, ಕಮಲಿನಿ ಯಾಕೆ? ಬೇಡ" ಅತ್ತಿಂದಿತ್ತ ತಲೆ ಆಡಿತು.

"ನಾನು ಮಾವನ ಹತ್ತಿರ ತೆಗೆದುಕೊಳ್ತೀನಿ.. ನಿಮಗೆ ಹೇಗೆ ತೋಚುತ್ತೋ ಹಾಗೇ ಸರಿ."

''ಪರವಾಗಿಲ್ಲ, ನಾನೂ ನಿನ್ನ ಮಾವನೇ. ಸಂಕೋಚಪಟ್ಟುಕೋಬೇಡ. ನಿನ್ನ ಹತ್ತಿರ ಹಣವಿಲ್ಲ ಅಂತ ನನಗೆ ಗೊತ್ತು..'' ಅವನ ಮುಖ ಕಂದಿತು. ಕಮಲಿನಿಯನ್ನು ಕೇಳಬಹುದೆನಿಸಿತ್ತು. ಮೂರು ನಾಲ್ಕು ದಿನ ಮುಂಚಿತವಾಗಿ ಅವನು ಹೊರಟಾಗ, ಚಿಕ್ಕಪ್ಪ ಅವನ ಕೈಗೆ ಐದು ಸಾವಿರ ರೂಪಾಯಿಗಳನ್ನು ತಂದಿತ್ತರು. ಧಾರಾಳವಾಗಿ ಖರ್ಚುಮಾಡು, ಸಾಲದಿದ್ದರೆ ಇನ್ನು ಕೊಡ್ತೀನಿ, ಎಂದಿದ್ದರು.. ಕಮಲಿನಿಯೊಡನೆ ಮಾತನಾಡಲು ಆಗಿರಲೇ ಇಲ್ಲ. ಆದರೂ ನುಡಿದಿದ್ದ. ಇಷ್ಟು ಬೇಡ. ಅಲ್ಲಿ ನನಗೇನು ಖರ್ಚಿರುತ್ತೆ?''

''ಪರವಾಗಿಲ್ಲ ನಿನಗೆ ತೋಚಿದಂತೆ ಖರ್ಚು ಮಾಡು.. ತಾವು ತಂದಿಟ್ಟುಕೊಂಡಿದ್ದ ಕರಿಮಣಿ ಮಾಂಗಲ್ಯವನ್ನು ಅವನ ಕೈಗಿತ್ತರು. ಇದನ್ನು ನಿನ್ನ ಮಾವನಿಗೆ, ನಿನ್ನ ತಂದೆ ತಾಯಿಗಳಿಗೆ ತೋರಿಸಿ, ಆಶೀರ್ವಾದ ಪಡೆದುಕೋ.. ಅವರ ವಿಶ್ವಾಸಕ್ಕೆ ಅವನು ಬೆರಗಾದ.

''ನಾನು ರಾಮನಾಥಪುರಕ್ಕೆ ಹೋಗ್ತಿದೀನಿ. ನಿನ್ನ ಚಿಕ್ಕಪ್ಪ ನಿನಗೆ ಎಲ್ಲಾ ಹೇಳ್ತಾರೆ, ನೀವಿಬ್ಬರೂ, ಇನ್ನೊಂದೆರಡು ದಿನಕ್ಕೆ ಅಲ್ಲಿಗೆ ಬಂದು ಬಿಡಿ.. ''ಹೂಂ'' ಎಂದಳು.

ಅವನು ಸೀದಾ ಮಾವನಿದ್ದ ಅಂಗಡಿಗೆ ಹೋಗಿ ತಾನು ಬಂದಿರುವ ವಿಷಯ ತಿಳಿಸಿದ. ಅವರ ಕೈಗೆ ಹಣವನ್ನಿತ್ತು, ಇದರಿಂದ ಒಂದು ವಿಶೇಷವಾದ ಪೂಜೆ, ಹತ್ತಾರು ಜನಗಳಿಗೆ ಊಟ, ಹತ್ತಿಪ್ಪತ್ತು ಮಂದಿ ಸ್ತ್ರೀಯರಿಗೆ, ಅಂದರೆ ಹಿರಿಯ ಮುತ್ತೈದೆಯರಿಗೆ, ಸಾಧಾರಣವಾದ ಸೀರೆ, ರವಿಕೆ, ಅರಿಶಿನ ಕುಂಕುಮ, ಹೂವು, ಬಳೆ ಎಲ್ಲಾ ತರಿಸಿ ಬಿಡಿ...ಅಮ್ಮನ ಮನೆಯಲ್ಲಿ ಹೂವೀಳ್ಯ ಅಂತ ಮಾಡಿಸುತ್ತಿದ್ದಳು. ಆ ರೀತಿ ಮಾಡಬೇಕು..

ದೇವಸ್ಥಾನದಲ್ಲಿ ಹೂವೀಳ್ಯ ಮಾಡಿಸುವುದಕ್ಕಿಂತ ನಮ್ಮ ಮನೆಯಲ್ಲೇ ಅಣಿ ಮಾಡಿಸ್ತೀನಿ. ನಿನ್ನ ಹೆಂಡತಿಯೂ ಬರಲಿ. ಐದು ಜನ ಮುತ್ತೈದೆಯರು ಸಾಕು..'' ಒಪ್ಪಿದ.

''ಅಮ್ಮ ಅಪ್ಪ ಹೇಗಿದಾರೆ? ಅಪ್ಪ ಹುಶಾರಾಗಿದ್ರಾ..'' ವಿಚಾರಿಸಿದ.

''ಹೂಂ, ಹುಶಾರಾಗಿದಾರೆ. ನಾಲ್ಕು ದಿನಗಳ ಹಿಂದೆ ಅವರು ವಾಪಸ್ಸು ಹೊರಟುಹೋದರು''

''ಒಳ್ಳೆಯದೇ ಆಯ್ತು ಬಿಡಿ. ಅವರ ಎದುರಿಗೆ ನಾನು ಈ ನಾಟಕವನ್ನು ಆಡಲು ಆಗುತ್ತಿರಲಿಲ್ಲ, ನಾನು ಈ ಊರಿನಲ್ಲೇ ನೆಲೆಸೋಣ ಅಂತ ಅಂದ್ಕೊಂಡಿದೀನಿ. ಅದಕ್ಕೆ ನೀವೇ ನೆರವಾಗಬೇಕಾಗುತ್ತದೆ.''

''ನನ್ನ ಕೈಲಾದುದನ್ನು ನಾನು ಮಾಡ್ತೀನಿ.. ಅಂದ ಹಾಗೆ ನಿನ್ನ ಹೆಂಡತಿ ಹೇಗಿದಾಳೆ? ಇನ್ನು ಹಾಗೇ ದೂರದೂರವಾಗಿಯೇ ಇದೀಯೋ, ಅಥವಾ...''

''ಅಥವಾ ಏನಿಲ್ಲ, ಅವಳಿನ್ನು ನನ್ನ ಹೆಂಡತಿ ಆಗಿಲ್ಲ, ಇಲ್ಲಿ ನಿಮ್ಮೆಲ್ಲರ ಎದುರಿಗೆ ಅವಳಿಗೆ ತಾಳಿ ಕಟ್ತೀನಿ. ಆಮೇಲೆ ಅವಳು ನನ್ನ ಹೆಂಡತಿ.''

''ಇದೇನೋ ಇದು ತಮಾಷೆ.''

"ಇದು ತಮಾಷೆ ಅಲ್ಲ.. ಇದುವರೆಗೂ ನಡೆದದ್ದು ತಮಾಷೆ. ಆದರೆ ಅವಳಿಗೆ ತಿಳಿಯಬಾರದು. ಅದಕ್ಕೇ ಇಲ್ಲಿಗೆ ಬಂದೆ... ತಪ್ಪೇನಿಲ್ಲವಲ್ಲ."

"ಏನೋಪ್ಪ ಈ ಕಾಲದಲ್ಲಿ ಸರಿಯಾಗಿ ಮಾಡಿದ್ದು ತಪ್ಪಾಗಿ ಕಾಣುತ್ತೆ ಹಾಗೇ ತಪ್ಪಾಗಿ ಮಾಡಿದ್ದು ಸರಿ ಎನ್ನಬೇಕಾದರ ಧೈರ್ಯಬೇಕು.."

"ಏನು ಮಾವ ನೀವು ಹೀಗೆ ಅಂತೀರಿ.. ಅವಳ ಸ್ಥಿತಿ ನಿಮಗೆ ಗೊತ್ತಿದ್ದೇ.. ಏನು ಅಂದ್ರೆ ಗಂಡನ ಬಗ್ಗೆ ಅವಳಿಗೆ ತಿಳಿದಿಲ್ಲ ಅಷ್ಟೇ, ನಾನು ಅವಳಿಗೆ ತಿಳಿಯದಂತೆ ಅವಳನ್ನು ಮರು ಮದುವೆ ಆಗ್ತಿದೀನಿ ಅಷ್ಟೇ.." ಇದೊಂದೇ ಕಸಿವಿಸಿ ನನಗೆ.

"ಆಗಲಿ, ಎಲ್ಲಾ ದೈವೇಚ್ಛೆ ಎಲ್ಲಾ ನಿರಾತಂಕವಾಗಿ ನಡೆದರೆ, ದೇವೀ ಕೃಪೆ ಎಂದುಕೊಳ್ಳೋಣ ಅಷ್ಟೇ.. ಈ ಭೀಮ ಯಾರು!"

"ಅವನು ಅವರ ಮನೆಯ ಕೆಲಸದ ಹುಡುಗ. ಎಷ್ಟೋ ವರ್ಷಗಳಿಂದ ಇವನ ದೊಡ್ಡಮ್ಮ ಅಲ್ಲಿ ಕೆಲಸ ಮಾಡುತ್ತಿದ್ದಳಂತೆ. ನನಗೆ ಈ ಹುಡುಗನ ಅಗತ್ಯವಿದೆ. ನಾನೇ ಇವನನ್ನು ಸಾಕಿಕೊಳ್ಳುತ್ತೇನೆ, ಅವನಿಗೂ ಅಷ್ಟೆ ನಮ್ಮಿಬ್ಬರನ್ನು ಕಂಡರೆ ವಿಶ್ವಾಸ."

"ತಕ್ಷಣಕ್ಕೆ ಇಲ್ಲಿ ಯಾವುದೂ ಮನೆ ಇಲ್ಲವಲ್ಲ, ಯಾವುದಾದರೂ ಛತ್ರದಲ್ಲಿರಬೇಕಾಗುತ್ತದೆ. ಇನ್ನೊಂದೆರಡು ದಿನದಲ್ಲಿ ಊರು ತುಂಬಾ ಜನ ಸೇರ್ತಾರೆ.. ಮನೆ ಮನೆಯ ಜಗುಲಿ, ಪಡಸಾಲೆ ಸಹ ತುಂಬಿ ಹೋಗಿರುತ್ತೆ, ಜಾತ್ರೆ ನೆರೆದಿರುತ್ತೆ."

ಆಮೇಲಿನ ವಿಷಯ ಹೇಳ್ತಿದೀನಿ. "ನಿಮ್ಮ ಮನೆಯಲ್ಲಿ ಒಂದು ಭಾಗ ನನಗೆ ಕೊಟ್ಬಿರಿ- ನಾನು ನಿಧಾನವಾಗಿ ಕಟ್ಟಿಸಿಕೊಂಡು ಹೋಗ್ತೀನಿ.. ನಿಮಗೆ ತೊಂದರೆ ಇಲ್ಲದಿದ್ದರೆ.." ಸೇರಿಸಿದ.

"ತೊಂದರೆ ಏನಿಲ್ಲ, ಹಳೇ ಮನೆ, ಬೆಂಗಳೂರಿನಂತಹ ಮನೆಗಳಲ್ಲ."

"ಬೆಂಗಳೂರನ್ನೇ ಬಿಟ್ಟು ಬಂದವನಿಗೆ ಅಲ್ಲಿಯ ಮನೆಯನ್ನು ಕಟ್ಟಿಕೊಂಡು ಏನಾಗಬೇಕಾಗಿದೆ..? ನೀವೂ ಅತ್ತೆ ಇಬ್ಬರೇ ತಾನೇ.. ಇಲ್ಲಿರುವವರು"

"ಹೂಂ-ಸದ್ಯಕ್ಕೆ ಇಬ್ಬರೇ, ಲಕ್ಷ್ಮಿ ತೇರಿನ ದಿನ ಬಂದರೂ ಬರಬಹುದು.."

"ಅವಳನ್ನು ನೋಡಿ ಎಷ್ಟು ದಿನಗಳಾದವು.." ಹಿಗ್ಗಿನಿಂದಹೇಳಿದ.

"ಆದರೆ, ಅವಳು ನಿನ್ನ ಸಾವಿನ ಬಗ್ಗೆ ಪೇಪರ್ರಿನಲ್ಲಿ ಓದಿದಾಳೆ...ಅತ್ತಿದಾಳೆ"

"ಓ ಮಾವ..ಮಾವ- ಈ ಸಂಭ್ರಮದಲ್ಲಿ ನಾನು ಸತ್ತು ಹೋಗಿದೀನಿ ಎನ್ನುವ ವಿಷಯವೇ ಮರೆತು ಹೋಗಿತ್ತು.. ನಾನು ಭೂತವಾಗಿ ಬಂದಿದೀನಿ ಅಂದ್ರೆ.." ನಕ್ಕ.

"ಛಿ ಬಿಡ್ತು ಅನ್ನು.. ಭೂತ ಪ್ರೇತಗಳ ಬಗ್ಗೆ ಹೊತ್ತಿಲ್ಲದ ಹೊತ್ತಿನಲ್ಲಿ ಮಾತನಾಡಬಾರದು."

''ಭೂತ ಅನ್ನುತ್ಲು ನನಗೆ ಒಂದು ವಿಷಯ ಜ್ಞಾಪಕಕ್ಕೆ ಬಂತು. ನೀವು ನಂಬ್ತೀರಿ ಅಲ್ಲವೆ? ಹಿಂದಿನ ಸಾರಿ ನಾನು ಬಂದಿದ್ದಾಗ ನದಿಯಲ್ಲಿ ಇಳಿದಿದ್ದೆ, ಆಗ ತನಗೆ ಆದ ಅನುಭವಗಳನ್ನೆಲ್ಲಾ ಹೇಳಿದ..'' ನನಗೆ ಈಗಲೂ ನಂಬೋಕ್ಕೆ ಆಗೊಲ್ಲ.. ನನ್ನದೇ ಭ್ರಮೆ ಇರಬೇಕು ಅಂತ ಅಂದ್ಕೊಂಡು ಮರೆತುಬಿಟ್ಟೆ.''

''ಆಗಲೇ ಯಾಕೆ ಹೇಳಲಿಲ್ಲ ಇದನ್ನು..''

''ನನ್ನ ಕಲ್ಪನೆ ಅಂದುಕೊಂಡು ಸುಮ್ಮನಾದೆ..''

''ಇದು ಕಲ್ಪನೆ ಅಲ್ಲ.. ಆಕಸ್ಮಾತ್ತಾಗಿ ನೀರಿಗೆ ಬಿದ್ದ ಹುಡುಗಿಯೊಬ್ಬಳ ಆತ್ಮ ಅಲ್ಲಿ ಸುತ್ತುತ್ತೆ ಅಂತ ಜನ ಅಂತಾರೆ..''

''ಆ ಹುಡುಗಿ ನನ್ನನ್ನೇ ಏಕೆ ಕರೆದಳು..?

''ಏಕೆಂದರೆ ಎಲ್ಲಾ ಆತ್ಮಕ್ಕೂ ಎಲ್ಲರ ಹೆಸರೂ ತಿಳಿದಿರುತ್ತೆ.''

''ನಿಮಗೂ ಆ ಅನುಭವವಾಗಿದೆಯೆ?''

''ನಾನೆಂದೂ ನಿಶಿಯಲ್ಲಿ ನದಿಗೆ ಇಳಿದಿಲ್ಲ..''

''ಹಾಗಾದರೆ ಆ ಧಾಂಡಿಗರು..ಕಂಬಳಿ ಹೊದ್ದವರು.. ಅವರು ಯಾರು?''

''ಯಾರೋ ಕುರುಬರು ಇರಬೇಕು..'' ಆದರೂ ಅವನ ಸಂದೇಹ ಪರಿಹಾರವಾಗಲಿಲ್ಲ.. ಎಲ್ಲಾ ಸುಳ್ಳು ಎಂದುಕೊಂಡು ಮತ್ತೆ ತಲೆ ಕೊಡವಿದ.

ರಥೋತ್ಸವಕ್ಕೆ ಸಿದ್ಧತೆಗಳು ಭಾರಿ ರಭಸದಿಂದ ಜರುಗುತ್ತಿತ್ತು. ದೇವಸ್ಥಾನದ ಗೋಪುರ, ಗೋಡೆಗಳಿಗೆ ಸುಣ್ಣ ಬಣ್ಣಗಳಾಗಿದ್ದವು. ತಳಿರು ತೋರಣಗಳೊಂದಿಗೆ ದೀಪಾಲಂಕಾರವೂ ಸಜ್ಜಾಗಿತ್ತು. ರಸ್ತೆಯ ಇಕ್ಕೆಲಗಳಲ್ಲೂ ಬೆಂಡು, ಬತ್ತಾಸು, ಬೆಲೂನು ಇತ್ಯಾದಿಗಳ ಮಾರಾಟಗಾರರು, ತಮ್ಮ ತಮ್ಮ ಜಾಗಗಳನ್ನು ಆಕ್ರಮಿಸಿದ್ದರು. ಹತ್ತಿರದ ನೆಂಟರಿಷ್ಟರು ಎಲ್ಲರ ಮನೆಯಲ್ಲೂ ಬಂದು ಸೇರಿದ್ದರು. ನದಿಯಿಂದ ನೀರನ್ನು ಪಂಪಿನ ಮೂಲಕ ಮನೆಮನೆಗೆ ತಲಪುವ ಅನುಕೂಲ ಮಾಡಿಸಿದ್ದರು. ಊರಿಗೆ ಊರೇ ಸಂಭ್ರಮಗೊಂಡಿತ್ತು. ವರ್ಷದಲ್ಲಿ ಒಮ್ಮೆ ಎಲ್ಲಾ ಸೇರಿ ಆಚರಿಸುವ ಊರ ಹಬ್ಬ

ಚಿಕ್ಕಪ್ಪ, ವೃಂದಾಳೊಡನೆ ಬಂದಿಳಿದರು. ಊರಿನ ಬದಲಾದ ವೈಭವ ಅವರನ್ನು ಸ್ವಾಗತಿಸಿತು. ವೃಂದಾ ಸುತ್ತಲೂ ಕಣ್ಣರಳಿಸಿ ನೋಡಿದಳು. ಅದು ಅವಳಿಗೆ ಹೊಸತು. ಭೀಮ ಬಂದು ಅವರನ್ನು ಪಿನಾಕಿಯ ಸೋದರ ಮಾವನ ಮನೆಗೆ ಕರೆದುಕೊಂಡು ಬಂದ.. ಮಾವ, ಮಾರನೇ ದಿನದ ಪೂಪೀಳ್ಯಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿಸಿದ್ದರು. ಅವರ ಮಗಳು ಇನ್ನು ಬಂದಿರಲಿಲ್ಲ. ವೃಂದ ಸ್ವಲ್ಪ ಹೊತ್ತು ಕೂತು ಆಯಾಸ ಪರಿಹಾರ ಮಾಡಿಕೊಂಡು, ಊರನ್ನು ನೋಡ ಬರಲು ಹೊರಟಳು. ಭೀಮ ಅವಳ ಜತೆಗಿದ್ದ ದೇವಸ್ಥಾನ, ನದೀ ತೀರದಲ್ಲೆಲ್ಲಾ ಸುತ್ತಾಡಿ, ದಣಿದು ಬಂದು ಮಲಗಿದಳು. ಗಡಗಡನೆ,

ನಡುಗುತ್ತಾ ಮಲಗಿದಳು. ಜ್ವರ ಏರಿತ್ತು. ತಕ್ಷಣವೇ ಮನೆಯಾಕೆ ಆಯಾಸವಾಗಿದೆಯೆಂದು ಪರಿಹಾರವಾರ್ಥವಾಗಿ ಕಷಾಯ ಮಾಡಿ ಕುಡಿಸಿದಳು. ಉಳಿದವರೆಲ್ಲ ಊಟ ಮಾಡಿ ಮಲಗಿದರು. ಒಂದು ಹೊತ್ನಲ್ಲಿ ಯಾರೋ "ಪಿನಾಕೀ..ಪಿನಾಕೀ" ಎಂದು ಜೋರಾಗಿ ಕಿರುಚಿಕೊಂಡಾಗ ಎಲ್ಲರಿಗೂ ಎಚ್ಚರವಾಯಿತು.

ಪಿನಾಕಿ ಬೆವೆತು ಹೋದ.. ತಾನು ಈ ಹಿಂದೆ, ಆ ದಿನ ನದಿಯಲ್ಲಿ ಈಜುತ್ತಿದ್ದಾಗ ಕೇಳಿದ ಧ್ವನಿ.. ಗಡಗಡನೆ ನಡುಗಿ ಹೋದ.. ಎಲ್ಲರೂ ಎದ್ದಿದ್ದರು. ವೃಂದಾ ಏನೋ ಕನವರಿಸುತ್ತಿದ್ದಳು. ಹತ್ತಿರದಲ್ಲೇ ಮಲಗಿದ್ದ ಚಿಕ್ಕಪ್ಪ ಅವಳನ್ನು ಎಬ್ಬಿಸಿ.. "ಏನಾಯ್ತಮ್ಮ.. ಏನಾಯ್ತು" ಎಂದು ವಿಚಾರಿಸುತ್ತಿದ್ದರು..

ಯಾರೋ ಅಂದರು, "ಕನಸು ಅಂತ ಕಾಣೆಸುತ್ತೆ.. ಹೊಸ ಊರು, ಹೊಸ ಜಾಗ, ಏನೋ ಉತ್ಸಾಹ, ಒಂದೊಂದು ಸಲ ಹಾಗಾಗುತ್ತೆ.."

ಆದರೆ ಅವಳು "ಪಿನಾಕೀ" ಎಂದೇಕೆ ಕಿರುಚಿದಳು ಎಂದು ಯಾರಿಗೂ ಅರ್ಥವಾಗಿರಲಿಲ್ಲ, ಎದ್ದು ಕೂತಿದ್ದ ವೃಂದಾ ಒಂದು ತರಹದ ಗೊಂದಲಕ್ಕೊಳಗಾಗಿದ್ದಳು. ಅವಳ ಬಳಿ ಬಂದ ಪಿನಾಕಿ ಕೇಳಿದ್ದ.. "ಏನಾಯ್ತು ವೃಂದಾ.. ಕನಸು ಬಿತ್ತಾ..?"

"ಹೂಂ ಕೆಟ್ಟ ಕನಸು.." ಎಂದಳು.

"ಜ್ವರ ಬಂದಾಗ ಕೆಟ್ಟ ಕನಸು ಬೀಳುತ್ತೆ, ಹೆದರಬೇಡ ಮಲಕ್ಕೋ.."

"ಎಂತಹ ಕನಸು..!" ಅವಳು ಜ್ಞಾಪಿಸಿಕೊಂಡು ಹೇಳತೊಡಗಿದಳು.

"ನಾನು ಒಂದು ದೋಣೀಲಿ ಕೂತಿದ್ದೆ, ದೋಣೀನ ಒಬ್ಬ ಯುವಕ ನಡೆಸುತ್ತಿದ್ದ ಇದ್ದಕ್ಕಿದ್ದಂತೆ ದೋಣಿ ಮುಗುಚಿಕೊಂಡಿತು. ನಾನು ಏನೋ ಕೂಗಿಕೊಂಡೆ–ನಾವಿಬ್ಬರೂ ನದಿಯ ಆಳದಲ್ಲಿ ಮುಳುಗಿ ಹೋದೆವು. ದಡದಲ್ಲಿ ಇಬ್ಬರು ದಾಂಡಿಗರು ನಿಂತು ನಮ್ಮನ್ನೇ ನೋಡುತ್ತಿದ್ದರು."

ಇವಳ ಕನಸಿಗೂ, ತನ್ನ ಅನುಭವಕ್ಕೂ ಸಾಮ್ಯವಿದೆಯೆನ್ನುವುದನ್ನು ಪಿನಾಕಿ ಅರಿತ. ಪಿನಾಕಿ ಯಾರು! ಆ ದಾಂಡಿಗರು ಯಾರು! ಅವರಿಗೂ ಈ ಕನಸಿಗೂ ಸಂಬಂಧವೇನು, ತಿಳಿದುಕೊಳ್ಳಬೇಕೆಂಬ ಕುತೂಹಲ ಹುಟ್ಟಿತು.

ಮಾವನನ್ನು ಒಂದು ಬದಿಗೆ ಕರೆದು ಹೇಳಿದ.

"ಅವತ್ತು ಹೇಳಿದ್ನಲ್ಲ, ಅದಕ್ಕೂ ಇದಕ್ಕೂ ಏನೋ ಸಂಬಂಧವಿರಬೇಕು. ನಂಗೆ ಹಾಗೇ ಅನ್ನುತ್ತೆ"

"ಏನಾದರೂ ಇದ್ದರೂ, ನಮಗೆ ತಿಳಿಯುವುದು ಹೇಗೆ? ನಮಗೆ ತಿಳಿಸುವವರು ಯಾರು!" ಇವಳಿಗೇ ಏಕೆ ಬಿತ್ತು ಇಂತಹ ಕನಸು?

"ಈ ಊರಿನಲ್ಲೇ ಎಷ್ಟೋ ವರ್ಷಗಳಿಂದ ಇರುವ ಹಿರಿಯ ತಲೆ ಯಾವುದೂ ಇಲ್ಲವೆ!"

ಹೂಂ, ಇದೆ. ನಮ್ಮ ದೇವಸ್ಥಾನದ ಅರ್ಚಕರ ತಾಯಿ. ಆಕೆಗೆ ತಿಳಿದಿದ್ದರೂ ತಿಳಿದಿರಬಹುದು. ಬೆಳಿಗ್ಗೆ ಕೇಳೋಣ..''

ಮಾತಾಡುತ್ತಿದ್ದಂತೇ ಬೆಳಕು ಹರಿಯಲಾರಂಭಿಸಿತ್ತು. ಒಬ್ಬೊಬ್ಬರಾಗಿ ಎದ್ದು ಸ್ನಾನಾದಿಗಳನ್ನು ಮುಗಿಸಿದರು. ಮೊದಲು ದೇವಸ್ಥಾನಕ್ಕೆ ಹೋಗಿ ಪೂಜೆ ಮುಗಿಸಿ ಬಂದು ಬಿಡೋಣ. ನಿನ್ನ ಹೆಂಡತೀನ ಎಬ್ಬಿಸು'' ಅವನು ಕಣ್ಣು ಕಿರಿದು ಮಾಡಿದ.

ವೃಂದಾ ಏನನ್ನೋ ಹುಡುಕುತ್ತಿದ್ದಳು. ''ಏನದು? ಇವನು ಕೇಳಿದ..

''ನನ್ನ ಸರ.. ಎಲ್ಲಿಯೋ ಬಿದ್ದು ಹೋಗಿದೆ, ಸಿಕ್ಕುತ್ತಿಲ್ಲ.''

''ಹೋಗಲಿ ಬಿಡು.. ನನ್ನ ಹತ್ತಿರ ಹೊಸ ಸರವಿದೆ..''

''ಬರೀ ಕತ್ತಲ್ಲಿ ದೇವಸ್ಥಾನಕ್ಕೆ ಹೇಗೆ ಬರಲಿ? ಅಲ್ಲಿಯೇ ಇದ್ದ ಚಿಕ್ಕಪ್ಪ ತಮ್ಮ ಕತ್ತಿನಲ್ಲಿದ್ದ ಸರವನ್ನು ಕೊಟ್ಟರು. ರೇಶಿಮೆ ಸೀರೆ ಉಟ್ಟು ವೃಂದಾ ಸಿದ್ಧಳಾದಳು. ಪಂಚೆ ಶಲ್ಯ ಹೊದ್ದು ಪಿನಾಕಿ ಹೊರಟ.. ಮನೆಯವರೆಲ್ಲರೂ ಹೋಗಿ ದೇವಸ್ಥಾನದಲ್ಲಿ ಪೂಜೆ ಮುಗಿಸಿಕೊಂಡು ಮನೆಗೆ ಬಂದರು.

ಮನೆಯಲ್ಲಿ ಹಿರಿಯ ಮುತ್ತೈದೆಯರು ಸಾಲಾಗಿ ಕೂತಿದ್ದರು. ಪಿನಾಕಿ ಎಲ್ಲರಿಗೂ ನಮಸ್ಕರಿಸಿದ. ವೃಂದಾ ಎಲ್ಲರಿಗೂ ಹಿಡಿ ಹಿಡಿ ಅರಿಶಿನ ಕೊಟ್ಟಳು. ಕುಂಕುಮವನ್ನು ಹೂವನ್ನು ಧಾರಾಳವಾಗಿ ಕೊಟ್ಟಳು. ಎಲೆ, ಅಡಿಕೆ, ಹಣ್ಣು ರವಿಕೆ ಬಟ್ಟೆಗಳೊಂದಿಗೆ ನೂರು ರೂಪಾಯಿಗಳ ನೋಟನ್ನಿತ್ತ ತಟ್ಟೆಯಲ್ಲಿನ ಬಾಗಿನವನ್ನು ಅವರುಗಳಿಗೆ ಕೊಟ್ಟಳು. ಕುಡಿಯಲು ಬೇಲದ ಹಣ್ಣಿನ ಪಾನಕ, ಸಿಹಿಯಾದ ಮಜ್ಜಿಗೆಯನ್ನು ಕೊಟ್ಟು ಉಪಚರಿಸಿದಳು. ಕೋಸಂಬರಿ, ತೆಂಗಿನಕಾಯಿಗಳನ್ನು ಕೊಟ್ಟು ನಮಸ್ಕರಿಸಿ ಆಶೀರ್ವಾದವನ್ನು ಪಡೆದಳು. ಅವಳಿಗೆ ಏನೋ ಸಮಾಧಾನವಾಗಿತ್ತು. ಅವರುಗಳ ಎದುರಿಗೆ ಬಂದ ಪಿನಾಕಿ ನಗುತ್ತಾ ಹೇಳಿದ್ದ..

''ನೆನ್ನೆ ರಾತ್ರಿ ನದೀ ದಡದಲ್ಲಿ ಎಲ್ಲೋ ಇವಳ ಕರಿಮಣಿಸರ ಕಳೆದುಹೋಯ್ತಂತೆ. ಈಗ್ತಾನೇ ಹೊಸದನ್ನು ತಂದಿದೀನಿ. ನಾನೇ ಕೈಯಾರ ಇವಳಿಗೆ ತೊಡಿಸ್ತೀನಿ. ನೀವೆಲ್ಲರೂ ಮತ್ತೊಮ್ಮೆ ಆಶೀರ್ವಾದ ಮಾಡಿಬಿಡಿ.'' ಎಲ್ಲರೂ ಮುಗುಳ್ನಕ್ಕರು.

ಪಿನಾಕಿ ತಾನೇ ಕೈಯಾರ ಅವಳಿಗೆ ಮಾಂಗಲ್ಯಸರವನ್ನು ತೊಡಿಸಿದ. ಅವಳು ದೇವರ ಮುಂದೆ ನಿಂತು ಭಕ್ತಿಯಿಂದ ಅರಿಶಿನ ಕುಂಕುಮವನ್ನು ಹಚ್ಚಿಕೊಂಡಳು. ಚಿಕ್ಕಪ್ಪನಿಗೆ ನಮಸ್ಕರಿಸಿದಳು. ಪಿನಾಕಿಯೂ ಎಲ್ಲರಿಗೂ ನಮಸ್ಕರಿಸಿದ. ನಂತರ ಜ್ಞಾಪಿಸಿಕೊಂಡವನಂತೆ, ಆ ಮುತ್ತೈದೆಯರಿಗೆ ಸೀರೆಗಳನ್ನು ಉಡುಗೊರೆಯನ್ನಾಗಿ ನೀಡಿದ. ಅವರುಗಳಿಗೆ ಪರಮಾನಂದವಾಗಿತ್ತು.. ನಂತರ ಚಿಕ್ಕಪ್ಪನಿಗೂ, ಮಾವನಿಗೂ ಪಂಚೆಯನ್ನು ಕೊಟ್ಟ, ಅತ್ತೆಗೆ ಚೆನ್ನಾಗಿರುವ ಸೀರೆಯನ್ನೇ ತಂದಿದ್ದ. ಆಕೆ ಸಂಕೋಚಗೊಂಡಳು. ''ನೀವು ನನ್ನ ತಾಯಿ ಇದ್ದ ಹಾಗೆ.. ಬೇಡ ಅನ್ನಬೇಡಿ..'' ಎಂದ ಮಾವನ ಕಡೆ ನೋಡಿ ನಗುತ್ತಾ.. ''ಇರಲಿ ತಗೋ''

ಎಂದರು ಮಾವ.. ಊಟದ ಚಿಂತೆಯೇ ಇರಲಿಲ್ಲ ಯಾರಿಗೂ, ದೇವಸ್ಥಾನದಿಂದ ಪಾತ್ರೆ ತುಂಬಾ ಕೋಸಂಬರಿ, ಪಾನಕ ಬಂದಿತ್ತು. ಎಲ್ಲರೂ ಹೊಟ್ಟೆ ತುಂಬಾ ತಿಂದು, ಕುಡಿದರು.. ಮಾವ ಅರ್ಚಕರ ಮನೆಗೆ ಹೋಗೋಣ ಬರ್ತೀರಾ.. ಎಂದು ಕೇಳಿದ. ಹುಂ ಎಂದರು ಚಿಕ್ಕಪ್ಪ ವೃಂದಾ, ಭೀಮ ಸಹ ಹೊರಟರು.

ಮಾವನೇ ಆಕೆಯೊಡನೆ ಮಾತನಾಡಿದರು.. ಇವರು ಬೆಂಗಳೂರಿನಿಂದ ಬಂದಿದಾರೆ.. ಎಂದು ಹೇಳಿ ಅವನಿಗಾದ ಅನುಭವವನ್ನು, ವೃಂದಾಳಿಗೆ ಬಿದ್ದ ಕನಸಿನ ಬಗ್ಗೆಯೂ ತಿಳಿಸಿದರು.. ಆ ಮುದುಕಿ ಮುಗುಳ್ನಕ್ಕಿತು.

''ಸಂಬಂಧವಿರಬಹುದು. ಆದರೆ ಈ ಅನುಭವ, ಈ ಕನಸು ಕುರಿತು ಯಾರೂ ಹೇಳಿದಂತೆ ನೆನಪಿಲ್ಲ.. ನನ್ನ ತಾಯಿ ಬದುಕಿದ್ದಾಗ ನಡೆದ ಘಟನೆಯೊಂದನ್ನು ಹೇಳುತ್ತಿದ್ದಳು..'' ಮೈಯೆಲ್ಲಾ ಕಿವಿಯಾಗಿ ಎಲ್ಲರೂ ಆಲಿಸಿದರು.

''ಹಿಂದೆ, ತುಂಬಾ ಹಿಂದೆ, ನದಿಯ ಆ ದಡದ ಮೇಲೆ ಒಂದು ಹಳ್ಳಿ ಇತ್ತಂತೆ. ಆ ಹಳ್ಳಿಯ ನಾಯಕನಿಗೆ ಒಬ್ಬನೇ ಮಗ ಅವನ ಹೆಸರು ಪಿನಾಕಿ ಅಂತ.. ಅವನಿಗೆ ದೋಣಿ ನಡೆಸೋಕ್ಕೆ ಬರುತ್ತಿತ್ತು. ದಿನಾ ಆ ದಡದಿಂದ ಈ ದಡಕ್ಕೆ ಬರುತ್ತಿದ್ದನಂತೆ. ಈ ದಡವಲ್ಲಿ ಒಬ್ಬ ಶ್ರೀಮಂತರ ಮನೆ ಹುಡುಗಿ, ದಿನಾ ನದೀ ದಡದಲ್ಲಿ ನಿಂತು ಮೀನಿಗೆ ತಿನಿಸನ್ನು ತಿನ್ನಿಸ್ತಾ ನಿಂತಿರೋಳಂತೆ.. ಒಂದು ದಿನ ಅವರಿಬ್ಬರಿಗೂ ಪರಿಚಯವಾಯಿತು. ಇಬ್ಬರೂ ಸ್ನೇಹಿತರಾದರು. ಅವನು ಬಂದಾಗಲೆಲ್ಲಾ ಅವಳನ್ನು ದೋಣಿಯೊಳಗೆ ಕರೆದು ಕೂರಿಸಿಕೊಂಡು ನದಿಯಲ್ಲಿ ಸುತ್ತಿಸಿಕೊಂಡು ಬರುತ್ತಿದ್ದನಂತೆ. ಇದು ಆ ಶ್ರೀಮಂತನಿಗೆ ಇಷ್ಟವಾಗಲಿಲ್ಲ. ಆ ಹುಡುಗನಿಗೆ ಕರೆದು ಬುದ್ಧಿ ಹೇಳಿದನಂತೆ. ಆ ಹುಡುಗ ಸುಮ್ಮನಾದರೂ, ಆ ಹುಡುಗಿಯೇ ಸುಮ್ಮನಿರದೇ, ಅವನನ್ನು ಹುಡುಕಿಕೊಂಡು, ಹೋದಳಂತೆ.. ಶ್ರೀಮಂತನಿಗೆ ವಿಷಯ ತಿಳಿದು, ಹುಡುಗನನ್ನು ಮುಳುಗಿಸಿ ಬಿಡಲು ಆಳುಗಳನ್ನು ಗೊತ್ತು ಮಾಡಿದನಂತೆ. ಆಳುಗಳು ಬಂದು, ''ಹುಡುಗಿ ನಿನಗಾಗಿ ಕಾಯುತ್ತಾ ಇದಾಳೆ, ಬಾ.. ಎಂದು ಸುಳ್ಳು ಹೇಳಿ ಕರೆದುಕೊಂಡು ಬಂದರಂತೆ. ಅವರುಗಳು ನಿರ್ದಾಕ್ಷಣ್ಯವಾಗಿ ಹುಡುಗನನ್ನು ನದಿಗೆ ಮುಳುಗಿಸಿದರು. ಅನಂತರ ಅವರಿಗೆ ಪಶ್ಚಾತ್ತಾಪವಾಗಿ, ಹುಡುಗಿಗೆ ವಿಷಯ ತಿಳಿಸಿದರಂತೆ. ಆ ಹುಡುಗಿ ''ಪಿನಾಕೀ ಪಿನಾಕೀ'' ಎಂದು ಕೂಗುತ್ತಾ ನದಿಗೆ ಹಾರಿ ಬಿದ್ದಳಂತೆ.. ಆಗಾಗ, ರಾತ್ರಿಯ ಹೊತ್ತು ನದಿಯಲ್ಲಿ ಯಾವುದಾದರೂ ದೋಣಿ, ಕಂಡು ಬಂದರೆ, ಯಾರೋ ಪಿನಾಕೀ ಪಿನಾಕೀ ಎಂದು ಕೂಗಿದಂತಾಗುತ್ತಂತೆ.. ನಿಮ್ಮ ಅನುಭವ, ಕನಸಿಗೂ, ಈ ಕತೆಗೂ ಸಂಬಂಧವಿದ್ದರೂ ಇರಬಹುದು..'' ಎಲ್ಲರ ಜೀವವೆಲ್ಲಾ ಉಡುಗಿಹೋದಂತಾಗಿತ್ತು.. ಎದ್ದು ದೇವಸ್ಥಾನದ ಬಳಿಗೆ ಬಂದರು. ರಾತ್ರಿಯ ತೆಪ್ಪೋತ್ಸವದ ಸಿದ್ಧತೆ ಜೋರಾಗಿ ನಡೆಯಿಸಲು, ಸಿದ್ಧರಾಗಿದ್ದರು. ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದ ತೆಪ್ಪದಲ್ಲಿ ಉತ್ಸವ ಮೂರ್ತಿಯನ್ನಿಟ್ಟು ನದಿಯಲ್ಲಿ ಒಂದು ಸುತ್ತು ಹಾಕಿ ಬರುವುದು.. ಎಲ್ಲಾ ಭಕ್ತಾದಿಗಳೂ ಮೆಟ್ಟಿಲು, ದಡಗಳ ಮೇಲೆ ಗುಂಪು ಗುಂಪಾಗಿ ನಿಂತು ನೋಡಬೇಕೆಂದು ಕಾಯುತ್ತಿದ್ದರು.

ಕತ್ತಲಾಗುತ್ತಿದ್ದಂತೆ ಎಲ್ಲರೂ ನದೀ ದಡಕ್ಕೆ ಬಂದರು. ಹೊಸ ಸೀರೆ ಉಟ್ಟು ಮದುಮಗಳಂತೆ ಅಲಂಕರಿಸಿಕೊಂಡಿದ್ದ ವೃಂದಳ ಕೈ ಹಿಡಿದ, ಪಿನಾಕೀ ನದೀ ದಂಡೆಯ ಮೇಲೆ ಇಬ್ಬರೂ ಸ್ವಲ್ಪ ದೂರ ನಡೆದರು.. ದೂರದಲ್ಲೆಲ್ಲೋ ಒಂದು ದೋಣಿ ಬರುತ್ತಿರುವಂತೆ ಕಂಡಾಗ ಇವನು ಚುರುಕಾದ.. ಕೈ ಬೀಸಿ ಹತ್ತಿರಕ್ಕೆ ಕರೆದ. ಅಂಬಿಗನಿಗೆ ನೂರರ ನೋಟನ್ನು ಕೊಟ್ಟು. "ಸ್ವಲ್ಪ ದೂರ ನಮ್ಮನ್ನು ನದಿಯಲ್ಲಿ ಕರೆದುಕೊಂಡು ಹೋಗು" ಎಂದ. ಅವನು ಒಪ್ಪಲಿಲ್ಲ, ಆದರೂ ಇವನು ಬಲವಂತಪಡಿಸಿದ.

ಇಬ್ಬರೂ ದೋಣಿಯಲ್ಲಿ ಮುಂದೆ ಮುಂದೆ ಸಾಗಿದರು. ಸ್ವಲ್ಪ ದೂರ ಹೋದ ನಂತರ ಇದ್ದಕ್ಕಿದ್ದಂತೆ, "ವೃಂದಾ.. ಈಗ ನೀನು ಜೋರಾಗಿ ಪಿನಾಕೀ ಪಿನಾಕೀ ಅಂತ ಕೂಗು ನೋಡೋಣ ಏನಾಗುತ್ತೆ ಅಂತ.." ಎಂದ.. ಅವಳು ಹೆದರಿದಳು.

ಅವನು ಮತ್ತೆ ಆಗ್ರಹಪಡಿಸಿದ. ಅವಳು ಬಾಯಿಗೆ ಕೈ ಮರೆಮಾಡಿ "ಪಿನಾಕೀ, ಪಿನಾಕೀ.. ಎಂದು ಕೂಗಿದಳು. ಏನೂ ನಡೆಯಲಿಲ್ಲ.. ಅವನು ಅತ್ತಿತ್ತ ನೋಡಿದ.. ಯಾವ ದಾಂಡಿಗರೂ ತಮಗಾಗಿ ಕಾಯುತ್ತಿರುವಂತೆ ಕಾಣಲಿಲ್ಲ.. ಜೋರಾಗಿ ನಕ್ಕ.

"ಏಯ್ ಸುಮ್ಮನೆ ಕೂತ್ಕೊಳ್ಳಿ, ಶಾನೇ ಅಲುಗಾಡಬ್ಯಾಡಿ.." ಎಂದ ಅಂಬಿಗ.

"ಆಯ್ತಪ್ಪಾ" ಎನ್ನುತ್ತಾ ಇಬ್ಬರೂ ಸುಮ್ಮನೇ ಕೂತರು.. ಒಂದು ಸುತ್ತು ಹಾಕಿ, ಕ್ಷೇಮವಾಗಿ ಅಂಬಿಗ ದಡವನ್ನು ಮುಟ್ಟಿಸಿದ. ಇಬ್ಬರೂ ನಗು ನಗುತ್ತಾ ದೋಣಿಯಿಂದ ಜಿಗಿದರು. ದೋಣಿ ಅತ್ತ ಸರಿಯಿತು. ಪಿನಾಕಿ ಧೈರ್ಯದಿಂದ ಅವಳನ್ನು ತನ್ನೆಡೆಗೆ ಎಳೆದುಕೊಂಡು, ಅವಳ ಸೊಂಟವನ್ನು ಬಳಸಿದ. ವೃಂದಾ ಸಂತೃಪ್ತಿಯಿಂದ ಅವನ ಎದೆಗೆ ಒರಗಿದಳು. ನದೀ ದೇವತೆ ಹಾರೈಸಿದಳೋ ಎನ್ನುವಂತೆ, ತಣ್ಣನೆಯ ಗಾಳಿ ಇಬ್ಬರ ತಲೆಯನ್ನು ಸವರಿತು.. ಇಬ್ಬರೂ ಮುಂದಿನ ಮಧುರ ಕ್ಷಣಗಳ ಬಗ್ಗೆ ಚಿಂತಿಸುತ್ತಾ ಹೆಜ್ಜೆ ಹಾಕಿದರು.

ಅಕ್ಷಯತದಿಗೆಯ ರಾತ್ರಿ ಅವರ ಪಾಲಿಗೆ ಅಕ್ಷಯ ರಾತ್ರಿ.. ಜನಜಂಗುಳಿಯಿಂದ ದೂರ ಸರಿದು, ಇಬ್ಬರೂ ಯಾರಿಗೂ ಕಾಣದಂತೆ ಮನೆಯನ್ನು ಸೇರಿಕೊಂಡಿದ್ದರು.

ಅರುಣರಾಗ

"ಅಶೋಕ್ ಮೆಡಿಕಲ್ ಸ್ಟೋರ್ಸ್"ಗೆ ಔಷಧಿ ಖರೀದಿಸಲು ಬಂದಿದ್ದ ಜಗನ್ನಾಥರಾಯರು, ವೇದನೆ ತಾಳಲಾರದೇ 'ಅಯ್ಯೋ' ಎಂದು ನರಳಿ ಕುಸಿದು ಬಿದ್ದರು. ಅಂಗಡಿಯೊಳಗಿನಿಂದ ಅಶೋಕ ಗಾಬರಿಯಿಂದ ಹೊರಬಂದ.

"ಏನಾಯ್ತು ಸಾರ್.. ಏನಾಯ್ತು" ಎಂದು ಅವರನ್ನು ಎಬ್ಬಿಸಲು ನೋಡಿದ. ಅವರು ಕ್ಷೀಣವಾದ ಸ್ವರದಲ್ಲಿ ಹೇಳಿದ್ದು ಇವನಿಗೆ ಅರ್ಥವಾಗಲಿಲ್ಲ.

ಪಕ್ಕದ ಅಂಗಡಿಯ ಹುಡುಗನನ್ನು ಕೂಗಿ ಕರೆದು, "ಹೋಗು ಡಾಕ್ಟರನ್ನು ಕರೆದುಕೊಂಡು ಬಾ" ಎಂದು ಓಡಿಸಿದ. ಅಷ್ಟರಲ್ಲಿ ಅಕ್ಕ ಪಕ್ಕದ ಅಂಗಡಿಯ ಜನರು ಸೇರಿದ್ದರು.

ಡಾಕ್ಟರ್ ಗಡಿಬಿಡಿಯಿಂದ ರಸ್ತೆ ದಾಟಿ ಬಂದರು. ಬೆವರಿನಿಂದ ತೋಯ್ದ ಮುಖ, ಬಳಲಿಕೆಯನ್ನು ಸೂಸುವ ಕಣ್ಣುಗಳನ್ನು ನೋಡಿ, "ಈಗಲೇ ಇವರನ್ನು ಆಸ್ಪತ್ರೆಗೆ ಸೇರಿಸುವುದು ಒಳ್ಳೆಯದು" ಎಂದರು ನಾಡಿ ಹಿಡಿದು ನೋಡುತ್ತಾ.

ಅಲ್ಲೇ ಹೋಗುತ್ತಿದ್ದ ಒಂದು ಆಟೋ ರಿಕ್ಷಾ ನಿಲ್ಲಿಸಿ, ಇನ್ನೊಬ್ಬರ ನೆರವು ಪಡೆದು ಅವರನ್ನು ಎಬ್ಬಿಸಿ, ಆಟೋ ಹತ್ತಿಸಿದ ಅಶೋಕ, ರಸ್ತೆಯಲ್ಲಿ ಏನಾದರೂ ಆಗಿಹೋದರೆ ಎಂದು ಗಾಬರಿಯಾದರೂ ತೋರಗೊಡದೇ, ಪಕ್ಕದ ಅಂಗಡಿಯವನನ್ನು ಕರೆದಿದ್ದ. ನೀವೂ ಜತೆಗೆ ಬನ್ನಿ ಎಂದು ಒಂದಿಬ್ಬರು ಅವನೊಂದಿಗೆ ಹೊರಟರು.

ಸ್ವಲ್ಪವೇ ದೂರದಲ್ಲಿದ್ದ ನರ್ಸಿಂಗ್ ಹೋಂಗೆ ಸೇರಿಸಿದ. ಅದೇ ಆಟೋದಲ್ಲಿ ತನ್ನ ಅಂಗಡಿಗೆ ಬಂದು, ಬಾಗಿಲನ್ನು ಹಾಕಿ ಬೀಗ ಸಿಕ್ಕಿಸಿ, ಮತ್ತೆ ತನ್ನ ಸ್ಕೂಟರ್‌ನಲ್ಲಿ ಆಸ್ಪತ್ರೆಗೆ

ಬಂದ. ಅಷ್ಟು ಹೊತ್ತಿಗೆ, ಆತ ಸ್ವಲ್ಪ ಮಾತನಾಡುವಷ್ಟು ಚೈತನ್ಯ ಪಡೆದಿದ್ದರು. ಆದರೂ ಡಾಕ್ಟರು ಅವರನ್ನ ಮಾತನಾಡಗೊಡಿಸಿರಲಿಲ್ಲ.

ಡಾಕ್ಟರ್ ಕೇಳಿದ್ದಕ್ಕೆ ''ತನಗೆ ಆತನ ಪರಿಚಯವಿಲ್ಲ'' ಎಂದ. ಅವರು ಕೆಟ್ಟ ಮುಖ ಮಾಡಿದ್ದರು. ಅವರ ಅಂಗಿಯ ಜೇಬಿನಲ್ಲಿ ಔಷಧಿಯ ಚೀಟಿ ಇತ್ತು. ಸ್ವಲ್ಪ ಹಣವಿತ್ತು ಅಷ್ಟೇ. ಹೆಸರು ಜಗನ್ನಾಥರಾಯರು ಎಂದು ತಿಳಿಯಿತು.

ಅಶೋಕ, ಪ್ರಿಸ್ಕ್ರಿಪ್ಷನ್‌ನಲ್ಲಿದ್ದ ಡಾಕ್ಟರರ ಹೆಸರನ್ನು ಗುರುತಿಸಿ ಅವರಿಗೆ ಫೋನು ಮಾಡಿ, ವಿಷಯ ತಿಳಿಸಿ, ಅವರಿಂದ ಮನೆಯ ವಿಳಾಸವನ್ನು ಪಡೆದ. ಅವರ ಮನೆಗೆ ತಿಳಿಸಲೇಬೇಕಾದುದರಿಂದ, ಅವರ ಮನೆಯನ್ನು ಹುಡುಕಿಕೊಂಡು ಹೊರಟ.

''ಸಧ್ಯ ಅವರ ಮನೆಯವರಿಗೆ ತಿಳಿಸಿಬಿಟ್ಟರೆ ಸಾಕು, ಅಲ್ಲಿಗೆ ತನ್ನ ಜವಾಬ್ದಾರಿ ಮುಗಿದಂತೆ'' ಎಂದುಕೊಂಡ.

ಬಾಗಿಲು ತೆಗೆದಾಕೆಯನ್ನು ಆತನ ಪತ್ನಿ ಇರಬಹುದೆಂದು ಭಾವಿಸಿ.

''ನಿಮ್ಮ ಯಜಮಾನರು, ಆಸ್ಪತ್ರೆಯಲ್ಲಿದ್ದಾರೆ. ಈಗಲೇ ಬನ್ನಿ'' ಎಂದ.

ಆಕೆ ಗಾಬರಿಗೊಂಡರೂ, ಆತುರ ತೋರಲಿಲ್ಲ.

''ನಾನು ಹೇಗಪ್ಪಾ ಬರಲಿ! ಮನೆಯಲ್ಲಿ ಇನ್ಯಾರೂ ಇಲ್ಲವಲ್ಲ'' ಎಂದಳು.

''ಅವರ ಮಕ್ಕಳು? ಎಲ್ಲಿದ್ದಾರೆ! ನಾನೇ ತಿಳಿಸ್ತೀನಿ''

''ಇಲ್ಲಿ ಇನ್ಯಾರೂ ಇಲ್ಲ, ನಾನೊಬ್ಬಳೇ.. ನಾನು ಈ ಮನೆಯ ಅಡಿಗೆಯವಳು'' ಆಕೆ ತನ್ನ ಪರಿಚಯ ಹೇಳಿಕೊಂಡಿದ್ದಳು ಸಂಕೋಚದಿಂದ.

ಅವನಿಗೆ ಸ್ವಲ್ಪ ಮುಜುಗರವೆನಿಸಿತು, ಆದರೂ ತೋರಗೊಡದೆ,

''ಹಾಗಾದ್ರೆ ಅವರನ್ನು ನೋಡಿಕೊಳ್ಳುವವರು?'' ಎಂದು ಪ್ರಶ್ನಿಸಿದ.

''ಅವರಿಗೆ ಹತ್ತಿರದವರು ಯಾರೂ ಇಲ್ಲ.. ನೀವು? ಕೇಳಿದಳು.

''ನಾನು ಮೆಡಿಕಲ್ ಸ್ಟೋರ್ಸ್‌ನವನು.. ಅವರು ಅಲ್ಲೇ ಹುಶಾರು ತಪ್ಪಿದ್ದು, ನಾನೇ ನರ್ಸಿಂಗ್ ಹೋಂಗೆ ಸೇರಿಸಿದ್ದು..''

ಆಕೆಗೆ ಏನನ್ನು ಹೇಳಲು ತೋಚಲಿಲ್ಲ.

''ಹೋಗಲಿ ಬಿಡಿ, ನರ್ಸುಗಳಿಗೇ ನೋಡಿಕೊಳ್ಳಲು ಹೇಳ್ತೀನಿ.''

''ಹಾಗೆ ಮಾಡಪ್ಪಾ'' ಆಕೆ ನಿರಾಳವಾಗಿ ಹೇಳಿದಾಗ ಅವನಿಗೆ ವಿಚಿತ್ರವೆನಿಸಿತ್ತು.

ಪ್ರತಾಪನನ್ನು ಆಸ್ಪತ್ರೆಗೆ ಸೇರಿಸಿದ್ದಾಗ, ಮನೆಯವರೆಲ್ಲಾ ಊಟ ನಿದ್ದೆ ಬಿಟ್ಟು ಅಲ್ಲೇ ಇರಲಿಲ್ಲವೆ! ಎಷ್ಟಾಗಲೀ ಈಕೆ ಅಡಿಗೆಯವರು, ಅವರಿಗೇಕಿರುತ್ತೆ ಆತಂಕ? ಎಂದುಕೊಂಡ ತನ್ನಲ್ಲೇ.. ಎರಡು ಹೆಜ್ಜೆ ಮುಂದೆ ಹೋದವನನ್ನು ಕರೆದು, ಆಕೆ ಅವನ ಅಂಗಡಿಯ ವಿಳಾಸ,

ಹಾಗೂ ಫೋನು ನಂಬರನ್ನು, ಆಸ್ಪತ್ರೆಯ ವಿಳಾಸವನ್ನು ಕೇಳಿ ಪಡೆದಳು.

''ನಾನೂ ಈ ಮನೆಯಲ್ಲಿ ಇಪ್ಪತ್ತು ವರ್ಷಕ್ಕೆ ಮೀರಿ ಅಡಿಗೆಯವಳಾಗಿ ಇಲ್ಲಿಯೇ ಇದೀನಿ, ನನ್ನ ಮನಸ್ಸೂ ತಡೆಯುತ್ತಿಲ್ಲ, ಈ ವರ್ಷಗಳಲ್ಲಿ ಎಂದೂ ಅವರ ಆರೋಗ್ಯ ಇಷ್ಟು ಕೆಟ್ಟಿರಲಿಲ್ಲ. ಅವರ ಅಕ್ಕ ಹರಿದ್ವಾರಕ್ಕೆ ಹೋಗಿದಾರೆ. ಬರುವುದು ಯಾವಾಗಲೋ, ಗಾಬರಿ ಏನೂ ಇಲ್ಲ ತಾನೇ..''

''ಬಹುಶಃ ಇಲ್ಲ ಅಂತ ಕಾಣುತ್ತೆ ಆದರೆ ಮನೆಯವರು ಹೋಗಿ ನೋಡಿದರೆ, ಬೇಗ ಚೇತರಿಸಿಕೊಳ್ಳಬಹುದೇನೋ ಅಂತ ಅಷ್ಟೆ''

ಆಕೆ ಏನನ್ನೋ ಹೇಳಲು ತವಕಿಸುತ್ತಿರುವಂತೆ ಕಂಡಿತು. ಅದನ್ನು ಗಮನಿಸದವನಂತೆ ಹೊರಟುಬಿಟ್ಟ

ದಿನಕ್ಕಿಂತ ತಡವಾಗಿ ಮನೆಗೆ ಬಂದವನನ್ನು ತಾಯಿ, ಕೇಳಿದಳು.

''ಅದ್ಯಾಕೋ ಇಷ್ಟು ಲೇಟು! ನೀನು ಬರುವುದು ಐದು ನಿಮಿಷ ತಡವಾದರೂ ನನ್ನ ಎದೆ ಹೊಡೆದುಕೊಳ್ಳುತ್ತೆ.''

''ಇವತ್ತು ಹೀಗಾಯ್ತು..'' ಎಂದು ಹೇಳಿ ನಡೆದ ವಿಷಯ ತಿಳಿಸಿದ. ವಿಶೂ ಎಲ್ಲಿ ಅವನದ್ದು ಊಟ ಆಯ್ತಾ? ಕೇಳಿದ.

''ಅವನು ಅವರಮ್ಮನ ಜತೆ, ಅವರ ಅಜ್ಜಿ ಮನೆಗೆ ಹೋಗಿದಾನೆ.''

''ಏನೋ ಹುಶಾರಿಲ್ಲ ಅಂತ ಬೇಗ ಬಂದಳು. ಸುಳ್ಳೋ ನಿಜವೋ ಯಾರಿಗೆ ಗೊತ್ತು!'' ತಾಯಿ ಉದಾಸೀನವಾಗಿ ನುಡಿದಾಗ ಸ್ವಲ್ಪ ರೇಗಿತ್ತು.

''ನಿಜವೇ ಯಾಕಿರಬಾರದು! ಇಲ್ಲೇ ರೆಸ್ಟ್ ತಗೋ ಅಂತ ನೀನೇಕೆ ಹೇಳಲಿಲ್ಲ!''

''ನಾನು ಅವಳಿಗೆ ಅದನ್ನೆಲ್ಲ ಹೇಳುವುದಿಲ್ಲ ಅಂತ ಗೊತ್ತಿದ್ದೂ ನೀನು ಮತ್ತೆ ಮತ್ತೆ ಇದೇ ರೀತಿ ಮಾತನ್ನಾಡ್ತೀಯಲ್ಲಾ..''

''ಇನ್ನು ಎಷ್ಟು ವರ್ಷ ಇದೇ ಹಗೆತನ ಸಾಧಿಸ್ತೀಯಾ? ಅವಳು ನಿನ್ನ ಸೊಸೆ, ಈ ಮನೆಯಲ್ಲಿ ನಿನ್ನ ಜತೆ ವಾಸ ಮಾಡುವವಳು.''

''ಇರಬಹುದು, ಆದರೆ ನನಗಿಷ್ಟ ಬಂದಂತೆ ನಾನು ಇರಬಾರದೆ!''

''ಇರು, ಬೇಡ ಅಂತ ಯಾರಂದರು! ಆದರೆ ಅದರಿಂದ ಅವಳಿಗೆಷ್ಟು ನೋವಾಗುತ್ತೆ ಅಂತ ಎಂದಾದರೂ ಯೋಚಿಸಿದೀಯಾ..?''

''ನಾನು ಜೀವಮಾನವೆಲ್ಲ ನರಳುವಷ್ಟು ನೋವನ್ನು ಅವಳು ನನಗೆ ಕೊಟ್ಟಿದ್ದಾಳೆ, ಅದನ್ನು ಅನುಭವಿಸುತ್ತಿರುವವಳು ನಾನು. ನನ್ನ ಬಗ್ಗೆ ನಿಮಗೆ ಯಾರಿಗೂ ಕರುಣೆ ಇಲ್ಲ, ಅವಳಿಗೆ ಮಾತ್ರ ಅಯ್ಯೋ ಅಂತೀರಿ'' ತಾಯಿ ಗದ್ಗದದ ದನಿಯಲ್ಲಿ ಮಾತನಾಡಿದಾಗ ಅವನಿಗೆ ಬೇಸರವೆನಿಸಿತು. ದಿನದ ಗೋಳು ಎನಿಸಿತು.

"ನನಗೀಗ ಬಡಿಸ್ತೀಯೋ, ಅಥವಾ ನಾನೇ ಬಡಿಸಿಕೊಳ್ಳಲೋ?"

"ಕೂತ್ಕೋ ಬಡಿಸ್ತೀನಿ" ಕಣ್ಣೊರೆಸಿಕೊಂಡಳು.

ತಾಯಿಯ ಬಗ್ಗೆಯೂ ಅಯ್ಯೋ ಅಂತನ್ನಿಸಿತು.. ಆದರೆ ಅವಳ ವರ್ತನೆ ಸರಿಯಲ್ಲ ಎನ್ನುವುದು ಅವನ ವಾದ.

"ಪಾಪ ಸುಧಾದೇನು ತಪ್ಪು! ಪ್ರತಾಪನ್ನ ಪ್ರೀತಿಸಿದ್ದು ತಪ್ಪೇ, ಅವನನ್ನು ಮದುವೆಯಾದದ್ದು ತಪ್ಪೇ, ಆ ನಂತರ, ಮೂರು ವರ್ಷ ಅವನೊಡನೆ ಸಂಸಾರ ನಡೆಸಿರಬೇಕು.. ಈಗ ಅವನೇ ಇಲ್ಲವಲ್ಲ ಎಂದುಕೊಂಡಾಗ, ಈ ಸುಖಕ್ಕೆ, ಈ ಸಂಸಾರಕ್ಕೆ ಸುಧಾ ಹಾತೊರೆದು ಈ ಮನೆಗೆ ಬಂದಳು.. ಮದುವೆಯಾಗಿ ಈ ಮನೆಗೆ ಬಂದದ್ದೂ ಸುಲಭವಲ್ಲ, ಊಟ ಮಾಡುತ್ತಾ ಹಾಗೇ ಆ ದಿನಗಳನ್ನು ನೆನಪಿಸಿಕೊಂಡ.

ಅದೇ ಬೀದಿಯಲ್ಲಿದ್ದ ಕಡೇ ಮನೆಯಲ್ಲಿ ವಾಸವಾಗಿದ್ದರು, ಸುಧಾಳ ಮನೆಯವರು.. ಇವನ ಕ್ಲಾಸಿನಲ್ಲೇ ಓದುತ್ತಿದ್ದಳು ಸುಧಾ.. ಎಲ್ಲರೂ ಒಟ್ಟಿಗೇ ಸ್ಕೂಲಿಗೆ ಹೋಗಿ ಬರುತ್ತಿದ್ದರು. ಸಾಯಂಕಾಲದ ಹೊತ್ತಿನಲ್ಲಿ ಒಟ್ಟಿಗೇ ಒಂದೆಡೆ ಸೇರಿ ಆಟ ಆಡುತ್ತಿದ್ದರು. ಅವಳ ಮನೆಯಲ್ಲಿ ನಾಲ್ಕು ಜನ ಅಕ್ಕತಂಗಿಯರು ಎಲ್ಲರಿಗಿಂತ ಚಿಕ್ಕವನು ತಮ್ಮ.. ಅವನನ್ನು ಕರೆದುಕೊಂಡು, ಸುಧಾ ಇವರ ಮನೆಗೂ ಬರುತ್ತಿದ್ದಳು.

ಪ್ರತಾಪ ಪಿ.ಯು.ಸಿ. ಪಾಸು ಮಾಡಿ, ಇಂಜಿನಿಯರಿಂಗ್ ಸೇರಿದ ಮೇಲೆ, ಸುಧಾ ಅಶೋಕ ಇಬ್ಬರೇ ಸ್ಕೂಲಿಗೆ ಹೋಗಿ ಬರುತ್ತಿದ್ದರು. ಪಿ.ಯು.ಸಿ.ಯಲ್ಲಿದ್ದಾಗ ಸಹ ಇಬ್ಬರೂ ಒಟ್ಟಿಗೇ ಕಾಲೇಜಿಗೆ ಹೋಗುತ್ತಿದ್ದರು. ಆದರೆ ಅವನು ಸೈನ್ಸ್ ವಿಷಯ ಓದುತ್ತಿದ್ದರೆ, ಅವಳು ಕಾಮರ್ಸ್ ಕ್ಲಾಸಿಗೆ ಸೇರಿದ್ದಳು. ಹಾಗಾಗಿ ಕ್ರಮೇಣ ಒಡನಾಟ ಕಮ್ಮಿ ಆಯಿತು. ಆದರೂ ಎಂದಾದರೂ ಒಟ್ಟಿಗೇ ಸೇರಿದರೆ ಗಂಟೆಗಟ್ಟಳೆ ಕುಳಿತು ಮಾತನಾಡುವ ಅಭ್ಯಾಸ. ಸುಧಾ ಸ್ನೇಹಮಯಿ. ಈಗಲೂ ಸಹ ಅಷ್ಟೇ ಅವಳು ತನ್ನ ದುಃಖವನ್ನು ಮರೆತು ಈ ಮನೆಯಲ್ಲಿದ್ದಾಳೆ. ಇಲ್ಲದಿದ್ದರೆ, ತನ್ನ ಮಗನನ್ನು ಎತ್ತಿಕೊಂಡು, ತವರು ಮನೆಗೆ ಹೊರಟು ಹೋಗಿದ್ದರೆ ಅವಳನ್ನ ತಡೆಯುವವರ್‍ಯಾರಿದ್ದರು..? ವಂಶೀನ ಎಲ್ಲರೂ ಬಹಳ ಹಚ್ಚಿಕೊಂಡು ಬಿಟ್ಟಿದ್ದೇವೆ, ಅವನನ್ನು ಬಿಟ್ಟಿರುವುದಂತೂ ಸಾಧ್ಯವಿಲ್ಲ.

"ಏನು ಯೋಚಿಸ್ತಾ ಇದೀಯಾ! ಅನ್ನ ಇನ್ನು ಸ್ವಲ್ಪ ಹಾಕಲೇ?" ತಾಯಿ ಕಮಲಮ್ಮ ಕೇಳಿದಾಗ ಅವನು ಎಚ್ಚೆತ್ತ.

"ಅಮ್ಮ ನಿನಗೆ ಗೊತ್ತಾ! ಅದೇ ಜಗನ್ನಾಥರಾಯರು ಅಂತ ಹೇಳಿದ್ನಲ್ಲ, ಆತನಿಗೆ ಯಾರೂ ಇಲ್ಲವಂತೆ.. ಅವರ ಮನೆಯಲ್ಲಿ ಅಡಿಗೆಯವರೊಬ್ಬರೇ.."

"ಏನು ಕರ್ಮವೋ ಯಾರಿಗೆ ಗೊತ್ತು!"

"ನಾನೂ ಅದನ್ನೇ ಯೋಚಿಸುತ್ತಿದ್ದ."

"ನಮಗೇಕೆ ಅವರ ಮನೆ ವಿಷಯ ಬಿಡು. ನಮ್ಮದೇ ನಮಗೆ ಬೇಕಾದಷ್ಟಿದೆ. ನಿಮ್ಮಪ್ಪನ ಔಷಧಿ ಮುಗಿದು ಹೋಗಿದೆ. ಇವತ್ತೂ ತರಲಿಲ್ಲ ನೀನು" ಆಕ್ಷೇಪಿಸಿದಳು.

"ಈ ಗಲಾಟೆಯಲ್ಲಿ ಮರೆತುಹೋಯ್ತು, ನಾಳೆ ತರ್ತೀನಿ."

"ಯಾಕೆ? ಸಾಯಂಕಾಲ ಅಂಗಡಿ ತೆಗೆಯಲಿಲ್ವೇ.."

"ಇಲ್ಲ, ಸ್ವಲ್ಪ ಬೇರೆ ಕೆಲಸವಿತ್ತು.."

ಒಂದು ಗಳಿಗೆ ಮಲಗಿದ ಶಾಸ್ತ್ರ ಮಾಡಿ ಎದ್ದು, ಕಮಲಮ್ಮ ಬಿಸಿ ಬಿಸಿ ಕಾಫಿ ಮಾಡಿ ಮಗನಿಗೆ ತಂದುಕೊಟ್ಟು ಹಾಗೇ ನಿಂತಿದ್ದಳು, ಏನೋ ಹೇಳಲು, ತವಕಿಸುತ್ತಿರುವಂತೆ ಕಂಡಿತು.

"ಏನಮ್ಮ.." ಎಂದ ನಗುತ್ತಾ.

"ವಾರದ ಕೆಳಗೆ, ಒಬ್ಬರು ಹೆಣ್ಣಿನ ಮನೆಯವರು ಬಂದಿದ್ರಲ್ಲ.." ರಾಗ ಎಳೆದಳು.

"ನನ್ನ ಮದುವೆ ವಿಷಯ ತಾನೇ..? ಅದನ್ನು ಮರೆತುಬಿಡು."

"ಅದ್ಹೇಗೋ ಮರೆಯಕ್ಕೆ ಆಗುತ್ತೆ! ನಮ್ಮ ಕರ್ತವ್ಯ, ಮುಗಿಸಬೇಡವೆ?"

"ಸಧ್ಯಕ್ಕೆ ನನಗೆ ಮದುವೆಯಾಗುವ ಆಸೆ ಇಲ್ಲ, ನನಗೆ ಬೇಕೆನಿಸಿದಾಗ ನಾನೇ ತಿಳಿಸ್ತೀನಿ." ಸರಸರನೆ ಸಿದ್ಧನಾಗಿ ಹೊರಟೇ ಬಿಟ್ಟ, ಸೀದಾ ಸುಧಾಳ ಮನೆಗೆ ಬಂದ. ಅವಳು ವಂಶಿಯನ್ನ ಎತ್ತಿಕೊಂಡು ಹೊರಗೇ ನಿಂತಿದ್ದಳು.

ವಂಶಿಯನ್ನು ಅವಳ ಕೈನಿಂದ ಎತ್ತಿಕೊಂಡು ಕೇಳಿದ.. "ಈಗ ಹೇಗಿದೀಯ ಹುಶಾರಿಲ್ಲ ಎಂದೆಯಂತೆ."

"ಹುಶಾರಾಗಿದೀನಿ, ಏನೋ ಬೇಜಾರು ಅಷ್ಟೇ.."

"ಯಾಕೆ? ಆಫೀಸ್ನಲ್ಲಿ ಏನಾದರೂ ತೊಂದರೇನಾ!"

"ತೊಂದರೆ ಏನಿಲ್ಲ, ಹೊಸದಾಗಿ ಬಂದಿರುವ ಬಾಸ್ ತುಂಬಾ ಸ್ಟ್ರಿಕ್ಟು, ಅವರ ಕೈ ಕೆಳಗೆ ಕೆಲಸ ಮಾಡುವಾಗ ತುಂಬಾ ಹೆದರಿಕೆ ಆಗುತ್ತೆ."

"ಓ, ಇಷ್ಟಕ್ಕೆಲ್ಲಾ ಹೆದರಿದರೆ ಹೇಗೆ? ಅಲ್ವೇನೋ ವಂಶೀ? ಲೊಚಲೊಚನೆ ಅವನ ಕೆನ್ನೆಗೆ ಮುತ್ತನ್ನಿಟ್ಟಾಗ, ಸುಧಾ ಅವನನ್ನೇ ನೋಡಿದಳು.

"ಇವತ್ತು ಬೆಳಿಗ್ಗೆ ನಮ್ಮ ಅಂಗಡಿಗೆ ಬಂದವರನ್ನೊಬ್ಬರನ್ನು ಆಸ್ಪತ್ರೆಗೆ ಸೇರಿಸಬೇಕಾಯ್ತು. ಈಗ ಅಲ್ಲಿಗೇ ಹೊರಟಿದೀನಿ. ನೀನೂ ಬರ್ತೀಯಾ?"

"ಆಸ್ಪತ್ರೆಗಾ? ನಾನು ಬರೊಲ್ಲ" ಎಂದಳು ಖಿನ್ನಳಾಗಿ.

"ಸರಿ ಬಿಡು, ರಾತ್ರಿ ಇಲ್ಲಿ ಉಳಿಯುವುದಾದರೆ, ವಂಶಿಯನ್ನು ಮಾತ್ರ ನಮ್ಮ ಮನೆಗೆ ಕಳಿಸಿಬಿಡು."

"ಇಲ್ಲ ಇನ್ನು ಸ್ವಲ್ಪ ಹೊತ್ತಿಗೆ ನಾನೇ ಹೋಗ್ತೀನಿ" ಎಂದಳು. ವಂಶಿಯನ್ನು ತನ್ನ ಕೈಗೆತ್ತಿಕೊಂಡಳು.

ಸೀದ ನರ್ಸಿಂಗ್ ಹೋಂಗೆ ಬಂದ. ಆತ ಹಾಗೇ ಮಲಗಿಯೇ ಇದ್ದನು. ಸಮೀಪದ ಒಂದು ಕುರ್ಚಿಯ ಮೇಲೆ ಅಡಿಗೆಯಾಕೆ ಕುಳಿತಿದ್ದುದನ್ನು ಕಂಡು ಮುಜ್ಜೇರಿಸಿದ, "ಡಾಕ್ಟರು ಏನಂದ್ರು!" ಪಿಸುದನಿಯಲ್ಲಿ ಕೇಳಿದ.

"ಇನ್ನು ಮೂರು ನಾಲ್ಕು ದಿನ ಇಲ್ಲಿರಲಿ ಎಂದರು. ನಾನು ನಿಮ್ಮ ಅಂಗಡಿಗೆ ಫೋನು ಮಾಡಿದ್ದೆ, ನೀವು ಇರಲಿಲ್ಲವೇನೋ.."

"ಹೌದು, ಇನ್ನು ಹೋಗಿಯೇ ಇಲ್ಲ ಅಲ್ಲಿಗೆ, ಏನಾದರೂ ಬೇಕಿತ್ತಾ?"

"ಕೆಲವು ಔಷಧಿಗಳನ್ನು ಬರೆದು ಕೊಟ್ಟಿದಾರೆ" ಆಕೆ ಚೀಟಿ ಕೊಟ್ಟಳು.

"ಔಷಧಿಗಳು ಇಲ್ಲಿಯ ಸ್ಟೋರ್ಸ್‌ನಲ್ಲೂ ಇರುತ್ತದೆ. ನಾನು ಡಾಕ್ಟರರ ಹತ್ತಿರ ಮಾತನ್ನಾಡ್ತೀನಿ. ನೀವೇನೂ ಚಿಂತಿಸಬೇಡಿ.." ಚೀಟಿಯನ್ನು ಹಿಡಿದು ಹೊರಗೆ ಬಂದ. ಅವನ ಹಿಂದೆಯೇ ಅಡಿಗೆಯಾಕೆ ಬಂದಳು. ಇವನು ತಿರುಗಿ ನೋಡಿದ.

"ರಾಯರ ಆಪ್ತ ಸ್ನೇಹಿತರೊಬ್ಬರು, ಇದೇ ಊರಿನಲ್ಲಿದಾರೆ. ಅವರ ಮನೆ ವಿಳಾಸ ಗೊತ್ತಿಲ್ಲ, ಆದರೆ ಅವರ ಫೋನು ನಂಬರ್‍ರು ನನ್ನ ಹತ್ತಿರ ಇದೆ."

"ಅವರಿಗೆ ತಿಳಿಸಬೇಕಾ..? ನೀವೇ ಫೋನು ಮಾಡಬಹುದಾಗಿತ್ತಲ್ಲ."

"ಆತ ಊರಿನಲ್ಲಿಲ್ಲ ಅಂತ ಹೇಳಿದರು ಅವರ ಮನೆಯವರು.. ಅವರನ್ನು ಭೇಟಿಯಾಗಲೇ ಬೇಕು.."

"ಯಾಕೆ! ರಾಯರ ಕಂಡೀಷನ್ ಚೆನ್ನಾಗಿಲ್ವಾ!"

"ಅದಕ್ಕಲ್ಲ, ಮುಖ್ಯವಾದ ವಿಷಯಾನೇ ಬೇರೆ.."

"ಅವರು ಯಾವ ಊರಿಗ ಹೋಗಿದಾರೋ ಏನೋ.. ಏನು ವಿಷಯ ಅಂತ ನನಗೇ ಹೇಳಿ, ಪರವಾಗಿಲ್ಲ."

"ರಾಯರ ಮಗಳು ಎಲ್ಲಿದಾಳೆ ಅಂತ ಅವರಿಗೆ ಮಾತ್ರ ಗೊತ್ತಿದೆ.."

"ಅಂದ್ರೆ, ನನಗೆ ಅರ್ಥವಾಗಲಿಲ್ಲ."

"ರಾಯರ ಮಗಳು ಇದೇ ಊರಿನ ಒಂದು ಲೇಡೀಸ್ ಹಾಸ್ಟೆಲ್ಲಿನಲ್ಲಿದಾಳೆ, ಆ ಹಾಸ್ಟೆಲ್ಲು ಅವರಿಗೆ ಮಾತ್ರ ಗೊತ್ತು.."

"ಯಾಕೆ? ಇವರಿಗೆ ತಿಳಿಯದೇ.."

"ಇಲ್ಲ, ಅದೊಂದು ದೊಡ್ಡ ಕತೆ, ಅವಳು ಮನಸ್ತಾಪ ಮಾಡಿಕೊಂಡು ಮನೆ ಬಿಟ್ಟು ಹೋಗಿದಾಳೆ.."

"ಓ ಹಾಗಾದರೆ ಅವಳನ್ನು ಹುಡುಕುವುದು ಕಷ್ಟ."

"ಈಗಲಾದರೂ, ತಂದೆಗೆ ಹುಷಾರಿಲ್ಲ ಅಂತಂದರೆ ಅವಳು ಮನೆಗೆ ವಾಪಸ್ಸು ಬರಬಹುದೋ, ಏನೋ.. ಅಂತ ನನ್ನ ಆಸೆ.."

"ಸರಿ, ಆ ಫೋನು ನಂಬರನ್ನು ಕೊಡಿ," ಎಂದು ನಂಬರನ್ನು ಪಡೆದು, ಅಲ್ಲಿಂದ ಹೊರಟು ಹೋದ. ಡಾಕ್ಟರರ ಹತ್ತಿರ ಮಾತನ್ನಾಡಿ, ಸ್ಟೋರ್ಸ್‌ನಿಂದ ಔಷಧಿಗಳನ್ನು ಪಡೆದ. ಹಾಗೇ ತನ್ನ ತಂದೆಗೆ ಕೊಡಬೇಕಾದ ಔಷಧಿಗಳನ್ನು ನೆನಪಿಸಿಕೊಂಡು, ಅದನ್ನು ಖರೀದಿಸಿದ. ಫೋನಿನ ವಿಷಯವನ್ನು ಮರೆತ.

"ರಾತ್ರಿ ನಾನು ಇಲ್ಲಿ ಇರಲು ಸಾಧ್ಯವಿಲ್ಲ" ಎಂದು ಅಡಿಗೆಯವಳು ನುಡಿದಾಗ, ರಾಯರನ್ನು ನೋಡಿಕೊಳ್ಳಲು ಒಬ್ಬ ನರ್ಸನ್ನು ಗೊತ್ತು ಮಾಡಿಕೊಟ್ಟ. ಆಕೆ ಹೊರಟು ಹೋದಳು.

ಇವನೂ ಅಲ್ಲಿ ಸ್ವಲ್ಪ ಹೊತ್ತು ಇದ್ದು ಮನೆಗೆ ಹೊರಟ. ಎದುರಿಗೆ ಅವನ ಸ್ನೇಹಿತ ದಿನೇಶ ಎದುರಾದ.

ಅದೇನೋ ಇಲ್ಲಿ? ಇಬ್ಬರೂ ಒಬ್ಬರನ್ನೊಬ್ಬರು ಒಟ್ಟಿಗೇ ಪ್ರಶ್ನಿಸಿದರು.

ಅಶೋಕ ನಡೆದದ್ದನ್ನೆಲ್ಲಾ ತಿಳಿಸಿದ.

"ನನ್ನ ಸ್ಟುಡಿಯೋದ ಫೋನು ಕೆಟ್ಟು ಹೋಗಿದೆ.. ಇಲ್ಲಿ ನರ್ಸಿಂಗ್ ಹೋಂನಲ್ಲಿ ಪಬ್ಲಿಕ್ ಫೋನ್ ಇರುತ್ತಲ್ಲ ಅಂತ ಬಂದೆ.."

"ಓ.. ಮರತೇ ಹೋಗಿತ್ತು.. ನೀನು ಫೋನು ಅನ್ನುತ್ಲೂ ಜ್ಞಾಪಕಕ್ಕೆ ಬಂತು" ಎಂದ ತಲೆಯಮೇಲೆ ಕೈ ಹೊತ್ತು.

"ಏನಯ್ಯ ಅದು! ಯಾಕಿಷ್ಟು ಗಾಬರಿ..?"

"ಅದೇ ಹೇಳಿದ್ನಲ್ಲ ಈಗ ತಾನೇ, ಒಬ್ಬರು ಪೇಷಂಟು, ಅವರ ಕಡೆಯವರೊಬ್ಬರಿಗೆ ಫೋನ್ ಮಾಡಬೇಕಾಗಿತ್ತು.." ಜೇಬಿಗೆ ಕೈ ಹಾಕಿ ತಡಕಾಡಿದ. ನಂಬರ್ರು ಸಿಕ್ಕಿತ್ತು.

"ಸಧ್ಯ ಸಿಕ್ತು" ಎಂದು ನುಡಿದ, ಹೇಗೂ ಈಗ ನೀನು ಫೋನು ಮಾಡುಕ್ಕೆ ಹೊರಟಿದೀಯಾ.. ಈ ನಂಬರ್ರಿಗೆ ಫೋನು ಮಾಡಿ, ಅವರ ಮನೆಯವರು ಯಾರಾದರೂ ಸರಿ, ಬೆಳಿಗ್ಗೆ ಒಂಬತ್ತು ಗಂಟೆಗೆ ನನ್ನ ಅಂಗಡಿಗೆ ಬರುವಂತೆ ತಿಳಿಸು. ಖಂಡಿತಾ ಬರಲೇ ಬೇಕು, ಮುಖ್ಯವಾದ ವಿಚಾರ ಅಂತ ಹೇಳು, ಮರೀಬೇಡ.."

"ಏಯ್, ಏನಯ್ಯ, ನೀನು" ಎಂದು ಅವನು ಗೊಣಗುತ್ತಿದ್ದಂತೆಯೇ ಇವನು ತಾನು ಸ್ಕೂಟರ್ ನಿಲ್ಲಿಸಿದ್ದ ಜಾಗಕ್ಕೆ ಬಂದಿದ್ದ.

ಬೆಳಿಗ್ಗೆ ಅವನು ಅಂಗಡಿಗೆ ಬಂದ ಸ್ವಲ್ಪ ಹೊತ್ತಿನಲ್ಲೇ ಯಾರೋ ಇಬ್ಬರು ಬಂದರು. ನೋಡಿದರೆ ಅಣ್ಣತಮ್ಮಂದಿರಂತೆ ಇದ್ದರು.

"ಎಸ್ ಪ್ಲೀಸ್ ಎಂದ ವಿನಯದಿಂದ."

"ನೀವು ಅಶೋಕ್ ಅನ್ನೋರು ತಾನೇ?" ಒಬ್ಬ ದರ್ಪದಿಂದ ಕೇಳಿದ.

"ಹುಂ, ಹೌದು, ನೀವು!"

"ನೆನ್ನೆ ರಾತ್ರಿ ನಮಗೆ ಯಾರೋ ಫೋನು ಮಾಡಿದ್ದರು.."

"ಓ ಅದಾ! ಬನ್ನಿ ಬನ್ನಿ" ಎಂದ ಗಡಿಬಿಡಿಯಿಂದ.

"ಪರವಾಗಿಲ್ಲ, ಏನು ವಿಷಯ ಅಂತ ಹೇಳಿ, ನಾವು ಆಫೀಸಿಗೆ ಹೋಗಬೇಕು," ಆತುರವನ್ನು ವ್ಯಕ್ತ ಪಡಿಸಿದರು.

"ಅದು ಏನು ಅಂದ್ರೆ.. ನಿಮ್ಮ ತಂದೆ ಸ್ನೇಹಿತರು ಜಗನ್ನಾಥರಾಯರು ನರ್ಸಿಂಗ್ ಹೋಂನಲ್ಲಿದಾರೆ.. ಅದನ್ನ ತಿಳಿಸುವುದಕ್ಕೋಸ್ಕರ.."

"ಅವರು ಅಮೆರಿಕಾಕ್ಕೆ ಹೋಗಿದಾರೆ, ಬರುವುದು ಇನ್ನು ಒಂದು ತಿಂಗಳಾದರೂ ಆಗಬಹುದು.."

"ಓ.. ರಾಯರ ಮಗಳು ಯಾವ ಹಾಸ್ಟೆಲ್ಲಿದಾರೆ ಅಂತ ನಿಮಗೇನಾದರೂ ಗೊತ್ತೆ!"

"ಅವರ ಮಗಳು ? ಯಾವ ಹಾಸ್ಟೆಲ್ಲಿನಲ್ಲಿ? ನಮಗೆ ಗೊತ್ತಿಲ್ಲವಲ್ಲ.."

"ಹಾಗಂತ ಅವರ ಮನೆ ಅಡಿಗೆಯವರು ಹೇಳಿದರು. ಯಾವ ಹಾಸ್ಟೆಲ್ಲು ಅಂತ ನಿಮ್ಮ ತಂದೆಗೆ ಮಾತ್ರ ತಿಳಿದಿದೆಯಂತೆ.."

"ಸಾರಿ, ನಮಗೆ ಗೊತ್ತಿಲ್ಲ."

"ಈಗ ರಾಯರ ಮಗಳಿಗೆ ಅವರ ತಂದೆಯ ಅನಾರೋಗ್ಯದ ಬಗ್ಗೆ ತಿಳಿಸುವುದು ಮುಖ್ಯ. ನೀವು ಹುಡುಕಿ, ಕಡೆಗೆ ಹಾಸ್ಟೆಲ್ಲಿನ ಫೋನು ನಂಬರನ್ನಾದರೂ ಕೊಟ್ಟರೆ.. ಅಥವಾ ನಿಮ್ಮ ತಾಯಿಗೇನಾದರೂ ತಿಳಿದಿದ್ದರೆ.."?

"ನಮ್ಮ ತಾಯೀನೂ ಅವರ ಜತೆಗೆ ಹೋಗಿದ್ದಾರೆ.."

"ಹಾಗಾದರೆ ಈಗ ಏನು ಮಾಡುವುದು!"

"ನಮಗೆ ಗೊತ್ತಿದ್ದರೆ ತಿಳಿಸುತ್ತಿದ್ದೆವು," ಅವರುಗಳು ಹೊರಟು ಹೋದಾಗ ಅವನು ನಿರಾಶನಾದ.

ದಿನೇಶನಿಗೆ ಫೋನು ಮಾಡಿದ.

"ಹೋಗಲಿ ಬಿಡೋ, ನೀನು ಎಲ್ಲಿ ಅಂತ ಹುಡುಕ್ತೀಯಾ!" ಸ್ನೇಹಿತ ನುಡಿದಿದ್ದ.

"ಸುಮ್ಮನಿರಬಹುದು, ಆದರೆ ಮನಸ್ಸು ಕೇಳುತ್ತಿಲ್ಲ" ಎಂದಿದ್ದ.

"ಒಂದು ನಿಮಿಷ. ನೋಡು ಒಂದು ಕೆಲಸ ಮಾಡು.. ನೀನು ಅವಳ ಫೋಟೋ

ಕೇಳಿ ತಗೋ, ಹಾಗೇ ಅವಳ ಹೆಸರನ್ನೂ ಓದುವ ಕಾಲೇಜನ್ನೂ ಕೇಳಿ ತಿಳಿದುಕೋ, ನನಗೆ ಕೆಲವು ಹುಡುಗಿಯರ ಪರಿಚಯವಿದೆ. ವಿಚಾರಿಸೋಣ,''

''ಹಾಗಾದ್ರೆ.. ಇದನ್ನ ಟ್ರೈ ಮಾಡ್ತೀನಿ, ಥ್ಯಾಂಕ್‌ಯೂ...''ಎಂದು ರಿಸೀವರನ್ನು ಇಡುವ ಮೊದಲು ಅವನು ''ಯೂ ಫೂಲ್'' ಎಂದು ಬೈದಿದ್ದು ಕೇಳಿಸಿತ್ತು.

''ತಾನು ಹತ್ತಾರು ಹುಡುಗೀರ ಮಧ್ಯೆ ಇರ್ತಾನೆ, ನನ್ನನ್ನು ಫೂಲ್ ಅಂತ ಬೈತಾನೆ' ಎಂದುಕೊಂಡು, ಮಧ್ಯಾಹ್ನ ಅವರ ಮನೆಗೆ ಹೋಗಬೇಕು ಎಂದುಕೊಂಡ.

ಅಡಿಗೆಯಾಕೆ ಪರಿಚಯದ ನಗೆ ನಕ್ಕು ಬನ್ನಿ ಎಂದಳು. ಈಕೆಯದೇ ಮಜಾ.. ಇಷ್ಟು ದೊಡ್ಡ ಮನೆಯಲ್ಲಿ ಇವಳೊಬ್ಬಳೇ ಎಂದುಕೊಂಡು, ಆತನ ಸ್ನೇಹಿತರು ಊರಿನಲ್ಲಿಲ್ಲ ಎನ್ನುವ ವಿಚಾರವನ್ನು ತಿಳಿಸಿದ.

''ಹೌದೇ! ಈಗ ಏನು ಮಾಡೋದು!'' ಆಕೆ ಮಂಕಾಗಿ ಕೇಳಿದಾಗ, ಇವನಿಗೆ ಏನು ಹೇಳಬೇಕೆಂದು ತೋಚಲಿಲ್ಲ.

''ಎಂತಹ ವಿಚಿತ್ರ ನೋಡಿ, ತಂದೆ ಅನಾರೋಗ್ಯದಿಂದ ಬಳಲುತ್ತಿರುವಾಗಲೂ, ಹತ್ತಿರ, ಆತನ ಮನೆಯ ಹುಡುಗಿ ಬರಲಿಲ್ಲ ಎಂದರೆ..''

''ಹತ್ತಿರದ ಇನ್ಯಾವ ನೆಂಟರಿಷ್ಟರೂ ಇಲ್ಲವೇ?''

''ಇಲ್ಲದೇ ಏನು! ಬೇಕಾದಷ್ಟು ಜನರು ಇದಾರೆ. ಆದರೆ ಈ ಹುಡುಗಿಯ ದೆಸೆಯಿಂದ ಎಲ್ಲರೂ ದೂರವಾಗಿದಾರೆ, ಯಾರೂ ಬಂದು ಹೋಗಿ ಮಾಡುವುದಿಲ್ಲ'' ಎಂದಳು.

''ಯಾಕೆ? ಏನಾಯ್ತು'' ಎಂದು ಕೇಳುವ ತವಕವಾದರೂ ಕೇಳಲಿಲ್ಲ, ಆಕೆಯೇ ಮುಂದುವರೆಸಿದಳು.

''ಆ ಹುಡುಗೀದು ತಪ್ಪೋ, ರಾಯರದೇ ತಪ್ಪೋ, ಅಂತೂ ವಿಧಿ ಇಬ್ಬರನ್ನು ದೂರ ದೂರ ಮಾಡಿತು..'' ಅವನು ಸುಮ್ಮನಿದ್ದುದನ್ನು ಕಂಡು ಆಕೆ ಹೇಳತೊಡಗಿದಳು.

''ಅವಳಿಗೀಗ ಇಪ್ಪತ್ತು ವರ್ಷ.. ಎರಡು ವರ್ಷವಾಯ್ತು ಈ ಮನೆ ಬಿಟ್ಟು ಹೋಗಿ, ಎಲ್ಲಿದಾಳೋ ಹೇಗಿದಾಳೋ, ಒಂದೂ ತಿಳಿಯದು, ಈತನೂ ವಿಚಾರಿಸುವುದಿಲ್ಲ, ಆ ಸ್ನೇಹಿತರು, ತಾನಾಗಿಯೇ ಹೇಳಿದರೆ ಮಾತ್ರ ವಿಷಯ ತಿಳಿಯುತ್ತೆ.''

''ಪಾಪ, ಈ ಹುಡುಗಿಯೂ ಹೀಗಿರಲಿಲ್ಲ, ಹನ್ನೆರಡು ವರ್ಷದ ಕೆಳಗೆ ಈ ಸಂಸಾರ ಚೆನ್ನಾಗಿಯೇ ಇತ್ತು. ಗಂಡ ಹೆಂಡತಿ, ಎರಡು ಮಕ್ಕಳು. ರಾಯರ ತಂದೆ ಎಲ್ಲರೂ ಚೆನ್ನಾಗಿಯೇ ಇದ್ದರು. ಪ್ರತಿ ವರ್ಷಕ್ಕೂ ರಜದಲ್ಲಿ ಎಲ್ಲಾದರೂ ಹೊರಗೆ ತಿರುಗಾಡಿಕೊಂಡು ಬರುತ್ತಿದ್ದರು. ಆ ವರ್ಷವೂ ಹೀಗೇ ಹೋದಾಗ, ನಡೆದ ಬಸ್ಸು ಅಪಘಾತದಲ್ಲಿ ಇವರ ಪತ್ನಿ ಹಾಗೂ ಚಿಕ್ಕ ಮಗಳು ಹೋಗಿ ಬಿಟ್ಟರು, ವನಜ ಅನಾಥಳಾದಳು.''

ರಾಯರು ಅವಳನ್ನು ಚೆನ್ನಾಗಿಯೇ ನೋಡಿಕೊಂಡರು, ಮುದ್ದು ಸ್ವಲ್ಪ ಅತಿ ಎನ್ನುವಷ್ಟು.. ಈ ಕಾರಣದಿಂದಲೋ, ಅಥವಾ ತಾಯಿಯಿಲ್ಲದ ಕೊರತೆಯಿಂದಲೋ, ಹಠ, ಮೊಂಡುತನದಿಂದ ದಿನಾ ಏನಾದರೂ ಒಂದು ರಂಪ ಮಾಡುತ್ತಿದ್ದಳು. ಹೀಗೇ ಕೆಲವು ವರ್ಷಗಳು ಕಳೆದವು.

ಹೈಸ್ಕೂಲಿಗೆ ಬಂದ ಹುಡುಗಿ, ಹೀಗೇ ಆಡುತ್ತಿದ್ದಾಗ, ಇವರ ನೆಂಟರಿಷ್ಟರೆಲ್ಲ ಏನೇನೋ ಸಲಹೆ ಕೊಡಲಾರಂಭಿಸಿದ್ದರು. ಅವರುಗಳ ಪೈಕಿ ಒಬ್ಬರ ಸಲಹೆ, ರಾಯರು ಮರು ಮದುವೆಯಾಗುವುದು.

"ನೀನು ತಪ್ಪು ಮಾಡಿದೆ. ಈ ಮೊದಲೆ ಈ ಕೆಲಸ ಮಾಡಬೇಕಾಗಿತ್ತು. ಎಲ್ಲಾ ತಾಯಿಯಿಲ್ಲದ ಕೊರತೆಯೊಂದೇ, ಎಲ್ಲಕ್ಕೂ ಕಾರಣ. ಮಲತಾಯಿ ಬಂದರೂ, ತಾಯಿಯ ಪ್ರೀತಿ ವಿಶ್ವಾಸ ತೋರಿಸಿದರೆ ಸರಿ ಹೋಗುತ್ತೆ.. ನೀನು ಮತ್ತೆ ಮದುವೆಯಾಗು"

ಹೆಂಡತಿ ಸತ್ತು ಹತ್ತು ವರ್ಷಗಳ ನಂತರ ಈತ ಮತ್ತೆ ಮದುವೆಯಾದರು. ಮೊದಲು ವನಜಳಿಗೆ ಈ ವಿಷಯವನ್ನು ತಿಳಿಸಿರಲಿಲ್ಲ.

ಯಾವುದೋ ಹೋಟೆಲ್ಲಿನಲ್ಲಿ ಸ್ನೇಹಿತರ ಸಮ್ಮುಖದಲ್ಲಿ ಮದುವೆಯ ಶಾಸ್ತ್ರವನ್ನು ಮುಗಿಸಿಕೊಂಡು ಆಕೆಯನ್ನು ಮನೆಗೆ ಕರೆತಂದರು. ರೂಮಿನಲ್ಲಿ ಕುಳಿತಿದ್ದ ಮಗಳನ್ನು ಹೊರಗೆ ಕರೆದುಕೊಂಡು ಬಂದು, ಆಕೆಯ ಪರಿಚಯ ಮಾಡಿಸಿದರು.

ಆಗ ನೋಡಬೇಕಾಗಿತ್ತು ಅವಳ ಅವತಾರ.. ಹದಿನೆಂಟು ವರ್ಷದ ಹುಡುಗಿ ಏನು ರಂಪ ಮಾಡಿ ಬಿಟ್ಟಳು ಅಂತ..

ಕೈಗೆ ಸಿಕ್ಕಿದ ಪೇಪರ್ ವೈಟ್‌ನ್ನು ತೆಗೆದು ಆಕೆಯ ಮೇಲೆ ಎಸೆದು,

"ಇವಳು ನನ್ನ ತಾಯಿಯಾಗಲು ಸಾಧ್ಯವಿಲ್ಲ.. ಈ ವಯಸ್ಸಿನಲ್ಲಿ ನಿಮಗೆ ಮತ್ತೆ ಮದುವೆಯಾಗಲು ಹೀನಾಯವೆನ್ನಿಸಲಿಲ್ಲವೆ!" ಅಂತ ಕಿರುಚಾಡಿದಳು.

ರಾಯರು ಅವಮಾನಿತರಾಗಿ, ಅವಳಿಗೆ ರಪರಪನೆ ಹೊಡೆದರು. ಅದೇ ಮೊದಲು ಹೊಡೆದಿದ್ದು.. ಎಂದೂ ಮುದ್ದಿನ ಮಗಳಿಗೆ ಹೊಡೆದಿರಲಿಲ್ಲ.

"ಇವಳ ಎದುರಿಗೆ ನನ್ನನ್ನು ಹೊಡೆದ್ರಾ?.. ಸ್ವಂತ ಮಗಳನ್ನು ಹೊಡೆಯುವ ಧೈರ್ಯ ನಿಮಗೆ ? ಎಲ್ಲಾ ಇವಳಿಂದ.. ಎಂದು ಮತ್ತೆ ಆತ ನೋಡುತ್ತಿದ್ದಂತೆಯೇ ಆಕೆಯ ಕೆನ್ನೆಗೆ ಹೊಡೆದಿದ್ದಳು.

ಇದು, ಬೆಳೆದ ಹುಡುಗಿ ಮಾಡಿದ್ದು ತಪ್ಪು, ಸರಿ ಅಂತ ಹೇಳಲಾರೆ. ಆದರೆ ಇದರಲ್ಲಿ ಆತನ ತಪ್ಪು ಇದೆ. ವಯಸ್ಸಿಗೆ ಬಂದ ಮಗಳಿಗೆ ವಿಷಯ ತಿಳಿಸದೇ ಮದುವೆ ಆದದ್ದು ತಪ್ಪೇನೋ ಅಂತ ಅನ್ನಿಸುತ್ತೆ.

ಆಕೆ ದಿಗ್ಭ್ರಾಂತಳಾಗಿ ನಿಂತಿದ್ದಳು.. ನಾವೂ ಎಲ್ಲರೂ ತಪ್ಪಿತಸ್ಥರಂತೆ ನಿಂತಿದ್ದೆವು, ನಮ್ಮನ್ನೆಲ್ಲ

ಭಯ ಆವರಿಸಿಕೊಂಡಿತ್ತು. ಏನು ಅನಾಹುತ ನಡೆಯಲಿದೆ ಅಂತನ್ನಿಸಿತ್ತು. ವನಜಾ ಅಳುತ್ತಿರಲಿಲ್ಲ. ಚಂಡಿಯಂತೆ ಕೂಗಾಡಿದಳು.

"ಈ ಮನೆಯಲ್ಲಿ ನಾನಿರಬೇಕು.. ಅಥವಾ ಇವಳಿರಬೇಕು.. ಈ ಗಳಿಗೆಯಲ್ಲಿ ಇದು ಇತ್ಯರ್ಥವಾಗಿ ಬಿಡಬೇಕು...ಎಂದಳು. ಆಕೆಯಾಗಲೀ, ಆತನಾಗಲೀ ಏನೂ ಹೇಳದಿದ್ದಾಗ, ಅವಳು ರೊಚ್ಚಿಗೆದ್ದಳು.

ಈ ಹೆಂಗಸಿಗೋಸ್ಕರ, ಇವತ್ತು ನಾನು ಬೇಡವಾದೆ. ನಿಮಗೆ ಬೇಡವಾದ ಮೇಲೆ ನಾನು ಈ ಮನೆಯಲ್ಲಿರುವುದಿಲ್ಲ.. ಎಂದು ನಿಂತಂತೆಯೇ ಹಾಗೇ ಹೊರಟು ಹೋದಳು. ತಡೆಯಲು ಹೋದ ನನ್ನನ್ನು ತಳ್ಳಿದ್ದಳು, ಯಾರೂ ಏನೂ ಆಡಿರಲಿಲ್ಲ. ರಾಯರ ಅಕ್ಕ ಮಾತ್ರ, ಎಲ್ಲಿ ಹೋಗ್ತಾಳೆ, ಎಷ್ಟಾದರೂ ಹುಡುಗಿ, ಮನೆ ಬಿಟ್ಟು ಬೀದಿಯಲ್ಲಿ ತಿರುಗೋಕ್ಕೇ ಆಗುತ್ತೆ ? ಕತ್ತಲೆಯಾಗೋ ಹೊತ್ತಿಗೆ ಬರ್ತಾಳೆ" ಎಂದಿದ್ದರು.

ಆದರೆ ಅವಳು ಬರಲಿಲ್ಲ, ಎಲ್ಲೆಲ್ಲೋ ತಿರುಗಾಡಿ, ಸೀದಾ ರಾಯರ ಸ್ನೇಹಿತನ ಮನೆಗೆ ಹೋದಳಂತೆ. ಅವರ ಚಿಕ್ಕಮಗ, ಫಾರಿನ್ನಿಗೆ ಓದುಕ್ಕೆ ಹೋಗಿದಾನೆ, ಅವನೇ ನಿನ್ನ ಗಂಡ ಎಂದು ಇವಳನ್ನು ತಮಾಷೆ ಮಾಡುತ್ತಿದ್ದರು. ಆ ಮಾತನ್ನು ನಂಬಿ, ಅವಳು ಅಲ್ಲಿಗೆ ಹೋಗಿರಬೇಕು. ಆತ ಎಷ್ಟೆಷ್ಟೋ ಸಮಾಧಾನ ಹೇಳಿದರೂ ವನಜ ತನ್ನ ಹಠ ಬಿಡಲಿಲ್ಲ.. ಮನೆಗೆ ವಾಪಸ್ಸು ಬರಲು ನಿರಾಕರಿಸಿದಳಂತೆ.

"ನಾನು ಇನ್ನು ಮೇಲೆ ಇಲ್ಲೇ ಇರ್ತೀನಿ.." ಎಂದಳಂತೆ, ಆಕ್ಷಣಕ್ಕೆ ಆತ ಒಪ್ಪಿದರೂ, ಅವಳಿಗೆ ತಿಳಿಯದಂತೆ, ಮನೆಗೆ ತಿಳಿಸಿದ್ದರು, ಫೋನು ಮಾಡಿ.

ರಾಯರಿಗೆ ಸ್ವಲ್ಪ ನಿರಾಳವೆನಿಸಿದ್ದರೂ, ಅವಮಾನದಿಂದ ಕುದಿಯುತ್ತಿದ್ದರು.

"ಇನ್ನು ಅವಳನ್ನು ಮನೆಗೆ ಸೇರಿಸುವುದಿಲ್ಲ, ಎಲ್ಲಾದರೂ ಹಾಳಾಗಲೀ ನನಗೇನು!" ಎಂದು ಕೂಗಾಡಿದ್ದರು.

ಆಮೇಲೆ ಹಾಗೇ ಆಯಿತು.. ಆತನ ಸ್ನೇಹಿತ ಬಂದಿದ್ದವರು, ಅವಳಿಗೂ ವಾಪಸ್ಸು ಬರಲು ಇಷ್ಟವಿಲ್ಲ, ನೀನೂ ಹೀಗೇ ಆಡ್ತೀಯಾ.. ಚೆನ್ನಾಗಿದೆ ಅಪ್ಪ ಮಗಳ ವ್ಯವಹಾರ.. ಈಗ ಏನು ಮಾಡುವುದು ?" ಎಂದು ಪ್ರಶ್ನಿಸಿದ್ದರು.

"ನಿನ್ನ ಮನೆಯಲ್ಲಿ ಇಟ್ಟುಕೋ ಬೇಕಾದರೆ, ಅಥವಾ ಯಾವುದಾದರೂ ಲೇಡೀಸ್ ಹಾಸ್ಟೆಲ್ಲಿಗೆ ಸೇರಿಸಿಬಿಡು.. ಎಷ್ಟು ಖರ್ಚಾದರೂ ಪರವಾಗಿಲ್ಲ , ನಾನು ಅವಳ ತಂದೆಯಾಗಿರುವ ತಪ್ಪಿಗೆ, ಅವಳಿಗೋಸ್ಕರ ಖರ್ಚು ಮಾಡ್ತೀನಿ" ಎಂದಿದ್ದರು.

"ಇದು ಜವಾಬ್ದಾರಿ ಇರುವ ವ್ಯಕ್ತಿ ಆಡುವ ಮಾತಲ್ಲ.. ನನ್ನ ಚಿಕ್ಕಮಗ ಒಪ್ಪಿದರೆ, ಮುಂದೆ ಅವಳು ನನ್ನ ಸೊಸೆಯಾದರೂ ಆಗಬಹುದು. ಆದರೆ ಆ ಒಂದು ಕಾರಣದಿಂದ, ನಾನು ಅವಳನ್ನು ನನ್ನ ಮನೆಯಲ್ಲಿ ಇಟ್ಟುಕೊಳ್ಳಲಾರೆ. ಬೆಳೆದ, ಮದುವೆಯಾಗದ ಇನ್ನು ಇಬ್ಬರು ಗಂಡು ಮಕ್ಕಳಿದಾರೆ ಮನೆಯಲ್ಲಿ."

"ನಿನ್ನಿಷ್ಟ ಏನು ಬೇಕಾದರೂ ಮಾಡು.. ಈ ವಯಸ್ಸಿನಲ್ಲಿ ನನಗೆ ಎಷ್ಟು ಅವಮಾನ ಮಾಡಿಬಿಟ್ಟಳು.. ಅದನ್ನು ಹೇಗೆ ಮರೆಯಲಿ! ನಾನು ಮತ್ತೆ ಮದುವೆಯಾದುದೇ ನಗೆಪಾಟಲಾಯಿತು. ಅದಕ್ಕೆ ಇವಳೇ ಕಾರಣ.. ಇವಳಿಗೋಸ್ಕರ ನಾನು ಮದುವೆಯಾದದ್ದು.. ಇಲ್ಲದಿದ್ದರೆ ನನಗೆ ಹೆಂಡತಿಯ ಅಗತ್ಯವಿರಲಿಲ್ಲ"

"ನೀನು ಹೀಗಂತೀಯಾ ? ಅವಳೇನಂದಳು ಗೊತ್ತೇ.. ಅಮ್ಮ ಇಲ್ಲದೇ ನಾನು ಇರಬಲ್ಲೆ ಆದರೆ ಅಪ್ಪ ಹೆಂಡತಿ ಇಲ್ಲದೇ ಇರಲಾಗಲಿಲ್ಲ, ಈ ವಯಸ್ಸಿನಲ್ಲಿ ಮದುವೆ ಅಂತ ನೆನೆಸಿಕೊಂಡರೇ ಹೀನಾಯವಾಗುತ್ತೆ" ಎಂದಳು.

"ನೋಡಿದ್ಯಾ? ಎಷ್ಟು ಚಿಕ್ಕ ಹುಡುಗಿಗೆ ಎಂತಹ ದೊಡ್ಡ ಮಾತು..? ನಿನ್ನ ಎದುರಿಗೆ ಇಂತಹ ಮಾತುಗಳನ್ನಾಡಬಹುದೆ ಅವಳು..?"

"ಅವಳು ಅವಿವೇಕಿ, ಮೂರ್ಖ, ಅವಳು ಈ ಜನ್ಮದಲ್ಲಿ ಸರಿ ಹೋಗುವುದಿಲ್ಲ, ಇನ್ನು ಅವಳ ವಿಷಯವನ್ನು ನನ್ನೆದುರಿಗೆ ಮಾತನಾಡಬೇಡ.." ಎತ್ತರದ ಧ್ವನಿಯಲ್ಲಿ ಹೇಳಿದ್ದರು.

"ನೀನೇಕೆ ಇಷ್ಟು ಕಠಿಣನಾಗಿದೀಯೋ ನನಗೆ ಅರ್ಥವಾಗುತ್ತಿಲ್ಲ, ನನ್ನ ಮನೆಗೆ ಆಶ್ರಯ ಕೇಳಿ ಬಂದವಳನ್ನು ಸಲಹಬೇಕಾದದ್ದು ನನ್ನ ಕರ್ತವ್ಯ.. ಆಗಲಿ, ಅವಳನ್ನು ಯಾವುದಾದರೂ ಲೇಡಿಸ್ ಹಾಸ್ಟೆಲ್ಲಿಗೆ ಸೇರಿಸುತ್ತೀನಿ. ಆಮೇಲೆ ನಿಧಾನವಾಗಿ ಬಂದು ಮಾತನಾಡ್ತೀನಿ. ಈಗ ನಿನ್ನ ಮನಸ್ಸೂ ಸರಿಯಾಗಿಲ್ಲ" ಆತ ಹೊರಟು ಹೋಗಿದ್ದ.

ಹೀಗೆ ಅವಳು ಹಾಸ್ಟೆಲ್ಲು ಸೇರಿದಳು. ಅಲ್ಲಿಯ ಖರ್ಚೆಲ್ಲಾ ಇವರದೇ. ಆದರೆ ಗಾರ್ಡಿಯನ್ ಅವರು. ಎರಡು ವರ್ಷದಿಂದ ಅವಳೆಲ್ಲಿದ್ದಾಳೆ ಹೇಗಿದ್ದಾಳೆ ಎನ್ನುವುದು ಅವರಿಗೆ ಮಾತ್ರ ತಿಳಿದಿದೆ. ಆತನೂ ನಮ್ಮ ಮನೆಗೆ ಬರುವುದಿಲ್ಲ, ಘೋನಿನಲ್ಲಿ ವಿಷಯ ತಿಳಿಸ್ತಾರೆ. ತಿಂಗಳು ತಿಂಗಳಿಗೆ ಆತನ ಹೆಸರಿಗೆ ಹಣ ಜಮಾ ಮಾಡ್ತಾರೆ.

"ಯಾವ ಬ್ಯಾಂಕಿನಲ್ಲಿ?" ಕಾತುರದಿಂದ ಕೇಳಿದ.

"ರಾಯರ ಆಫೀಸಿನ ಹತ್ತಿರ ಒಂದು ಕೆನರಾ ಬ್ಯಾಂಕ್ ಇದೆಯಂತಲ್ಲ ಅಲ್ಲಿ ಒಂದು ಸಲ ಹಾಗೆ ಹೇಳಿದ ನೆನಪು.."

"ಹಾಗಾದ್ರೆ ನಾನು ಅಲ್ಲಿ ವಿಚಾರಿಸ್ತೀನಿ. ಬ್ಯಾಂಕ್ ಮ್ಯಾನೇಜರ್‌ಗೆ ತಿಳಿದಿದ್ದರೂ ತಿಳಿದಿರುತ್ತೆ" ಅವನು ಎದ್ದು ಹೊರಟ.

"ಈ ವಿಷಯ ನಿಮ್ಮಲ್ಲೇ ಇರಲಿ. ನಾನು ಹೇಳಿದ್ದು ಅಂತ ಯಾರಿಗೂ ತಿಳಿಯಬಾರದು."

"ಹುಂ ಸರಿ, ಒಂದು ವಿಷಯ, ಆ ಹುಡುಗಿಗೆ, ನಿಮ್ಮ ಮೇಲೂ ವಿಶ್ವಾಸವಿರಲಿಲ್ಲವೆ? ಎಷ್ಟೋ ವರ್ಷದಿಂದ ಈ ಮನೆಯಲ್ಲೇ ಇದೀರಲ್ಲ.."

"ಹುಂ ಇಪ್ಪತ್ತು ವರ್ಷದಿಂದ ಎಷ್ಟಾಗಲೀ, ನಾನು ಅಡಿಗೆಯವಳು, ಅದೇ

ದೃಷ್ಟಿಯಿಂದ ಅವಳು ನನ್ನನ್ನು ನೋಡುತ್ತಿದ್ದುದು. ಅನುಕೂಲಸ್ಥರ ಮನೆ ಹೆಣ್ಣು ಮಕ್ಕಳೆ ಹಾಗೇ ತಾನೇ..?'' ಆಕೆಯ ಧ್ವನಿಯಲ್ಲಿ ಅಸಮಾಧಾನವಿತ್ತು.

ತಾನು ಕೇಳಬಾರದಾಗಿತ್ತೇನೋ ಎಂದುಕೊಂಡ. ಆ ಹುಡುಗಿಯದು ಒಂದು ಫೋಟೋ ಇದ್ದರೆ ಕೊಡಿ.. ಹೆಸರು ವನಜಾ ಎಂದಿರಿ ಅಲ್ಲವೆ!

''ಹುಂ, ಹೌದು'' ಎನ್ನುತ್ತಾ ಆಕೆ ಅಲ್ಲೇ ಪುಸ್ತಕಗಳ ಮಧ್ಯೆ ಇದ್ದ ಒಂದು, ಫ್ರೇಂ ಸಮೇತದ ಒಂದು ಫೋಟೋ ಕೊಟ್ಟಳು'' ಇದು ಯಾವುದೋ ಹಳೆಯದು. ಅವಳು ಈಗಲೂ ಹೀಗೇ ಇದಾಳೆ ಅಂತ ಅಂದುಕೊಂಡಿದೀನಿ.''

ಇವನು ಒಂದು ನಿಮಿಷ ಫೋಟೋದಲ್ಲಿದ್ದ ಹುಡುಗಿಯನ್ನೇ ದಿಟ್ಟಿಸಿದ. ಶ್ರೀಮಂತಿಕೆಯನ್ನು ಎತ್ತಿ ತೋರಿಸುವಂತಹ, ಗರ್ವದಿಂದ ಬೀಗಿದ್ದ ಮುಖ, ಉಡುಗೆ ತೊಡುಗೆಯಲ್ಲಿ ಆಧುನಿಕತೆ ಎದ್ದು ಕಾಣುತ್ತಿತ್ತು.

''ಅವಳಿಗೆ ಸ್ನೇಹಿತೆಯರು ಯಾರೂ ಇಲ್ಲವೆ!''

''ಅಕ್ಕ ಪಕ್ಕದಲ್ಲಿ ಯಾರೂ ಇರಲಿಲ್ಲ, ಕಾಲೇಜಿನ ಗೆಳತಿಯರ ಮನೆ ಎಲ್ಲಿದೆಯೋ ನಮಗೆ ತಿಳಿಯದು.''

''ಈಗ ಯಾವ ಕ್ಲಾಸಿನಲ್ಲಿ ಓದುತ್ತಿದಾಳೆ ಅಂತ ಗೊತ್ತೆ!''

''ಇಲ್ಲಿಂದ ಹೋಗುವಾಗ ಪಿ.ಯು.ಸಿ.ಯಲ್ಲಿ ಓದುತ್ತಿದ್ದಳು. ಅವಳಿಗೆ ಓದಿನ ಮೇಲೆ ಹೆಚ್ಚಿಗೆ ಆಸಕ್ತಿ ಇರಲಿಲ್ಲ. ಓದುತ್ತಿದಾಳೋ ಇಲ್ಲವೋ ತಿಳಿಯದು.''

''ಯಾವ ಕಾಲೇಜಿಗೆ ಹೋಗುತ್ತಿದ್ದಳು?''

''ಯಾವುದೋ ಅದರ ಹೆಸರೂ ಮರೆತುಹೋಗಿದೆ'' ಜ್ಞಾಪಿಸಿಕೊಳ್ಳಲು ಯತ್ನಿಸುತ್ತಿರುವವಳನ್ನು ತಡೆದ.

''ಪರವಾಗಿಲ್ಲ ಬಿಡಿ'' ಹಾಗೆ ಹೇಳಿದರೂ, ಬರೀ ಒಂದು ಫೋಟೋ ಹಿಡಿದು, ಈ ಊರಿನಲ್ಲಿ ಯಾವುದೋ ಪರಿಚಯವಿಲ್ಲದ ಹುಡುಗಿಯನ್ನು ಹುಡುಕುವುದು ಕಷ್ಟ ಎಂದುಕೊಂಡ. ಇನ್ನು ಇದನ್ನು ಮರೆಯುವುದು ಅನಿವಾರ್ಯ ಎಂದುಕೊಂಡು ಆ ಮನೆಯಿಂದ ಹೊರಬಂದ. ಮಾಡಲು ಏನೂ ತೋಚದೇ, ಸೀದಾ ದಿನೇಶನ ಸ್ಟುಡಿಯೋಕ್ಕೆ ಬಂದ. ಅಲ್ಲಿ ಅವನಿಗೆ ಶುಭಳನ್ನು ಕಂಡು ಆಶ್ಚರ್ಯವಾಯಿತು. ಇವನು ತಾನಾಗಿಯೇ ಮಾತನಾಡಿಸಲಿಲ್ಲ, ಅವಳೇ, ಕೇಳಿದಳು.

''ಹಲೋ! ಅಶೋಕ್ ಹೇಗಿದೀಯಾ? ನಾನು ಶುಭಾ ಗುರುತು ಸಿಗಲಿಲ್ವೆ!''

''ಏನು ಇಲ್ಲಿ?'' ಎಂದ ಅವಳ ಅತ್ತಿತ್ತ ನೋಡಿ.

''ಇವಳನ್ನು ಸ್ಕೂಲಿಗೆ ಸೇರಿಸಬೇಕು, ಅದಕ್ಕೆ ಒಂದು ಫೋಟೋ ಬೇಕಿತ್ತು.. ಇಲ್ಲೇ ಕಾಂಪ್ಲೆಕ್ಸ್‌ಗೆ ಬಂದಿದ್ದೆ''

ತಾನಾಗಿಯೇ ಏನನ್ನು ಮತ್ತೆ ಕೇಳುವ ಆಸೆಯಾಗಲಿಲ್ಲ.

''ನಿನಗೆ ನನ್ನ ಮೇಲೆ ಕೋಪಾ ಅಲ್ವಾ!'' ನಗುತ್ತಾ ಕೇಳಿದ್ದಳು.

''ಇರಬಹುದು'' ಎಂದ ಮೊಟಕಾಗಿ,

''ವೆರಿ ಸಾರಿ, ಅಶೋಕ್, ಏನೇನೋ ಆಗಿ ಹೋಯ್ತು''

''ಏನಾಯ್ತು? ಏನು ಕಾರಣ?'' ಎಂದು ಕೇಳದೇ ಉದಾಸೀನವಾಗಿ ಹಾಗೇ ಹೊರಗೆ ಬಂದ. ''ಒಂದ್ನಿಮಿಷ' ಎಂದು ಅವಳು ಹಿಂದಿನಿಂದ ಕೂಗಿದ್ದು ಕೇಳಿದರೂ ಹಿಂತಿರುಗಿ ನೋಡದೇ ಸ್ಕೂಟರನ್ನು ಏರಿದ್ದ.

ಸೀದಾ ಮನೆಗೆ ಬಂದ. ಅಪ್ಪ ಮನೆಯಲ್ಲಿರಲಿಲ್ಲ. ಅಮ್ಮನಾಗಲೀ, ಸುಧಾನಾಗಲೀ ಕಾಣಲಿಲ್ಲ. ಮುಂಬಾಗಿಲು ತೆಗೆದೇ ಇತ್ತು. ಸೀದಾ ಮಹಡಿಯನ್ನೇರಿ ಬಾಲ್ಕನಿಗೆ ಬಂದು ಕುಳಿತ. ಛೆ.. ಎಂದು ತಲೆ ಕೊಡವಿಕೊಂಡ. ಇದ್ದಕ್ಕಿದ್ದಂತೆ ಎಷ್ಟೋ ವರ್ಷಗಳ ನಂತರ ಶುಭ ಸಿಕ್ಕಿ, ಅವನ ಮನಸ್ಸನ್ನು ಕೆಡಿಸಿಬಿಟ್ಟಿದ್ದಳು. ಬೇಡ ಬೇಡವೆಂದರೂ ನೆನಪುಗಳು ಒತ್ತಿಕ್ಕೊಂಡು ಬಂದವು.

ಶುಭಾ ಅವನ ಸೋದರತ್ತೆಯ ಮಗಳು. ಅವಳು ಹುಟ್ಟಿದಾಗ, ಮನೆಯ ಹಿರಿಯರೆಲ್ಲ, ಅವಳೇ ಮುಂದೆ ಅಶೋಕನ ಹೆಂಡತಿ ಎಂದು ನಿರ್ಧರಿಸಿದ್ದರು. ನಿನ್ನ ಹೆಂಡತಿ ಎಂದು ಪುಟ್ಟ ಮಗುವನ್ನು ತೋರಿಸಿದರೆ ಇವನು ಹಲ್ಲು ಕಿರಿಯುತ್ತಿದ್ದ. ಗಂಡ ಹೆಂಡತಿ ಎಂದರೆ ಏನು ಎಂದು ತಿಳಿಯದ ಆ ಮುಗ್ಧ ವಯಸ್ಸಿನಲ್ಲಿ, ಮನೆಯವರು ಅದನ್ನು ಒತ್ತು ಕೊಟ್ಟು ಬೆಳೆಸಿದ್ದರು.

ಅಶೋಕ ಬಿ.ಫಾರ್ಮದಲ್ಲಿ ಓದುತ್ತಿದ್ದಾಗ, ಯಾರದೋ ನೆಂಟರ ಮನೆಯಲ್ಲಿ, ಏನೋ ಒಂದು ಕ್ಷುಲ್ಲುಕ ಕಾರಣದಿಂದ, ಇವನ ತಂದೆ ನಾರಾಯಣನಿಗೂ, ಸೋದರತ್ತೆಯ ಗಂಡ ರಾಜಣ್ಣನಿಗೂ ಭಾರೀ ಜಗಳವೇ ನಡೆದಿತ್ತು. ಒಬ್ಬರ ಮನೆಗೆ ಒಬ್ಬರು ಹೋಗಿ ಬರುವುದು ನಿಂತಿತ್ತು. ಎಷ್ಟೋ ತಿಂಗಳುಗಳು ಕಳೆದರೂ ಅಶೋಕನಿಗೆ ಈ ವಿಷಯ ತಿಳಿದಿರಲಿಲ್ಲ.

ಒಂದು ದಿನ, ಶುಭಾ ಇವರ ಮನೆಯ ಮುಂದೆಯೇ ಹಾದು ಹೋದರೂ ಈ ಕಡೆ ತಿರುಗಿ ನೋಡಿರಲಿಲ್ಲ. ದೂರದಿಂದ ಕೂಗುವುದೇನು ಎಂದುಕೊಂಡು, ಇವನು ಅವಳ ಹಿಂದೆ ಓಡಿ ಹೋಗಿ, ಸಲುಗೆಯಿಂದ ಕೈ ಹಿಡಿದಿದ್ದ.

ಅವಳು ಕೈ ಕೊಸರಿಕೊಂಡು ರೇಗಿದ್ದಳು.

''ನಡು ರಸ್ತೇಲಿ ನನ್ನ ಕೈ ಹಿಡಿತೀಯಲ್ಲ ನಾಚಿಕೆಯಾಗುಲ್ವಾ ನಿನಗೆ!''

''ಅರೇ! ಶುಭಾ.. ನಾನು ಅಶೋಕ.. ಏನಿದು ತಮಾಷೆ!'' ಎಂದು ಕೇಳಿದ್ದ ಹಾಸ್ಯವಾಗಿ.

''ತಮಾಷೆಯಲ್ಲ, ನನಗಿದೆಲ್ಲ ಸರಿಬರೊಲ್ಲ'' ಎಂದು ಹೇಳಿ ದುಡು ದುಡು ಹೊರಟು ಹೋಗಿದ್ದಳು. ಇವನಿಗೆ ಅವಮಾನವಾದಂತಾಗಿತ್ತು. ತಾನೇ ಸುಂದರಿ ಅಂತ ಅವಳಿಗೆ ಜಂಭ

ಇರಲಿ ಮದುವೆಯಾದ ಮೇಲೆ ಅವಳ ಜಂಭಾನ ಅಡಗಿಸ್ತೀನಿ ಎಂದು ತನ್ನಲ್ಲೇ ನಿಶ್ಚಯಿಸಿಕೊಂಡ. ಯಾರೊಂದಿಗೂ ನಡೆದ ವಿಷಯವನ್ನು ಹೇಳಲಿಲ್ಲ.

ಮೊದಲು ನನ್ನ ವಿದ್ಯಾಭ್ಯಾಸ, ಅಲ್ಲದೇ ಪ್ರತಾಪನ ಮದುವೆಯಾದ ಮೇಲೆ ತಾನೇ ನನ್ನ ಮದುವೆ ಎಂದುಕೊಂಡು, ಆ ಪ್ರಕರಣವನ್ನು ಮರೆಯಲು ಯತ್ನಿಸಿದ.

ಮುಂದೆ ಎಷ್ಟೋ ದಿನಗಳ ನಂತರ, ಇವನು ಮನೆಯಲ್ಲಿದ್ದ ಸಮಯದಲ್ಲಿ ಯಾರೋ ನೆಂಟರು, ವಯಸ್ಸಾದವರು ಬಂದಿದ್ದರು. ಅದೂ ಇದೂ ಮಾತನಾಡಿ, ಕಡೆಗೆ, ''ನಿಮ್ಮ ತಂಗಿ ಮನೆಯವರು, ಅವರ ಮಗಳಿಗೆ ಗಂಡು ನೋಡ್ತಿದ್ದಾರೆ, ಮನೇಲಿ ಹೆಣ್ಣ ಇಟ್ಟುಕ್ಕೊಂಡು, ತುಪ್ಪಕ್ಕೆ ತಿರುಗಾಡಿದರು ಅನ್ನುವ ಹಾಗೇ.. ನಿಮ್ಮ ಗಂಡು ಮಕ್ಕಳು ಏನು ಮಾಡ್ತಿದ್ದಾರೆ!'' ಎಂದು ಕೇಳಿದ್ದರು.

''ಇಬ್ಬರದ್ದು ಇನ್ನು ವಿದ್ಯಾಭ್ಯಾಸ ಮುಗಿದಿಲ್ಲ, ಸಧ್ಯಕ್ಕೆ ಅವರಿಗಿನ್ನು ಮದುವೆ ವಯಸ್ಸಾಗಿಲ್ಲ'' ತಾಯಿ ಕಮಲಮ್ಮ ನುಡಿದಿದ್ದಳು.

ಆಮೇಲೆ ಆಕೆ ಹೊರಟು ಹೋದಮೇಲೆ, ತಂದೆ ತಾಯಿಯರಲ್ಲಿ ಚರ್ಚೆ ನಡೆದಿತ್ತು. ''ನೋಡಿದ್ರಾ ನಿಮ್ಮ ತಂಗೀನ? ಸರೀಕರ ಎದುರಿಗೆ ನಮಗೆ ಅವಮಾನ ಮಾಡೋಕ್ಕೆ ಹೊರಟಿದಾಳೆ.''

''ಅವಳದ್ದೇನೂ ತಪ್ಪಿಲ್ಲ, ಅದೆಲ್ಲ ಅವಳ ಗಂಡನ ಕಿತಾಪತಿ..''

''ಕೇಳಿದವರಿಗೆಲ್ಲ ಏನೂಂತ ಹೇಳೂದು!''

''ಏನಿದೆ? ನಾವೇನು ಕಳ್ಳರೆ ಸುಳ್ಳರೇ, ಕೊಲೆಗಾರರೇ, ಹೆದರುವುದಕ್ಕೆ.. ನಮ್ಮ ಮಕ್ಕಳು ಗಂಡು ಮಕ್ಕಳು, ಯಾರಾದರೂ ತಾನಾಗಿಯೇ ಕೇಳಿಕೊಂಡು ಬಂದು ಹೆಣ್ಣು ಕೊಡ್ತಾರೆ.. ಅವನ ಮನೆ ಮಗಳನ್ನು ನಮ್ಮ ಮನೆಗೆ ಸೊಸೆಯಾಗಿ ಅವನು ಕಳಿಸುವುದೇನೂ ಬೇಡ'' ತಂದೆ ಒರಟಾಗಿ ನುಡಿದಿದ್ದರು.

''ನೋಡಿ, ಎಂತಹ ಅವಮಾನ.. ಮಕ್ಕಳು ಚಿಕ್ಕವರಿದ್ದಾಗಲೇ ಯಾಕೆ ಈ ಸುದ್ದಿಯನ್ನು ಹಬ್ಬಿಸಬೇಕಾಗಿತ್ತು? ಎಲ್ಲರೂ ಶುಭಾನೇ ನನ್ನ ಸೊಸೆ ಅಂತ ತಿಳಿದುಕೊಂಡು ಬಿಟ್ಟಿದಾರೆ''

''ಇದರಲ್ಲಿ ಅವಮಾನವೇನು ಬಂತು! ಎಷ್ಟೋ ಮದುವೆ, ಮದುವೆ ಮಂಟಪದಲ್ಲಿ ನಿಂತಿತು ಎಂದು ಅವರಿವರು ಹೇಳಿದ್ದನ್ನ ಕೇಳಿಲ್ಲವೆ! ಅವನಾಗಿಯೇ ಕೇಳಿಕೊಂಡು ಬಂದರೂ, ನಾನು ಈ ಮದುವೆಗೆ ಖಂಡಿತಾ ಒಪ್ಪುವುದಿಲ್ಲ.''

ತಂದೆಯ ಈ ಮಾತು, ಅಶೋಕನಿಗೆ ಇಷ್ಟವಾಗಲಿಲ್ಲ.. ನಮ್ಮಿಬ್ಬರ ಭವಿಷ್ಯವನ್ನು ಹಾಳು ಮಾಡಲು, ಇವರುಗಳು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೇನೋ ಅಂತನ್ನಿಸಿತ್ತು.. ಆದರೆ ತಾನಾಗಿಯೇ ಏನನ್ನು ಹೇಳಲಾರ.. ಯಾರನ್ನು ಕೇಳಲಾರ ಕೆಲದಿನ ಕಾದು ನೋಡಿದ.

ಲಗ್ನ ಪತ್ರಿಕೆಯ ಸಮಾರಂಭಕ್ಕೂ ಇವರುಗಳನ್ನು ಕರೆದಿರಲಿಲ್ಲ. ಅದೂ ತಿಳಿದದ್ದು ನಂತರವೇ, ಊರಿನಿಂದ ಬಂದಿದ್ದ ಕಮಲಮ್ಮನ ಕಡೆಯವರೊಬ್ಬರು ವಿಷಯವನ್ನು ಬಯಲು ಮಾಡಿದರು.

''ಅಲ್ಲ ಕಣೇ ಕಮಲೂ, ಮೊದಲ್ನಿಂದ, ಆ ಹುಡುಗಿ ನಿನ್ನ ಸೊಸೆ ಅಂತಾನೇ ಬೆಳಿಸಿದ್ರಲ್ಲ, ಈಗೇನಾಯ್ತು ಅಂತೀನಿ.. ಇದ್ದಕ್ಕಿದ್ದಂತೆ ಬೇರೆ ಕಡೆ ನಿಶ್ಚಯ ಮಾಡಿದಾನಲ್ಲ, ಆ ನೀಲಕಂಠನ ಮಾತನ್ನು ಕೇಳಿಕೊಂಡು.''

''ಹೋಗಲಿ ಬಿಡಿ ಚಿಕ್ಕಮ್ಮ ಋಣಾನು ಬಂಧವಿಲ್ಲ ಅಷ್ಟೇ..''

''ಅದ್ಯಾಕೆ ಹಾಗೆ ಮಾಡಿದ?''

ಅವರುಗಳ ಮಾತನ್ನು ಕೇಳಿಸಿಕೊಂಡ ಅಶೋಕನಿಗೆ ಮೈಯೆಲ್ಲಾ ಸಿಟೆದು ಹೋದ ಅನುಭವ. ಒಂದು ಕಡೆ ಇದು ಭರಿಸಲಾಗದ ಅವಮಾನ ಎನಿಸಿದರೆ, ಇನ್ನೊಂದು ಕಡೆ, ತಾನು ಸೋಲಬಾರದು ಎನ್ನುವ ಹಠ.

ಅವಳು ಹೋಗುತ್ತಿದ್ದ ಕಾಲೇಜಿನ ದಾರಿಯಲ್ಲಿ ಹುಳಿಗಾಗಿ ಕಾದಿದ್ದು, ಬಲವಂತವಾಗಿ ಅವಳನ್ನು ಹಿಡಿದು ನಿಲ್ಲಿಸಿದ. ಕಿರುಚಿ ಜನರನ್ನು ಕರೆಯಲು ನೋಡಿದ ಅವಳನ್ನು ಹೆದರಿಸಿದ.

''ರಸ್ತೇಲಿ ನನಗೆ ಅವಮಾನ ಮಾಡಿದರೆ ನಾನು ನಿನ್ನನ್ನು ಸುಮ್ಮನೆ ಬಿಡುವುದಿಲ್ಲ, ನಾನು ನಿನ್ನ ಹತ್ತಿರ ಸ್ವಲ್ಪ ಮಾತನಾಡಬೇಕು..ಬಾ..''

''ಬರೋಲ್ಲ ಅಂದರೆ?''

''ಬರೋಲ್ಲ ಅಂದರೆ ಹೊತ್ಕೊಂಡು ಹೋಗ್ತೀನಿ, ಹೇಗೂ ನೀನು ನನ್ನ ಹೆಂಡತಿಯಾಗುವವಳು..''

''ಬಿಡು ನನ್ನನ್ನು, ನಾನು ನಿನ್ನನ್ನು ಮದುವೆಯಾಗುವುದು ಸಾಧ್ಯವಿಲ್ಲ.''

''ಅದೇ ಯಾಕೆ ಅಂತ,..ಅದೇನು ಕಾರಣ ಅಂತ ಹೇಳೇ ಬಿಡು..ಕೇಳೋಣ.''

''ನೀನು ನನಗೆ ತೊಂದರೆ ಕೊಡೋಲ್ಲ ಅಂತ ಪ್ರಾಮಿಸ್ ಮಾಡಿದರೆ, ಎಲ್ಲಾ ಹೇಳ್ತೀನಿ, ''ಸ್ವಲ್ಪ ಹೆದರಿದ್ದಂತೆ ಕಂಡಿತ್ತು.

''ಸರಿ ಬಾ, ಅಲ್ಲಿ ಕೂತು ಮಾತನಾಡೋಣ'' ಹೆದರುತ್ತಾ ಅವನ ಜತೆ ಬಂದಳು. ಎದುರಿಗಿದ್ದ ಕಲ್ಲು ಬೆಂಚಿನ ಮೇಲೆ ಇಬ್ಬರೂ ಕೂತರು.

''ಪ್ಲೀಸ್ ನನಗೇನೂ ಮಾಡಬೇಡ ಅಶೋಕ್. ಇದರಲ್ಲಿ ನನ್ನ ತಪ್ಪೇನಿಲ್ಲ'' ಕೆಟ್ಟ ಮುಖ ಹೊತ್ತು ಮಾತನಾಡಿದಳು.

''ಹಾಗಾದರೆ ಯಾರ ತಪ್ಪು! ನೀನು ಬೇಡ ಅನ್ನಕ್ಕೆ ಆಗಲಿಲ್ಲವಾ!''

''ನನಗೆ ಗೊತ್ತಿರಲೇ ಇಲ್ಲ, ಅಪ್ಪ ದಿಢೀರನೆ ಗೊತ್ತು ಮಾಡಿದರು.''

"ಸುಳ್ಳು, ಇದನ್ನು ನಾನು ನಂಬುಲ್ಲ, ಅಪ್ಪ ಮಗಳು ಒಂದಾಗಿ ನನಗೆ ಅವಮಾನ ಮಾಡೋಕ್ಕೆ ಹೊರಟಿದೀರಿ."

"ಹಾಗಾದ್ರೆ ನಿನ್ನ ಮನಸ್ಸಿನಲ್ಲಿ ಏನಿದೆ ಹೇಳು. ನನ್ನ ಮದುವೆ ನಿಲ್ಲಿಸಿ ನನಗೆ ಅವಮಾನ ಮಾಡಬೇಕು ಅಂತ ಇದೀಯ?"

"ಅಂಥ ಹಲ್ಕಾ ನಾನಲ್ಲ, ಎರಡು ಮನೆಗೆ ಮಧ್ಯೆ ಬಂದಿದ್ದ ಮನಸ್ತಾಪವನ್ನು ಈ ಸಮಯದಲ್ಲಾದರೂ ಮರೆತು, ನಮ್ಮಿಬ್ಬರ ಮದುವೆಯನ್ನು ನಡೆಸಬಹುದಾಗಿತ್ತು. ನಿನಗೆ ನಾನು ಇಷ್ಟವಿದ್ದಿದ್ದರೆ, ನಿನ್ನ ಅಪ್ಪನ ಹತ್ತಿರ ಖಂಡಿತಾ ಮಾತನಾಡದೇ ಬಿಡುತ್ತಿರಲಿಲ್ಲ. ಇವತ್ತು ನಿನ್ನ ಮನಸ್ಸು ಏನೂಂತ ತಿಳಿಯಿತು. ಆದರೆ ನಮ್ಮ ಮನೆಗೆ ಬಂದು ಮಾತನಾಡಿ, ನಮ್ಮನ್ನು ಲಗ್ನ ಪತ್ರಿಕೆಗೆ ಕರೆದಿದ್ದರೆ ನಿಮ್ಮಪ್ಪನ ಗಂಟೇನು ಹೋಗುತ್ತಿತ್ತು? ಇದು ನೀವುಗಳು ನಮಗೆ ಮಾಡಿದ ಅವಮಾನ.

"ನೀನು ಏನು ಬೇಕಾದರೂ ತಿಳಕೋ.. ನಾನು ಹೇಳುತ್ತಿರುವುದು ನಿಜ."

"ಯಾವುದು ನಿಜ, ಯಾವುದು ಸುಳ್ಳು ಅಂತ ನನಗೀಗ ಅರ್ಥವಾಗುತ್ತಿದೆ. ನಾನು ನಿನಗೆ ಶುಭವನ್ನು ಹಾರೈಸುವುದಿಲ್ಲ, ಕೆಡುಕನ್ನು ಬಯಸುವುದಿಲ್ಲ. ಇನ್ನು ನೀನು ಹೋಗು" ಎಂದು ಅನಾವಶ್ಯಕವಾಗಿ ಎತ್ತರದ ಧ್ವನಿಯಲ್ಲಿ ಹೇಳಿದ.

ಅವಳು ಹೆದರುತ್ತಾ ನಡಗುತ್ತಾ ಹೊರಟು ಹೋದಳು.

"ಈ ಮದುವೆಯನ್ನು ಹೇಗಾದರೂ ತಪ್ಪಿಸು, ನಾನು ನೀನು ಎಲ್ಲಾದರೂ, ಅಪ್ಪನಿಗೆ ತಿಳಿಯದಂತೆ ಹೋಗಿ ಮದುವೆಯಾಗೋಣ ಅಂತ ಅವಳು ಹೇಳಬಹುದು ಅಂತ ಅವನು ಊಹಿಸಿರಲಿಲ್ಲವಾದರೂ, ನನ್ನನ್ನು ಕ್ಷಮಿಸು, ಅಪ್ಪನ ಮಾತಿಗೆ ಒಪ್ಪಿದೆ" ಎಂದು ಹೇಳಬಹುದು ಎಂದುಕೊಂಡಿದ್ದ. ಆದರೆ ಬೆಳೆದಂತೆ ಅವಳು ತನ್ನ ಬಗ್ಗೆ ಉದಾಸೀನ ಭಾವನೆ ಬೆಳೆಸಿರಕೊಂಡಿರಬಹುದು ಎಂದುಕೊಂಡಿರಲಿಲ್ಲ. ಅದು ಅವನನ್ನು ಕಠಿಣನನ್ನಾಗಿ ಮಾಡಿತು.

ತನಗಿನ್ನು ಮದುವೆಯ ವಯಸ್ಸಲ್ಲ, ಪ್ರತಾಪನ ಮದುವೆ ನಂತರ ತನ್ನ ಮದುವೆ.. ಅಲ್ಲಿಯವರೆಗೂ ಕಾದಿರುವ ಮನಸ್ಸು ಇವಳಿಗಿಲ್ಲವೇನೋ ಎಂದು ತನಗೇ ಸಮಾಧಾನ ಹೇಳಿಕೊಂಡು ಅವಳನ್ನು ಮರೆಯಲು ಪ್ರಯತ್ನಿಸಿದ. ಆದರೆ ಅದು ಅಷ್ಟು ಸುಲಭವಲ್ಲ ಎಂದೂ ತಿಳಿದಿತ್ತು.

ಅವಳ ಮದುವೆಯ ಸುದ್ದಿ ಏಳುವುದಕ್ಕೆ ಮುಂಚೆ ಹಾಯಾಗಿದ್ದ. ಓದು ಬರಹದಲ್ಲಿ ಮಗ್ನನಾಗಿರುತ್ತಿದ್ದ. ಆದರೆ ಈಗ ಸಾಧ್ಯವಾಗುತ್ತಿರಲಿಲ್ಲ. ಏನನ್ನೋ ಕಳೆದುಕೊಂಡ ಅನುಭವವಾದೊಡನೆ, ಈ ಓದು ವಿದ್ಯೆ ಯಾತಕ್ಕೆ ಎಂದುಕೊಳ್ಳುತ್ತಿದ್ದ. ದಿನ ದಿನಕ್ಕೂ ಹೆಚ್ಚು ಹೆಚ್ಚು ಅಂತರ್ಮುಖಿಯಾದುದನ್ನು ಮೊದಲು ಗಮನಿಸಿದವಳು ಸುಧಾ.. ಅವನ ಸ್ನೇಹಿತೆ, ಅವನ ಕ್ಲಾಸಿನಲ್ಲಿ ಓದುತ್ತಿರಲಿಲ್ಲವಾದರೂ ಕೇಳಿದ್ದಳು. "ಯಾಕೋ, ಮೊದಲಿನ ಉತ್ಸಾಹವೇ ಇಲ್ಲ ನಿನ್ನಲ್ಲಿ. ಏನಾಗಿದೆ ನಿನಗೆ! ಪರೀಕ್ಷೆ ಚಿಂತೇನಾ!"

''ಇಲ್ಲಮ್ಮ..'' ಎಂದಿದ್ದ ನೀರಸವಾಗಿ ನಕ್ಕ.

''ಇಲ್ಲ ಅಂತ ನೀನು ಹೇಳಿದರೂ, ನಾನು ನಂಬುಲ್ಲ, ಮುಖ ನೋಡು ಹೇಗಾಗಿದೆ? ಅಶೋಕ ಎಂದರೆ ಶೋಕವಿಲ್ಲದವನು ಅಂತ ಅರ್ಥವಂತೆ ಆದರೆ ಏನೋ ಕೊರಗು ಖಂಡಿತಾ ಇದೆ ಅಂತ ನನಗನ್ನಿಸುತ್ತಪ್ಪ..''

''ಏನಿಲ್ಲ ಅಂದ್ನಲ್ಲ..'' ರೇಗಿದ.

''ನೋಡಿದ್ಯಾ ಹೀಗೆ ರೇಗಬೇಕಾದರೆ ಏನೋ ಇರಲೇಬೇಕು. ನೀನು ಇವತ್ತೇ ಹೇಳಬೇಕು ಅಂತೇನಿಲ್ಲ. ಆದರೆ ನಿನ್ನ ದುಗುಡ ಏನಿದೆ ಅಂತ ನನಗೆ ಹೇಳು. ನಾನು ಯಾರಿಗೂ ಹೇಳೊಲ್ಲ.''

''ಹುಂ ಆಗಲಿ. ಇನ್ನೆಂದಾದ್ರೂ ಹೇಳ್ತೀನಿ,'' ಎಂದಿದ್ದ, ಅವಳನ್ನು ತಪ್ಪಿಸಿ ತಿರುಗಾಡಲು ಪ್ರಾರಂಭಿಸಿದ್ದ. ಆದರೆ, ಶುಭಳ ಮದುವೆ ನಡೆದೇ ಹೋಯಿತು ಎನ್ನುವ ದಿನ ತಡೆಯಲಾರದೇ, ಉದ್ವೇಗದಿಂದ ಸುಧಾಳೊಡನೆ ಹೇಳಿಕೊಂಡಿದ್ದ. ಅವಳಿಗೂ ವ್ಯಥೆ ಎನಿಸಿತ್ತು.

''ನೀನು ಅವಳನ್ನು ಪ್ರೀತಿಸಿದ್ಯಾ!''

''ಪ್ರೀತಿ ಅಂತ ಗೊತ್ತಿಲ್ಲ, ಆದರೆ ನನಗೆ ತಿಳುವಳಿಕೆ ಬಂದಾಗಿನಿಂದ ಅವಳೇ ನನ್ನ ಭಾವಿ ಹೆಂಡತಿ ಅಂತ ನನ್ನ ಕಿವಿ ತುಂಬಿದ್ದರು.. ಎಲ್ಲರೂ.''

''ಹಾಗಾದರೆ ವ್ಯಥೆ ಯಾಕೆ? ಯಾರೋ ಹಿರಿಯವರು ಎಂದೋ ಆಡಿದ್ದರು. ಆ ಮಾತಿಗೆ ಬೆಲೆ ಕೊಡದೇ, ಅದೇ ಹಿರಿಯವರು ಅದನ್ನು ಮುರಿದಿದ್ದಾರೆ. ಅದಕ್ಕೆ ನೀನೇಕೆ ವ್ಯಥೆ ಪಡಬೇಕು.! ನೀನೇ ಹೇಳುವಂತೆ, ನಿನ್ನಷ್ಟು ಶುಭ ಹಚ್ಚಿಕೊಂಡಿರಲಿಲ್ಲವೇನೋ, ಅದಕ್ಕೇ ಅವಳು ಸುಲಭವಾಗಿ ಇನ್ನೊಬ್ಬನ ಪತ್ನಿಯಾಗಲು ಸಿದ್ಧಳಾಗಿದಾಳೆ.. ನೀನು ಗಂಡಸಾಗಿ ಅವಳಿಗಾಗಿ ವ್ಯಥೆ ಪಡುವುದನ್ನು ನೋಡಿದರೆ, ನನಗೆ, ನಗಬೇಕೋ ಅಳಬೇಕೋ ತಿಳಿಯುತ್ತಿಲ್ಲ.''

''ಹಾಗಲ್ಲ ಸುಧಾ ನನ್ನ ಮನಸ್ಸಿನಲ್ಲಿ ಏನು ತಳಮಳ ನಡೀತಿದೆ ಅಂತ ನನಗೆ ಮಾತ್ರ ಗೊತ್ತಾಗ್ತಿದೆ.''

''ಎಷ್ಟೇ ತಳಮಳ, ಏನೇ ಮನಸ್ಸಿನಲ್ಲಿ ಇದ್ದರೂ, ನೀನು ಅವಳ ಮದುವೆ ನಿಲ್ಲಿಸುವಷ್ಟು ನೀಚತನಕ್ಕೆ ಇಳಿಯಲಿಲ್ಲವಲ್ಲ..ಸಧ್ಯ''

''ಅಷ್ಟು ಕೆಟ್ಟವನು ನಾನಾಗಲು ಸಾಧ್ಯವೇ ಇಲ್ಲ.''

''ಹೀಗೇ ಯಾವಾಗಲೂ ಒಳ್ಳೆಯವನಾಗಿರು ಅಶೋಕ್, ಅದೇ ನನ್ನ ಮನಃಪೂರ್ವಕವಾದ ಹಾರೈಕೆ. ನನ್ನ ಹತ್ತಿರ ಎಲ್ಲಾ ಹೇಳಾಯ್ತಲ್ಲ, ಇನ್ನಾದರೂ ನಿನ್ನ ಹೃದಯವನ್ನು ಹಗುರ ಮಾಡಿಕೊಂಡು ನಿನ್ನ ವಿದ್ಯಾಭ್ಯಾಸದ ಕಡೆ ಗಮನ ಕೊಡಬೇಕು. ಆಗ ನೀನು ಹಿಂದಿನದೆಲ್ಲವನ್ನು ಮರೆಯಲು ಸಾಧ್ಯವಾಗುತ್ತೆ.''

"ಹುಂ, ನಿನ್ನ ಸಲಹೆಗೆ ಥ್ಯಾಂಕ್ಸ್" ಎಂದಿದ್ದ ನಕ್ಕಂತೆ ಮಾಡಿ.

ಅವಳು ಸ್ನೇಹದಿಂದ ಅವನ ಭುಜವನ್ನು ತಟ್ಟಿದಾಗ, ಅವನ ಅಂತರಾಳವನ್ನು ಎಚ್ಚರಿಸಿದಂತಾಯ್ತು. ಅವಳಿಗಿಂತ ದೊಡ್ಡವನು, ನಾನಾಗಿಯೇ ಇಷ್ಟನ್ನು ತಿಳಿದುಕೊಳ್ಳುವ ತಿಳಿವಳಿಕೆ ನನಗಿರಲಿಲ್ಲವೆ ಎಂದುಕೊಂಡ. ಅನಂತರದ ದಿನಗಳು ಬೇರೆ ರೀತಿಯಲ್ಲಿ ಕಳೆದವು. ಆಗ ಈಗ, ತಾನಾಗಿಯೇ ಅವಳನ್ನು ಭೇಟಿಯಾಗಿ, ಹರಟೆ ಹೊಡೆದು, ಏನೋ ಆನಂದವನ್ನು ಪಡೆಯುತ್ತಿದ್ದ. ಅವಳೇ ನನ್ನ ಸ್ಫೂರ್ತಿ, ಅವಳೇ ನನ್ನ ಜೀವನ ಎಂದು ಭಾವಿಸತೊಡಗಿದ.

ಸುಧಾ, ಶುಭನಷ್ಟು ಸುಂದರಿಯಲ್ಲ, ಆದರೆ ಶುಭಳ ಅಹಂಕಾರ ಅವಳ ರೂಪವನ್ನು ಮರೆ ಮಾಡಿದ್ದರೆ, ಸುಧಾಳ ಸ್ನೇಹಪರ ಸ್ವಭಾವ, ಅವಳನ್ನು ಚೆಲುವೆಯ ಪಟ್ಟಕ್ಕೇರಿಸಿತ್ತು. ದಿನಾ ದಿನಾ ಅವಳನ್ನು ನೋಡುತ್ತಾ ನೋಡುತ್ತಾ, ಅವಳ ಸ್ನೇಹವನ್ನು ಮೆಚ್ಚುತ್ತಾ ನಿಧಾನವಾಗಿ ಅವಳನ್ನು ಪ್ರೀತಿಸತೊಡಗಿದ್ದ.. ಆದರೆ ಅದನ್ನು ಪ್ರಕಟಿಸಲು ಹಿಂಜರಿದಿದ್ದ.

ಸಧ್ಯ ಅದನ್ನು ಅವಳಿಗೆ ಹೇಳದೇ ಇದ್ದುದೇ ಒಳ್ಳೆಯದಾಯ್ತು. ಇಲ್ಲದಿದ್ದರೆ ತಾನು ಮತ್ತೊಮ್ಮೆ ಮೂರ್ಖನಾಗುತ್ತಿದ್ದೆ ಎಂದುಕೊಂಡ.. ಈಗ.

ಈಗ ಜಗನ್ನಾಥರಾಯರ ನೆರವಿಗೆ ಹೋಗಿ, ವನಜಾಳ ಶೋಧನೆಗೆ ತೊಡಗಲು ಹೊರಟಿದ್ದೆನಲ್ಲ, ಇದು ಮೂರ್ಖತನದ ಪರಮಾವಧಿ ಅಲ್ಲವೆ ಎಂದುಕೊಂಡ ನಗು ಬಂತು. ನಕ್ಕ. ಇದೂ ಒಂದು ತರಹ ಅನ್ವೇಷಣೆ, ಸಾಧನೆ, ಸಾಹಸ.. ಎಂದು ತನಗೆ ತಿಳಿದ ಪದಗಳಿಂದ ಅರ್ಥೈಸಿಕೊಂಡ. ವನಜಾಳ ಫೋಟೋ ತೆಗೆದ. ಅಷ್ಟರಲ್ಲಿ ತಾಯಿ ಕರೆದಿದ್ದಳು. ಸುಮ್ಮನೇ ನೋಡಿದಂತೆ ಮಾಡಿ, ಮತ್ತೆ ಅದನ್ನು ದಿಂಬಿನ ಅಡಿಯಲ್ಲಿಟ್ಟು ಹೊರಗೆ ಬಂದ.

"ತಾಯಿ ಮನಗೆ ಅಂತ ಹೋದವಳು ಇನ್ನು ಬಂದಿಲ್ಲ, ಅದೇನು ಈ ರಾತ್ರಿ ಅಲ್ಲಿಯೇ ಇರ್ತಾಳೋ ಏನೋ.. ಮೇಲೆ ಒಬ್ಬನೇ ಏನು ಮಾಡ್ತಿದ್ದೆ!"

"ಮಲಗಿದ್ದೆ. ಯಾಕೋ ಬೇಜಾರಾಯ್ತು."

"ಅವಳ ಹಾಸಿಗೆ ಮೇಲೆ ನೀನೇಕೆ ಮಲಗಿದ್ದೆ ಇನ್ನು ಮೇಲೆ ಹಾಗೆ ಮಲಗಬೇಡ"

"ಏಕೆ ಏನಾಗುತ್ತೆ!"

"ಹೇಳಿದಷ್ಟನ್ನು ಕೇಳು.."

"ಅವಳನ್ನು ಕರೆದುಕೊಂಡು ಬರ್ತೀನಿ, ಒಟ್ಟಿಗೇ ಊಟ ಮಾಡಿದರಾಯ್ತು. ಅಪ್ಪನ ಊಟವಾಯ್ತೋ.."

"ಹುಂ ಆಯ್ತು. ಇವತ್ತು ನನಗೆ ಫಲಾಹಾರ.. ನೀನು ಎದ್ದರೆ ನಿನಗೆ ಬಡಿಸಿ, ಮಲಗೋಣ ಅಂತ ಅಂದುಕೊಂಡಿದ್ದೆ."

"ನೀನು ಬೇಕಾದರೆ ಮಲಕ್ಕೋ.. ನಾನು ಹೋಗಿ ಅವಳನ್ನು ಕರೆದುಕೊಂಡು ಬರ್ತೀನಿ."

“ಒಂದು ರಾತ್ರಿ ಅವಳು ಅಲ್ಲಿದ್ದರೆ ಏನೀಗ? ನೀನೇಕೆ ಹೋಗಬೇಕು?”

“ವಂಶೀ, ನನ್ನನ್ನು ಬಿಟ್ಟು ಇರುಲ್ಲ.”

“ಅದಿನ್ನೂ ಮಗು, ಅದಕ್ಕೇನು ತಿಳಿಯುತ್ತೆ, ನಿನ್ನದೇ ಅದೆಲ್ಲ, ನೀನು ಅತಿಯಾಗಿ ಹಚ್ಚಿಕೊಂಡಿದೀಯ ಅವನನ್ನ, ನೀನು ಎಷ್ಟೇ ಏನೇ ಮಾಡಿದರೂ, ಅಪ್ಪನಂತೂ ಅಲ್ಲ.”

“ನಾನು ಅವನ ಅಪ್ಪನಾಗುವುದು ಸಾಧ್ಯವಿಲ್ಲ. ಆದರೆ ಪ್ರೀತಿಯನ್ನು ಮಾಡಬಾರದೇನಮ್ಮ? ನಿನಗೆ ಅವನ ಮೇಲೆ ಪ್ರೀತಿ ಇಲ್ಲವೆ?”

“ಹೆತ್ತವಳು ಅವಳಿದಾಳಲ್ಲ, ನೀನೇಕೆ ಒದ್ದಾಡ್ತೀಯಾ ಅಂತ.. ಅಷ್ಟೇ..” ಕಹಿಯಿತ್ತು ದನಿಯಲ್ಲಿ.

“ನಿನಗೆ ಅರ್ಥವಾಗುಲ್ಲ, ನಾನು ಬರ್ತೀನಿ.”

“ಹೌದು, ನನಗೆ ಅರ್ಥವಾಗುಲ್ಲ” ತಾಯಿ ವ್ಯಂಗ್ಯವಾಗಿ ನುಡಿದಾಗ, ಅವನು ತೀಕ್ಷ್ಣವಾಗಿ ಅವಳನ್ನೇ ನೋಡಿದ. ತಾಯಿ ಅದನ್ನು ಗಮನಿಸದವಳಂತೆ ತನ್ನ ಪಾಡಿಗೆ ತಾನು ಕೂತಳು. ಮತ್ತೆ ಮಹಡಿಯನ್ನೇರಿ, ವನಜಾಳ ಫೋಟೋ ತಂದು, ತನ್ನ ದಿಂಬಿನಡಿಯಲ್ಲಿಟ್ಟು, ಅಮ್ಮನಿಗೇಕೆ ಅಸಮಾಧಾನ? ಅದನ್ನು ಸರಿಪಡಿಸುವುದು ಹೇಗೆ ಎಂದು ಚಿಂತಿಸುತ್ತಾ ಸುಧಾಳ ಮನೆಗೆ ಬಂದ.

“ವಂಶಿ ಮಲಗಿದಾನೆ. ನಾನು ನಾಳೆ ಬರ್ತೀನಿ” ಎಂದಳು. ತಾನು ಅವನಿಗೋಸ್ಕರವೇ ಬಂದದ್ದು, ಇವಳು ಹೀಗೆ ಹೇಳ್ತಾಳಲ್ಲ. ಎಂದುಕೊಂಡ.

“ಎತ್ತಿಕೊಂಡು ಬಾ. ಎಷ್ಟು ದೂರ ಹೋಗಬೇಕು..! ಸುಧಾಳ ತಾಯಿ ಅವನನ್ನೆ ವಿಚಿತ್ರವಾಗಿ ನೋಡಿದಳು. ಅದನ್ನು ಗಮನಿಸಿದವನಂತೆ, ಇವನು ಮುಂದೆ ಮುಂದೆ ನಡೆದ. ಸುಧಾ ಮಗುವಿನೊಂದಿಗೆ, ಹಿಂದೆ ಹಿಂದೆ ಬಂದಳು.

“ಸುಧಾ ನನ್ನದು ಊಟ ಆಗಿಲ್ಲ, ಅವನನ್ನು ಮಲಗಿಸಿ ಬಾ, ಇಬ್ಬರೂ ಒಟ್ಟಿಗೆ ಕೂತು ಊಟ ಮಾಡೋಣ.”

ಅವಳಿಗೂ ಆಶ್ಚರ್ಯ. ಇವನೇಕೆ ತನ್ನ ಬಗ್ಗೆ ಇಷ್ಟು ಆದರವನ್ನಿಟ್ಟುಕೊಂಡಿದ್ದಾನೆ? ಈಗಲೂ ಮೊದಲಿನಂತೆಯೇ ತನ್ನನ್ನು ಪ್ರೀತಿಸುತ್ತಿದಾನೆಯೇ! ಎಂದುಕೊಂಡಾಗ, ತನ್ನ ಆಲೋಚನೆ ಯಾರಿಗಾದರೂ ಅರ್ಥವಾಯಿತೇನೋ ಎನ್ನುವಂತೆ ಅತ್ತಿತ್ತ ನೋಡಿದಳು. ಯಾರೂ ಇರಲಿಲ್ಲ.

“ನನ್ನದು ಊಟ ಆಯ್ತು” ಎಂದಳು.

“ಹೌದಾ! ಹೋಗಲಿ, ಸ್ವಲ್ಪ ಬಡಿಸ್ತೀಯಾ..” ಇವನ ಮನಸ್ಸಿನಲ್ಲಿ ಏನಿದೆ! ಅಮ್ಮ ಏನು ತಿಳಿದುಕೊಳ್ಳುತ್ತಾರೆನ್ನುವುದೂ ಬೇಡವೆ ಇವನಿಗೆ ಎಂದುಕೊಂಡು, ವಂಶಿಯನ್ನು ಅವನ ರೂಮಿನಲ್ಲಿ ಮಲಗಿಸಿ ಬಂದಳು.

ಮಾತಿಲ್ಲದೇ ಅವಳು ಬಡಿಸಿದಳು. ಮೌನವಾಗಿ ಅವನು ಊಟ ಮಾಡಿದ. ಪಾತ್ರೆಗಳನ್ನು ಎತ್ತಿ ಬಚ್ಚಲಿಗೆ ಹಾಕಿ, ನೆಲ ಒರೆಸಿ ಹೊರಗೆ ಬಂದಳು. ಅಶೋಕ ತನ್ನ ರೂಮನ್ನು ಸೇರಿಕೊಂಡಿದ್ದ. ಹಿಂದೆ ಹೋಗಿ ಏನನ್ನಾದರೂ ಮಾತನಾಡುವ ಬಯಕೆಯಾದರೂ ಅದನ್ನು ಅದುಮಿಟ್ಟುಕೊಂಡು, ಮಹಡಿಯನ್ನೇರಿದಳು.

ಸುಮಾರು ಒಂದೂವರೆ ವರ್ಷದಿಂದ, ಈ ರೂಮಿನಲ್ಲಿ, ಈ ಮಂಚದಲ್ಲಿ ತಾನೊಬ್ಬಳೇ ಮಲಗುತ್ತಿದ್ದೀನಿ. ಯಾರು ಬಂದು ಇಣುಕಿ ನೋಡುವುದಿಲ್ಲ.

"ಅತ್ತೆ ಮಾವ ಮೆಟ್ಟಲು ಹತ್ತಲಾರರು. ಅತ್ತಿಗೆಯರು ಬಂದರೆ, ಕೆಳಗೇ ಕೂತಿದ್ದು ಮಾತನಾಡಿ ಹೋಗ್ತಾರೆ.. ಅಶೋಕ ಎಂದೂ ಈ ರೂಮಿಗೆ ಬಂದವನಲ್ಲ. ಈ ಮನೆಯಲ್ಲಿ ಎಲ್ಲರ ಜತೆಯಲ್ಲಿ ಇದ್ದೂ, ಈ ರೂಮಿನಲ್ಲಿ ನಾನು ಒಂಟಿ. ಪ್ರತಾಪ್.. ಹೀಗೇಕೆ ಮಾಡಿದೆ! ನನ್ನನ್ನು ಒಬ್ಬಳನ್ನೇ ಬಿಟ್ಟು ಹೋಗುವ ಮನಸ್ಸಾದರು ನಿನಗೆ ಹೇಗೆ ಬಂತು! ಹಾಗಾದರೆ ನೀನು ನನ್ನನ್ನು ಪ್ರೀತಿಸುತ್ತಿದ್ದುದು ಸುಳ್ಳೇ.. ನೀನಿಲ್ಲದೇ ಒಂದೂವರೆ ವರ್ಷವನ್ನು ಕಳೆದಿದೀನಲ್ಲ.. ಹಾಗಾದರೆ ಈ ಪ್ರೀತಿ ಪ್ರೇಮ ಎಲ್ಲಾ ಸುಳ್ಳೋ.. ಈ ಒಂಟಿತನವನ್ನು ನಾನು ಸಹಿಸಲಾರೆ.. ನನ್ನ ದುಗುಡವನ್ನು ಯಾರೊಂದಿಗೆ ಹೇಳಿಕೊಳ್ಳಲಿ! ನೀನು ಒಬ್ಬಳೇ ಹೇಗಿದೀಯಾ ಅಂತ ಯಾರೂ ಎಂದೂ ಕೇಳಿಲ್ಲ.. ನನ್ನ ಬೇಗುದಿ ಅವರಿಗೆ ಅರ್ಥವಾಗುವುದಿಲ್ಲವೆ! ಅಥವ ಗೊತ್ತಿದ್ದೂ ಸುಮ್ಮನಿದಾರೆಯೇ.. ಈ ವಂಶಿಯಾದರೂ ನನ್ನ ಜತೆ ಇದ್ದಿದ್ದರೇ.. ಅಶೋಕ ದಿನಾ ಅವನನ್ನೇಕೆ ತನ್ನ ಜತೆಯಲ್ಲಿ ಮಲಗಿಸಿಕೊಳ್ತಾನೆ! ಅವನ ಮನಸ್ಸಿನಲ್ಲಿ ಏನಿದೆ!"

ಗಾಳಿಗೆ ಕಿಟಕಿ "ಡಬ್" ಎಂದು ಬಡಿದ ಸದ್ದಿಗೆ, ಅವಳು ತನ್ನ ಆಲೋಚನೆಗಳಿಂದ ಹೊರಗೆ ಬಂದಳು. ಕಿಟಕಿಯನ್ನು ಸರಿಯಾಗಿ ಮುಚ್ಚಿ ಬಾಗಿಲನ್ನು ಭದ್ರ ಪಡಿಸದೇ, ತನ್ನ ಪಾಡಿಗೆ ತಾನು ಮೈತುಂಬಾ ಹೊದ್ದು ಮಲಗಿದಳು.

ಅಶೋಕ, ವಂಶಿಯನ್ನು ಸರಿಯಾಗಿ ಮಲಗಿಸಿ, ದಿಂಬಿನಡಿಯಲ್ಲಿದ್ದ ವನಜಾಳ ಫೋಟೋವನ್ನ ಮತ್ತೊಂದು ಸಲ ಸರಿಯಾಗಿ ನೋಡಿ, ಹಾಗೇ ಕೈಯಲ್ಲಿಟ್ಟುಕೊಂಡು ಮಲಗಿದ. ಚುರುಕು ಗಣ್ಣಿನ ಬಾಬ್ ಸುಂದರಿ,.. ಆದರೆ ಮೊಂಡು ಹಠಮಾರಿ.. ಸುಂದರಿಯರಿಗೆ ಇಂತಹ ಒಂದು ಪ್ರತ್ಯೇಕ ಅರ್ಹತೆಯೂ ಇರುತ್ತೆ ಎಂದುಕೊಂಡ. ಈಗ ಹೇಗಿದಾಳೋ.. ಎಂದು ಅಡಿಗೆಯಾಕೆ ನುಡಿದದ್ದು ನೆನಪಿಗೆ ಬಂತು.. ಹಾಗಿದ್ದರೆ ತಾನು ಅವಳನ್ನು ಹುಡುಕುವುದು ಹೇಗೆ!.. ಅದು ಸರಿ, ತಾನು ಅವಳನ್ನು ಹುಡುಕಲೇ-ಬೇಕು ಎನ್ನುವುದಾದರೂ ಏನು! ವಂಶಿ ಏನೋ ಕನವರಿಸಿ ಹೊರಳಿದ. ಇವನ ಕೈಗಳು ಅವನನ್ನು ತಬ್ಬಿದವು.

ಫೋನು ಗಂಟೆ ಬಾರಿಸಿದಾಗ, ರಿಸೀವರ್ ಎತ್ತಿ ಹಲೋ ಎಂದಿದ್ದ. ಆಕಡೆಯಿಂದ ಸ್ನೇಹಿತ ದಿನೇಶ ಮಾತನಾಡಿದ್ದ. ನನ್ನ ಸ್ಟುಡಿಯೋಕ್ಕೆ ಈಗ ತಾನೇ ಐದಾರು ಜನ

ಹುಡುಗಿಯರು ಗ್ರೂಪ್ ಫೋಟೋ ತೆಗೆಸಿಕೊಳ್ಳಲು ಬಂದಿದ್ದಾರೆ.. ಬರೋದಾದರೆ ಬಾ.. ಅದರಲ್ಲಿ ನಿನ್ನ ಚಿತ್ರಾಂಗದೆಯೂ ಇರಬಹುದು, ನಕ್ಕಿದ್ದ.

"ಓ ಷಟಪ್.." ಎಂದಿದ್ದರೂ, ಹೋಗಿ ನೋಡಿದರೆ ಏನೀಗ ಎಂದುಕೊಂಡು ಎದ್ದ. ಆಗಾಗ್ಗೆ ಅಂಗಡಿಯನ್ನು ಮುಚ್ಚುವ ಬದಲು, ಒಬ್ಬ ಸಹಾಯಕನ್ನ ನೇಮಿಸಿಕೊಂಡರೆ ಹೇಗೆ ಎಂದು ಚಿಂತಿಸುತ್ತಾ, ಷಟರ್ಸ್ನು ಎಳೆದು, ಬೀಗ ಹಾಕಿದ.

ಕಿಸಿ ಕಿಸಿ, ನಗುತ್ತಿದ್ದ ಹುಡುಗಿಯರು ಇವನನ್ನು ನೋಡಿ, ನಗು ನಿಲ್ಲಿಸಿದರು. ಇವನು ಸೀದಾ ಒಳಗೆ ಹೋದ. "ಇವರ್‍ಯಾರೂ ಅಲ್ಲ ಅಂತ ಕಾಣುತ್ತೆ" ಎಂದ. ತಡಿ, ಅವರ ಹೆಸರನ್ನ ಚೆಕ್ ಮಾಡ್ತೀನಿ ಎಂದು, ಅವನೆದುರಿಗೆ ಬಂದು, "ನಿಮ್ಮ ಹೆಸರುಗಳನ್ನು ಹೇಳ್ತೀರಾ" ಎಂದ ದಿನೇಶ.

"ಆಂ! ನಮ್ಮ ಹೆಸರು ನಿಮಗೇಕೆ" ಎಂದಳು ಒಬ್ಬಳು ದಿಟ್ಟತನದಿಂದ.

"ತಪ್ಪು ತಿಳಿದುಕೋಬೇಡಿ.. ನನ್ನ ಸ್ನೇಹಿತ, ತನ್ನ ಮಗಳಿಗೆ ಹೆಸರನ್ನಿಡಬೇಕಂತೆ.. ಅದಕ್ಕೆ ಹೆಸರನ್ನು ಆಯ್ಕೆ ಮಾಡಬೇಕಾಗಿದೆ.." ಎಂದ ತಮಾಷೆಯಾಗಿ.

"ನಮ್ಮದೆಲ್ಲಾ ಹಳೇ ಕಾಲದ ಹೆಸರು.. ಹೊಸಾ ಹೆಸರು ಬೇಕಾದಷ್ಟಿದೆ."

"ಅವನು ಹಳೇ ಸಂಪ್ರದಾಯದವನೇ.. ಪರವಾಗಿಲ್ಲ ಹೇಳಿ."

"ನರ್ಮದಾ, ಶಾರದಾ.." ಅವರು ಹೇಳುತ್ತಾ ಹೋದಂತೆ, ಇವನು ಬರೆದುಕೊಂಡ ಅದರಲ್ಲಿ ವನಜಾ ಎನ್ನುವ ಹೆಸರು ಬರಲಿಲ್ಲ.

"ವನಜಾ ಅನ್ನುವ ಹೆಸರು ಹೇಗಿದೆ?"

"ಪರವಾಗಿಲ್ಲ, ಚೆನ್ನಾಗಿದೆ.." ಅವರೆಲ್ಲ ನಕ್ಕಾಗ ಇವನು ಪೆಚ್ಚಾದ.

ಈ ರೀತಿ ಇವನು ವನಜಾಳನ್ನು ಪತ್ತೆ ಮಾಡಿದ ಹಾಗೇ ಇದೆ ಎಂದುಕೊಂಡು ಅಶೋಕ ಆಚೆಗೆ ಬಂದ. ತನ್ನ ಜೇಬಿನಲ್ಲಿದ್ದ ವನಜಾಳ ಫೋಟೋವನ್ನು ಅವರುಗಳಿಗೆ ತೋರಿಸಿ ನುಡಿದ.

"ನೋಡಿ, ಈ ಹುಡುಗಿ ವನಜಾ ಅಂತ.. ಅವಳ ತಂದೆಗೆ ಹುಷಾರಿಲ್ಲದೇ ಆಸ್ಪತ್ರೇಲಿದಾರೆ.. ಅವಳು ಈ ಊರಿನಲ್ಲೇ ಒಂದು ಹಾಸ್ಟೆಲ್ಲಿನಲ್ಲಿದ್ದಾಳೆ, ಆದರೆ ಯಾವ ಹಾಸ್ಟೆಲ್ಲು ಅಂತ ತಿಳಿಯದು, ನಿಮಗ್ಯಾರಿಗಾದರೂ ಇವಳ ಪರಿಚಯವಿದ್ದು ನಮಗೆ ಸಹಾಯ ಮಾಡುವುದಾದರೆ.. ನನಗೆ ಅನುಕೂಲವಾಗುತ್ತೆ" ಎಂದ ವಿನಯದಿಂದ.

"ಪೇಪರ್ರಿನಲ್ಲಿ ಹಾಕಿಸಿ, ಪೋಲಿಸ್ ಕಂಪ್ಲೇಂಟ್ ಕೊಡಿ.." ಇಬ್ಬರು ಹುಡುಗಿಯರು ಸಲಹೆ ಕೊಟ್ಟರು.

"ಹಾಗೆ ಮಾಡದಿರುವುದಕ್ಕೆ ಕಾರಣವಿದೆ..ಅವಳನ್ನು ಪರ್ಸನಲ್ ಆಗಿ ಭೇಟಿಯಾಗಿ ಅವಳೊಡನೆ ಮಾತನಾಡಬೇಕು. ಅದೇ ಅವರ ತಂದೆಯ ಆಸೆ."

"ಈ ದೊಡ್ಡ ಊರಿನಲ್ಲಿ ಎಷ್ಟು ಹಾಸ್ಟೆಲ್‌ಗಳಿವೆಯೋ ಹೇಗೆ ಹುಡುಕಿಸ್ತೀರಿ!" ಒಬ್ಬಳು ಇವನನ್ನೇ ಪ್ರಶ್ನಿಸಿದಳು.

"ಅದೇ ನನಗೂ ತಿಳಿಯುತ್ತಿಲ್ಲ."

"ಪ್ರೈವೇಟ್ ಡಿಟೆಕ್ಟಿವ್ಸ್ ಇರ್ತಾರೆ, ಅವರನ್ನು ಸಂಪರ್ಕಿಸಿದರೆ, ನಿಮಗೆ ಖಂಡಿತಾ ಅವಳು ಸಿಗ್ತಾಳೆ. ಆದರೆ ಸ್ವಲ್ಪ ಹಣ ಖರ್ಚಾಗಬಹುದು" ಒಬ್ಬ ತಿಳುವಳಿಕಸ್ಥ ಹುಡುಗಿ ಹೇಳಿದಳು.

"ಹುಂ ಹೌದು, ಹೌದು" ದಿನೇಶ ತಲೆ ಆಡಿಸಿದ.

ಅಶೋಕ ತನ್ನಲ್ಲೇ ಚಿಂತಿಸಿದ. "ಈ ವನಜಾ ಯಾರೋ ತನಗೆ ಅಪರಿಚಿತಳು. ಅವಳಿಗೋಸ್ಕರ ತಾನು ಹಣ ಖರ್ಚು ಮಾಡಿ, ಹುಡುಕಿಸುವ ಅಗತ್ಯವಾದರೂ ಏನು! ತಾನು ಸುಮ್ಮನಿದ್ದು ಬಿಟ್ಟರೇ.. ಒಂದು ವೇಳೆ ಆತ ಚೇತರಿಸಿಕೊಳ್ಳದೇನೆ ಸತ್ತು ಹೋದರೆ.. ಅವರ ಮಗಳಿಗೆ ವಿಷಯ ತಿಳಿಸುವವರು ಯಾರು! ಅದಕ್ಕೋಸ್ಕರವಾದರೂ ತಾನೀಗ ಅವಳನ್ನು ಹುಡುಕಲೇ ಬೇಕು" ಎಂದುಕೊಂಡ.

ಅಷ್ಟರಲ್ಲಿ ದಿನೇಶ ಕೆಲವು ಡಿಟೆಕ್ಟಿವ್ ಏಜೆಂಟ್‌ಗಳ ಫೋನ್ ನಂಬರನ್ನು ಪತ್ತೆ ಮಾಡಿದ್ದ. "ಅದಕ್ಕೇ ನೋಡು ಹೆಂಗಸರು ಜೋರು ಅನ್ನುವುದು. ನಮಗೆ ಈ ವಿಷಯ ಹೊಳೆಯಲೇ ಇಲ್ಲವಲ್ಲ.."

"ಹಾಗೇನಿಲ್ಲ, ಇಬ್ಬರೂ ದಡ್ಡರು. ಇಬ್ಬರೂ ಜಾಣರು. ನಾನೇನು ನಿನ್ನ ಹಾಗೆ ಮಾತಾಡಲ್ಲ, ಆದರೆ ಅಂತಹ ಏಜೆಂಟ್‌ಗಳ ಜತೆ ನಾನೆಂದೂ ಮಾತನಾಡಿಲ್ಲ, ನೀನೂ ನನ್ನ ಜತೆಯಲ್ಲಿ ಬಾ.."

"ದಡ್ಡ ಅಂತೀಯಾ.. ನನ್ನ ಸಲಹೆ, ನನ್ನ ಸಹಾಯ ನಿನಗೆ ಬೇಕು. ತಡೀ ಮೊದಲು ಫೋನ್ ಮಾಡಿ, ಅಪಾಯಿಂಟ್‌ಮೆಂಟ್ ತಗೊಳ್ಳೋಣ".

ಆ ಏಜೆಂಟ್ ಕೊಟ್ಟ ವಿಳಾಸವನ್ನು ಹಿಡಿದು, ಅವನ ಆಫೀಸಿಗೆ ಹೋದರು. ಹತ್ತಾರು ಜನಗಳ ಆಫೀಸಾದರೂ, ಅವನು ಇವರನ್ನ ಪ್ರತ್ಯೇಕವಾಗಿ ತನ್ನ ರೂಮಿಗೆ ಕರೆದುಕೊಂಡು ಹೋದ.

ಸಂಕ್ಷಿಪ್ತವಾಗಿ ವನಜಾಳ ವಿಷಯ ತಿಳಿಸಿ, ಆದಷ್ಟು ಬೇಗ ಆ ಹುಡುಗಿಯನ್ನು ಹುಡುಕಬೇಕು. ತಂದೆಗೆ ಕಡೇಗಾಲದಲ್ಲಿ ಮಗಳನ್ನು ನೋಡುವ ಆಸೆ ತೀ ...ೕಕು. ಸುಮಾರು ಎಷ್ಟು ಖರ್ಚಾಗುತ್ತೆ!" ಕೇಳಿದ.

"ಎಷ್ಟೂಂತ ಹೇಗೆ ಹೇಳಲಿ! ಎಷ್ಟು ಹೇಳಿದರೂ ನೀವುಗಳು ಜಾಸ್ತಿ ಅಂತ ಚೌಕಾಸಿ ಮಾಡ್ತೀರಿ.."

"ಎಂತಹ ಏಜೆಂಟಯ್ಯ ಇವನು" ಎಂದುಕೊಂಡು.

''ನಾವು ಎಂದೂ ಇಂತಹ ಕೆಲಸ ಮಾಡಿಸಿಲ್ಲ. ನಮಗೇನೂ ತಿಳಿಯದು, ಆದರೆ ನೀವು ಕೇಳಿದಷ್ಟು ಹಣ ಕೊಡ್ತೀನಿ..''

''ನಾವು ನಾಲ್ಕೈದು ಜನರನ್ನಾದರೂ, ಗೊತ್ತು ಮಾಡಿ, ಎಲ್ಲಾ ಕಡೆಗೂ ಕಳಿಸಬೇಕಾಗುತ್ತೆ. ಲೇಡೀಸ್ ಹಾಸ್ಟೆಲ್ಲುಗಳಾದ್ದರಿಂದ ನಾವು ಸುಲಭವಾಗಿ ಹೋಗುಕ್ಕಾಗುಲ್ಲ. ಡಿಟೆಕ್ಟಿವ್ ಏಜೆಂಟ್ ಅಂದರೆ, ಅವರುಗಳು ನಮ್ಮನ್ನ ಬಿಡಲು ಒಪ್ಪುವುದೇ ಇಲ್ಲ ಸಮಯ ನೋಡಿ, ಸುಳ್ಳು ಹೇಳಿ, ಲಂಚಕೊಟ್ಟು ಅಲ್ಲಿಯ ವಾರ್ಡನ್‌ಗಳನ್ನು ನಮ್ಮ ಕಡೆಗೆ ಮಾಡಿಕೊಳ್ಳಬೇಕಾಗುತ್ತೆ.. ಫೋನು ಮಾಡಬೇಕಾಗುತ್ತೆ.. ಕೆಲಸದವರಿಗೆ ಲಂಚ ಇತ್ಯಾದಿಗಳ ಖರ್ಚು ಎಲ್ಲಾ ಸೇರಿ, ಹತ್ತು ಸಾವಿರವಾಗುತ್ತೆ.''

''ಹತ್ತು ಸಾವಿರ! ದಿನೇಶ ಉದ್ಗರಿಸಿದ. ಒಂದು ಹುಡುಗೀನ ಹುಡುಕಿಸುಕ್ಕೆ ಹತ್ತು ಸಾವಿರ. ಬೇಡ ಬಿಡು ಅಶೋಕ್.. ಅಷ್ಟು ಖರ್ಚು ಮಾಡಿ, ನಿನಗೆ ಸಿಗುವುದಾದರೂ ಏನು!''

''ಹುಡುಗಿಯ ತಂದೆಯಿಂದ ಪಡೆಯಿರಿ,'' ಅವನೇ ಸಲಹೆ ಮಾಡಿದ.

''ಆತ ಸಾಯುತ್ತಾ ಮಲಗಿದಾರೆ.. ಅವರವರು ಅಂತ ಹೇಳಿಕೊಳ್ಳಲು ಯಾರಿಲ್ಲ ನಾವು ಅವರನ್ನು ಕೇಳುವುದಾದರೂ ಹೇಗೆ!''

''ನೋಡಿ, ನನ್ನ ಸಮಯಾನ ವ್ಯರ್ಥ ಮಾಡಬೇಡಿ, ನೀವುಗಳು ಐದು ಸಾವಿರ ಕೊಡಿ, ನಾನು ಆಮೇಲೆ ಅವರ ತಂದೆಯಿಂದ ಉಳಿದ ಐದು ಸಾವಿರವನ್ನು ವಸೂಲು ಮಾಡ್ತೀನಿ. ಅವನೇ ಸಲಹೆ ನೀಡಿದಾಗ, ಅಶೋಕ ಜಿಗುಪ್ಸೆಯಿಂದ ಎದ್ದ. ಇವನಿಗೆ ಯಾರು ಗಿರಾಕಿಗಳು ಇಲ್ಲ ಅಂತ ಕಾಣಿಸುತ್ತೆ. ಅದಕ್ಕೇ ಎಲ್ಲಾ ನಮ್ಮಿಂದಲೇ ಕಸಿಯುವ ಆಸೆ ಎಂದುಕೊಂಡು, ''ನಡಿಯೋ ದಿನೇಶ.. ಇದು ನಮ್ಮಿಂದಾಗದ ಕೆಲಸ.. ನನ್ನ ಹತ್ತಿರ ಅಷ್ಟು ಹಣ ಇಲ್ಲವೇ ಇಲ್ಲ.'' ಅವರಿಬ್ಬರೂ ಎದ್ದು ಹೊರಟಾಗ ಅವನು ತಡೆದ.

''ನಮ್ಮ ಆಫೀಸಿಗೆ ಬಂದ ಗಿರಾಕಿಗಳನ್ನು ಹಾಗೇ ಕಳಿಸುವುದು ನನಗಿಷ್ಟವಿಲ್ಲ, ನಾನು ನಿಮಗೆ ಸಹಾಯ ಮಾಡ್ತೀನಿ. ಆದರೆ ಅದಕ್ಕೆ ತಗಲುವ ಖರ್ಚನ್ನು ಆ ಮಡುಗಿಯ ತಂದೆಯ ಕೈನಿಂದ ನೀವು ನನಗೆ ಕೊಡಿಸಿದರೆ ಸಾಕು..'' ಅವನು ಅವಸರದಿಂದ ಹೇಳಿದಾಗ ಇಬ್ಬರಿಗೂ ನಗು ಬಂತು.

''ಈಗ ಬಂದ ದಾರಿಗೆ'' ಎಂದುಕೊಂಡು.. ''ನಮ್ಮ ಹತ್ತಿರ ಈಗ ಐನೂರು ರೂಪಾಯಿ ಇದೆ. ಅದನ್ನು ಅಡ್ವಾನ್ಸ್ ಅಂತ ತಗೊಳ್ಳಿ. ಆದರೆ ಆದಷ್ಟು ಬೇಗ ಈ ಕೆಲಸವಾಗಬೇಕು..'' ಎನ್ನುತ್ತಾ, ತನ್ನ ಅಂಗಡಿಯ ವಿಳಾಸ, ದಿನೇಶನ ಸ್ಟುಡಿಯೋ ವಿಳಾಸ ಹಾಗೂ ಫೋನು ನಂಬರುಗಳನ್ನು ಕೊಟ್ಟ, ವನಜಾಳ ಫೋಟೋ ಕೊಟ್ಟ.

ಅವನಿಗೆ ಥ್ಯಾಂಕ್ಸ್ ಹೇಳಿ, ಇಬ್ಬರೂ ಹೊರಗೆ ಬಂದರು. ''ಹೋಯ್ತು ಐನೂರು ರೂಪಾಯಿ'' ಎಂದು ಇಬ್ಬರೂ ತಮ್ಮಲ್ಲೇ ಅಂದುಕೊಂಡರು.

ಮಾರನೇ ದಿನ ಆ ಏಜೆಂಟ್, ಅಶೋಕನ ಅಂಗಡಿಗೆ ಫೋನು ಮಾಡಿ, ಬನ್ನಿ ಎಂದು ಕರೆದಾಗ ಇವನಿಗೆ ಆಶ್ಚರ್ಯ. ದಿನೇಶನಿಗೆ ಫೋನು ಮಾಡಿ ವಿಷಯ ತಿಳಿಸಿ, ಬರ್ತೀಯಾ ತಾನೇ'' ಎಂದು ಕೇಳಿದ್ದ.

ಏಜೆಂಟ್ ಇಬ್ಬರನ್ನು ನಗು ಮುಖದಿಂದ ಬರಮಾಡಿಕೊಂಡ.

''ಗುಡ್‌ನ್ಯೂಸ್, ನಿಮಗೆ ಬೇಕಾದ ಹುಡುಗೀನ ಪತ್ತೆ ಮಾಡಿದೀನಿ'' ಎಂದ.

''ಥ್ಯಾಂಕ್ಸ್, ಎಲ್ಲಿದಾಳೆ.. ಈಗ?''

''ಹೇಳ್ತೀನಿ, ಎಲ್ಲಾ ವಿವರವಾಗಿ ಹೇಳ್ತೀನಿ, ಎಂದು ಹೇಳಿ, ತನ್ನ ಪಕ್ಕದಲ್ಲಿದ್ದ ರೆಕಾರ್ಡ್ ಪ್ಲೇಯರ್‌ನ ಗುಂಡಿ ಒತ್ತಿದ. ಇಬ್ಬರೂ ಮುಖ ಮುಖ ನೋಡಿಕೊಂಡರು.

''ನಿಮಗೆ ನಮ್ಮ ಮೇಲೆ ಅನುಮಾನ.'' ದಿನೇಶ ನುಡಿದ.

ಅನುಮಾನವೇನಿಲ್ಲ, ನಾವು ಎಲ್ಲರ ಜತೆಯೂ ವ್ಯವಹರಿಸುವುದು ಹೀಗೇನೇ ಎನ್ನುತ್ತಾ ಹೇಳತೊಡಗಿದ.

''ನಮ್ಮ ಕಡೆಯ ಆರು ಜನರನ್ನು ಗೊತ್ತು ಮಾಡಿದ್ದೆ. ಕೆಲವರು ಆಟೋದಲ್ಲಿ ಕೆಲವರು ಟ್ಯಾಕ್ಸಿಯಲ್ಲಿ ಹೋಗಿದಾರೆ. ಹೋಟೆಲ್ಲಿನಲ್ಲಿ ತಿಂಡಿ ತಿಂದು, ಬಿಸಿಲಿನಲ್ಲಿ ಅಲೆದು, ಮಳೆಯಲ್ಲಿ ನೆನೆದು ಎಲ್ಲಾ ಹಾಸ್ಟೆಲ್ಲುಗಳನ್ನು ಪತ್ತೆ ಹಚ್ಚಿದಾರೆ. ಕೆಲವು ದೊಡ್ಡ ಹಾಸ್ಟೆಲ್ಲುಗಳು, ಕೆಲವು ಚಿಕ್ಕದು. ಈ ನಿಮ್ಮ ಹುಡುಗಿ ಇರುವುದು ಶ್ರೀಮಂತ ಹುಡುಗಿಯರು ಇರುವಂತಹ, ಶ್ರೀಮಂತ, ಆಧುನಿಕ ಹುಡುಗಿಯರಿಗೆಂದೇ ಕಟ್ಟಿಸಿರುವ ಹಾಸ್ಟೆಲ್ಲು. ಅಲ್ಲಿ ಅವಳು ಆರಾಮವಾಗಿ ಶ್ರೀಮಂತಿಕೆಯ ಜೀವನ ನಡೆಸಿಕೊಂಡಿದಾಳೆ. ಅವಳ ತಂದೆ ಅವಳಿಗೆಂದು ಕಳಿಸುವ ಹಣ ಅವಳಿಗೆ ಸಾಕಾಗುವುದಿಲ್ಲ, ಅಷ್ಟು ಖರ್ಚು ಅವಳಿಗೆ ಅದಕ್ಕಾಗಿ, ಅವಳು ಒಂದು ಕಡೆ ಮಾಡೆಲಿಂಗ್ ಆಗಿ ಕೆಲಸ ನಿರ್ವಹಿಸುತ್ತಿದಾಳೆ. ನೀರಿನಂತೆ ಹಣವನ್ನು ಖರ್ಚು ಮಾಡ್ತಾಳೆ. ಹೆಸರಿಗೆ ಕಾಲೇಜ್‌ಗೆ ಹೋಗುತ್ತಾಳೆ. ಅದೂ ಮನಸ್ಸಿಗೆ ಬಂದ ದಿನ. ಉಳಿದಂತೆ ಸ್ನೇಹಿತರ ಜತೆ ಮನ ಬಂದಂತೆ ತಿರುಗಾಡುವುದು.. ತಿಂದು ಕುಡಿದು ಎಂಜಾಯ್ ಮಾಡುವುದು ಅವಳ ಹವ್ಯಾಸ.''

''ಅಂದರೇ..?''

''ಇದು ಹೊಸದೇನಲ್ಲ ಬಿಡಿ, ಎಷ್ಟೋ ಜನ ಹುಡುಗಿಯರಿಗೆ ದುರಭ್ಯಾಸವಿರುತ್ತೆ ಸಿಗರೇಟು, ಕುಡಿತ, ಮಾದಕವಸ್ತುವಿನ ಸೇವನೆ ಇವೆಲ್ಲಾ ಅತೀ ಸಾಮಾನ್ಯ''

''ಹಾಗಾದರೆ, ಈ ಹುಡುಗಿಯೂ..''

''ಹೌದು.. ಅವಳು ಯಾವುದೋ ಮಾದಕವಸ್ತುವನ್ನು ಸೇವನೆ ಮಾಡುತ್ತಾಳೆಂದು ನಮ್ಮ ಏಜೆಂಟ್ ಕಂಡು ಹಿಡಿದಿದಾನೆ.''

ದಿನೇಶ ಅಶೋಕನ ಮುಖ ನೋಡಿದ. ಅವನ ಮುಖದ ಬಣ್ಣ ಬದಲಾಯಿಸಿ ಹೋಗಿತ್ತು.

"ಇದು ನೋಡಿ, ಆ ಹುಡುಗಿ ಇರುವ ಹಾಸ್ಟೆಲ್ಲಿನ ವಿಳಾಸ. ಅಲ್ಲಿಯ ವಾರ್ಡನ್ ಅತಿ ಜೋರು. ಚೆನ್ನಾಗಿ ಕೈಗೆ ಹಣ ತುರುಕಿದರೆ, ನಿಮಗೆ ಆ ಹುಡುಗಿಯ ಭೇಟಿ ಮಾಡಿಸ್ತಾಳೆ."

"ಭೇಟಿಯಾದರೂ ಹೇಗೆ ಮಾತನಾಡಿಸುವುದು?"

"ಅದು ನಿಮಗೆ ಸೇರಿದ್ದು, ನಾವು ಅವಳನ್ನು ಪತ್ತೆ ಮಾಡುವುದಷ್ಟೇ ನಮ್ಮ ಕೆಲಸ.."

"ಈಗ ಏನು ಮಾಡಬೇಕು ಅಂತ ಗೊತ್ತಾಗ್ತಾ ಇಲ್ಲವಲ್ಲ."

"ಆ ಹುಡುಗಿಯ ತಂದೆ ಹೇಗಿದಾರೆ!" ಏಜೆಂಟ್ ಕೇಳಿದ.

"ಬದುಕಿದಾರೆ. ಇನ್ನು ಸತ್ತಿಲ್ಲ" ದಿನೇಶ ನುಡಿದ.

"ಅವರು ಬಂದು ಮಗಳ ಸ್ಥಿತಿ ನೋಡಿದರೆ ಏನು ಗತಿ ಅಂತ ಯೋಚಿಸ್ತಿದ್ದೆ."

"ದೇವರೇ ಗತಿ.. ಹೃದಯದ ಬಡಿತ, ತಕ್ಷಣವೇ ನಿಂತು ಹೋಗುತ್ತೆ."

"ಆ ಹುಡುಗಿಯ ಬಗ್ಗೆ ಆ ತಂದೆಯ ಬಗ್ಗೆ ನನಗೆ ಅಯ್ಯೋ ಅಂತ ಅನ್ನಿಸ್ತಿದೆ, ನಾನೊಂದು ಉಪಾಯ ಹೇಳಲಾ?"

"ಹುಂ, ಹೇಳಿ."

"ಆ ಹುಡುಗೀನ ಕಿಡ್ನಾಪ್ ಮಾಡಿದರೆ ಹೇಗೆ?"

"ಕಿಡ್ನಾಪ್! ಅದೆಲ್ಲಾ ಬೇಡ, ಇಲ್ಲದ ಗಲಾಟೆ ಆಗುತ್ತೆ."

"ನಾವು ಕಿಡ್ನಾಪ್ ಮಾಡಿ, ಆ ಹುಡುಗೀನ ಅವರ ತಂದೆ ಮನೆಗೆ ತಲುಪಿಸಿದರೆ..!"

"ಇದಕ್ಕೆ ನಿಮ್ಮ ಖರ್ಚು ಎಷ್ಟು ಬೀಳುತ್ತೆ!"

"ಹತ್ತು ಸಾವಿರ ಅಷ್ಟೇ.."

"ಈ ಕಿಡ್ನಾಪ್, ರಾನ್ಸಮ್ ಇದನ್ನೆಲ್ಲ ನಾನು ಒಪ್ಪೊಲ್ಲ. ಇದೆಲ್ಲ ಕಾನೂನಿಗೆ ವಿರುದ್ಧವಾದುದು, ನಾನು ಮಾಡುಲ್ಲ, ಅಥವಾ ಇದರಿಂದ ನಮಗೆ ಆಗಬೇಕಾದದ್ದು ತಾನೇ ಏನು! ಸುಮ್ಮನೇ ಪೋಲಿಸರಿಗೆ ತಿಳಿಸಿದರೆ ತೊಂದರೆ.."

"ಪೋಲಿಸು, ಕೇಸು, ಆಗದ ಹಾಗೆ ನಾನು ನೋಡಿಕೊಳ್ತೀನಿ.."

"ಅದಕ್ಕೂ ಹತ್ತು ಸಾವಿರ ಕೊಡಬೇಕಾ!" ದಿನೇಶ ಕೇಳಿದ.

"ಪೂರ್ತಿ ನನ್ನ ಮಾತನ್ನ ಮೊದಲು ಕೇಳಿ.. ಹುಶಾರಿಲ್ಲದೆ ಮಲಗಿರುವವರನ್ನು ಮೊದಲು ಕೇಳಿ, ಮಗಳನ್ನು ನೋಡುವ ಆಸೆ ಇದೆಯಾ ಅಂತ.. ಅವರು ಹುಂ, ಅಂದರೆ ಆಮೇಲೆ ಈ ಹುಡುಗಿಯ ಹತ್ತಿರ ಬಂದು, ನಿಮ್ಮ ತಂದೇನಾ ನೋಡ್ತೀಯಾ ಅಂತ ಕೇಳಿ, ಇಬ್ಬರೂ ಒಪ್ಪಿದರೆ ಕೇಸ್ ಖಲಾಸ್.. ಇಲ್ಲದಿದ್ದರೆ.."

"ಇಲ್ಲದಿದ್ದರೇ.."

''ಆತ ಒಪ್ಪಿ ಅವಳು ಒಪ್ಪದಿದ್ದರೇ, ಆತ ಒಪ್ಪದೇ, ಅವಳು ಒಪ್ಪಿದರೆ ತಂದೆ ಮಗಳ ಭೇಟಿ ಸುಲಭವಲ್ಲ, ನೀವು ಹೇಗೆ ಒಪ್ಪಿಸಬಲ್ಲಿರಿ?''

''ಮತ್ತೆ ಹಾಗಾದರೆ..... ಮುಂದೆ ?''

ಅವಳನ್ನು ನಾವು ಅಪಹರಿಸಿದರೆ, ಹಾಸ್ಟೆಲ್ಲಿನವರು, ಯಾವ ಆ್ಯಕ್ಷನನ್ನು ತೆಗೆದುಕೊಳ್ಳುವುದಿಲ್ಲ. ಪೋಲಿಸ್ ಕಂಪ್ಲೇಂಟ್ ಕೊಟ್ಟು ತಮ್ಮ ಹಾಸ್ಟೆಲ್ಲಿನ ಹೆಸರನ್ನು ಕೆಡಿಸಿಕೊಳ್ಳಲು ಅವರು ಸಿದ್ಧರಿರುವುದಿಲ್ಲ. ಅದರಿಂದ ಸುಮ್ಮನಾಗಿ ಬಿಡ್ತಾರೆ. ಅವಳಲ್ಲದಿದ್ದರೆ ಇನ್ನೊಬ್ಬಳು ಅವಳ ರೂಮಿಗೆ ಬರಲು ರೆಡಿಯಾಗಿರುತ್ತಾರೆ. ಇನ್ನು ಆ ಸ್ನೇಹಿತೆಯರು, ಬಹುಶಃ ಯಾವ ಸುದ್ದಿಗೂ ಬರಲಾರರು. ಅಥವಾ ಅವರುಗಳಿಗೆ ನಂಬಿಕೆ ಬರುವಂತೆ, ವನಜಾಳ ಹೆಸರಿನಲ್ಲಿ ಒಂದು ಕಾಗದ ಬರೆಸಿಟ್ಟರಾಯಿತು. ಇನ್ನು ಆ ಲೋಕಲ್ ಗಾರ್ಡಿಯನ್‌ಗೆ ತಿಳಿಸುವವರ್ಯಾರು! ಅವರು ಊರಿಗೆ ವಾಪಸ್ಸು ಬರುವ ಹೊತ್ತಿಗೆ, ಮಗಳು ಅಪ್ಪನ ಮನೆಯಲ್ಲಿರುತ್ತಾಳೇ.''

''ಆದರೆ...''

''ಆದರೆ ಗೀದರೆ ಎನ್ನುವುದಾದರೆ, ದಿನವೆಲ್ಲಾ ಕೂತು ಯೋಚಿಸಿ, ಒಂದು ನಿರ್ಧಾರಕ್ಕೆ ಬನ್ನಿ ಆಮೇಲೆ ನನಗೆ ಫೋನು ಮಾಡಿ.. ಆಮೇಲೆ ಏನು ಮಾಡಬೇಕು ಹೇಗೆ ಮಾಡಬೇಕು ಎನ್ನುವುದನ್ನು ನಾನು ಹೇಳ್ತೀನಿ.''

ಅವನ ಮಾತುಗಳನ್ನು ಕೇಳಿ ಇಬ್ಬರಿಗೂ ಗಾಬರಿಯಾಯಿತು. ಇವನು ಏನೇನೋ ಹೇಳ್ತಿದಾನಲ್ಲ, ಇಲ್ಲಿಂದ ಎದ್ದು ಹೋದರೆ ಸಾಕು ಎಂದುಕೊಂಡು ಎದ್ದರು.

ಅವನು ನಗುತ್ತಾ ಇಬ್ಬರನ್ನು ಬೀಳ್ಕೊಟ್ಟಾಗ ಇಬ್ಬರ ಅಂಜಿಕೆ ಹೆಚ್ಚಾಯಿತು.

ಆಮೇಲೆ ಎಷ್ಟೋ ಹೊತ್ತಿನವರೆಗೂ ಅವರಿಬ್ಬರೂ ಅದೇ ವಿಷಯದ ಬಗ್ಗೆ ಚರ್ಚೆ ನಡೆಸಿದ್ದರು.

''ಯಾಕೋ ಇದೆಲ್ಲ ಸರಿಯಲ್ಲ ಅಂತ ಅನ್ನಿಸ್ತಿದೆ ದಿನೇಶ, ಯಾವುದೋ ಹುಡುಗಿಯ ಮಾತನ್ನು ಕೇಳಿಕೊಂಡು ಇವನ ಹತ್ತಿರ ಹೋದದ್ದೇ ತಪ್ಪು ಅಂತ ಅನ್ನಿಸುತ್ತೆ.''

''ಹೌದು, ಆದರೆ ಈಗ ಏನು ಮಾಡ್ತೀಯಾ!''

''ಇಷ್ಟಕ್ಕೇ ಸುಮ್ಮನಾಗಿ ಬಿಡೋಣ, ಆ ತಂದೆಗೇ ಇಲ್ಲದ ಮಗಳ ಮೇಲಿನ ಚಿಂತೆ ನಮಗೇಕೆ!''

''ಅಡಿಗೆಯಾಕೆಯ ಮುಖಾಂತರ ವಿಷಯ ತಿಳಿದು ಆತ ಆಸೆ ಇಟ್ಟುಕೊಂಡಿದ್ದರೇ..''

ಹಾಗಾದ್ರೆ ಒಂದು ಕೆಲಸ ಮಾಡೋಣ. ಈಗಲೇ, ಆಕೆಗೆ ವಿಷಯ ತಿಳಿಸಿ, ಹಾಸ್ಟೆಲ್ಲಿನ ಫೋನು ನಂಬರನ್ನು ತಿಳಿಸೋಣ.. ಇನ್ನೂ ಅವರ ಇಷ್ಟ''

''ತಡಿ, ಈಗಲೇ ಡಯಲ್ ಮಾಡ್ತೀನಿ,'' ಎಂದು ದಿನೇಶ ನಂಬರನ್ನು ತಿರುಗಿಸಿದ. ಅಡಿಗೆಯಾಕೆಯೇ ಫೋನನ್ನೆತ್ತಿದರು. ಅಶೋಕ ಮಾತನಾಡಿದ.

"ನಾನು ಅಶೋಕ, ವನಜಾಳ, ಹಾಸ್ಟೆಲ್ಲು ಯಾವುದು ಅಂತ ತಿಳಿಯಿತು. ವಿಳಾಸ ಹೇಳ್ತೀನಿ ಬರೆದುಕೊಳ್ಳಿ."

"ಹೇಗಿದಾಳೆ! ನೀವು ಭೇಟಿಯಾಗಿದ್ರಾ.."

"ಇಲ್ಲ.. ನೀವು ಮಾತನಾಡಿ ನೋಡಿ, ಎಷ್ಟಾಗಲೀ, ನೀವು ಮನೆಯವರು."

"ಮನೆಯವರು ಅನ್ನುವ ವ್ಯಾಮೋಹ ಇದ್ದಿದ್ದರೆ, ಇಷ್ಟು ದಿನಗಳಲ್ಲಿ ಬರದೇ ಇರುತ್ತಿದ್ದಳೇ. ನನಗೆ ರಾಯರದ್ದೇ ಚಿಂತೆ ಆಗಿದೆ. ಏನಾದರು ಹೆಚ್ಚು ಕಡಿಮೆಯಾದರೆ ನಾನೇನು ಮಾಡಲಿ! ಮುಂದೇನು ಅಂತ ನೆನೆಸಿಕೊಂಡರೆ ಹೆದರಿಕೆ ಆಗುತ್ತೆ." ಅಶೋಕ ಮೆತ್ತಗಾದ.

"ಅವರು ಹುಶಾರಾಗಿ ಮನೆಗೆ ಬರ್ತಾರೆ.. ಏನೂ ಯೋಚಿಸಬೇಡಿ"

"ಮಗನೋ, ಮಗಳೋ ಎದುರಿಗಿದ್ದರೆ, ಅವರಿಗೂ ಸಂತಸವಲ್ಲವೆ? ಇರುವ ಒಬ್ಬ ಮಗಳು ಮನೆ ಬಿಟ್ಟು ಹೋಗಿದಾಳೆ ಅಂದರೆ, ಅದಕ್ಕಿಂತ ಹೆಚ್ಚಿನ ಚಿಂತೆ ಯಾವುದಿದೆ?.."

ತಾನೀಗ ಏನಾದರೂ ಹೇಳದಿದ್ದರೆ, ಈಕೆಯ ಮಾತು ಮುಗಿಯುವುದಿಲ್ಲವೆಂದು ಕೊಂಡು, "ನಾನು ನಾಳೇನೇ ಹೋಗಿ ವನಜಳ ಹತ್ತಿರ ಮಾತನಾಡ್ತೀನಿ, ನೀವು ನಿಶ್ಚಿಂತೆಯಾಗಿರಿ" ಎಂದು ಬಿಟ್ಟ, ದಿನೇಶ ಕಣ್ಣು ಕಣ್ಣು ಬಿಟ್ಟ.

"ಆತ ನನ್ನ ಅಂಗಡಿಯ ಮುಂದೆ ಅದೆಂತಹ ಗಳಿಗೆಯಲ್ಲಿ ಬಿದ್ದರೋ, ಅವರಿಂದ ನನಗೆ ಬಿಡುಗಡೆಯೇ ಇಲ್ಲ ಅಂತ ಕಾಣುತ್ತೆ"

"ಹಾಗಾದರೆ ಸುಮ್ಮನಿದ್ದು ಬಿಡು. ಎಲ್ಲ ಮರೆತು ಬಿಡು.."

"ಅದು ಅಷ್ಟು ಸುಲಭವಾಗಿದ್ದರೆ ಹಾಗೇ ಮಾಡುತ್ತಿದ್ದೆ. ಅಸಹಾಯಕರಾಗಿ ನರ್ಸಿಂಗ್ ಹೋಂನ ಬೆಡ್ ಮೇಲೆ ಮಲಗಿರುವುದನ್ನು ನೋಡಿದರೆ, ನನಗೆ ಪ್ರತಾಪನ ನೆನಪು ಬರುತ್ತೆ.. ಅಪ್ಪ ಅಮ್ಮನನ್ನು ಗುರುತಿಸಲಿಲ್ಲ.. ಹೆಂಡತಿಯ ಬಳಿ ಕಡೆಯದಾಗಿ ಮಾತನಾಡುವ ಶಕ್ತಿಯೇ ಇರಲಿಲ್ಲ, ನಾವೆಲ್ಲರೂ ಎದುರಿಗೆ ನಿಂತಿದ್ರೂ ಅವನನ್ನು ಜೀವಂತ ಸ್ಥಿತಿಗೆ ತರಲು ಆಗಲಿಲ್ಲ, ಅದಕ್ಕಿಂತ ಭಾರಿ ಶಿಕ್ಷೆ ಬೇಕೆ! ಆ ನೆನಪು ನನ್ನನ್ನು ಭೂತದಂತೆ ಕಾಡುತ್ತೆ."

"ಅದನ್ನೆಲ್ಲಾ ನೆನೆಸಿಕೊಂಡು ಈಗ ಏನು ಪ್ರಯೋಜನ ? "

"ಏನೂ ಇಲ್ಲ, ಆದರೂ ಯಾರಾದರೂ, ಹೀಗೆ ಅಸಹಾಯಕರಾಗಿ ಹಾಸಿಗೆ ಮೇಲೆ ಮಲಗಿದ್ದರೆ ನನ್ನ ಮನಸ್ಸು ಕಲಕಿ ಹೋಗುತ್ತೆ." ಅಶೋಕ ವ್ಯಥೆಯಿಂದ ಹೇಳಿದ್ದ.

ದಿನೇಶ ಭುಜ ತಟ್ಟಿ ಸಮಾಧಾನ ಹೇಳಿದ, "ನಿನ್ನ ಕೈಲಾದ್ದನ್ನು ನೀನು ಮಾಡಿದೀಯ.. ಇನ್ನೇನು ಮಾಡುಕ್ಕಾಗುತ್ತೆ?"

"ಅರ್ಧಂಬರ್ಧವಾಗಿ ಬಿಡುಕ್ಕೆ ಮನಸ್ಸಿಲ್ಲ, ಅಲ್ಲದೇ ನಾನೀಗ ಆ ಏಜೆಂಟನ ಕೈಗೆ ಸಿಕ್ಕಿ

ಬಿದ್ದಿದ್ದೇನೆ. ದುಡ್ಡಿಗಾಗಿ ಏನು ಬೇಕಾದರೂ ಮಾಡಬಲ್ಲ ಅಂತ ಅನ್ನಿಸುತ್ತೆ. ಬ್ಲಾಕ್ ಮೇಲ್ ಮಾಡಿದರೆ?''

''ಬ್ಲಾಕ್ ಮೇಲ್ ಮಾಡಿ ನಮ್ಮ ಹತ್ತಿರ ಏನು ಕಿಸೀತಾನೆ!''

''ನಮ್ಮ ಮಾತನ್ನೆಲ್ಲಾ ರೆಕಾರ್ಡ್ ಮಾಡಿಕೊಂಡಿದಾನೆ.. ಏನಾದರೂ ಸೃಷ್ಟಿ ಮಾಡಿ ನಮ್ಮನ್ನು ಸಿಕ್ಕಿಸಿದರೆ..''

''ನೋಡಿದರೆ ಹಾಗನ್ನಿಸೊಲ್ಲ, ಆದರೂ ನಾವು ಹುಶಾರಾಗಿಬೇಕು. ಯಾರಿಗಾದರೂ ಸಹಾಯ ಮಾಡುಕ್ಕೆ ಹೋದರೆ ನಮಗೇ ಅಪಾಯ..'' ಹೌದು ಎನ್ನುವಂತೆ ತಲೆದೂಗಿದ.

''ಇನ್ನು ಇವತ್ತೆಲ್ಲಾ ಅದನ್ನೇ ಚಿಂತಿಸಬೇಡ, ನಾನೂ ಇದೀನಿ, ನಿನ್ನ ಜತೆಗೆ, ಏನು ಬರುತ್ತೋ ಅದನ್ನು ಇಬ್ಬರೂ ಎದುರಿಸೋಣ.''

''ಹೂಂ'' ಎಂದು ಕೆಟ್ಟನಗೆ ನಕ್ಕು ತನ್ನ ಮನೆ ದಾರಿ ಹಿಡಿದ.

ಅವನನ್ನು ಕಂಡೊಡನೆ ವಂಶಿ ಕೈ ಚಾಚಿದ. ಇವನು ಎತ್ತಿಕೊಂಡ, ಸುಧಾ ಕಾಫಿ ತಿಂಡಿ ತಂದಿತ್ತಳು. ''ಮಧ್ಯಾಹ್ನ ಊಟ ಎಲ್ಲಿ ಮಾಡಿದೆ! ಎಲ್ಲಿಗೆ ಹೋಗಿದ್ದೆ'' ಕೇಳಿದಳು, ''ಹೇಳಲೇ ಬೇಕಾ!''..ಎಂದ ಹುಬ್ಬುಗಳನ್ನೇರಿಸಿ.

''ಹಾಗಾದರೆ ನೀನು ಊಟಾನೇ ಮಾಡಿಲ್ಲ.'' ಕಂಡು ಹಿಡಿದವಳಂತೆ ನುಡಿದಳು.

''ಹೌದು, ಆದರೆ ಹಸಿವೂ ಇಲ್ಲ'' ಎಂದ ಗಟಗಟನೆ ಕಾಫಿ ಕುಡಿದು.

''ಏನಾಗಿದೆ ನಿನಗೆ! ಮೂರು ನಾಲ್ಕು ದಿನದಿಂದ ಒಂದು ತರಹ ಇದೀಯ ಅಂತನ್ನಿಸ್ತಿದೆ.''

''ನನ್ನನ್ನೇ ಗಮನಿಸುತ್ತಿರುತ್ತೀಯಾ ಅಂತಾಯ್ತು.''

''ಏನಿಲ್ಲ..'' ಎಂದಳು ದೃಷ್ಟಿ ಕೆಳಗೆ ಮಾಡಿ.

''ಇವಳಿಗೆ ಎಲ್ಲಾ ಹೇಳುವಂತಿದ್ದರೇ..'' ಎಂದುಕೊಂಡ. ಆದರೆ ಹೇಳುವುದಾದರೂ ಹೇಗೆ? ಅವಳು ಅಪಾರ್ಥ ಮಾಡಿಕೊಂಡರೇ, ಒಂದು ಹುಡುಗಿಗೆ ಸಂಬಂಧಿಸಿದ ವಿಷಯ ಎಂದು ನೆನಪಿಗೆ ಬಂದ ಕೂಡಲೇ ವನಜಾಳ ಫೋಟೋ, ಆ ಏಜೆಂಟಿನ ಬಳಿಯೇ ಇರುವುದು ನೆನಪಾಯಿತು. ಏನೋ ದಿಗಿಲಾಯಿತು. ನಾಳೇನೇ ಹೋಗಿ ವಾಪಸ್ಸು ತಂದು ಬಿಡಬೇಕು ಎಂದುಕೊಂಡ.

''ಅಮ್ಮ, ಅಣ್ಣ ವಾಕಿಂಗ್ ಹೋಗಿದಾರೆ.. ನಾನು ನಮ್ಮ ಅಮ್ಮನ ಮನೆಗೆ ಹೋಗಿ ಬರಲೇ..'' ಕೇಳಿದಳು.

''ದಿನಾ ದಿನಾ ಅಲ್ಲಿ ಹೋಗಿ ಏನು ಮಾಡ್ತೀಯಾ?'' ತಮಾಷೆ ಎಂಬಂತೆ ಕೇಳಿದ.

''ಹೇಗಾದರು ಹೊತ್ತು ಹೋಗಬೇಡವೆ?'' ಅವಳು ವಿಷಾದದಿಂದ ನುಡಿದಾಗ, ತಾನು ಕೇಳಿದ್ದು ತಪ್ಪಾಯಿತೇನೋ ಎಂದುಕೊಂಡ.

"ಕೆಲಸಕ್ಕೆ ಹೋಗ್ತಾಳೆ, ದಿನಕ್ಕೊಂದು ಬಗೆಯ ಸೀರೆ, ರವಿಕೆಯನ್ನುಟ್ಟು ಮೊದಲಿನಂತೆಯೇ ಅಲಂಕರಿಸಿಕೊಂಡು ಹೋಗ್ತಾಳೆ, ಹಾಗೆ ಇರಬೇಡ ಎಂದು ಇದುವರೆಗೂ ಯಾರೂ ಹೇಳಿಲ್ಲ. ಅಮ್ಮ ಕೂಡಾ ಆ ವಿಷಯದಲ್ಲಿ ಏನನ್ನು ಆಡಿರಲಿಲ್ಲ, ಯಾರಾದರೂ ನೋಡಿದವರಿಗೆ, ಗಂಡನಿಲ್ಲದವಳು ಎಂಬ ಅನುಮಾನ ಬರುವುದೇ ಇಲ್ಲ ಹಾಗಿದಾಳೆ.. ಪಾಪ, ಈ ಚಿಕ್ಕವಯಸ್ಸಿಗೇ ಅವಳಿಗೆ ಈ ಸ್ಥಿತಿ. ಕೆಲಸಕ್ಕೆ ಸೇರದಿದ್ದರೆ ಅವಳು ಇಷ್ಟು ಹೊತ್ತಿಗೆ ಏನಾಗಿ ಹೋಗುತ್ತಿದ್ದಳೋ.

ಹಳೇ ಸಂಪ್ರದಾಯದ ಅಪ್ಪ ಅಮ್ಮನಿಗೆ ಅವಳು ಕೆಲಸಕ್ಕೆ ಹೋಗುವುದು ಹಿಡಿಸದ ವಿಷಯ. ಆ ಮಾತು ಪ್ರಾರಂಭ ಮಾಡಿದವನೂ ಇವನೇ..

"ಅವಳು ಮನೆಯಲ್ಲಿ ಕೂತು, ಅವನನ್ನು ನೆನೆಸಿಕೊಂಡು ಅಳುತ್ತಿದ್ದರೆ ಏನು ಪ್ರಯೋಜನ! ವಂಶಿಗೂ ಮೂರು ತಿಂಗಳಾಗಿದೆ. ಪ್ರತಾಪನ ಕಂಪೆನಿಯಲ್ಲೇ ಅವಳಿಗೆ ಕೆಲಸ ಕೊಡ್ತಾರೆ, ಅವಳು ಹೋಗಲಿ."

"ಪ್ರತಾಪನ ಹಣ ಬಂದಿದೆಯಲ್ಲ, ಇನ್ನು ಅವಳಿಗೇನು ಖರ್ಚಿದೆ..? ಮೊಮ್ಮಗುವನ್ನು ಸಾಕುವ ಜವಾಬ್ದಾರಿ ನಮಗಿರಲಿ."

"ಹಣದ ಮಾತಲ್ಲ ಇದು, ಅವಳು ಸುಮ್ಮನೇ ನೀರಸವಾಗಿ ಬದುಕನ್ನು ಬದುಕುವುದಾದರೂ ಹೇಗೆ! ಮನೆಯಿಂದ ಹೊರಗೆ ಹೋಗಿ, ನಾಲ್ಕು ಜನರ ಜತೆ ಓಡಾಡಿದರೆ, ಅವಳ ಮನದ ದುಗುಡವೂ ಕಡಿಮೆ ಆಗುತ್ತೆ."

"ಅವಳಿಗೆಷ್ಟು ದುಃಖವೋ, ನಮಗೂ ಅಷ್ಟೇ ದುಃಖವಿದೆ. ಹಾಗಂತ ನಾವೆಲ್ಲಿಗೆ ಹೋಗೋಣ ಹೇಳು."

"ನಿನ್ನ ವಯಸ್ಸಿಗೂ, ಅವಳ ವಯಸ್ಸಿಗೂ ತಾರತಮ್ಯ ಬೇಡವೆ! ಅವಳ ಸ್ಥಾನದಲ್ಲಿ ನಿಂತು ಯೋಚಿಸಿ ನೋಡು.. ಅವಳ ದುಃಖ ಏನು ಅಂತ ನಿನಗೇ ಅರ್ಥವಾಗುತ್ತೆ."

"ಅಂತೂ ಅವಳ ಪರ ವಹಿಸಿಕೊಂಡು ಮಾತನಾಡದಿದ್ದರೆ, ನಿನಗೆ ಸಮಾಧಾನವೇ ಇಲ್ಲ.."

"ನಾನೂ ಅವಳೂ ಮೊದಲಿನಿಂದ ಸ್ನೇಹಿತರು. ಅವಳ ದುಃಖ, ನಿಮಗಿಂತ ಹೆಚ್ಚಾಗಿ ನನಗರ್ಥವಾಗುತ್ತೆ. ಅವಳು ಕೆಲಸಕ್ಕೆ ಸೇರಲೇ ಬೇಕು. ಆಗಲೇ ಅವಳು ಈ ದುಃಖವನ್ನು ಮರೆಯಲು ಸಾಧ್ಯ."

ಅಂತೂ ಅವನ ಬೆಂಬಲದಿಂದ ಅವಳು ಕೆಲಸಕ್ಕೆ ಸೇರಿದ್ದಳು, ಮೊದ ಮೊದಲು ಆಗ ಈಗ ಅವಳ ಕೆಲಸದ ಬಗ್ಗೆ ವಿಚಾರಿಸುತ್ತಿದ್ದ. ಮೊದಲ ತಿಂಗಳ ಸಂಬಳ ತಂದು, "ಇದನ್ನು ಏನು ಮಾಡಲಿ!" ಎಂದು ಅವನನ್ನೇ ಕೇಳಿದ್ದಳು.

"ನಿನ್ನ ಖರ್ಚಿಗೊಂದಿಷ್ಟನ್ನು ಇಟ್ಟುಕೊಂಡು, ಉಳಿದುದ್ದನ್ನು ವಂಶಿಯ ಹೆಸರಿನಲ್ಲಿ ಬ್ಯಾಂಕಿನಲ್ಲಿಡು.." ಇವನು ಸಲಹೆ ಕೊಟ್ಟಿದ್ದ.

ಇವನ ಅಕ್ಕಂದಿರು, ರತ್ನ ರಾಧಾ, ಇಬ್ಬರೂ, ಅಮ್ಮನ ಪರವಹಿಸಿ ಮಾತನಾಡಿದ್ದರು. "ಈ ವಯಸ್ಸಿನಲ್ಲಿ ಅವಳಿಗೇನೋ ಕರ್ಮ! ಎಳೇ ಮಗುವನ್ನು ಸಾಕುವುದೆಂದರೆ ಸುಲಭವಲ್ಲ.. ಅವಳು ಕೆಲಸಕ್ಕೆ ಹೋಗಿ ದುಡಿದು, ಯಾರನ್ನು ಸಾಕಬೇಕಾಗಿದೆ? ಅಂತ ಅಷ್ಟೆ." ಅವರುಗಳು ತಾಯಿಯ ಅನುಕೂಲವಾಗಿ ಮಾತನಾಡಿದ್ದರು.

"ನಿಮ್ಮಿಬ್ಬರಿಗೂ, ಸುಧಾಳ ಮನಃಸ್ಥಿತಿಯ ಬಗ್ಗೆ ಚಿಂತೆ ಇಲ್ಲವೆಂದರೆ ಆಶ್ಚರ್ಯವಾಗುತ್ತೆ. ವಂಶಿಯನ್ನ ನೋಡಿಕೊಳ್ಳೊಕ್ಕೆ ನಾನು ಒಬ್ಬ ಆಳನ್ನು ಗೊತ್ತು ಮಾಡ್ತೀನಿ." ಅಕ್ಕತಂಗಿಯರಿಬ್ಬರೂ ಮುಖ ಮುಖ ನೋಡಿಕೊಂಡಿದ್ದರು. ಅವನು ಅದರ ಕಡೆ ಗಮನ ಕೊಡಲಿಲ್ಲ. ಸುಧಾಳ ದುಃಖ ಕಡಿಮೆಯಾಗಬೇಕು. ಅದಷ್ಟೇ ಅವನ ಚಿಂತೆ.

ಈಗಾಗಲೇ ಒಂದು ವಾರ ಕಳೆದು ಹೋಯಿತು. ಆ ಹುಡುಗಿ ಎಲ್ಲಿದ್ದಾಳೆ ಅಂತ ಪತ್ತೆಯಾಯ್ತು. ಈಗ ಅವಳನ್ನು ಹಾಸ್ಟೆಲ್ಲಿನಿಂದ ಹೊರತರುವುದು ಹೇಗೆ ಎಂಬ ಈ ಚಿಂತೆ ಪ್ರಾರಂಭವಾಗಿತ್ತು. ಅವಳು ನಮ್ಮವಳಲ್ಲ. ತಮ್ಮವಳಲ್ಲ, ಅವಳ ಬಗ್ಗೆ ತಾನೇಕೆ ಆಸಕ್ತಿ ವಹಿಸಿದೆನೋ ಎಂದೂ ಪಶ್ಚಾತ್ತಾಪ ಪಡುತ್ತಿದ್ದ.

ಒಂದು ಸಲ, ಈ ತಕ್ಷಣವೇ ಅವಳಿಗೆ, ಫೋನು ಮಾಡಿ, ನಿನ್ನನ್ನು ಯಾರೋ ಕೇಡಿಗಳು ಕಿಡ್ನಾಪ್ ಮಾಡುವ ಸನ್ನಾಹದಲ್ಲಿದ್ದಾರೆ ಅಂತ ತಿಳಿಸಿದರೆ..ಅಪ್ಪನಿಗೇ ಕೇರ್ ಮಾಡದಿದ್ದವಳು ಇದಕ್ಕೂ ಕೇರ್ ಮಾಡದಿದ್ದರೆ.. ಆ ಏಜೆಂಟ್ ಅವಳನ್ನು ಅಪಹರಿಸಿ, ನಮಗೆ ತಿಳಿಸದೇ ಇರುತ್ತಾನೆಯೇ, ಆದರೆ ಆಮೇಲೆ, ನಾನೇ ಈ ಕೆಲಸ ಮಾಡಿಸಿದೆ ಅಂತ ಭಾವಿಸಿದರೇ.. ಬಾರಿ ಬಾರಿಗೂ ತಾನು ಈ ಜಂಝಾಟಕ್ಕೆ ಸಿಕ್ಕಲೇ ಬಾರದಾಗಿತ್ತು ಅಂತ ಅನ್ನಿಸಿದರೂ, ಈಗ ಹಿಂಜರಿಯುವ ಮನಸ್ಸೂ ಇಲ್ಲ. ಒಂದು ಬಾರಿ ಒಂದು ಕೆಲಸಕ್ಕೆ ಕೈ ಹಾಕಿದರೆ ಅದನ್ನು ನೇರ ಮಾಡಲೇಬೇಕು ಎಂದುಕೊಂಡ.

ಅಷ್ಟರಲ್ಲಿ ದಿನೇಶ ಅವಸರವಸರವಾಗಿ ಬಂದ.

"ನಾನು ರಾತ್ರಿಯೆಲ್ಲಾ ಯೋಚಿಸಿದೆ. ನಾನಾಗಿಯೇ ಈ ಜಂಝಾಟಕ್ಕೆ ಸಿಕ್ಕಿ ಬೀಳುವುದು ಬೇಡ. ಆ ಹುಡುಗಿಯನ್ನು ಭೇಟಿಯಾಗಿ, ಇರುವ ವಿಚಾರವನ್ನು ತಿಳಿಸಿಬಿಡೋಣ. ಮುಂದೆ ಅವಳ ಇಷ್ಟ ಹಾಗಂತ ಹೇಳಿ ಬಿಡೋಣ."

"ಅದೇ ಸರಿ ಎನಿಸಿತ್ತು ಇವನಿಗೂ."

ಇಬ್ಬರೂ ಹಾಸ್ಟೆಲ್ಲಿಗೆ ಬಂದರು. ಯೋಗ್ಯರಂತೆ ಕಾಣುತ್ತಿದ್ದ ಇಬ್ಬರನ್ನು ವಾರ್ಡನ್ ಅತಿ ವಿನಯದಿಂದ ಮಾತನಾಡಿಸಿದಳು. ಇಬ್ಬರೂ ಮಾತನಾಡಿ, ಸಂಕ್ಷಿಪ್ತವಾಗಿ ವನಜಳ ಬಗ್ಗೆ ತಿಳಿಸಿದರು. "ನಾವು ಅವಳ ಹತ್ತಿರ ಮಾತನಾಡಬಹುದೆ?" ಕೇಳಿದ್ದರು.

"ನೀವು ಬಂದಿದ್ದು ಒಳ್ಳೆಯದೇ ಆಯಿತು. ಸ್ವಲ್ಪ ದಿನಗಳಿಂದ ಆ ಹುಡುಗಿಯ ಮನಃಸ್ಥಿತಿ ಸರಿಯಾಗಿಲ್ಲ. ಯಾರೊಡನೆಯೂ ಬೆರೆಯುವುದಿಲ್ಲ. ರೂಮಿನಿಂದ ಆಚೆ ಬರುವುದೇ ಇಲ್ಲ. ಅವಳ ಗಾರ್ಡಿಯನ್‌ನ್ನು ಸಂಪರ್ಕಿಸಲು ನೋಡಿದೆವು. ಆದರೆ ಅವರು

ಊರಿನಲ್ಲೇ ಇಲ್ಲ ಎಂದು ತಿಳಿಯಿತು. ಅವಳ ಕಡೆಯವರು ಬೇರೆ ಯಾರಾದರೂ ಇದಾರೆಯೇ ಅಂತ ನಮಗೆ ತಿಳಿದಿಲ್ಲ. ಈಗ ಎರಡು ತಿಂಗಳಿನಿಂದ, ಹಾಸ್ಟೆಲ್ಲಿನ ಹಣ ಸಹ ಕಟ್ಟಿಲ್ಲ. ದಯವಿಟ್ಟು ನೀವು ಅವಳನ್ನು ಕರೆದುಕೊಂಡು ಹೋಗಿ.'' ವಾರ್ಡನ್ ಹೇಳಿದ್ದಳು.

''ನಾವು ಕರೆದುಕೊಂಡು ಹೋಗ್ತೀವಿ. ಆದರೆ ಅವಳು ಒಪ್ಪದಿದ್ದರೇನು ಮಾಡುವುದು! ಇದುವರೆಗೂ ಯಾವ ಡಾಕ್ಟರ್‌ಗೂ ತೋರಿಸಿಲ್ಲವೆ?'' ಏನಾಗಿದೆ ಅವಳಿಗೆ ?

''ಹಾಸ್ಟೆಲ್ಲಿನ ಡಾಕ್ಟರು ಬಂದು ನೋಡಿ, ಮಾತ್ರೆಗಳನ್ನು ಕೊಟ್ಟು ಹೋಗಿದಾರೆ. ಈಗೊಂದು ವಾರದಿಂದ ಹೀಗೇ.. ಲವಲವಿಕೆಯಿಂದ ಓಡಾಡಿಕೊಂಡಿದ್ದವಳು ಹೇಗೆ ಮಂಕಾಗಿದಾಳೆ ಅಂತ ನೀವೇ ನೋಡ್ತೋರಂತೆ. ನೀವು ಟ್ಯಾಕ್ಸಿ ತಗೊಂಡು ಬನ್ನಿ. ಅಷ್ಟು ಹೊತ್ತಿಗೆ ಅವಳನ್ನು ಹೊರಡಿಸ್ತೀನಿ.''

''ನಾವು ಹೆಚ್ಚಿಗೆ ಹಣತಂದಿಲ್ಲ.''

''ಪರವಾಗಿಲ್ಲ, ನಮ್ಮ ಹತ್ತಿರ ಅವಳ ವಿಳಾಸವಿದೆ, ನಾವು ಅವರ ಹತ್ತಿರ ತೆಗೆದುಕೊಳ್ತೀವೆ..'' ಇಬ್ಬರೂ ಮುಖ ಮುಖ ನೋಡಿಕೊಂಡರು. ಅವಳು ಒಳಗೆಲ್ಲೋ ಹೊರಟುಹೋದಳು.

''ಈಗ ಇವಳನ್ನು ಎಲ್ಲಿಗಪ್ಪಾ ಕರೆದುಕೊಂಡು ಹೋಗುವುದು! ದಿಢೀರನೆ ಅವಳ ತಂದೆಯ ಮನೆಗೆ ಕರೆದುಕೊಂಡು ಹೋಗುವುದು ಸಾಧ್ಯವಿಲ್ಲ, ಏನಾದರೂ ರಂಪ ಮಾಡಬಹುದು. ಇನ್ನು ನಮ್ಮ ಮನೆಗಳಿಗೆ ಖಂಡಿತಾ ಸಾಧ್ಯವಿಲ್ಲ.''

''ಹೇಗೂ ಹುಶಾರಿಲ್ಲವಲ್ಲ, ಸೀದಾ ಒಂದು ನರ್ಸಿಂಗ್ ಹೋಂಗೆ ಸೇರಿಸೋಣ. ಎಲ್ಲಾ ತರಹವೂ ಅವಳ ಕಂಡೀಷನ್ ಹೇಗಿದೆ ಅಂತ ತಿಳಿಯುತ್ತೆ. ಶ್ರೀಮಂತ ಹುಡುಗೀದು..ವಿಪರೀತ ಕೊಬ್ಬು..ಅಂತ ಕಾಣುತ್ತೆ.''

''ನರ್ಸಿಂಗ್ ಹೋಂ ಅಂದರೆ ಮೈಯೆಲ್ಲಾ ನಡುಗುತ್ತೆ.''

''ನಾನಿದೀನಲ್ಲಯ್ಯ ನಿನ್ನ ಜತೆಗೆ, ಮೊದಲು ಅವಳನ್ನು ಸರಿಯಾದ ಡಾಕ್ಟರಿಗೆ ತೋರಿಸುವುದು ಒಳ್ಳೆಯದು, ಇಲ್ಲದಿದ್ದರೆ ಇಷ್ಟೆಲ್ಲಾ ಮಾಡಿ ಏನು ಪ್ರಯೋಜನ?''

''ಅವಳು ಎಲ್ಲಿಗೂ ಬರುವುದಿಲ್ಲ ಅಂತ ಹಠ ಮಾಡಿದರೇ,''

''ತಥ್ ಮತ್ತೆ ಮತ್ತೆ ತಿರುಗಿ ತಿರುಗಿ ಅದೇ ಮಾತಿಗೆ ಬಂದೆಯಲ್ಲ.''

ಅಷ್ಟರಲ್ಲಿ ವಾರ್ಡನ್ ತನ್ನ ಜತೆ, ಇಬ್ಬರು ಸಹಾಯಕಿಯರೊಡನೆ ಒಂದು ಹುಡುಗಿಯನ್ನು ನಡೆಸಿಕೊಂಡು ಬಂದರು. ಜ್ಞಾನವಿಲ್ಲದವಳಂತೆ ಕಂಡ ಅವಳನ್ನು ನೋಡಿ ಅಶೋಕ ಗಾಬರಿಯಾದ. ಮುಚ್ಚಿದ್ದ ಕಣ್ಣುಗಳು, ಕೆದರಿದ್ದ ತಲೆಗೂದಲು.., ಉಟ್ಟಿದ್ದ ಬಟ್ಟೆಯೂ ಕೊಳಕಾಗಿತ್ತು. ಅಲ್ಲಿದ್ದ ಕುರ್ಚಿಯ ಮೇಲೆ ಅವಳನ್ನು ಕೂರಿಸಿದರು. ದಿನೇಶ ಅವಳ ಕಡೆ ಬಾಗಿದ.

''ಇವಳನ್ನೇನು ಕೇಳ್ತೀರಿ ಅವಳಿಗೆ ಎಚ್ಚರವೇ ಇಲ್ಲ.''

ದಿನೇಶ ಬಾಗಿ, ''ಮಿಸ್..ಮಿಸ್'' ಎಂದ, ಅವಳು ಕಣ್ಣು ಬಿಡಲಿಲ್ಲ. ಇವಳು ತಮ್ಮ ಪರಿಚಯದವಳು ಅಂತ ಹೇಳಿ ಆಗಿದೆ. ಇವಳಿಗೆ ಏನಾದರೂ ಹೆಚ್ಚು ಕಡಿಮೆ ಆದರೆ ನಮ್ಮ ತಲೆಗೇ ಬರುತ್ತೆ. ಇವಳನ್ನು ಈ ನಿಸ್ಸಹಾಯಕ ಸ್ಥಿತಿಯಲ್ಲಿ ಬಿಟ್ಟು ಹೋಗಲೂ ಮನಸ್ಸು ಒಪ್ಪುತ್ತಿಲ್ಲ. ಏನಪ್ಪಾ ಮಾಡುವುದು ಎಂದುಕೊಂಡ, ಹೇಗಾದರೂ ಸರಿ, ಇವಳನ್ನು ಮೊದಲು ಇಲ್ಲಿಂದ ಕರೆದುಕೊಂಡು ಹೋಗೋಣ. ಮುಂದೆ ದೇವರು ಮಾಡಿಸಿದ ಹಾಗಾಗುತ್ತೆ. ''ನೀನು ಇಲ್ಲಿ ಇವಳ ಜತೆ ಇರು ನಾನು ಟ್ಯಾಕ್ಸಿ ತರ್ತೀನಿ'' ಎಂದು ಗಡಬಡಿಸಿ ಹೊರಗೆ ಬಂದ. ಕೆಲವೇ ನಿಮಿಷಗಳಲ್ಲಿ ಬಂದು ಟ್ಯಾಕ್ಸಿಯನ್ನು ತಂದು ನಿಲ್ಲಿಸಿದ.

ಬಲವಂತವಾಗಿ ಅವಳನ್ನು ಟ್ಯಾಕ್ಸಿಯ ಹಿಂದಿನ ಸೀಟಿಗೆ ತಳ್ಳಿದರು. ಅವಳು ಅವರೊಡನೆ ಬರಲು ಸಿದ್ಧವಿಲ್ಲದವಳಂತೆ ಕೊಸರಾಡಿದರು, ಈ ಇಬ್ಬರು ಗಂಡು ಹುಡುಗರ ಶಕ್ತಿಯ ಮುಂದೆ ಅವಳು ಅಸಹಾಯಕಿ. ವಾರ್ಡನ್ ನಿರಾಶೆಗೊಂಡಳು.

ದಿನೇಶನ ಸಲಹೆಯಂತೆ, ಅವಳನ್ನು ಒಂದು ನರ್ಸಿಂಗ್ ಹೋಂಗೆ ಸೇರಿಸಿದ. ಅಲ್ಲಿಯ ಡಾಕ್ಟರಲ್ಲಿ ಇಬ್ಬರು ಅವನ ಪರಿಚಯದವರು. ಅವರನ್ನು ಹುಡುಕಿ, ಎಲ್ಲಾ ವಿಷಯಗಳನ್ನು ತಿಳಿಸುವ ಹೊತ್ತಿಗೆ ಸಾಕಷ್ಟು ಸಮಯ ಕಳೆದಿತ್ತು.

''ಯಾವುದೋ ತಿಳಿಯದ ಹುಡುಗಿಗೆ ನೀನೇಕಯ್ಯ ಇಷ್ಟೊಂದು ಒದ್ದಾಡ್ತೀಯಾ.. ಇಂತಹ ಎಷ್ಟು ಜನ ಹುಡುಗೀರು ಇದಾರೋ ಈ ಸಿಟೀಲಿ..'' ಡಾಕ್ಟರೊಬ್ಬ ಕೇಳಿದ್ದ.

''ನಾನು ಇವಳಿಗೋಸ್ಕರ ಒದ್ದಾಡುತ್ತಿಲ್ಲ. ಇವಳ ತಂದೆಗೋಸ್ಕರ, ಆತನಿಗೆ ಹಾರ್ಟ್ ಅಟ್ಯಾಕ್ ಆಗಿದೆ.. ಈ ಮಗಳ ಹೊರತು ಅವರಿಗೆ ಇನ್ಯಾರೂ ಇಲ್ಲ.''

''ನಿನ್ನ ಮಾತನ್ನು ಎಲ್ಲರೂ ನಂಬುವುದಿಲ್ಲ, ತಂದೆ ಮನೆಯಿಂದ ಎರಡು ಮೂರು ವರ್ಷದಿಂದ ದೂರ ಇದಾಳೆ, ಹಾಸ್ಟೆಲ್ಲಿನಲ್ಲಿದಾಳೆ, ಎಂತೆಂತಹ ಸಹವಾಸವಿರುತ್ತೆ ಏನೇನು ದುರಭ್ಯಾಸಗಳಿರುತ್ತವೋ.. ಈಗ ಅವಳ ಆರೋಗ್ಯ ಚೆನ್ನಾಗಿಲ್ಲ ಅಂತೀಯ ಏನು ಖಾಯಿಲೆಯೋ ಏನೋ..'' ಎಷ್ಟು ಖರ್ಚಾಗುತ್ತೋ , ಅವನು ಸಂಶಯ ಹುಟ್ಟುವಂತೆ ನೋಡಿದ.

ಆ ಸ್ನೇಹಿತ ಹೆದರಿಸಿದಂತೆ ಮಾತನಾಡಿದಾಗ, ಇವನು ನಿಜಕ್ಕೂ ಹೆದರಿದ. ''ಈಗ ಏನು ಮಾಡಬೇಕು ಅಂತ ಗೊತ್ತಾಗ್ತಿಲ್ಲ, ನೀವು ಹೇಗೆ ಹೇಳಿದರೆ ಹಾಗೇ..''

''ಎರಡು ದಿನ ಅವಳನ್ನು ಕೂಲಂಕಷವಾಗಿ ಪರೀಕ್ಷಿಸಬೇಕು.. ಆಮೇಲೆ ಟ್ರೀಟ್‌ಮೆಂಟ್.. ತಕ್ಷಣದ ಚಿಕಿತ್ಸೆಯನ್ನು ಇಷ್ಟು ಹೊತ್ತಿಗೆ ಮಾಡಿರುತ್ತಾರೆ. ಅವಳು ಇಲ್ಲಿದಾಳೆ. ಇನ್ನು ಅವಳು ನಮ್ಮ ಪೇಷೆಂಟ್, ನೀನು ಯೋಚಿಸಬೇಡ'' ಡಾಕ್ಟರು ಅಶ್ವಾಸನೆ ನೀಡಿದ.

ಆ ಡಾಕ್ಟರ್ ಹಾಗೆ ಹೇಳಿದರೂ ಇವನ ಚಿಂತೆ ಕಡಿಮೆಯಾಗಲಿಲ್ಲ, ಇನ್ನೂ

ಜಾಸ್ತಿಯಾಯಿತು. ಅವರ ಕೈ ಕುಲುಕಿ ಥ್ಯಾಂಕ್ಸ್ ಹೇಳಿ, ಹೊರಬಂದ. ಅವನ ಜತೆ ಸೇರಿದ ದಿನೇಶ, ಮುಂದೇನು ಎನ್ನುವಂತೆ ಪ್ರಶ್ನಿಸಿದ.

''ನಂಗೊತ್ತಿಲ್ಲಪ್ಪಾ.. ನಾನು ಎಂದೂ ಇಂತಹ ಇಕ್ಕಟ್ಟಿಗೆ ಸಿಕ್ಕಿ ಬಿದ್ದಿರಲಿಲ್ಲ.'' ಎಂದ ಹತಾಶನಾಗಿ.

''ಆಗುವುದೆಲ್ಲಾ ಒಳ್ಳೆಯದಕ್ಕೇ ಎಂದು ನನ್ನ ಹೆಂಡತಿ ಆಗಾಗ್ಗೆ ಹೇಳುತ್ತಿರುತ್ತಾಳೆ, ಹಾಗೇ ಹಾರೈಸೋಣ.. ನಾನು ಇದೀನಿ ನಿನ್ನ ಜತೆಗೆ. ''ವಿಶ್ವಾಸವಾಗಿ ದಿನೇಶ ನುಡಿದಾಗ, ಅಶೋಕ ಆತ್ಮೀಯತೆಯಿಂದ ಅವನನ್ನೇ ನೋಡಿದ.

''ನಾನು ಬೆಪ್ಪ ಎಂದರೆ, ನೀನು ಬೆಪ್ಪನಾದೆಯಲ್ಲ ನನ್ನ ಜತೆ ಸೇರಿ ಎಂದುಕೊಂಡ ತನ್ನಲ್ಲೇ.''

ಮುಂದಿನ ಎರಡು ದಿನಗಳನ್ನು ಅವನು ಆತಂಕದಿಂದಲೇ ಕಳೆದ ಇದ್ದಕ್ಕಿದ್ದಂತೆ, ಆತ ಸತ್ತೇ ಹೋದರೇ, ಅಂತ ಒಂದು ಸಲ ಅನ್ನಿಸಿದರೆ.. ಇನ್ನೊಂದು ಸಲ, ವನಜಾ ನರ್ಸಿಂಗ್ ಹೋಂನಿಂದ ತಪ್ಪಿಸಿಕೊಂಡು ಓಡಿ ಹೊರಟು ಹೋದರೆ ಅಂತ ಅನ್ನಿಸಿದಾಗ, ಮೈಯೆಲ್ಲಾ ಬೆವರೊಡೆದು, ನಿತ್ರಾಣನಂತಾಗುವನು. ಹಾಗೇನೂ ಆಗುಲ್ಲ ಅಂತ ತನಗೆ ತಾನೇ ಸಮಾಧಾನ ಹೇಳಿಕೊಂಡರೂ, ಆ ಏಜೆಂಟನ ನೆನಪಾಗುವುದು. ಯಾವಾಗ ಫೋನು ಗಂಟೆ ಬಾರಿಸಿದರೂ, ರಿಸೀವರ್ ಎತ್ತಲು ಹೆದರುವನು. ಹೀಗಾಗಿತ್ತು ಅವನ ಸ್ಥಿತಿ. ದಿನೇಶ ಯಾವ ಹೆದರಿಕೆಯೂ ಇಲ್ಲದೇ ತನ್ನ ಚಟುವಟಿಕೆಯಲ್ಲಿ ಮಗ್ನನಾಗಿದ್ದ.

ಇವನ ಚಡಪಡಿಕೆಯನ್ನು ಗಮನಿಸಿದ ಸುಧಾ ತನ್ನಲ್ಲೇ ಏನೇನನ್ನೋ ಯೋಚಿಸಿ ಕೊಂಡಳು, ಇವನ ಮನಸ್ಸಿನ ಕೊರಗನ್ನು ತಿಳಿದು ತಾನು ಸರಿಪಡಿಸುವಂತಿದ್ದರೇ ಅಂತ ಎಂದುಕೊಂಡಾಗ, ಮನಸ್ಸು ಅಳುಕಿತ್ತು. ಈಗ ತಾನಾಗಿಯೇ ಅವನನ್ನು ಆ ವಿಷಯ ಕುರಿತು ಹೇಗೆ ಕೇಳಬಲ್ಲಳು ! ಈಗ ಅವನ ಮನಸ್ಸಿನಲ್ಲಿ ನನ್ನ ಬಗ್ಗೆ ಆ ಭಾವನೆ ಇಲ್ಲದಿದ್ದರೇ..? ಆಗಲೂ ಸಹ, ಇವನು ತನ್ನ ಬಗ್ಗೆ ಆ ಭಾವನೆ ಇಟ್ಟುಕೊಂಡಿರಬಹುದು ಅಂತ ಅವಳು ಊಹಿಸಿರಲಿಲ್ಲ.

ಶುಭಾ ಅವನಿಗೆ ಅವಮಾನ ಮಾಡಿದಳು. ದ್ರೋಹ ಮಾಡಿದಳು ಅಂತ ಮನಸ್ಸಿಗೆ ಹಚ್ಚಿಕೊಂಡವನನ್ನು ಸಮಾಧಾನ ಗೊಳಿಸಿದ್ದಳು. ''ಯಾರೋ ಹಿರಿಯರು, ಚಿಕ್ಕ ವಯಸ್ಸಿನಲ್ಲಿ ನಿಮ್ಮಗಳ ಮನಸ್ಸನ್ನು ಅರಿಯದೇ ಗೊತ್ತು ಮಾಡಿದ ಮದುವೆಗೆ ಏನು ಬೆಲೆ ಇರುತ್ತೆ! ಬಹುಶಃ ಶುಭಾ ಅದನ್ನು ಒಪ್ಪಿರಲಾರಳು, ನಿನ್ನ ಹಾಗೆ, ಅವಳು ನಿನ್ನನ್ನು ಪ್ರೀತಿಸಿದ್ದರೆ, ಅವಳಾಗಿಯೇ ಬಂದು, ನಿನ್ನನ್ನು ಮದುವೆಯಾಗುವಂತೆ ಕೇಳಿಕೊಳ್ಳುತ್ತಿದ್ದಳು. ನಿನ್ನ ಮೇಲೆ ಪ್ರೀತಿ ವಿಶ್ವಾಸವಿಲ್ಲದ ಅವಳನ್ನು ನೀನೇಕೆ ಇಷ್ಟು ಹಚ್ಚಿಕೊಂಡಿದೀಯೋ ನನಗಂತೂ ತಿಳಿಯದು. ಅವಳಿಗಿಂತ ಒಳ್ಳೆಯ ಹೆಣ್ಣು ನಿನಗೆ ಸಿಕ್ಕುತ್ತಾಳೆ. ನಾನು ಹೇಳ್ತಿದೀನಿ..'' ಎಂದಿದ್ದಳು.

ಅವಳ ಸಾಂತ್ವನದ ನುಡಿಗಳು ಅವನಿಗೆ ಹಿತವಾದವು. ಅವಳ ಮಾತುಗಳನ್ನು ಬೇರೆ ರೀತಿಯಲ್ಲಿ ಅರ್ಥಮಾಡಿಕೊಂಡಿರಬೇಕು ಆದರೆ ಅದನ್ನ ಎಂದೂ ಬಾಯಿ ಬಿಟ್ಟು ತನ್ನ ಎದುರಿಗೆ ಹೇಳುವ ಧೈರ್ಯ ಮಾಡಿರಲಿಲ್ಲ.

ಸಧ್ಯ ಹಾಗೆ ಮಾಡಿದ್ದು ಒಳ್ಳೆಯದೇ ಆಯಿತು. ಇಲ್ಲದಿದ್ದರೇ.. ಆದರೂ ಅವನು ತನ್ನನ್ನು ಪ್ರೀತಿಸುತ್ತಿದ್ದ ಅಂತ ತನಗೆ ತಿಳಿದಿದ್ದು ಇತ್ತೀಚೆಗೆ.. ಆ ಬಗ್ಗೆ ಅವನನ್ನು ಕೇಳುವ ಬಯಕೆಯಾಗಿತ್ತು. ಆದರೆ ಅವನು ಏನೆಂದುಕೊಳ್ತಾನೋ.. ಆದರೆ ಒಂದೊಂದು ಸಲ ಅನ್ನಿಸುತ್ತೆ, ಅವನು ಈಗಲೂ ತನ್ನನ್ನು ಪ್ರೀತಿಸುತ್ತಿದಾನೆ ಅಂತ, ಇಲ್ಲದಿದ್ದರೆ ನನ್ನ ಬಗ್ಗೆ ಇಷ್ಟೇಕೆ ಮುತುವರ್ಜಿ ವಹಿಸುತ್ತಿದ್ದ! ನಾನು ಕೆಲಸಕ್ಕೆ ಸೇರುವಂತೆ ಮಾಡಿದ, ನನ್ನ ಮಗನನ್ನ ಸ್ವಂತ ಮಗನಂತೆ ಪ್ರೀತಿಸುತ್ತಾನೆ. ನಾನು ಒಂದು ದಿನ, ಅಮ್ಮನ ಮನೆಯಿಂದ ಬರದಿದ್ದರೆ, ತಕ್ಷಣ ಅಲ್ಲಿಗೆ ಬರುತ್ತಾನೆ.. ಇದೆಲ್ಲಾ ನನ್ನ ಮೇಲಿನ ಪ್ರೀತಿಯಲ್ಲದೇ ಇನ್ನೇನು!

ಆದರೆ ನಾನು ಹೇಗೆ ಹೇಳಲಿ! ಅವನು ಎಂದಾದರೂ, ಯಾರಿಗೂ ಕಾಣದಂತೆ ನನ್ನ ಕೈ ಹಿಡಿದಿದ್ದರೆ, ಗುಟ್ಟಾಗಿ ನನ್ನ ರೂಮಿಗೆ ಬಂದಿದ್ದರೇ.. ಹೇಗೂ ರೂಮಿನ ಬಾಗಿಲು ತೆಗೆದೇ ಇರುತ್ತದೆಯಲ್ಲ.. ಅಥವಾ ಸೂಚ್ಯವಾಗಿ ಅಂತಹ ಮಾತುಗಳನ್ನಾಡಿದ್ದರೇ.. ಇಲ್ಲ ಅವನೆಂದೂ ಆಡಿಲ್ಲ, ತನ್ನ ಪರಿಮಿತಿಯಿಂದ ಆಚೆ ಎಂದೂ ಬಂದಿಲ್ಲ, ತಾನಾಗಿಯೇ ಅವನನ್ನು ಕೇಳಬೇಕು. ಇಲ್ಲದಿದ್ದರೆ ಅವನಾಗಿಯೇ ಖಂಡಿತಾ ಏನನ್ನೂ ಹೇಳಲಾರ ಎಂದುಕೊಂಡು, ಆ ಸಮಯಕ್ಕಾಗಿ ಕಾದಳು.

ಅತ್ತೆ ಮಾವ ಇಬ್ಬರೂ ಸುತ್ತಾಡಿ ಬರಲು ಹೊರಗೆ ಹೋದರು. ಇವಳು ಅನುಮಾನಿಸುತ್ತಾ ವಂಶಿಯನ್ನು ಅಲ್ಲೇ ಆಡಲು ಬಿಟ್ಟು ಅವನ ರೂಮಿಗೆ ಬಂದಳು. ತಲೆಯಡಿ ಎರಡೂ ಕೈಯನ್ನು ಜೋಡಿಸಿ ಮಲಗಿದ್ದವನು, ಅವಳನ್ನು ಕಂಡೊಡನೆ ಎದ್ದುಕೂತ.

''ಏನು ಸುಧಾ ಏನು ಬೇಕಾಗಿತ್ತು!'' ಕೇಳಿದ.

''ಏನಿಲ್ಲ..'' ಎಂದಳು. ತಡವರಿಸಿ ಉಗುಳು ನುಂಗಿದಳು.

''ಏನೋ ಹೇಳುವುದಕ್ಕೇ ಅಂತ ಬಂದಿದೀಯ...ವಂಶಿ ಎಲ್ಲಿ?''

''ಇಲ್ಲೇ ಹೊರಗೆ ಆಡಿಕೊಳ್ತಿದಾನೆ.''

''ಎಲ್ಲಾದರೂ ಹೋಗಬೇಕಾಗಿತ್ತಾ! ನಾನು ಅವನನ್ನು ನೋಡಿಕೊಳ್ತೀನಿ. ನೀನು ಹೋಗಿ ಬೇಗ ಬಾ..''

''ನೀನೂ ಬರ್ತೀಯಾ .. ಸ್ವಲ್ಪ ಕೆಲಸವಿದೆ.''

''ಷಾಪಿಂಗ್ ಗೀಪಿಂಗ್ ನನಗೆ ಬೇಜಾರು. ನಿಮ್ಮಮ್ಮನ್ನ ಕರೆದುಕೊಂಡು ಹೋಗು.''

''ಷಾಪಿಂಗ್ ಏನಿದೆ! ನನಗೆ ಬೇಕಾದುದನ್ನು ಯಾವ ಷಾಪಿಂಗ್ ಒದಗಿಸಿಕೊಡುತ್ತೆ'' ಎಂದು ಹೇಳಬೇಕೆಂದುಕೊಂಡವಳು ಹೇಳದೇ ಸುಮ್ಮನಾದಳು. ಅದನ್ನು ಬಿಟ್ಟು ''ಯಾಕೋ

ಸ್ವಲ್ಪ ದಿನದಿಂದ ನೀನು ಬದಲಾಗಿದೀಯ ಅಂತ ಅನ್ನಿಸ್ತಿದೆ. ಏನೂಂತ ಕೇಳಬಹುದೆ!'' ಪರೀಕ್ಷಿಸುವವಳಂತೆ ಕೇಳಿದಳು.

''ನಾನಾ ? ಹಾಗೇನಿಲ್ಲ, ಮೊದಲಿನ ಹಾಗೇ ಇದೀನಿ,'' ನಕ್ಕು ನುಡಿದಿದ್ದ.

''ಇಲ್ಲ, ನಾನೂ ಗಮನಿಸುತ್ತಾನೇ ಇದೀನಿ.. ನಿನ್ನ ಮನಸ್ಸಿನಲ್ಲಿ ಏನೋ ಇದೆ. ನನಗೆ ಹೇಳುವುದಾದರೆ ಹೇಳು.''

''ಅಂಥಾದ್ದೇನಿಲ್ಲ... ಸಮಯ ಬಂದಾಗ ನಿನಗಲ್ಲದೇ ಇನ್ಯಾರಿಗೆ ಹೇಳಬೇಕು?

ಈ ಮಾತಿನಲ್ಲಿ ಅವಳು ವಿಶೇಷತೆಯನ್ನು ಕಂಡುಕೊಂಡಳು.

''ಹಾಗಾದರೆ, ಇವತ್ತೇ, ಈಗಲೇ ಹೇಳು.. ನಾನು ನಿನ್ನ ನೋವನ್ನು ಹಂಚಿಕೊಳ್ಳಲು ಸಿದ್ಧಳಾಗಿದೀನಿ.''

''ನೋವು! ನನಗೇನಿದೆ ನೋವು?''

ಏನನ್ನೋ ಹೇಳಲಾಗದೇ ಚಡಪಡಿಸ್ತಿದೀಯಿ ಅಂತ ಅನ್ನಿಸ್ತಿದೆ.

''ಏನೋ ಹೇಳಲಾಗದೇ ಚಡಪಡಿಕೆಯನ್ನು ನಾನು ಸರಿಮಾಡಿಕೊಳ್ಳಬಲ್ಲೆ.. ಈ ನಡುವೆ ನಿನ್ನನ್ನು ವಿಚಾರಿಸಿಕೊಂಡಿಲ್ಲ, ಹೇಗೆ ಇದೆ ಕೆಲಸ ಆಫೀಸಿನಲ್ಲಿ! ಏನೂ ತೊಂದರೆಯಿಲ್ಲವಲ್ಲ.''

''ತೊಂದರೆ ಏನಿಲ್ಲ, ಆದರೆ ನನಗೆ ಆ ಜೀವನ ಬೇಸರವೆನಿಸಿದೆ.''

''ಏನು ಹೇಳ್ತಿದೀಯಾ? ಅದಿಲ್ಲದೇ ನೀನು ದಿನಗಳನ್ನು ಹೇಗೆ ಕಳೆಯಬಲ್ಲೆ, ಇದಕ್ಕಾಗಿ ನಾನು ಮನೆಯವರ ವಿರೋಧವನ್ನು ಕಟ್ಟಿಕೊಂಡು...''

''ಹೌದು, ನನಗೋಸ್ಕರ ನೀನೇಕೆ ಒದ್ದಾಡ್ತಿದೀಯ !'' ಗಂಟಲುಬ್ಬಿಬಂದಿತ್ತು.

''ಏಕೆ ಅಂದ್ರೆ, ನೀನು ಈ ಮನೆಯವಳು, ನಿನ್ನ ಕಷ್ಟಸುಖ ನಮಗೆ ಸೇರಿದ್ದು.''

''ನನ್ನ ಕಷ್ಟಸುಖ, ಬರೀ ಊಟ ನಿದ್ರೆಯಲ್ಲಿಲ್ಲ ಅಶೋಕ್..''

''ಅಂದರೇ..''

''ನಾನು ಹೀಗೆ ಕಾಲ ಕಳೆಯಲಾರೆ.. ನನಗೆ ಈ ಬದುಕು ಬೇಡ.''

''ನಿನಗೆ ಏನಾಯ್ತು? ಯಾರಾದ್ರೂ ಏನಾದ್ರೂ ಅಂದ್ರಾ?''

''ಯಾರೂ ಏನೂ ಅಂದಿಲ್ಲ, ಆಡಿಲ್ಲ, ಆದರೆ ನಾನು ಹೀಗೆ ಒಂಟಿಯಾಗಿ ಬದುಕಲಾರೆ.''

''ನೀನು ಒಂಟಿ ಎಂದರೆ ಏನರ್ಥ? ವಂಶಿ ಇದಾನೆ.. ಮನೆಯಲ್ಲಿ ನಾವೆಲ್ಲಾ ಇದೀವಿ.''

''ನಿನಗೆ ಹೇಗೆ ಹೇಳಲಿ ಅಶೋಕ್, ನಿನಗೂ ಮದುವೆ ವಯಸ್ಸು ಮೀರಿದೆ. ನನ್ನ ಮನಸ್ನಲ್ಲಿ ಏನಿದೆ ಅಂತ ಅರ್ಥ ಮಾಡ್ಕೋ..'' ಅತ್ತ ತಿರುಗಿದಳು.

ತಕ್ಷಣಕ್ಕೆ ಅವನಿಗೆ ಅರ್ಥವಾಗಲಿಲ್ಲ. ನಂತರ ಹೊಳೆದಾಗ, ಅವಳು ಇಂಥ ಮಾತುಗಳನ್ನಾಡಿರಬಹುದು ಎಂದು ನಂಬಲು ಕೆಲವು ನಿಮಿಷಗಳು ಬೇಕಾದವು. ''ಸುಧಾ ಏನಿದರ ಅರ್ಥ? ಪ್ರತಾಪನಿಗೆ ದ್ರೋಹ ಮಾಡುವ ಮನಸ್ಸಾದರೂ ಹೇಗೆ ಬಂತು!''

''ಇದನ್ನ ದ್ರೋಹ ಅಂತೀಯಾ? ಹಾಗಾದರೆ ನಾನು ಜೀವಮಾನವನ್ನೆಲ್ಲಾ ಹೀಗೆ ಕಳೆಯಬೇಕೆ? ನಾನು ಪ್ರತಾಪನ್ನ ಮರೆಯಲಾರೆ ನಿಜ. ಆದರೆ, ಆ ನೆನಪುಗಳ ಆಸರೆಯಲ್ಲಿ ಈ ಬಾಳನ್ನು ಸವೆಸಲಾರೆ. ನಾನು ಮುದುಕಿಯಲ್ಲ, ನೀನೇ ಯೋಚಿಸು, ನನ್ನ ಮನಸ್ಸಿನ ಭಾವನೆಗಳು ಉಕ್ಕಿ ಹರಿದರೆ, ಅದು ನನ್ನ ತಪ್ಪೇ..''

ಹೊರಗೆ ಕೆಲಸಕ್ಕೆ ಹೋಗುತ್ತಾಳೆ. ಗಂಡಸರ ಒಡನಾಟ ಸ್ನೇಹ, ಇವಳ ಭಾವನೆಗಳನ್ನು ಕೆರಳಿಸಿರಬೇಕು. ಅದು ಸಹಜ. ಪ್ರತಾಪ ಇಲ್ಲವಾದ ಮಾತ್ರಕ್ಕೆ ಇವಳ ಜೀವನ ಬರಡಾಗಬೇಕೆ? ಈ ವಿಷಯ ಇದುವರೆಗೂ ನನ್ನ ಮನಸ್ಸಿನಲ್ಲಿ ಏಕೆ ಹೊಳೆದಿರಲಿಲ್ಲ. ಇವಳಾಗಿಯೇ ಹೇಳಿಕೊಳ್ಳುವವರೆಗೂ ಸುಮ್ಮನಿದ್ದವನು, ತಾನೆಂತಹವನು! ಎಂದಾದರೂ, ನಿನಗೆ ಮರುಮದುವೆಯಾಗುವ ಆಸೆ ಇದೆಯೆ ಎಂದು ಕೇಳಬೇಕೆನ್ನಿಸಲಿಲ್ಲವಲ್ಲ ಎಂದುಕೊಂಡ.

''ನಿನ್ನದೇನೂ ತಪ್ಪಿಲ್ಲ ಸುಧಾ, ನಿನ್ನ ಆಸೆ ಏನು ಎಂದು ತಿಳಿದುಕೊಳ್ಳುವ ಆಲೋಚನೆ ಎಂದೂ ಬರಲಿಲ್ಲ. ಆದರೆ ನೀನೀಗ ಒಬ್ಬಳೇ ಅಲ್ಲ. ವಂಶಿಯೂ ಇದಾನೆ. ಅವನ ಬಗ್ಗೆಯೂ ಯೋಚಿಸಬೇಡವೆ?''

''ವಂಶಿಗೆ ಅಪ್ಪನಿಗಿಂತ ಹೆಚ್ಚಾಗಿ ಪ್ರೀತಿ ತೋರಿಸುವ ನೀನು ಇದೀಯಾ ಅದಕ್ಕಿಂತ ಇನ್ನೇನು ಬೇಕು!''

''ಅಂದರೆ ವಂಶಿಯನ್ನ ಬಿಟ್ಟು ಹೋಗುವಷ್ಟು.. ನಿನ್ನ ಮನಸ್ಸು....''?

''ನನ್ನ ಮನಸ್ಸಿನಲ್ಲಿ ಏನಿದೆ ಅಂತ ನಾನೇ ಹೇಳಬೇಕಾ! ಒಂದು ಕಾಲದಲ್ಲಿ ನೀನೂ ನನ್ನನ್ನು ಪ್ರೀತಿಸಿದ್ದೆಯಲ್ಲವೆ!''

''ನಾನು? ನಿನ್ನನ್ನು.. ? ಇಲ್ಲ ನಾನು ನಿನ್ನನ್ನು ಪ್ರೀತಿಸಿರಲಿಲ್ಲ.'' ತಟ್ಟನೇ ಹೇಳಿದ್ದ.

''ನನ್ನ ಮೇಲಿನ ಕೋಪದಿಂದ ಹಾಗೆ ಹೇಳ್ತಿದೀಯ. ನಿಜ ಹೇಳು ನೀನು ನನ್ನನ್ನು ಪ್ರೀತಿಸಿರಲಿಲ್ಲವೆ?''

''ಇಲ್ಲ, ಅದು ನನ್ನ ಕಲ್ಪನೆ, ಭ್ರಮೆ.. ಅಷ್ಟೇ .''

''ನಾನು ನಂಬುವುದಿಲ್ಲ.. ಹೋಗಲಿಬಿಡು, ನನ್ನದೊಂದು ಮಾತನ್ನು ನಡೆಸಿಕೊಡ್ತೀಯಾ..?''

''ಏನದು ಹೇಳು..'' ಅವನಿಗೆ ಮುಜುಗರವಾಗಿತ್ತು.

''ನನ್ನನ್ನು ಮದುವೆಯಾಗ್ತೀಯಾ.. ಎಲ್ಲಾ ಸಮಸ್ಯೆಯೂ... ಕಳೆದು ಹೋಗುತ್ತದೆ.''

''ಸುಧಾ! ಏನಿದು ?'' ನಂಬದವನಂತೆ ಕೇಳಿದ್ದ.

"ನನ್ನನ್ನು ತಪ್ಪಾಗಿ ತಿಳಿಯಬೇಡ ಅಶೋಕ್.. ಎಲ್ಲಾ ಸಮಸ್ಯೆಗಳಿಗೂ ಇದೊಂದೇ ಪರಿಹಾರ.. ವಂಶಿಗೆ ನಿನ್ನಂತಹ ತಂದೆ ಸಿಗ್ತಾನೆ. ನನಗೆ ನಿನ್ನಂತಹವನ ಆಸರೆ ಬೇಕು.."

"ಎಷ್ಟು ಧೈರ್ಯ ನಿನಗೆ? ನನ್ನನ್ನು ನೇರವಾಗಿ ಕೇಳೋಕ್ಕೆ... ಪ್ಲೀಸ್ ಇಂತಹ ಮಾತುಗಳನ್ನಾಡಬೇಡ, ಹೊರಟು ಹೋಗು" ದಢಾರನೆ ನುಡಿದಿದ್ದ.

"ಈ ಮನೆಯಿಂದ, ಎಲ್ಲವನ್ನೂ ಬಿಟ್ಟು ಅಷ್ಟು ಸುಲಭವಾಗಿ ಹೊರಟು ಹೋಗುವುದಾಗಿದ್ದರೆ ಎಂದೋ ಹೊರಟು ಹೋಗುತ್ತಿದ್ದೆ. ವಂಶಿಗಾಗಿ ಬದುಕಿದೀನಿ" ಅವಳ ಅಳು ಅವನಿಗೆ ಬೇಸರವನ್ನುಂಟು ಮಾಡಿತು.

"ಪ್ಲೀಸ್ ಅಳಬೇಡ.. ನನ್ನ ಬಗ್ಗೆ ನಿನಗೆ ಇಂತಹ ಆಲೋಚನೆ ಮೂಡಿದ್ದಾದರೂ ಹೇಗೆ! ನನ್ನ ಮಾತು, ಕತೆ ವರ್ತನೆಗಳಲ್ಲಿ ಏನಾದರೂ ಅಂತಹ ಭಾವನೆ ಇರುತ್ತಿತ್ತೆ? ಛೆ.."

"ಇಲ್ಲ ಅಶೋಕ್, ನನ್ನದೇ ತಪ್ಪಿರಬಹುದು. ಆದರೆ ಈಗ ನಾನು ಕೇಳಿದ್ದರಲ್ಲಿ ಸರಿಯೋ ತಪ್ಪೋ ನೀನೇ ಹುಡುಕು, ನೀನು ನನ್ನನ್ನ ಮದುವೆಯಾದರೆ, ಎಲ್ಲಾ ಸಮಸ್ಯೆಗಳಿಗೂ ಒಟ್ಟಿಗೇ ಪರಿಹಾರವಾಗುತ್ತೆ." ನಿನಗೂ ಮದುವೆಯಾಗುವ ವಯಸ್ಸು ಆಗಿದೆ.

"ನನ್ನ ಮದುವೆಯ ಚಿಂತೆ ನಿನಗೆ ಬೇಡ. ಆದರೆ ನಿನ್ನ ಮನಸ್ಸಿನಲ್ಲಿ ಏನಿದೆ ಅಂತ ನನಗೆ ಅರ್ಥವಾಯಿತು. ಆದಷ್ಟು ಬೇಗ ನಿನಗೊಬ್ಬ ವರನನ್ನು ಹುಡುಕಿ ಮದುವೆ ಮಾಡುವ ಜವಾಬ್ದಾರಿ ನನ್ನದು." ಅವಳನ್ನು ಅಲ್ಲಿಯೇ ಬಿಟ್ಟು ಅವನೇ ರೂಮಿನಿಂದ ಹೊರಬಂದಾಗ ಅವಳು ಪೆಚ್ಚಾದಳು. ಹೊರಬಂದು ವಂಶಿಯನ್ನು ಎತ್ತಿಕೊಂಡು ಅವನ ಹಿಂದೆಯೇ ಬಂದಳು.

"ನನ್ನನ್ನು ಮದುವೆಯಾಗಲು ನಿನಗೆ ಯಾವ ಅಡಚಣೆ ಇದೆ! ಒಂದು ಸಲ ಮದುವೆಯಾಗಿದ್ದವಳು ಅಂತಲೆ? ಅಥವಾ ನಿನ್ನ ಪ್ರೀತಿಗೆ ತಕ್ಕವಳಲ್ಲ ಎಂಬ ಭಾವನೆಯೆ! ಅಥವಾ ವಿಧವೆ ಎಂಬ ಅಂಜಿಕೆಯೇ.."

"ಏನೇನೋ ಕಲ್ಪಿಸಿಕೊಂಡು ಮಾತನಾಡಬೇಡ. ನಾನೆಂದೂ ನಿನ್ನನ್ನು ಪ್ರೀತಿಸಿರಲಿಲ್ಲ, ಇನ್ನು ಮುಂದೆ ಪ್ರೀತಿಸುವುದೂ ಸಾಧ್ಯವಿಲ್ಲ. ನೀನು ಪ್ರತಾಪನ್ನ ಪ್ರೀತಿಸಿ, ನನಗೆ ಅತ್ತಿಗೆಯಾಗಿ ಬಂದವಳು. ಆ ಭಾವನೆಯ ಹೊರತು, ಬೇರೆ ಯಾವ ಭಾವನೆಯೂ ನನ್ನಲ್ಲಿಲ್ಲ. ಗಂಡಸಿನ ಪ್ರೀತಿ ಇಲ್ಲದೇ ನೀನು ಜೀವಿಸಿರಲಾರೆ ಎಂದು, ನಿನ್ನ ಮಾತಿನಿಂದ ಅರ್ಥವಾಯಿತು. ಅಮ್ಮ ಅಪ್ಪನನ್ನ ಒಪ್ಪಿಸಿ, ನಿನಗೆ ಮತ್ತೆ ಮದುವೆ ಮಾಡುವ ಜವಾಬ್ದಾರಿ ನನ್ನದು.. ಆದರೆ ಅದಕ್ಕೆ ಮುಂಚೆ ದುಡುಕುವವಳಲ್ಲ ನೀನು ಎನ್ನುವ ನಂಬಿಕೆ ನನಗಿದೆ.."

ಆ ಮಾತು ಸುಧಾಳನ್ನು ತಟ್ಟಿತು.

"ಅತ್ತಿಗೆ, ಅಣ್ಣನ ಹೆಂಡತಿ ಎನ್ನುವ ಗೌರವವಿದೆ. ಆದರೆ ನನ್ನ ಮನೋಬಲದ ಮೇಲೆ ನಿನಗೆ ನಂಬಿಕೆ ಇಲ್ಲವಲ್ಲ, ನಾನಾಗಿಯೇ ನಾಚಿಕೆ ಬಿಟ್ಟು ಹೇಳಿದ್ದು ನಿನ್ನ ಒಳಿತಿಗಾಗಿ...ಆದರೆ

ದುಡುಕಿ, ನಿನಗಾಗಲಿ, ಈ ಮನೆಗಾಗಲೀ ಅವಮಾನ ಮಾಡುವಂತಹ ಕೆಲಸ ನಾನೆಂದೂ ಮಾಡುವವಳಲ್ಲ. ನಿನ್ನ ನಂಬಿಕೆಗೆ ಧನ್ಯವಾದಗಳು'' ಎಂದು ಹೇಳಿ, ವಂಶಿಯನ್ನು ಎತ್ತಿಕೊಂಡು ಬೀದಿಗಿಳಿದಳು. ಅವನು ಅವಳನ್ನು ತಡೆಯಲಿಲ್ಲ, ಸುಧಾ ಸೀದಾ ತನ್ನ ತಾಯಿಯ ಮನೆಗೆ ಹೋದಳು.

ಅವಳಿಗೆ ಬೇಸರವಾಗಿದೆ ಎನ್ನುವುದನ್ನು ಇವನು ಬಲ್ಲ, ಆದರೆ ಎಂತಹ ಮಾತುಗಳನ್ನಾಡಿ ಬಿಟ್ಟಳು? ನಾನು ಇವಳನ್ನು ಪ್ರೀತಿಸಿದ್ದು ನಿಜ.. ಆದರೆ ನಾನೆಂದೂ ಹೇಳಿರಲಿಲ್ಲ. ಅವಳಿಗೆ ಹೇಗೆ ಗೊತ್ತಾಯಿತು! ಆ ದಿನ, ಅವಳು ಪ್ರತಾಪನನ್ನು ಪ್ರೀತಿಸುತ್ತಿದ್ದಾಳೆ ಎನ್ನುವುದು ತಿಳಿದ ದಿನ, ಅದನ್ನು ಅವನು ಮರೆಯುವಂತೆಯೇ ಇಲ್ಲ.

ಪ್ರತಾಪ ಇಂಜಿನಿಯರಿಂಗ್ ಮುಗಿಸಿ ಯಾವುದೋ ಒಂದು ಸಣ್ಣ ಕೆಲಸದಲ್ಲಿದ್ದ. ಸುಧಾ ಕಡೇ ವರ್ಷದ ಬಿ.ಕಾಂ. ಪರೀಕ್ಷೆಯಲ್ಲಿ ಪೂರ್ತಿ ಪಾಸಾಗಿರಲಿಲ್ಲ. ಒಂದು ಪಾರ್ಟು ಉಳಿದುದನ್ನು ಮತ್ತೆ ಕಟ್ಟಿ ಪಾಸು ಮಾಡಿಕೊಂಡಿದ್ದಳು. ಅಶೋಕನೂ ಬಿ.ಫಾರ್ಮ ಕೋರ್ಸ್ ಮುಗಿಸಿದ್ದ. ಕೆಲಸಕ್ಕಾಗಿ ಅಲೆಯುತ್ತಿದ್ದ.

ಈ ಸಮಯದಲ್ಲಿ ಮನೆಯಲ್ಲಿ ನಡೆದ ಘರ್ಷಣೆಯ ಬಗ್ಗೆ ಇವನಿಗೇನೂ ತಿಳಿದಿರಲಿಲ್ಲ. ಆ ನಂತರ ಅದು ತಿಳಿದದ್ದೂ ಸುಧಾನಿಂದಲೇ, ಬೇರೆ ಊರಿನಲ್ಲಿ ಕೆಲಸ ಸಿಕ್ಕಿದೆ ಎಂದು ಸುಳ್ಳು ಹೇಳಿ, ಪ್ರತಾಪ ಮನೆ ಬಿಟ್ಟು ಹೊರಟು ಹೋಗಿದ್ದ. ಎಷ್ಟೋ ದಿನಗಳ ನಂತರ ಒಂದು ದಿನ ಸುಧಾ, ಇವನಿಗಾಗಿ, ಅವಳ ಮನೆ ಮುಂದೆ ನಿಂತಿದ್ದು, ಇವನನ್ನು ಕಂಡೊಡನೆ ಕರೆದಿದ್ದಳು.

''ನಿನ್ನ ಹತ್ತಿರ ಅತಿ ಮುಖ್ಯವಾದ ವಿಷಯವನ್ನು ಮಾತನಾಡಬೇಕು, ಪ್ಲೀಸ್ ಬಾ..'' ಎಂದಿದ್ದಳು.

ದೊಡ್ಡವನಾದ ಮೇಲೆ ಅವನು ಅವರ ಮನೆಗೆ ಹೋಗುವುದನ್ನು ಬಿಟ್ಟು ಬಿಟ್ಟಿದ್ದ. ಹೊರಗೆಲ್ಲಾದರು ಸಂಧಿಸಿದಾಗ ಗಂಟೆ ಗಟ್ಟಳೆ ಕೂತು, ನಿಂತು ಮಾತನಾಡುತ್ತಿದ್ದರು ಅಷ್ಟೆ. ಇವನು ಸಂಕೋಚದಿಂದ ಒಳಗೆ ಹೋದ. ಅವಳು ಸೀದಾ ಅವನನ್ನು ತನ್ನ ಮನೆಯ ಹಿತ್ತಲಿಗೆ ಕರೆದುಕೊಂಡು ಹೋದಳು. ಬಾವಿಯ ಸುತ್ತ ಹಾಸಿದ ಕಲ್ಲು ಚಪ್ಪಡಿಯ ಮೇಲೆ ತಾನೂ ಕೂತು, ಅವನಿಗೂ ಕೂರುವಂತೆ ಹೇಳಿದಳು. ಇವನಿಗೆ ಏನೋ ಮುಜುಗರ. ತನ್ನ ಮನಸ್ಸಿನಲ್ಲಿನ ವಿಷಯ ಇವಳಿಗೇನಾದರೂ ತಿಳಿದು ಹೋಯಿತೇ ಎನ್ನುವ ತವಕ. ಅವಳು ಮಾತನಾಡಲಿ ಎಂದೇ ಕಾದ.

''ಪ್ರತಾಪಂಗೂ, ನಿಮ್ಮಮ್ಮನಿಗೂ ಏನಾದರೂ ಮಾತು ಕತೆ ನಡೀತಾ?'' ಕೇಳಿದ್ದಳು.

''ಏನೋ ನನಗೆ ಗೊತ್ತಿಲ್ಲ'' ಎಂದಿದ್ದ.

''ಒಂದೇ ಮನೆಯಲ್ಲಿದ್ದು, ಏನು ನಡೀತು ಅಂದರೆ ಗೊತ್ತಿಲ್ಲ ಅಂತೀಯಲ್ಲ''

''ನಿಜವಾಗಿಯೂ ಗೊತ್ತಿಲ್ಲ, ನಿನಗೆ ಹೇಗೆ ಗೊತ್ತಾಯ್ತು..?''

"ಪ್ರತಾಪ ಬೇರೆ ಊರಿನಲ್ಲಿ ಕೆಲಸ ಸಿಕ್ಕಿದೆ ಅಂತ ಸುಳ್ಳು ಹೇಳಿ ಮನೆ ಬಿಟ್ಟು ಹೋಗಿದಾನೆ. ಹಾಗಾದರೆ ಆ ವಿಷಯವೂ ನಿನಗೆ ಗೊತ್ತಿಲ್ಲ."

"ಇಲ್ಲ, ಖಂಡಿತಾ ಗೊತ್ತಿಲ್ಲ, ಎಲ್ಲಿದಾನೆ ಈಗ?"

"ಅವನು ಮನೆ ಬಿಟ್ಟು ಹೋಗಲು ಕಾರಣ ಯಾರು ಗೊತ್ತಾ? ನಾನು.. ನನ್ನಿಂದಾಗಿಯೇ ಅವನು ಹಾಗೆ ಮಾಡಿದ್ದು."

"ನೀನು ಏನು ಹೇಳ್ತಿದೀಯೋ ನನಗೆ ಅರ್ಥವಾಗ್ತಿಲ್ಲ."

"ನಾನು, ಪ್ರತಾಪ, ಒಬ್ಬರನ್ನೊಬ್ಬರು ಪ್ರೀತಿಸುತ್ತೇವೆ. ಬಹಳ ದಿನಗಳ ಹಿಂದೆಯೇ ನಾವಿಬ್ಬರೂ ಮದುವೆಯಾಗಬೇಕೆಂದು ತೀರ್ಮಾನಿಸಿಕೊಂಡಿದ್ದೆವು.."

ಅಶೋಕನಿಗೆ ಅವಳ ಮುಂದಿನ ಮಾತಿನ ಮೇಲೆ ಗಮನವಿರಲಿಲ್ಲ. ಸುಧಾ ಪ್ರತಾಪನನ್ನ ಪ್ರೀತಿಸುತ್ತಾಳೆ. ಅದಷ್ಟೇ ಅವನಿಗೆ ಅರ್ಥವಾದದ್ದು. ಅವಳು ಹೇಳುತ್ತಲೇ ಇದ್ದಳು. ಅವಳ ಮಾತಿನ ಮೇಲೆ ಅವನ ಗಮನವಿಲ್ಲದಿರುವುದನ್ನು ಅರಿತ ಅವಳು ಮಾತು ನಿಲ್ಲಿಸಿದಳು. ಅವನನ್ನು ತಿವಿದು ಮತ್ತೆ ನುಡಿದಳು.

"ನೋಡಿದ್ಯಾ? ನಿಮ್ಮ ತಂದೆ ತಾಯಿ, ಹಳೇ ಕಾಲದವರು, ಅವರಿಗೆ ನಮ್ಮ ಮದುವೆ ಸಮ್ಮತವಿರಲಿಲ್ಲ. ಆದರೆ ನೀನೂ.. ನಿನಗೂ ಇಷ್ಟವಿಲ್ಲವೆ!"

"ನಾನು! ನಾನು ಏನು ಹೇಳಲಿ!"

"ನಾನು ಇಷ್ಟು ಹೇಳಿದರೂ, ನಿನಗೆ ಏನೂ ತೋಚುತ್ತಿಲ್ಲವೆ!"

"ಇಲ್ಲ, ನನಗೇನೂ ತಿಳಿಯದು. ಇದೆಲ್ಲ ನಡೆದದ್ದು ಯಾವಾಗ?"

"ಇಪ್ಪತ್ತು ದಿನಗಳ ಹಿಂದೆ, ಯಾರೋ ಕನ್ಯಾಪಿತೃ ನಿಮ್ಮ ಮನೆಗೆ ಬಂದಿದ್ದರಂತೆ. ಆಗ ಪ್ರತಾಪ ನಮ್ಮ ಮದುವೆಯ ಬಗ್ಗೆ ಕೇಳಿದನಂತೆ. ನಿಮ್ಮ ತಂದೆ ತಾಯಿ ಒಪ್ಪಲಿಲ್ಲ ಅಂತ ಮಾತ್ರ ಗೊತ್ತು.."

"ಹಾಗಾದ್ರೆ ಈಗ ಏನು ಮಾಡ್ತೀರಿ!"

"ನಾವೇನು ಮಾಡಬೇಕು ಅಂತ ನೀನೇ ಹೇಳು. ಅದಕ್ಕೇ ನಿನ್ನನ್ನು ಕರೆದದ್ದು.

"ಪ್ರತಾಪ ನಿನಗೆ ಸಿಕ್ಕಿದ್ನಾ? ಏನಂದ? ಎಲ್ಲಿದಾನೆ?"

"ನಾನು ಅವನ ಅಡ್ರೆಸ್ ಕೊಡ್ತೀನಿ. ನೀನು ಅವನನ್ನು ಒಪ್ಪಿಸಿ, ಮನೆಗೆ ಕರೆದುಕೊಂಡು ಹೋಗು. ನನಗೋಸ್ಕರ ಅವನು ಮನೆಯಿಂದ ದೂರವಾಗುವುದು ಬೇಡ."

"ಸುಧಾ.. ಮತ್ತೆ.." ?

"ಅಣ್ಣ ತಮ್ಮಂದಿರು ಒಂದಾಗಿ, ನಿಮ್ಮ ತಂದೆ ತಾಯಿಯರನ್ನು ಒಪ್ಪಿಸಿದರೆ ನಾನು ಆ ಮನೆಯ ಸೊಸೆಯಾಗಿ ಬರ್ತೀನಿ. ಇಲ್ಲದಿದ್ದರೆ ಹೀಗೇ ಇದ್ದು ಬಿಡ್ತೀನಿ.."

ಅವನು ಪೇಚಿಗೆ ಸಿಕ್ಕಿ ಬಿದ್ದಿದ್ದ. ಮುಂದೆ ಎಂದಾದರೂ, ತನ್ನ ಮದುವೆಗಾಗಿ ತನ್ನ ತಂದೆ ತಾಯಿಯರನ್ನು ಬಲವಂತವಾಗಿ ಒಪ್ಪಿಸಬೇಕಾಗಬಹುದು ಎನ್ನುವುದನ್ನು ಸಹ ಅವನು ಚಿಂತಿಸಿರಲಿಲ್ಲ. ವಿಳಾಸ ಹಿಡಿದು ಸೀದಾ ಮನೆಗೆ ಬಂದ.

ಅಪ್ಪ ಅಮ್ಮ ಇಬ್ಬರೂ ಅದೇ ತಾನೇ ಎಲ್ಲಿಂದಲೋ ಬಂದಿದ್ದರು. ರತ್ನ ಸಹ ಬಂದಿದ್ದಳು.

''ಅಮ್ಮ ಪ್ರತಾಪನಿಂದ ಕಾಗದ ಬಂತೆ?'' ಬೇಕೂಂತ ಕೇಳಿದ್ದ.

''ಇಲ್ಲಪ್ಪಾ..'' ಎಂದಿದ್ದಳು.

''ಏಕೆ? ನಿನ್ನ ಮೇಲೇನಾದರು ಅಸಮಾಧಾನವೇ? ಅಥವಾ ಹುಶಾರಾಗಿದಾನೋ ಇಲ್ಲವೋ..''

''ಅಸಮಾಧಾನ ಏನು ಬಂತು! ಒಂದು ಮಾತು ಬರುತ್ತೆ ಹೋಗುತ್ತೆ. ತಂದೆ ತಾಯಿಯಲ್ಲದೇ ಮಕ್ಕಳಿಗೆ ತಿಳುವಳಿಕೆ ಹೇಳುವವರು ಯಾರು!''

''ಹಾಗಾದರೆ ಏನೋ ನಡೆದಿರಬೇಕು.. ಅದೇನು ಅಂತ ಹೇಳು..''

ಆಕೆ ಹೇಳದೇ ಸುಮ್ಮನೇ ಕುಳಿತಾಗ, ಅಪ್ಪ ರೇಗಿದ್ದರು.

''ಅಯೋಗ್ಯ, ನಮ್ಮ ಮಾತಿಗೆ ಬೆಲೆ ಇಲ್ಲ.''

''ಅಂಥಾದ್ದೇನಾಯ್ತು! ಏನು ಮಾಡಿದ ಅವನು!''

''ಅವನನ್ನೇ ಕೇಳು..''

''ಸರಿ, ಸರಿ. ರತ್ನಾ ನಿನಗೆ ಗೊತ್ತಿದ್ದರೆ ನೀನು ಹೇಳು.''

''ಅವನು ತಾನೇ ಯಾಕೆ ಹಾಗೇ ಆಡ್ತಾನೋ ನಮಗೆ ಗೊತ್ತಿಲ್ಲಪ್ಪಾ.. ಸ್ಕೂಲಿನಲ್ಲಿ ಜತೆಯಲ್ಲಿ ಗುರುತಿದ್ದ ಹುಡುಗಿ ಸುಧಾ... ಅಷ್ಟಕ್ಕೇ ಅವಳನ್ನು ಮದುವೆಯಾಗ್ತೀನಿ ಅಂತ ಹಠ ಮಾಡ್ತಿದ್ದಾನಂತೆ.''

''ಜತೆ ಜತೆಯಾಗಿ ಓಡಾಡಿ, ಒಬ್ಬರನ್ನೊಬ್ಬರು ಪ್ರೀತಿಸಿದರು ಅಂತ ಕಾಣಿಸುತ್ತೆ.''

''ನೀನು ಸುಮ್ಮನಿರು, ಅವಳು ನಿನ್ನ ಕ್ಲಾಸ್ ಮೇಟ್ ಅಲ್ಲವೆ!''

''ಪ್ರೀತಿಸುವುದಕ್ಕೆ ಕ್ಲಾಸ್‌ಮೇಟ್ ಆಗಬೇಕಾಗಿಲ್ಲ. ಪರಿಚಯ ಸ್ನೇಹ ಎಲ್ಲಾ ತಾನೇ ತಾನಾಗಿ ಆಗಿ, ಪ್ರೀತಿಯಲ್ಲಿ ಮುಂದುವರೆದು, ಮದುವೆಯಲ್ಲಿ ಮುಕ್ತಾಯಗೊಳ್ಳುತ್ತೆ.''

''ನಾನು ಅವತ್ತೇ ಹೇಳಿದ್ದೆ. ಈ ವಿಷಯದಲ್ಲಿ ಅಣ್ಣ ತಮ್ಮಂದಿರು ಒಂದು, ಇವನಿಗೆ ಹೇಳಬೇಡಿ ಅಂತ.''

''ಯಾಕೆ! ನಾನು ಈ ಮನೆಯವನಲ್ಲವೆ! ನನಗೆ ಮಾತನಾಡಲು ಹಕ್ಕು ಇಲ್ಲವೆ?''

''ಹಕ್ಕಿದೆ ಅಂತ ಏನೇನೋ ಮಾತುಗಳನ್ನಾಡಬಾರದು.''

''ಹೌದು, ಒಪ್ಕೋತೀನಿ, ಆದರೆ, ಪ್ರತಾಪ ಯಾರಿಗೂ ತಿಳಿಸದಂತೆ ಅವಳನ್ನೇ ಗುಟ್ಟಾಗಿ ಮದುವೆಯಾದರೆ ಏನು ಮಾಡ್ತೀರಿ!''

''ನಮ್ಮ ಭಾಗಕ್ಕೆ ಅವನಿಲ್ಲ ಅಂತ ತಿಳಿದುಕೊಳ್ತೀನಿ.''

''ಅಮ್ಮ...ರತ್ನ ಕೂಗಿದ್ದಳು. ಏನಮ್ಮ ಎಂತಹ ಮಾತುಗಳನ್ನಾಡ್ತೀಯಾ. ಯಾವುದೋ ಹುಡುಗೀನ ಮದುವೆಯಾಗ್ತೀನಿ ಅಂತ ಅವನು ಆಸೆ ಪಟ್ಟರೆ, ಅದು ಮಾಡಬಾರದ ಕೆಲಸವೇನಲ್ಲ.. ಅದರಿಂದ ಸಂಬಂಧವೇನೂ ಕಳಚಿ ಹೋಗೊಲ್ಲ''

''ಚೆನ್ನಾಗಿದೆ, ನೀವುಗಳೇ ಒಂದು, ನಮ್ಮ ಹೊಟ್ಟೆಯಲ್ಲಿ ಹುಟ್ಟಿ ನಮ್ಮ ಹೊಟ್ಟೆ ಉರಿಸುವ ಮಾತನ್ನಾಡ್ತೀರಲ್ಲ. ಚೆಲ್ಲುಚೆಲ್ಲಾಗಿ ಆ ಹುಡುಗಿ ಆಡಿತು. ಇದು ಅವನಿಗೆ ಚೆನ್ನಾಗಿ ಕಾಣಿಸ್ತು. ಪ್ರೀತಿಯಂತೆ ಪ್ರೀತಿ! ಪ್ರೀತಿಸುಕ್ಕೆ ಬೇರೆ ಯಾವ ಹುಡುಗಿಯೂ ಇರಲಿಲ್ವೆ ಇವನಿಗೆ?''

''ಏನಾಗಿದೆ ಅವಳಿಗೆ! ಎಷ್ಟೋ ವರ್ಷಗಳಿಂದ ನಾವು ಕಂಡು ಕೇಳಿರುವ ಹುಡುಗಿ, ಅವಳು''

''ತಿನ್ನುಕ್ಕೆ ಗತಿ ಇಲ್ಲದೋರು, ಹೆಣ್ಣು ಮಕ್ಕಳನ್ನು ಕೆಲಸಕ್ಕೆ ಸೇರಿಸಿ, ದುಡಿಸುತ್ತಾಳೆ ಅವಳು.. ಅವಳ ಮಗಳು ನನ್ನ ಸೊಸೆಯಾಗಬೇಕೆ!''

''ಅವರು ಹೇಗಾದರೂ ಇರಲಿ, ಸುಧಾ ಒಳ್ಳೆಯವಳು ತಾನೇ''

''ಅವಳು ಒಳ್ಳೆಯವಳೋ, ಕೆಟ್ಟವಳೋ ಅದನ್ನು ಕಟ್ಟಿಕೊಂಡು ನನಗೇನಾಗಬೇಕಾಗಿದೆ. ಯಾರು ಏನೇ ಹೇಳಿದರೂ ನಾನು ಈ ಮದುವೆಗೆ ಒಪ್ಪುವುದಿಲ್ಲ''

''ಹಾಗಾದರೆ ಪ್ರತಾಪನಿಗ ಈ ಜನ್ಮದಲ್ಲಿ ಮದುವೆ ಇಲ್ಲ''

''ನಮಗೆ ತಿಳಿಯದಂತೆ ಅವಳನ್ನೇ ಗುಟ್ಟಾಗಿ ಮದುವೆಯಾಗಿದಾನೋ ಏನೋ..ಈಗ್ತಾನೇ ನೀನೇ ಹೇಳಿದೆ'' ತಾಯಿಯ ವ್ಯಂಗ್ಯ ನುಡಿ.

''ಹಾಗೇ ಇದ್ದಿದ್ದರೆ, ಸುಧಾ ನನಗೆಲ್ಲಿ ಸಿಕ್ಕುತ್ತಿದ್ದಳು! ಇದನ್ನೆಲ್ಲ ನನಗೆಲ್ಲಿ ಹೇಳುತ್ತಿದ್ದಳು... ಅವಳು ಏನಂದಳು ಗೊತ್ತಾ? ನನ್ನ ಪ್ರತಾಪನ ಮದುವೆಯಾಗದಿದ್ದರೂ ಪರವಾಗಿಲ್ಲ, ನನ್ನಿಂದಾಗಿ ಅವನು ಮನೆ ಬಿಟ್ಟು ಹೋಗಿದಾನೆ. ಅವನು ಮತ್ತೆ ಮನೆಗೆ ಬರುವಂತೆ ಮಾಡು'' ಎಂದಳು.

''ಬಿನ್ನಾಣಗಿತ್ತಿ, ಎಲ್ಲಾ ತರಹದ ಮಾತುಗಳನ್ನು ಆಡುಕ್ಕೆ ಬರುತ್ತೆ ಅವಳಿಗೆ.''

''ಅವಳೊಬ್ಬಳದ್ದೇ ಅಲ್ಲಮ್ಮ ತಪ್ಪು. ಪ್ರತಾಪನದೂ ತಪ್ಪಿದೆ. ಪ್ರೀತಿಸುವುದು ತಪ್ಪು ಎನ್ನುವುದಾದರೆ..''

''ಪ್ರತಾಪ ಅವಳಿಗೆ ಕಾಗದ ಬರೆದಿದ್ದನಂತಾ!'' ರತ್ನ ಕೇಳಿದ್ದಳು.

''ಬೇರೆ ಊರಿಗೆ ಹೋಗಿದ್ದರೆ ತಾನೇ ಕಾಗದ ಬರೆಯುಕ್ಕೆ, ಇದೇ ಊರಿನಲ್ಲಿ ಅಜ್ಞಾತವಾಗಿ ಎಲ್ಲೋ ಇದಾನೆ.. ಅಕಸ್ಮಾತ್ತಾಗಿ ಅವಳಿಗೆ ಸಿಕ್ಕಿದ್ದನಂತೆ. ಈಗ ನೀವುಗಳು ಅವರಿಬ್ಬರ ಮದುವೆಗೆ ಒಪ್ಪಿದರೆ, ನಾನು ಹೋಗಿ ಅವನನ್ನು ಕರೆದುಕೊಂಡು ಬರ್ತೀನಿ, ಇಲ್ಲದಿದ್ದರೆ, ಇದೇ ಊರಿನಲ್ಲಿದ್ದು ನಮ್ಮಿಂದ ದೂರವಾಗಿರುತ್ತಾನೆ.''

''ಇದು ಅವರಿಬ್ಬರೂ ಸೇರಿ ಆಡುತ್ತಿರುವ ನಾಟಕ. ನೀನು ಶಾಮೀಲಾಗಿದೀಯ''

''ನನಗೆ ಮುಂಚೆ ಏನೂ ತಿಳಿದಿರಲಿಲ್ಲ, ಅದು ನಿಜ. ಆದರೆ, ಈಗ ಶಾಮೀಲಾಗಿರುವುದೂ ನಿಜ.''

''ಯಾಕೆ ಹೀಗೆ ಕಟುಕರ ತರಹ ಆಡ್ತೀರೋ ಕಾಣೆ. ಅವನಿಗೆ ನಾವು ಬೇಡವಾದೆವು, ಮನೆ ಬಿಟ್ಟು ಹೋದ.. ಈಗ ನಿನ್ನ ಸರದಿ.. ಅಷ್ಟೇ.''

''ನಾನು ಮನೆ ಬಿಟ್ಟು ಹೋಗೊಲ್ಲ, ಏಕೆಂದರೆ ನಾನು ಮದುವೆಯನ್ನೇ ಆಗುವುದಿಲ್ಲ. ಒಂದು ಮದುವೆ ಸಂತಸವನ್ನು ತರುವ ಬದಲು, ಇಷ್ಟು ರಂಪ ರಾದ್ಧಾಂತಕ್ಕೆ ಕಾರಣವಾಗುತ್ತೆ ಅನ್ನುವುದಾದರೆ ಆ ಮದುವೆ ಯಾರಿಗೆ ಬೇಕು!

ಅವನು ಅಲ್ಲಿ ನಿಲ್ಲದೇ ತನ್ನ ರೂಮಿನ ಕಡೆ ಸರಿದಾಗ, ತಾಯಿ, ''ಹಠಮಾರಿಗಳು'' ಎಂದು ಉಸುರಿದ್ದು ಕೇಳಿಸಿತ್ತು.

ಸುಧಾಳ ಮನೆಯವರು ಬಡವರು, ಹೆಚ್ಚು ಖರ್ಚಿಲ್ಲದೇ ಮದುವೆ ಮಾಡುತ್ತಾರೆ, ಅದು ತಾಯಿಯ ಅಭಿಮಾನಕ್ಕೆ ಬರೆ. ಇಂಜಿನಿಯರ್ ಮಗನಿಗಾಗಿ, ಬಂದ ಶ್ರೀಮಂತರ ಮನೆಯ ಹುಡುಗಿಯನ್ನು ಆಯ್ಕೆ ಮಾಡಿಕೊಳ್ಳಲು ಪ್ರತಾಪ ಒಪ್ಪಲಿಲ್ಲ ಎಂಬ ಅಸಮಾಧಾನ ಎನ್ನುವುದನ್ನು ಅರಿತ. ತಾಯಿಯ ವ್ಯಥೆ ಹಾಸ್ಯಾಸ್ಪದವಾಗಿ ತೋರಿತು. ಹುಡುಗಿ ಬಡವಳಾದರೆ, ಅವಳ ಮದುವೆ ನೆರವೇರಬೇಡವೆ ! ದೊಡ್ಡ ಮನಸ್ಸಿನಿಂದ ಮುಂದೆ ಬಂದು, ಸುಲಭವಾಗಿ ಮದುವೆಯಾಗುವಂತೆ ಆಡುವುದನ್ನು ಬಿಟ್ಟು ಹಳೇ ಕಾಲದವಳಂತೆ, ಒಡವೆ, ವಸ್ತು, ಆಡಂಬರ ವೈಭವಕ್ಕಾಗಿ ಹಾತೊರೆಯುತ್ತಿದ್ದಾಳಲ್ಲ. ಯಾರದೋ ಶ್ರೀಮಂತಿಕೆ ಕಟ್ಟಿಕೊಂಡು ನಮಗೇನಾಗಬೇಕಾಗಿದೆ? ಈ ಮಾತೇಕೆ ಅಮ್ಮನಿಗೆ ತಿಳಿಯಲಿಲ್ಲ, ಹಾಗಾದರೆ ಅಮ್ಮ ಅಷ್ಟು ಸಂಕುಚಿತ ಸ್ವಭಾವದವಳೇ.. ಒಂದು ವೇಳೆ ಬಲವಂತವಾಗಿ ಸುಧಾ ಈ ಮನೆಯ ಸೊಸೆಯಾಗಿ ಬಂದರೂ, ಅಮ್ಮನ ಕೈಕೆಳಗೆ ಅವಳು ಸುಖವಾಗಿರುವುದು ಸುಲಭವಲ್ಲ ಎಂದುಕೊಂಡ.

ಈ ಮಾತುಗಳು ನಡೆದು ಒಂದು ವಾರವಾಗುತ್ತಾ ಬಂತು. ಇವನೂ ಹೋಗಿ ಪ್ರತಾಪನ್ನ ಭೇಟಿಯಾಗಿರಲಿಲ್ಲ, ಅಮ್ಮನನ್ನ ಒಪ್ಪಿಸಿಯೇ, ತಾನು ಹೋಗಿ ಅವನನ್ನು ಕರೆತರಬೇಕು ಎಂಬ ಹಂಬಲ. ತಾಯಿಯೂ ತನ್ನ ಹಠ ಬಿಟ್ಟಂತೆ ಕಂಡಿರಲಿಲ್ಲ, ಆದರೆ ಒಂದು ದಿನ ತಂದೆಯೇ ಅಶೋಕನಿಗೆ ಹೇಳಿದ್ದರು.

''ಪ್ರತಾಪ ಎಲ್ಲಿದಾನೋ, ಅಲ್ಲಿಗೆ ನನ್ನನ್ನು ಕರೆದುಕೊಂಡು ಹೋಗು. ನಾನು ಅವನೊಡನೆ ಮಾತನಾಡಬೇಕು..'' ತಂದೆ ಸ್ವಲ್ಪ ಬಗ್ಗಿದಾರೆಂದೆನಿಸಿತು.

''ನಾನು ಇವತ್ತೇ ಹೋಗಿ ಅವನನ್ನು ಕರೆದುಕೊಂಡು ಬರ್ತೀನಿ. ಆದರೆ ನೀವು ಅವರ ಮದುವೆಗೆ ಒಪ್ಪಿದೀರಿ ತಾನೇ..?''

''ಒಪ್ಪದೇ ಎಷ್ಟು ದಿನ ಹಠ ಸಾಧಿಸುವುದು? ಅವನು ಬಿಸಿ ರಕ್ತದ ಹುಡುಗ. ನಾವು ವೃದ್ಧಾಪ್ಯಕ್ಕೆ ಕಾಲಿಡುತ್ತಿರುವವರು. ನಾವಿಲ್ಲದೇ ಅವನು ಇರಬಲ್ಲ ಎನ್ನುವುದನ್ನು ಮಾಡಿ ತೋರಿಸಿದ. ಅವನಿಲ್ಲದೇ ನಾವು ಹೇಗೆ ಇರಬಲ್ಲೆವು! ಮನೆಯ ಹಿರಿಯ ಮಗನಾಗಿ, ತನ್ನ ಕರ್ತವ್ಯ, ತನ್ನ ಜವಾಬ್ದಾರಿಯನ್ನು ಮರೆತು ಅವನು ಹೋಗಿರಬೇಕಾದರೆ ನಮ್ಮದೇ ಏನೋ ತಪ್ಪಿರಬೇಕು. ಅವನು ಆ ಹುಡುಗಿಯನ್ನು ಮದುವೆಯಾಗಲಿ, ಆಗದಿರಲಿ, ನನಗೆ ಬೇಕಿಲ್ಲ, ಆದರೆ ಅವನು ನಮ್ಮ ಕಣ್ಣಮುಂದೆಯೇ ಇರಬೇಕು. ಬೇರೆ ಊರಿಗೆ ಹೋಗ್ತೀನಿ ಎಂದು ಅವನು ಸುಳ್ಳು ಹೇಳಿ ಹೋಗುವಷ್ಟು ಸಣ್ಣತನ ಅವನು ತೋರಿಸಿದರೆ, ಅವನನ್ನು ಅವನ ಮನೆಗೆ ವಾಪಸ್ಸು ಕರೆಸುವಷ್ಟಾದರೂ ದೊಡ್ಡತನ ನಮಗೆ ಬೇಡವೆ! ನಮ್ಮ ನಮ್ಮ ಮಕ್ಕಳಿಂದ ದೂರವಿದ್ದು ನಾವು ಏನನ್ನು ಸಾಧಿಸಿದಂತಾಗುತ್ತದೆ!''

ಅಪ್ಪನ ಮಾತುಗಳನ್ನು ಕೇಳಿ ಅಶೋಕನ ಕಣ್ಣಿನಲ್ಲಿ ನೀರು ಬಂದಿತು. ''ಅಪ್ಪಾ ಹೀಗೇಕೆ ದೈನ್ಯವಾಗಿ ಮಾತನಾಡುತ್ತಿದಾರೆ..? ಅಥವಾ ಅಮ್ಮನೂ ಹೀಗೆಯೇ ಒಳಗೊಳಗೆ ಕೊರಗುತ್ತಿರಬಹುದೆ?'' ಎಂದು ಅನ್ನಿಸಿತ್ತು.

ಅದೇ ದಿನವೇ, ಅಶೋಕ, ಪ್ರತಾಪನಿದ್ದ ರೂಮಿಗೆ ಹೋಗಿ, ಅಮ್ಮ ಅಪ್ಪ ಆಡಿದ ಮಾತುಗಳನ್ನು ತಿಳಿಸಿ, ಅವನನ್ನು ಒಪ್ಪಿಸಿ ಮನೆಗೆ ಕರೆತಂದಿದ್ದ. ಪ್ರತಾಪ ತನ್ನದು ತಪ್ಪು ಕ್ಷಮಿಸಿ ಎಂದೇನೂ ಕೇಳಲಿಲ್ಲ. ಎಲ್ಲೋ ಹೊರಗೆ ತಿರುಗಾಡಲು ಹೋಗಿದ್ದ ಮಗ ಮನೆಗೆ ಬಂದ, ಎನ್ನುವಂತೆ ಅವರುಗಳೂ ನಡೆದುಕೊಂಡರು. ಅಶೋಕ ಆಗಲೇ ಹೋಗಿ ಸುಧಳಿಗೆ ವಿಷಯ ತಿಳಿಸಿ ಬಂದ. ಆದರೆ ಅವಳು ಬಂದು ನೋಡುವ ಉತ್ಸಾಹವನ್ನು ತಡೆದುಕೊಂಡಳು.

ಕೆಲವು ದಿನಗಳ ನಂತರ, ಸುಧಾಳ ಸೋದರ ಮಾವ, ಅವಳ ಜಾತಕವನ್ನು ಹಿಡಿದು, ಇವರ ಮನೆಗೆ ಬಂದರು ಜಾತಕವನ್ನು ಹೊಂದಿದೆಯೇ, ಇಲ್ಲವೇ ನೋಡುವ ಗೋಜಿಗೇ ಹೋಗಲಿಲ್ಲ'' ''ಹುಡುಗ ಹುಡುಗಿ ಒಪ್ಪಿದ್ದಾರೆ, ಹಿರಿಯರು ನಿಂತು ಮಾಡುವ ಕಾರ್ಯ ಇದು'' ಎಂದು ತಂದೆ ದೊಡ್ಡ ಮಾತನ್ನಾಡಿ, ಮದುವೆಗೆ ಒಪ್ಪಿಗೆ ಕೊಟ್ಟಿದ್ದರು.

ತಾಯಿಯ ದುಗುಡ ತುಂಬಿದ ಮುಖ ನೋಡಿ, ಅಶೋಕ ಕೇಳಿಕೊಂಡಿದ್ದ.

''ಪ್ಲೀಸ್, ಹೀಗೆ ಮಾತ್ರ ಒಡಾಡಬೇಡ, ಆಗುತ್ತಿರುವುದು ನಿನ್ನ ಮಗನ ಮದುವೆ, ಮನೆಗೆ ಬರುತ್ತಿರುವವಳು ನಿನ್ನ ಸೊಸೆ, ಇಷ್ಟೆಲ್ಲಾ ಮುಂದುವರೆದು ಈಗ ಅಸಮಾಧಾನವನ್ನು ಮುಖದ ಮೇಲೆ ಹೊತ್ತುಕೊಂಡು ತಿರುಗಿದರೆ, ಎಲ್ಲರೂ ಏನಾದರೂ ಕೇಳಿಯೇ ಕೇಳ್ತಾರೆ.''

''ಪ್ರತಿಯೊಂದಕ್ಕೂ ನನಗೆ ತಿಳುವಳಿಕೆ ಹೇಳಬೇಡ'' ರೇಗಿದ್ದಳು.

ಮದುವೆ ಸಾಂಗವಾಗಿ ನೆರವೇರಿತು. ಆದರೆ ಮುಖ್ಯವಾದವರಿಗೆಲ್ಲಾ ಏನೋ ಅಳುಕು. ಸಮಾಧಾನವಂತೂ ಇಲ್ಲ. ಬಲಗಾಲನ್ನಿಟ್ಟು ಒಳಗೆ ಬಂದ ಮದುವಣಗಿತ್ತಿ ಸುಧಾ ತಪ್ಪಿತಸ್ಥಳಂತೆ ತಿರುಗಾಡುತ್ತಿದ್ದುದನ್ನು ಅಶೋಕ ಗಮನಿಸಿದ್ದ.

''ಇದು ನಿನ್ನ ಗಂಡನ ಮನೆ. ಯಾವ ತಪ್ಪನ್ನು ಮಾಡಿ ನೀನು ಈ ಮನೆಗೆ ಬಂದಿಲ್ಲ. ತಲೆ ಎತ್ತಿ ತಿರುಗಾಡು'' ಎಂದು ಅಶೋಕನೇ ಹೇಳಿಕೊಟ್ಟಿದ್ದ. ಪ್ರತಾಪನ ಕೆಲಸಗಳನ್ನೆಲ್ಲಾ ಸುಧಾಳೇ ಮಾಡುತ್ತಿದ್ದು, ಕ್ರಮೇಣ ಹೊಂದಿಕೊಂಡಳು. ಮುಖದಲ್ಲಿ ಗೆಲವು ಮೂಡಿತ್ತು. ಯಾವ ಬೇಸರವನ್ನು ತೋರದೇ, ಮನೆಗೆಲಸಗಳನ್ನು ಮಾಡಿ, ಅತ್ತೆಯ ಮನಸ್ಸನ್ನು ಗೆಲ್ಲಲು ಪ್ರಯತ್ನಿಸುತ್ತಿದ್ದಳು. ಮನೆಗೆ ಬಂದವರೆಲ್ಲಾ ''ನೀನು ಅದೃಷ್ಟ ಮಾಡಿದ್ದೆ ಕಣೇ ಕಮಲೂ, ಸುಧಾ ಒಳ್ಳೆಯ ಹುಡುಗಿ'' ಎಂದು ಹೊಗಳಿದಾಗ ಕಮಲಮ್ಮ ಒಳಗೇ ಬೀಗುತ್ತಿದ್ದುದನ್ನು ಅಶೋಕ ಗಮನಿಸಿದ್ದ. ಹೀಗೆ ಸುಧಾ ಈ ಮನೆಯ ಸದಸ್ಯೆಯಾಗಿದ್ದಳು.

ಸಾಂಪ್ರದಾಯಿಕವಾಗಿ ಪ್ರತಾಪನೊಡನೆ ಸಪ್ತಪದಿ ತುಳಿದು, ಶುಭ ಮುಹೂರ್ತದಲ್ಲಿ ಮದುವೆಯಾಗಿದ್ದರೂ, ಏನು ಲೋಪವೋ, ಏನು ದೋಷವೋ ಸುಧಾ ವಿಧವೆಯಾದಳು. ಅದು ಅವಳ ತಪ್ಪಲ್ಲ. ಆದರೂ, ಕಷ್ಟಪಟ್ಟು ಒಂದಾಗಿದ್ದ ದಂಪತಿಗಳ ವಿಯೋಗಕ್ಕೆ ಏನು ಕಾರಣ! ಅದು ವಿಧಿಗೆ ಮಾತ್ರ ಗೊತ್ತು. ಬಿ.ಪಿ. ಹೆಚ್ಚಾದದ್ದೇ ಕಾರಣವಾಗಿತ್ತೇ! ಮದುವೆಯಾದ ಎರಡು ವರ್ಷಗಳ ನಂತರ ಸುಧಾ ಗರ್ಭಿಣಿಯಾಗಿದ್ದಳು. ಮಗು ಹುಟ್ಟುವ ಮೂರು ತಿಂಗಳಿಗೆ ಮುಂಚೆಯೇ ಪ್ರತಾಪ ಇನ್ನಿಲ್ಲವಾಗಿದ್ದ. ಹುಟ್ಟುವ ಮುಂಚೆಯೇ ವಂಶಿ ತಂದೆಯನ್ನು ಕಳೆದುಕೊಂಡಿದ್ದ. ಮನೆಯಲ್ಲಿ ಒಂದು ಘೋರ ದುರಂತ ನಡೆದು ಹೋಯಿತು. ಈಗಲೂ ನೆನಪಿಸಿಕೊಂಡರೆ, ಹೊಟ್ಟೆಯಲ್ಲಿ ಸಂಕಟ ಶುರುವಾಗುತ್ತೆ. ಅನ್ಯಾಯವಾಗಿತ್ತು. ಯಾರೂ ಮರೆಯಲಾಗದ ಒಂದು ಅನರ್ಥ ನಡೆದು ಹೋಗಿತ್ತು. ಸಮಯದ ಮುಸುಕು ಎಲ್ಲವನ್ನು ಮರೆ ಮಾಡಿತ್ತು ಅಷ್ಟೇ.. ಆದರೆ ಅವನನ್ನು ಮರೆಯುವುದೇ? ಹೋರಾಟ ನಡೆಸಿ, ಪ್ರತಾಪ ಮದುವೆಯಾಗಿದ್ದ. ಅದಕ್ಕೆ ಅವಳ ಪ್ರೀತಿಯೇ ಕಾರಣ. ಆದರೆ ಆ ಪ್ರೀತಿ ಈಗ ಎಲ್ಲಿ ಹೋಯಿತು! ಅವನ ಹಿಂದೆಯೇ ಅದೂ ಇಲ್ಲವಾಯಿತೆ! ಅವಳ ಆಸೆ ಪ್ರಕೃತಿ ಸಹಜವಾದುದು. ಆದರೆ ಅದಕ್ಕೆ ನಾನು ಅವಳಿಗೆ ಸಹಾಯ ಮಾಡಬೇಕೆ! ನನ್ನ ಅತ್ತಿಗೆಗೆ ಮತ್ತೊಮ್ಮೆ ಮದುವೆ ಮಾಡುವ ಸಾಹಸ ನಾನು ಮಾಡಬೇಕೆ! ಮನೆಯಲ್ಲಿ ಮತ್ತೊಮ್ಮೆ ಎಷ್ಟು ರಂಪ ರಾದ್ಧಾಂತಗಳಾಗುತ್ತವೋ, ಅದನ್ನು ನಾನು ಎದುರಿಸಬೇಕಾದ ಸ್ಥಿತಿ ಒದಗಿತಲ್ಲ..!

ಇವಳಿಗೆ ಈ ಆಸೆ ಹುಟ್ಟದೇ ಇದ್ದಿದ್ದರೆ.. ಆ ವೈರಾಗ್ಯವನ್ನು ಇವಳಿಗೆ ಬೋಧಿಸುವವರ್‍ಯಾರು ! ಅದಕ್ಕೇ ಏನೋ ಹಿಂದಿನ ಕಾಲದಲ್ಲಿ ಗಂಡ ಸತ್ತವಳಿಗೆ ನೇಮಗಳನ್ನು ವಿಧಿಸುತ್ತಿದ್ದುದು. ಬಲವಂತವಾಗಿ ಉಪವಾಸ ವನವಾಸ ಮಾಡಿಸಿ, ಅವಳಿಗೆ ಕಟ್ಟು ಪಾಡು ಮಾಡಿ ಬಲವಂತವಾಗಿ ವೈರಾಗ್ಯವನ್ನು ಬರಿಸುತ್ತಿದ್ದರು. ಅದರ ಜತೆಗೆ ಅವಳನ್ನು ವಿರೂಪಗೊಳಿಸಿ, ಗಂಡಸರ ಕಣ್ಣಿಗೆ ಅವಳು ಆಕರ್ಷಕವಾಗಿ ಕಾಣದಿರುವಂತೆ ಮಾಡುತ್ತಿದ್ದರು. ಅದು ಸರಿ ಎಂದು ನಾನು ಖಂಡಿತಾ ಹೇಳುವುದಿಲ್ಲ. ಅಲ್ಲದೆ.. ಆ ಗೊಡ್ಡು

ಸಂಪ್ರದಾಯವನ್ನು ಸದೆಬಡಿದು, ಸಮಾಜದಲ್ಲಿ ಸ್ತ್ರೀಯರಿಗೆ ಸ್ಥಾನ ಮಾನ ಹೆಚ್ಚಿಸಿದ್ದು ನಿಜವಾಗಿಯೂ ಶ್ಲಾಘನೀಯವೇ. ಕಾಮುಕರು ಗುಟ್ಟಾಗಿ, ಅಂತಹವರನ್ನು ಭೇಟಿಯಾಗಿ ಮರುಳುಗೊಳಿಸುವ ಕತೆಯನ್ನು ಸಹ ಕೇಳಿದ್ದುಂಟು. ಅದೇ ಕಾರಣದಿಂದ, ಒಬ್ಬ ಗಂಡಸಿಗೆ ಮರು ಮದುವೆಯಾಗುವ ಹಕ್ಕು ಇದ್ದಮೇಲೆ, ಹೆಂಗಸಿಗೂ ಆ ಹಕ್ಕು ಖಂಡಿತಾ ಇದ್ದೇ ಇದೆ. ಆ ವಾದವನ್ನು ಸಂಪೂರ್ಣವಾಗಿ ಒಪ್ಪುವವನು ನಾನು. ಆದರೆ ನಮ್ಮ ಮನೆಯಲ್ಲಿ, ನಮ್ಮ ಸುಧಾಳಿಗೆ ಈ ಸ್ಥಿತಿ ಒದಗಬಾರದಿತ್ತು. ಎಂತಹ ಇಕ್ಕಟ್ಟಿನ ಪರಿಸ್ಥಿತಿ. ಅಮ್ಮ ಹೇಳುವ ಹಾಗೆ, ಯಾರ ಮನೆಯಲ್ಲೂ ನಡೆಯದ' ವಿಚಿತ್ರಗಳು ನಮ್ಮ ಮನೆಯಲ್ಲೇ ನಡೆಯಬೇಕೆ!.

ಸುಧಾ ನಿನಗೇಕೆ ಈ ಆಸೆ ಹುಟ್ಟಿತು! ಈ ಒಂದು ಆಸೆ ನಿನಗಿಲ್ಲದಿದ್ದರೆ, ಜೀವಮಾನವೆಲ್ಲಾ ನಾನು ನಿನ್ನನ್ನು ನೋಡಿಕೊಳ್ಳಲು ತಯಾರಿದ್ದೆ. ಇದರಿಂದ ನಮ್ಮ ಪತಾಪನ ಆತ್ಮಕ್ಕೇ ಶಾಂತಿ ಸಿಗುತ್ತೆ ಎಂದು ಹೇಗೆ ಹೇಳಲಿ ! ಏನೂ ತೋಚದೇ ಪರಿತಪಿಸಿದ.

ಎಷ್ಟೋ ಹೊತ್ತಿನ ಮೇಲೆ ಸುಧಾ ಮನೆಗೆ ಬಂದಳು. ಯಾವ ಮುಜುಗರವೂ ಇಲ್ಲದೇ ಅವಳು ಮನೆ ಕೆಲಸಗಳನ್ನು ಗಮನಿಸಿದಾಗ, ಅಚ್ಚರಿಗೊಂಡ, ಹೀಗೆ ಇವಳಿಂದ ಇರಲು ಹೇಗೆ ಸಾಧ್ಯ ಎಂದುಕೊಂಡಾಗ ಒಂದು ತರಹದ ಭಯ ಆವರಿಸಿತು. ಎಲ್ಲರ ಊಟ ಮುಗಿದು, ಅವರವರ ಪಾಡಿಗೆ ಅವರುಗಳು ಮಲಗಿದಾಗ, ಅವನು ಬಾಗಿಲನ್ನು ಭದ್ರ ಪಡಿಸಿ ಮಲಗಿದ. ಆಗ ಅವನಿಗೆ ನೆನಪಿಗೆ ಬಂತು. ತಾನು ಈ ಸಾಯಂಕಾಲ ಅಂಗಡಿಗೇ ಹೋಗದೇ, ಮನೆಯಲ್ಲಿ ಈ ಆಲೋಚನೆಗಳಲ್ಲಿ ಮುಳುಗಿದ್ದೆ ಅಂತ. ತಾನೇಕೆ ಸುಧಳ ಬಗ್ಗೆ ಸಂದೇಹ ತರಬೇಕು! ಅವಳು ನನ್ನ ಅತ್ತಿಗೆ.. ಈ ಗಡಿಬಿಡಿಯಲ್ಲಿ ಈ ದಿನ ವಂಶಿಯನ್ನೇ ಮರೆತೆನಲ್ಲಾ.. ಎಂದುಕೊಂಡು ಬಾಗಿಲನ್ನು ತೆಗೆದು ಮಹಡಿಯನ್ನೇರಿದ.

''ಸುಧಾ, ವಂಶಿ ಎಲ್ಲಿ ?'' ಬಾಗಿಲಲ್ಲೇ ನಿಂತು ಕೇಳಿದ.

''ಮಲಗಿದಾನೆ ಈ ರಾತ್ರಿ ಇಲ್ಲೇ ಇರಲಿ ಬಿಡು..''

''ಇಲ್ಲ, ಅಭ್ಯಾಸವಾಗಿ ಹೋಗಿದೆ. ಅವನಿಲ್ಲದೆ ನನಗೆ ನಿದ್ದೆ ಬರುವುದಿಲ್ಲ ಅವನನ್ನು ಕೊಡು ಇಲ್ಲಿ'' ಎಂದ.

ನಿದ್ರಿಸುತ್ತಿದ್ದ ಮಗುವನ್ನು ಭುಜದ ಮೇಲೆ ಒರಗಿಸಿಕೊಂಡು ಕೆಳಗಿಳಿದ. ತನ್ನ ಮಂಚದ ಮೇಲೆ ಅವನನ್ನು ಮಲಗಿಸಿ, ಅವನನ್ನೇ ನೋಡುತ್ತಾ ಕೇಳಿದ. ''ನಾನೇನೋ ಮಾಡೋದು ನೀನಾದರೂ ಹೇಳೋ..''

ನಿದ್ದೆಗಣ್ಣಿನಲ್ಲಿ ನಕ್ಕ ಮಗುವನ್ನು ಮುದ್ದಿಸಿ, ಅವನ ಪಕ್ಕ ಉರುಳಿದ.

''ತಾನೇಕೆ ಇವನನ್ನು ಇಷ್ಟು ಹಚ್ಚಿಕೊಂಡಿದೇನೆ? ಇದನ್ನು ಸುಧಾ ತಪ್ಪಾಗಿ ತಿಳಿದಿರಬಹುದೆ! ಈ ದಿನ ತಾನಾಗಿಯೇ ಅವನನ್ನು ಕರೆದುಕೊಂಡು ಬಂದೆನಲ್ಲ ಅವಳೇನು ತಿಳಿದಳೋ? ಇವತ್ತೇಕೆ ತನಗೆ ಹೀಗೆ ಗಾಬರಿಯಾಗುತ್ತಿದೆ ಎಂದು ಎದ್ದು ಕೂತ. ಆ ರಾತ್ರಿ ನಿದ್ದೆಯಿಲ್ಲದೇ ಕಳೆದ. ಬೆಳಗಿನ ಝಾವದಲ್ಲಿ ನಿದ್ದೆ ಹತ್ತಿತ್ತು. ವಂಶಿ ಎದ್ದು ಅತ್ತಾಗಲೂ ಅವನಿಗೆ ಎಚ್ಚರವಾಗಿರಲಿಲ್ಲ. ಸುಧಾ ಬಂದು ಎತ್ತಿಕೊಂಡು ಹೋಗಿದ್ದಳು.

ಎಷ್ಟು ಹೊತ್ತಾದರೂ ಅವನು ಏಳದಿದ್ದಾಗ, ತಾಯಿ ಬಂದು ಎಬ್ಬಿಸಿದಳು. ಹೊತ್ತಾಗಲಿಲ್ಲವೇನೋ, ಅಂಗಡಿ ತೆರೆಯಲ್ವಾ!

''ಹುಂ ಏಳ್ತೀನಿ'' ಎಂದು ಹೇಳಿ, ಇನ್ನೊಂದು ಮಗ್ಗುಲಿಗೆ ತಿರುಗಿ ಮಲಗಿದ್ದ, ಅಷ್ಟರಲ್ಲಿ ದಿನೇಶನ ಧ್ವನಿ ಕೇಳಿಸಿತ್ತು. ಸಾವಕಾಶವಾಗಿ ಎದ್ದು ಕೂತ.

''ಯಾಕಪ್ಪಾ ರಾತ್ರಿಯೆಲ್ಲಾ ನಿದ್ದೆ ಇರಲಿಲ್ವಾ! ಯಾವ ಕನಸಿನ ರಾಣಿಯ ಹಿಂದೆ ಹೋಗಿದ್ದೆ! ಅವನು ರೂಮಿಗೇ ಬಂದಿದ್ದ.

''ಶ್, ಸುಮ್ಮನಿರು, ಇದು ಮನೆ, ನಮ್ಮ ಮನೆಯಲ್ಲಿ ಇಂತಹ ಅಶ್ಲೀಲ ಹಾಸ್ಯಗಳಿಗೆ ಅವಕಾಶವಿಲ್ಲ.''

''ಅಶ್ಲೀಲ... ಯಾವುದು! ವನಜಾಳ ಫೋಟೋ ರಾತ್ರಿಯೆಲ್ಲಾ ನಿನ್ನನ್ನು ಸತಾಯಿಸಿದ್ದು ನಿಜಾ ತಾನೇ..?''

''ಮೆಲ್ಲಗೆ.. ಇಲ್ಲಿ ಆ ಮಾತು ಬೇಡ. ಹೊರಗೆ ಹೋಗಿ ಮಾತನಾಡೋಣ.''

''ಹಾಗಾದರೆ ಎದ್ದು ನನ್ನ ಸ್ಟುಡಿಯೋಕ್ಕೆ ಬಾ, ನಿನಗೋಸ್ಕರ ಕಾಯುತ್ತಾ ಇರ್ತೀನಿ,'' ದಿನೇಶ ಹೊರಟು ಹೋದ.

ಇವನು ಎದ್ದು ಸ್ನಾನ ಮುಗಿಸಿ, ಕಾಫಿ ತಿಂಡಿ ತಿಂದು ವಂಶಿಗೆ ಬೈ ಬೈ ಹೇಳಿ ಹೊರಟ. ಅವನನ್ನು ಎತ್ತಿಕೊಂಡಿದ್ದ ತಾಯಿಯ ಮುಖವನ್ನು ನೋಡಲು ಧೈರ್ಯ ಸಾಲದೆ, ಬರೀ ''ಬರ್ತೀನಿ'' ಎಂದಷ್ಟೇ ಹೇಳಿದ್ದ.

ದಿನೇಶ ಇವನನ್ನು ಕಂಡೊಡನೆ ಉಸುರಿದ್ದ.

''ಆ ಏಜೆಂಟ್ ನಿನ್ನ ಅಂಗಡಿಗೆ ಫೋನು ಮಾಡಿದ್ದನಂತೆ, ಬೆಳಿಗ್ಗೇನೂ ಬಂದಿದ್ದನಂತೆ..''

''ಏನಯ್ಯ, ಅವನಿಗೇನು ಬೇಕಂತೆ?'' ಸ್ವಲ್ಪ ಹೆದರಿದ್ದ.

''ನನಗೂ ಗೊತ್ತಿಲ್ಲ, ನಿನ್ನನ್ನು ಕರೆದುಕೊಂಡು ಬರುವಂತೆ ಹೇಳಿದಾನೆ.''

''ಬರೋಕ್ಕಾಗೊಲ್ಲ ಅಂತ ಹೇಳಬೇಕಾಗಿತ್ತು.''

''ಹೇಗೆ ಹೇಳಲಿ! ಅವನ ಕೈಗೆ ಸಿಕ್ಕಿ ಬಿದ್ದಿದೇವಲ್ಲ.''

''ಹುಂ, ಸರಿ ಹೋಗಿ ಬರೋಣ ನಡಿ. ಮೊದಲು ಆ ಹುಡುಗಿ ಹೇಗಿದಾಳೋ ವಿಚಾರಿಸು.. ಆಸ್ಪತ್ರೆಗೆ ಫೋನು ಮಾಡು..''

''ಫೋನು ಸರಿಯಾಗಿಲ್ಲ.''

''ಯಾವತ್ತು ನೋಡಿದರೂ ನಿನ್ನ ಫೋನು.. ಸರಿಯಾಗಿರುಲ್ಲ, ನಡೀ ಹೊರಡು'' ಅವಸರಿಸಿದ. ಇಬ್ಬರೂ ಸೀದಾ ಮೊದಲು ನರ್ಸಿಂಗ್ ಹೋಂಗೆ ಬಂದರು. ವನಜಾಳ ಬಗ್ಗೆ ವಿಚಾರಿಸಿದ. ''ರಿಪೋರ್ಟ್ ಎಲ್ಲಾ ಬಂದಿದೆ ನೋಡ್ತೀರಾ!'' ಡಾಕ್ಟರ್ ಕೇಳಿದರು.

‘‘ಪರವಾಗಿಲ್ಲ, ನಾನು ಅದನ್ನು ನೋಡಿ ಏನಾಗಬೇಕಾಗಿದೆ! ಅವಳು ಹುಶಾರಾಗಿದ್ದರೆ ಸಾಕು..’’

‘‘ದೊಡ್ಡ ಡಾಕ್ಟರು ಬಂದ ಮೇಲೆ ಕನ್ಸಲ್ಟ್ ಮಾಡಿ, ಟ್ರೀಟ್‌ಮೆಂಟ್ ಮುಂದುವರೆಸುತ್ತೇವೆ.’’

‘‘ಸರಿ, ನಾನು ಬರ್ತೀನಿ ಎಂದ ದಿನೇಶ ಅವನನ್ನುಸರಿಸಿದ. ಇಬ್ಬರೂ ಸೀದಾ ಏಜೆಂಟನ ಆಫೀಸಿಗೆ ಬಂದರು. ಅವನು ಇವರನ್ನು ಕಂಡೊಡನೆ,

‘‘ನನಗೊಂದು ಮಾತು ತಿಳಿಸಬಾರದಾಗಿತ್ತೆ! ನೀವಿಬ್ಬರು ಸೇರಿ ಕಿಡ್ನಾಪ್ ಮಾಡಿದೀರಿ ಆ ಹುಡುಗೀನ..’’

‘‘ಕಿಡ್ನಾಪ್! ಯಾರು ಹೇಳಿದರು ನಿಮಗೆ? ರೇಗಿದ.

‘‘ನಾನು ಹಾಸ್ಟೆಲ್ಲಿಗೆ ಹೋಗಿದ್ದೆ, ಅಲ್ಲಿ ಅವರು ಹೇಳಿದರು.’’

‘‘ಏನಂತ? ನಾವು ಕಿಡ್ನಾಪ್ ಮಾಡಿದೆವು ಅಂತಲೇ!’’ ಸಿಟ್ಟಿನಿಂದ ಕೇಳಿದ.

‘‘ಯಾಕೆ ಸಿಟ್ಟಾಗ್ತೀರಿ! ಹಾಗಂತ ಅವರೂ ಹೇಳಲಿಲ್ಲ, ನಾನೂ ಕೇಳಲಿಲ್ಲ. ಆದರೆ ಅಷ್ಟು ಸುಲಭವಾಗಿ ಆ ಹುಡುಗಿಯನ್ನು ಅಲ್ಲಿಂದ ಹೇಗೆ ಕರೆದುಕೊಂಡು ಬಂದಿರಿ!’’

‘‘ಅವಳಿಗೆ ಜ್ವರ ಬಂದಿತ್ತು, ಚಳಿಯಿಂದ ನಡುಗುತ್ತಿದ್ದಳು. ಅವಳನ್ನು ಕರೆದುಕೊಂಡು ಬಂದು ಆಸ್ಪತ್ರೆಗೆ ಸೇರಿಸಿದೀವಿ..’’

‘‘ಚಳಿ ಜ್ವರದ್ದಲ್ಲ, ನಶೇದು..ಆ ಮದ್ದಿನದು.’’

‘‘ಎಂಥದೋ ನಮಗೇನು ಗೊತ್ತು! ಡಾಕ್ಟರಿದಾರೆ, ನೋಡ್ಕೋತಾರೆ.’’

‘‘ಯಾವ ನರ್ಸಿಂಗ್ ಹೋಂ ಅಂದ್ರಿ!’’

‘‘ಯಾವುದು ಅಂತ ನಾವು ಹೇಳುಲ್ಲ, ತಿಳಿದುಕೊಂಡು ಏನು ಮಾಡಬೇಕಾಗಿದೆ!’’

‘‘ಏನ್ರೀ ಹೀಗೆ ಗುರ್ ಅಂತೀರಿ..? ಅವಳು ಎಲ್ಲಿದಾಳೆ ಹೇಗಿದಾಳೆ ಅಂತ ಕಂಡು ಹಿಡಿದವನು ನಾನು..’’

‘‘ಅದಕ್ಕೆ ಹಣ ಕೊಡ್ತೀನಲ್ಲ’’

‘‘ಹಣವನ್ನು ಇನ್ನು ಕೊಟ್ಟಿಲ್ಲ, ಅಡ್ವಾನ್ಸ್ ಐನೂರು ಮಾತ್ರ ಕೊಟ್ಟಿದೀರಿ. ನಾನು ಒಂದು ಸಲ ಆ ಹುಡುಗಿ ಎಲ್ಲಿದಾಳೆ, ಯಾವ ಸ್ಥಿತೀಲಿದಾಳೆ ಅಂತ ನೋಡಬೇಕು.’’

‘‘ಯಾಕೆ?’’

‘‘ನಿಜ ಹೇಳ್ತೀನಿ, ಇಲ್ಲದಿದ್ದರೆ ನನಗೆ ನಿಮ್ಮ ಮೇಲೆ ನಂಬಿಕೆ ಬರೊಲ್ಲ.’’

‘‘ಓ.. ನಮ್ಮ ಮೇಲೇನೇ ಅನುಮಾನ ನಿಮಗೆ!’’

‘‘ಹೌದು ಸ್ವಲ್ಪ ಅನುಮಾನಾನೇ..’’

"ನಾವು ಅವಳು ಎಲ್ಲಿದಾಳೇ ಅಂತ ಹೇಳ್ತೀನಿ. ಆದರೆ ನೀವು ಡಾಕ್ಟರ ಹತ್ತಿರ ಏನನ್ನು ಹೇಳಬಾರದು."

"ಸರಿ ನಾನೇಕೆ ಹೇಳಲಿ! ಅವಳು ಅಲ್ಲಿದಾಳೆ ಅಂತ ಖಚಿತವಾದರೆ ಸಾಕು, ನನಗೆ,"

"ನಾವು ಈಗ ಅಲ್ಲಿಂದಲೇ ಬರುತ್ತಿದೇವೆ. ನಾಳೆ ದಿನೇಶ ನಿಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗ್ತಾನೆ."

ಏಜೆಂಟ್ ಒಪ್ಪಿದ. ಅಶೋಕನ ತಲೆ ಬಿಸಿ ಏರತೊಡಗಿತ್ತು. ದಿನೇಶನ ಕಡೆ ತಿರುಗಿದ.

"ನಾನೇ ಎಲ್ಲಾದರೂ ದೇಶಾಂತರ ಹೋಗಿ ಬಿಡಲಾ ಅಂತ ಅನ್ನಿಸ್ತಿದೆ."

"ದೇಶಾಂತರ ಹೋಗಿ ಏನು ಕಡೀತೀಯ? ತಾಳಿದವನು ಬಾಳಿಯಾನು ಅಂತ, ಸ್ವಲ್ಪ ತಾಳ್ಮೆ ತಂದುಕೋ.."

"ತಾಳ್ಮೆ ನನಗೆ!" ಎಂದುಕೊಂಡ ತನ್ನಲ್ಲೇ ದಿನೇಶನ್ನ ಅವನ ಸ್ಟುಡಿಯೋ ಹತ್ತಿರ ಇಳಿಸಿ, ತಾನು ತನ್ನ ಅಂಗಡಿಗೆ ಬಂದ.

ಹೀಗೇ ಇದ್ದರೆ ತನಗೇ ಏನಾಗಿ ಬಿಡುತ್ತೇ, ತಾನೇ ಆಸ್ಪತ್ರೆ ಸೇರುವ ಸ್ಥಿತಿ ಬಂದರೆ ಎಂದುಕೊಂಡಾಗ ಗಾಬರಿಯಾಗಿತ್ತು. ಎಲ್ಲಿಗಾದರೂ ಹೋಗಿ ನಾಲ್ಕಾರು ದಿನ ಕಳೆದು ಬರೋಣ ಎಂದರೆ, ಎಲ್ಲಿಗೆ ಹೋಗುವುದು! ಕೇಳಿದವರಿಗೆ ಏನು ಹೇಳುವುದು! ಸುಮ್ಮನೇ ಯಾವ ನೆಂಟರ ಮನೆಗೆ ಹೋಗಲಿ! ಈ ಊರಿನಿಂದ ಹೊರಗೆ ಎಲ್ಲಾದರೂ ಹೋಗಿ ಬರೋಣವೆಂದುಕೊಂಡರೆ ಅದೂ ಅಸಾಧ್ಯ.

ಈ ತರಹದ ಮನಃಕ್ಷೋಭೆಗೆ ಒಳಗಾದವರು, ನೆಮ್ಮದಿಗೋಸ್ಕರ ಡ್ರಗ್ಸ್ ತಗೊಳ್ಳುತ್ತಾರಂತೆ, ಹಾಗೇ ನಾನೂ ತೆಗೆದುಕೊಂಡರೇ.. ಇದನ್ನೆಲ್ಲಾ ಮರೆಸಿ, ಆನಂದ ಮಯವಾದ ಭೋಗಕ್ಕೆ ಅದು ಒಯ್ಯುವುದಾದರೆ.. ಯಾಕೆ ತೆಗೆದುಕೊಳ್ಳಬಾರದು.? ಆದರೆ-ಆದರೆ ತನಗೇಕೆ ಈ ಅಲೋಚನೆ ಬಂತು! ಒಬ್ಬ ಜವಾಬ್ದಾರಿಯುತ ನಾಗರಿಕನಾಗಿ, ನಾನು ಹೀಗೆ ಯೋಚಿಸುವುದೇನೆಂದರೆ? ಅಮಾಯಕ ಹುಡುಗ ಹುಡುಗಿಯರು, ಅದರ ದಾಸರಾಗಿ ಹೀನಾಯವಾಗಿ ಬಾಳುತ್ತಿದಾರೆ. ಅದನ್ನ ತಪ್ಪಿಸಬೇಕು ಎಂದು ಸಮಾಜ ಸಾರುತ್ತಿರುವಾಗ, ತನಗೆ ಈ ಅಲೋಚನೆ..? ಛೆ..ಛೆ..ಎಂತಹ ಕೆಟ್ಟ ಆಲೋಚನೆ ಎಂದು ಅದನ್ನ ಮನಸ್ಸಿನಿಂದ ತೊಡೆದು ಹಾಕಲು ಪ್ರಯತ್ನಿಸಿದ.

ಯಾರಿಗಾದರೂ ಈ ಅಳಲನ್ನು ಹೇಳಿಕೊಳ್ಳಲೇಬೇಕು. ಯಾರೊಂದಿಗೆ? ಅಮ್ಮ, ಅಪ್ಪ, ಅಕ್ಕಂದಿರು, ಸುಧಾ..? ದಿನೇಶ.. ಜಗನ್ನಾಥರಾಯ.. ವನಜಾ.

ಪಾಪ ವನಜಾ.. ತನ್ನ ಹಾಗೇ ಹೇಳಿಕೊಳ್ಳಲಾಗದ ಸಂಕಟಕ್ಕೆ ಗುರಿಯಾಗಿ, ಹೀಗೆ ಅಡ್ಡದಾರಿ ಹಿಡಿದಿರಬಹುದೆ! ಅವಳನ್ನು ಸರಿದಾರಿಗೆ ತರುವ ಪ್ರಯತ್ನ ನಡೆಸಿ, ತಾನು ಅಡ್ಡದಾರಿ ಹಿಡಿಯುವ ಅಲೋಚನೆ ಮಾಡಿದ್ದೆನಲ್ಲ.. ಷೇಮ್ ಎಂದು ತನಗೆ ತಾನೇ ಬೈದುಕೊಂಡ.

ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಳ್ಳಲು, ಸಿನಿಮಾಕ್ಕೆ ಹೋದ. ಲೈಬ್ರರಿಗೆ ಹೋಗಿ ಕುಳಿತು, ಪತ್ರಿಕೆಗಳನ್ನು ತಿರುವಿ ಹಾಕಿದ. ದೇವರ ಸ್ತೋತ್ರಗಳನ್ನು ಹೇಳಿಕೊಂಡ. ಭಗವದ್ಗೀತೆ ಓದಿದ. ದೇವಸ್ಥಾನಗಳಿಗೆ ತಿರುಗಿದ. ಆದರೆ ಯಾವುದೂ ಅವನಿಗೆ ತಳಮಳವನ್ನು ಕಡಿಮೆ ಮಾಡಲು ಸಹಾಯಕವಾಗಿರಲಿಲ್ಲ.

ಶುಭ ತನ್ನನ್ನು ತಿರಸ್ಕರಿಸಿದುದಾಗಲಿ, ಸುಧಾ ಪ್ರತಾಪನ್ನ ಮದುವೆಯಾದುದಾಗಲೀ ಅಥವಾ ಪ್ರತಾಪ ಆಸ್ಪತ್ರೆಯಲ್ಲಿ ಕಡೇ ಉಸಿರನ್ನೆಳೆದಾಗಾಗಲೀ ತನಗೆ ಈ ರೀತಿ ಅನ್ನಿಸಿರಲಿಲ್ಲವಲ್ಲ. ಏಕೆ? ಈಗೇಕೆ ಹೀಗಾಗುತ್ತಿದೆ! ತನ್ನ ಅಂತರ್ಯವನ್ನು ತಿಳಿದು, ತನಗೆ ಉಪಯುಕ್ತ ಸಲಹೆಯನ್ನು ನೀಡುವ ಒಬ್ಬ ಏಜೆಂಟ್ ಇದ್ದಿದ್ದರೆ.. ಹೀಗೇ ಆಲೋಚನೆಯಲ್ಲಿ ತೇಲಿ, ಮುಳುಗಿ ಮೇಲೇಳುತ್ತಿದ್ದವನನ್ನು ಫೋನಿನ ಗಂಟೆ ಎಚ್ಚರಿಸಿತು. ಆಸ್ಪತ್ರೆಯಿಂದ ಡಾಕ್ಟರು ಫೋನು ಮಾಡಿದ್ದರು.

ಈಗಲೇ ಬನ್ನಿ ಎಂದಷ್ಟೇ ಹೇಳಿ ಕುತೂಹಲವನ್ನು ಕೆರಳಿಸಿದ್ದರು. ಒಬ್ಬನೇ ಹೋಗುವ ಧೈರ್ಯವಿಲ್ಲದೇ ದಿನೇಶನನ್ನು ಕರೆಯಲು ನೋಡಿದ. ಅವನಿರಲಿಲ್ಲ. ಹೊರಗೆಲ್ಲೋ ಹೋಗಿದಾನೆಂದು ಅಸಿಸ್ಟೆಂಟ್ ತಿಳಿಸಿದಾಗ ವಿಧಿ ಇಲ್ಲದೇ ತಾನೊಬ್ಬನೇ ಹೋದ.

ಪರಿಚಯದ ಡಾಕ್ಟರು ನುಡಿದಿದ್ದರು.

''ಹುಡುಗಿ ತುಂಬಾ ನಿತ್ರಾಣವಾಗಿದ್ದಳು. ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದಾಳೆ. ತನ್ನನ್ನು ಇಲ್ಲಿಗೆ ಯಾರು ತಂದು ಸೇರಿಸಿದರು ಅಂತ ತಿಳಿದುಕೊಳ್ಳುವ ಕುತೂಹಲ ಪದೇ ಪದೇ ಕೇಳ್ತಿದ್ದಾಳೆ. ಅದಕ್ಕೇ ನಿಮ್ಮನ್ನು ಕರೆಸಿದೆ..''

''ಅಂದರೆ, ಸಮಾಧಾನವಾಗಿದಾಳೋ, ಅಥವಾ..''

''ಎಚ್ಚರವಾದಾಗ, ಅಸಮಾಧಾನವೇ ಮುಖದಲ್ಲಿ ತುಂಬಿಕೊಂಡಿತ್ತಂತೆ. ನರ್ಸ್ ಹೇಳಿದಳು. ಆದರೆ ಆಮೇಲೆ ಆ ನರ್ಸ್‌ನ್ನ ಸ್ನೇಹಿತೆಯನ್ನಾಗಿ ಮಾಡಿಕೊಂಡಿದಾಳೆ. ಏಕೆ ಗೊತ್ತೇ!''

''ಏಕಿರಬಹುದು!''

''ಗುಟ್ಟಾಗಿ ಯಾರಿಗೂ ತಿಳಿಯದಂತೆ, ಡ್ರಗ್ಸ್ ತರಿಸಿಕೊಳ್ಳಲು, ತನ್ನ ಬ್ಯಾಗಿನಲ್ಲಿದೆ ತಂದುಕೊಡಿ ಅಂತ ಅಂದಳಂತೆ..''

''ಅಂದರೆ, ಅವಳು ಡ್ರಗ್ಸ್ ತಗೊಳ್ಳುತ್ತಿದ್ದಳು ಅನ್ನುವುದು ನಿಜ.''

''ನಿಜವಲ್ಲದೇ ಇನ್ನೇನು! ಬ್ಲಡ್ ರಿಪೋರ್ಟ್ ಸಹ ಅದನ್ನು ಖಚಿತಪಡಿಸಿದೆ. ಆದರೆ ಯಾವ ದುಷ್ಪರಿಣಾಮವೂ ಆಗಿಲ್ಲ. ಅದೇ ಆಶ್ಚರ್ಯ.''

''ಎಷ್ಟು ದಿನಗಳಿಂದ ಈ ಅಭ್ಯಾಸವಿತ್ತೋ..''

''ಅದನ್ನ ಹಾಗೆ ಕೇಳಿ ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಈ ಡ್ರಗ್ಸ್

ತೆಗೆದುಕೊಳ್ಳುವವರ ಮನಸ್ಸು ಅತಿ ಸೂಕ್ಷ್ಮವಾಗಿರುತ್ತೆ. ಏನು ಆಡಿದರೆ ಏನೋ ಅನ್ನುವ ತರಹ ವರ್ತಿಸಬೇಕು ಅವರ ಹತ್ತಿರ.''

''ಹಾಗಾದರೆ ಅವಳು ನಾರ್ಮಲ್ ಆಗುವುದು ಯಾವಾಗ?''

''ಕೆಲವು ದಿನಗಳು ಬೇಕಾಗುತ್ತೆ. ಜತೆಗೆ ಅವಳನ್ನು ಕೇರ್ ಮಾಡುವವರು ಒಬ್ಬರಿದಾರೆ ಅನ್ನುವ ವಿಶ್ವಾಸ ಅವಳಲ್ಲಿ ಹುಟ್ಟಬೇಕು. ಅವಳನ್ನು ಪ್ರೀತಿಯಿಂದ, ವಿಶ್ವಾಸದಿಂದ ಕಾಣುವವರು ಬೇಕು.. ಇಲ್ಲಿ ನಾವುಗಳು, ಡಾಕ್ಟರ್ಸ್ ಸಿಸ್ಟರ್ಸ್ ಎಲ್ಲರೂ ಆದಷ್ಟು ಎಚ್ಚರವಹಿಸಿ, ಪ್ರೀತಿಯಿಂದ ಮಾತನಾಡಿಸಲು ಪ್ರಯತ್ನಿಸುತ್ತೀವಿ. ಆದರೆ ಅದು ಕೃತಕ ಅನ್ನುವುದು ಅಂತಹವರಿಗೆ ಸುಲಭವಾಗಿ ಗೊತ್ತಾಗುತ್ತೆ.''

ಅಶೋಕನಿಗೆ ಅವರ ಮಾತಿನಿಂದ ನಗು ಬಂತು. ಮುಗುಳ್ನಕ್ಕ.

''ಹೀಗೆ ನಗುನಗುತ್ತಾ ಮಾತನಾಡಿಸುವವರು ಒಬ್ಬರು ಬೇಕು. ನಿಮ್ಮನ್ನು ನೀವು ಅವಳ ಕಸಿನ್ ಅಂತ ಪರಿಚಯ ಹೇಳಿಕೊಂಡು, ಅವಳು ಸಂತಸಪಡುವಂತೆ ಮಾತನಾಡಿ, ಎಷ್ಟು ಬೇಗ ಅವಳಲ್ಲಿ ಬದಲಾವಣೆ ಕಂಡು ಬರುತ್ತೆ ನೋಡ್ತಿರಿ.''

''ಇದು ಹೊಸಾ ಸಮಸ್ಯೆ ಎಂದುಕೊಂಡ. ಒಳಗೆ ಹೋದಾಗ, ಅವನ ಹತ್ತಿರ ಕಾಡಿಬೇಡಿ ಒಂದಿಷ್ಟು ಡ್ರಗ್ಸ್ ಸೇವಿಸಿದರೆ ಏನು ಮಾಡೋದು ಎಂಬ ಆಲೋಚನೆಯೂ ಬಂತು. ಯಾವ ವಾರ್ಡಿನಲ್ಲಿದಾಳೆ? ಎಂದು ವಿಚಾರಿಸಿ ತಿಳಿದುಕೊಂಡ.

ವಾರ್ಡಿನೊಳಕ್ಕೆ ಹೋಗುವ ಮೊದಲು, ಕಾರಿಡಾರಿನ ಕಡೆಯಲ್ಲಿದ್ದ ಸ್ಟಾಫ್ ರೂಮಿಗೆ ನುಗ್ಗಿ ಕನ್ನಡಿಯೆದುರು ನಿಂತು ತನ್ನ ಮುಖವನ್ನೊಮ್ಮೆ ನೋಡಿಕೊಂಡು ಕ್ರಾಪನ್ನು ಕೈನಿಂದ ಸರಿ ಮಾಡಿಕೊಂಡು, ರೂಮಿನ ಪರದೆಯನ್ನು ಸರಿಸಿದ.

ಏನನ್ನೋ ಆಲೋಚಿಸುತ್ತಾ ಮಲಗಿದ್ದವಳು ಧಿಗ್ಗನೆ ಎದ್ದುಕುಳಿತಳು. ಅವನನ್ನೇ ಬೆರಗಾಗಿ ನೋಡಿದಳು.

''ಹಲೋ'' ಎಂದ ಮುಗುಳ್ನಗುತ್ತಾ, ಹೂಗೊಂಚಲಿನ ಬುಕೇನೋ, ಅಥವಾ ಒಂದು ಕೆಂಗುಲಾಗಿ ಹೂವನ್ನೋ ತಂದಿದ್ದರೆ ಚೆನ್ನಾಗಿತ್ತೆನಿಸಿತು. ಅವಳು ಉತ್ತರಿಸಿಲಿಲ್ಲ. ನರ್ಸಿಗೆ ಹೊರಗೆ ಹೋಗುವಂತೆ ಕಣ್ಸನ್ನೆ ಮಾಡಿದ. ಅವಳು ಹೊರಟಾಗ, ವನಜಾ ತಡೆದಿದ್ದಳು. ''ಸಿಸ್ಟರ್ ಹೋಗಬೇಡಿ ಇಲ್ಲೇ ಇರಿ,'' ಸಿಸ್ಟರ್ ಕೇಳಿಸದವಳಂತೆ ಹೊರಟು ಹೋದಾಗ, ಇವಳು ಮುಷ್ಠಿಯಿಂದ ಗಾಳಿಗೆ ಗುದ್ದಿದಳು.

ಇವನು ನಕ್ಕ, ''ಅವಳಿಗೆ ಏಟು ಬೀಳಲಿಲ್ಲ'' ಎಂದ.

''ನಗಬೇಡಿ ಪ್ಲೀಸ್'' ಎಂದಳು ಗಂಭೀರವನ್ನು ನಟಿಸುತ್ತಾ.

''ಓ.ಕೆ.'' ಎಂದ ರಾಗವಾಗಿ,

''ನೀವು ಯಾರು? ನೀವೇ ಅಂತೆ ಇಲ್ಲಿಗೆ ಕರೆತಂದು ಸೇರಿಸಿದ್ದು..?''

''ಹೌದು, ನಾನ್ಯಾರು ಅಂತ ಗೊತ್ತಾಗಲಿಲ್ವಾ! ನಿನ್ನ ಕಸಿನ್ ಅಶೋಕ್..''

''ನನಗೆ ಕಸಿನ್ಸ್ ಯಾರೂ ಇಲ್ಲ..''

''ಯಾಕಿಲ್ಲ? ನಾನಿದ್ದೀನಲ್ಲ.''

''ನಾನು ನಂಬೊಲ್ಲ''

''ನೀನು ನಂಬು ಅಂತ ನಾನು ಬಲವಂತ ಮಾಡುವುದಿಲ್ಲ, ಹೋಗಲಿಬಿಡು,''

''ನನ್ನನ್ಯಾಕೆ ಇಲ್ಲಿಗೆ ಕರೆತಂದು ಸೇರಿಸಿದಿರಿ!''

''ನಿನಗೆ ಹುಶಾರಿರಲಿಲ್ಲ.''

''ನಾನು ಹುಶಾರಾಗಿ ಏನಾಗಬೇಕಾಗಿದೆ!''

''ಹಾಗೆ ಹೇಳಬೇಡ ವನಜಾ.. ನನಗೆ ನೀನು ಬೇಕು..'' ಹಾಗೆ ಹೇಳುವಾಗ ಅವನ ನಾಲಿಗೆ ತಡವರಿಸಿತು.

''ನೀವು ನನ್ನ ಕಸಿನ್ ಅಂತೀರಿ.. ನಿಮಗೆ ನಾನು ಬೇಕು ಅಂತ ಮತ್ತೆ ಹೇಳ್ತೀರಿ, ನಾನು ಇದನ್ನೆಲ್ಲ ನಂಬಿ ಮೋಸ ಹೋಗುವವಳಲ್ಲ.''

''ನನ್ನನ್ನು ನೋಡಿದರೆ ಮೋಸ ಮಾಡೋನ ತರಹ ಕಾಣ್ತೀನಾ!''

''ಎಲ್ರೂ ಹೀಗೇ ಸುಳ್ಳು ಹೇಳೂದು..''

''ಯಾರು ಏನು ಸುಳ್ಳು ಹೇಳಿದಾರೋ ನನಗೆ ಗೊತ್ತಿಲ್ಲ. ಆದರೆ ನಾನು ಹೇಳುತ್ತಿರುವುದು ನಿಜ..''

''ನಿಜವೋ ಸುಳ್ಳೋ ಅದನ್ನ ಕಟ್ಟಿಕೊಂಡು ನನಗೇನಾಗಬೇಕಾಗಿದೆ ? ಇಲ್ಲಿಂದ ಯಾವಾಗ ಹೋಗಬಹುದು ನಾನು ?''

''ಎಲ್ಲಿಗೆ?''

''ಇನ್ನೆಲ್ಲಿಗೆ ಹಾಸ್ಟೆಲ್ಲಿಗೆ..''

''ಹಾಸ್ಟೆಲ್ಲಿನ ಜೀವನ ನಿನಗೆ ಇಷ್ಟಾನಾ?''

''ಇಷ್ಟವೋ, ಕಷ್ಟವೋ, ಎಲ್ಲೋ ಒಂದು ಕಡೆ ಇರಬೇಕಲ್ಲ.''

''ಹಾಗಾದರೆ ಅದೂ ನಿನಗಿಷ್ಟವಿಲ್ಲ ಅಂತಾಯ್ತು. ನಾನು ಒಂದು ಕಡೆಗೆ ಕರೆದುಕೊಂಡು ಹೋಗ್ತೀನಿ ಬರ್ತೀಯಾ!''

''ಇಲ್ಲ ನಾನೆಲ್ಲಿಗೂ ಬರುವುದಿಲ್ಲ.''

''ಹಾಗಾದರೆ ಇಲ್ಲೇ ಇರು'' ಎಂದಿದ್ದ ಒರಟಾಗಿ..

ತಕ್ಷಣ ಅವಳು ಮುಸುಕೆಳೆದು ಮಲಗಿದಳು. ಅವಳ ಜತೆ ಅಷ್ಟು ಮಾತನಾಡಿದ್ದೇ ಹೆಚ್ಚು ಎಂದುಕೊಂಡು ಅವನೂ ಹೊರಗೆ ಬಂದ. ಹೊರಗೆ ನಿಂತಿದ್ದ ನರ್ಸು ಒಳಗೆ ಹೋದಳು.

ಏನು ಮಾತನಾಡಿದಳು? ಡಾಕ್ಟರು ಕುತೂಹಲದಿಂದ ಕೇಳಿದರು.

''ಕೃತಕವಾಗಿ ಮಾತನಾಡಿ ನನ್ನ ಬಾಯಿ ನೋಯುತ್ತಿದೆ..'' ಎಂದು ನಕ್ಕ.

''ಇವತ್ತು ಇಷ್ಟು ಮಾತನಾಡಿದಾಳಲ್ಲ, ಇನ್ನು ಸ್ವಲ್ಪ ಹೊತ್ತಿಗೆ ಸೈಕ್ರಿಯಾಟಿಸ್ಟ್ ಬರುತ್ತಾರೆ.. ಅವಳಲ್ಲಿ ಏನಾದರೂ ಬದಲಾವಣೆ ಆಗಿದ್ದರೆ ಖಂಡಿತಾ ತಿಳಿಯುತ್ತೆ. ಆಗ ಕ್ರೆಡಿಟ್ ಖಂಡಿತಾ ನಿಮಗೆ..''

''ಸಧ್ಯ, ಈ ಕ್ರೆಡಿಟ್ಟೂ ಬೇಡ, ಇವಳ ಸಹವಾಸವು ಬೇಡ'' ಎಂದುಕೊಂಡ ತನ್ನಲ್ಲೇ.

''ಪ್ಲೀಸ್ ನಾಳೇನೂ ಬನ್ನಿ, ನನ್ನನ್ನು ನೆಗ್ಲೆಕ್ಟ್ ಮಾಡ್ತಿದಾರೆ ಅನ್ನುವ ಫೀಲಿಂಗ್ ಬರಬಾರದು ಅವಳಿಗೆ''

''ಆಗಲಿ, ಆದರೆ ಬರ್ತೀನಿ, ಇಲ್ಲದಿದ್ದರೆ ನೀವೇ ಏನಾದರೂ ಸಪ ಹೇಳಿ''

ಡಾಕ್ಟರು ನಕ್ಕಿದ್ದರು.

ರಾತ್ರಿ ಮಲಗಿದ್ದಾಗ, ತಾನು ವನಜಾಳೊಡನೆ ಮಾತನಾಡಿದ್ದನ್ನೆಲ್ಲಾ ನೆನಪಿಸಿಕೊಂಡ. ಅವಳು ಯಾರೋ, ತಾನು ಯಾರೋ, ಆತ್ಮೀಯನಂತೆ ಮಾತನಾಡುವ ನಾಟಕವಾಡಿದ್ದು ನೆನಪಿಗೆ ಬಂದು ನಗು ಬಂತು. ಆದಕ್ಕೆ ಮುಂಚಿನ ಬದುಕೇ ಜಂಝಾಟ ಎನ್ನುವ ಭಾವನೆ ತನ್ನಲ್ಲಿ ಮಾಯವಾದುದನ್ನು ಕಂಡುಕೊಂಡ. ಹಾಗಾದರೆ ನನಗೆ ಅಂತಹವಳ ಸಹವಾಸ ಬೇಕೇ? ಅವಳು ತನ್ನನ್ನು ನಂಬಿರಲಿಲ್ಲ. ಆದರೂ ಅವಳಿಂದ ನನಗೆ ಹೊಸ ಭಾವನೆ ಉಕ್ಕಿದಂತಾಗಿದೆಯಲ್ಲ ಎಂದುಕೊಂಡು ಎದ್ದ. ವಂಶಿಯ ಅಳು ಕೇಳಿ ಬಂತು.

''ಯಾಕೆ ಅಳ್ತಿದಾನೆ'' ಅಂತ ಹೇಳಿಕೊಂಡು ಹೊರಗೆ ಬಂದ. ಸುಧಾ ಬಲವಂತದಿಂದ ಅವನಿಗೆ ಔಷಧಿ ಕುಡಿಸುತ್ತಿದ್ದಳು, ''ಏನದು?'' ಕೇಳಿದ.

''ಕೆಮ್ಮಾಗಿದೆ, ಸಿರಪ್..'' ವಂಶಿಯನ್ನು ಕಂಡೊಡನೆ ಎದ್ದು ತಪ್ಪು ತಪ್ಪು ಹೆಜ್ಜೆ ಇಡುತ್ತಾ ಅವನ ಬಳಿಗೆ ಬಂದ. ಎತ್ತಿಕೊಂಡು, ಅವಳ ಕಡೆ ನೋಡದೇ ಒಳಗೆ ಬಂದ. ಬಹುಶಃ ಅವಳು ನಿಟ್ಟುಸಿರು ಬಿಡುತ್ತಾ ತನ್ನನ್ನೇ ನೋಡಿರಬಹುದು ಎಂದುಕೊಂಡಾಗ ಮುಜುಗರವೆನಿಸಿತು.

ತಾನು ಅಧೀರನಾಗಿ ಒಬ್ಬನೇ ಮಲಗಿರಲು ಅಸಾಧ್ಯವೆನಿಸಿದಾಗ, ವಿಶಾಲನನ್ನು ತನ್ನ ಜತೆ ಮಲಗಿಸಿಕೊಳ್ಳುವ ಅಭ್ಯಾಸವನ್ನು ಮಾಡಿಕೊಂಡಿದ್ದ, ಮಹಡಿಯ ಮೇಲಿನ ರೂಮಿನಲ್ಲಿ ಸುಧಾ ಒಬ್ಬಳೇ ಹೇಗೆ ಮಲಗುತ್ತಿದಾಳೋ ಅಂತ ಅನ್ನಿಸಿದಾಗ ತಾನು ಮಾಡುತ್ತಿರುವುದು ತಪ್ಪು, ನಾಳೆಯಿಂದ ವಂಶಿ ಅವಳ ಬಳಿಯೇ ಮಲಗಲಿ ಎಂದುಕೊಂಡ. ಆದರೆ ಒಂದು ವೇಳೆ ಅವಳು ಮರುಮದುವೆಯಾಗಿ ಹೋಗುವಾಗ, ಈ ಅಭ್ಯಾಸದಿಂದ ಕಷ್ಟವಾಗಲಾರದು ಎಂದೂ ಅಂದುಕೊಂಡ.

ಸುಧಾ ಒಂಟಿ, ನಾನು ಒಂಟಿ, ವನಜಾ ಒಂಟಿ..ಯಾಕೋ ಆ ಒಂಟಿ ಎನ್ನುವ ಶಬ್ಧವೇ ಘೋರವಾಗಿ ತೋರಿ ಬಂತು. ನಮ್ಮೆಲ್ಲರ ಒಂಟಿತನವನ್ನು ಹೋಗಲಾಡಿಸಬೇಕು. ಇಲ್ಲದಿದ್ದರೆ ಬದುಕು ದುರ್ಭರವಾಗುತ್ತದೆ ಎಂದುಕೊಂಡ.

ಮಾರನೇದಿನ ದಿನೇಶನನ್ನು ಕರೆದುಕೊಂಡು ನರ್ಸಿಂಗ್ ಹೋಂಗೆ ಬಂದ. ಇವನೇ ಮುಗುಳ್ನಕ್ಕು, ''ಹಲೋ, ಹೇಗಿದೀಯಾ'' ಎಂದರೂ, ಅವಳು ಮುಗುಳ್ನಗಲಿಲ್ಲ, ''ಹಲೋ'' ಎನ್ನಲಿಲ್ಲ. ತಥ್ ಈ ದಿನವೂ ಹೂವನ್ನು ತರುವುದು ಮರೆತೆ ಎಂದುಕೊಂಡು ''ಇವನು ನನ್ನ ಸ್ನೇಹಿತ ದಿನೇಶ್.. ಎಂದು ಪರಿಚಯಿಸಿದ. ದಿನೇಶ ''ಹಲೋ.. ಈಗ ಹೇಗಿದೀರಿ'' ಅಂತ ಕೇಳಿದ... ಅವನನ್ನೇ ಸುಮ್ಮನೆ ದಿಟ್ಟಿಸಿದಳು.

''ವನಜಾ.. ಇವನು ಎಷ್ಟು ಚೆನ್ನಾಗಿ ಫೋಟೋ ತೆಗಿತಾನೆ ಅಂತೀಯ.. ಇವನದ್ದೇ ಸ್ಟುಡಿಯೋ ಇದೆ,'' ಆ ಮಾತು ಅವಳ ಮೇಲೆ ಯಾವ ಪರಿಣಾಮವನ್ನು ಬೀರಲಿಲ್ಲ.

''ಭಾನುವಾರ ಇವನ ಸ್ಟುಡಿಯೋಕ್ಕೆ ಮೂರು ವರ್ಷ ತುಂಬುತ್ತೆ. ಪಾರ್ಟಿ ಇಟ್ಟುಕೊಂಡಿದಾನೆ. ಬಂದರೆ ಕರೆದುಕೊಂಡು ಹೋಗ್ತೀನಿ.''

''ನೀವು ಬರಲೇ ಬೇಕು, ನನ್ನ ಮಿಸೆಸ್‌ಗೂ ಸಂತೋಷವಾಗುತ್ತೆ''

''ಸುಮ್ಮನೇ ಕಣ್ಣು ಚಲಿಸಿ, ಕಲ್ಲಿನಂತೆ ಕೂತಿದ್ದ ಅವಳನ್ನು ನೋಡಿ ದಿನೇಶನಿಗೆ ಬೇಸರವೆನಿಸಿತು.'' ನಾನು ಹೊರಗೆ ಕಾಯುತ್ತಾ ಇರ್ತೀನಿ.. ಪರ್ಸನಲ್ ಆಗಿ ಏನಾದರೂ ಮಾತನಾಡುವುದಿದ್ದರೆ, ಬೇಗ ಮುಗಿಸಿ ಬಾ..'' ದಿನೇಶ ಆಚೆ ಹೋದ ಮೇಲೆ, ಅಶೋಕ ಅಲ್ಲಿದ್ದ ಕುರ್ಚಿಯನ್ನೆಳೆದುಕೊಂಡ. ''ವಿಥ್ ಯುವರ್ ಪರ್ಮಿಷನ್'' ಎಂದ. ಅವಳು ಮಾತನಾಡಲಿಲ್ಲ.

''ನಾನು ಬರುವುದು ನಿನಗಿಷ್ಟವಿಲ್ಲದಿದ್ದರೆ, ಹೇಳಿ ಬಿಡು. ನಾನು ನಾಳೆಯಿಂದ ಬರುವುದಿಲ್ಲ'' ಅವನಾಡಿದ್ದು ತನಗಲ್ಲ ಎನ್ನುವಂತೆ ಅವಳು ಕುಳಿತಿದ್ದುದನ್ನು ಕಂಡು ಅವನಿಗೆ ರೇಗಿತು. ದಿಢೀರನೇ ಎದ್ದು ಹೊರಗೆ ಬಂದ.

ನೆನ್ನೆ ಮಾತಿಗೆ ಮಾತು ಬೆಳೆಸಿ ಅಷ್ಟು ಮಾತನ್ನಾಡಿದ್ದಳು. ಆದರೆ ಇವತ್ತೇನಾಯಿತು ಇವಳಿಗೆ! ದಿನೇಶ ಬಂದಿದ್ದು ಸರಿ ಹೋಗಲಿಲ್ಲವೇನೋ ಎಂದುಕೊಂಡ. ತಾನು ನಾಳೆ ಬರಬಾರದು ಎಂದುಕೊಂಡ. ಡಾಕ್ಟರಿಗೂ ಹೇಳದೇ ತನ್ನ ಪಾಡಿಗೆ ತಾನು ಹೊರಟು ನಿಂತ.'' ಸಾರಿ, ದಿನೇಶ, ನಿನಗೆ ಬೇಜಾರಾಗಿರಬೇಕು.. ನೆನ್ನೆ ಎಷ್ಟು ಮಾತನಾಡಿದ್ದಳು ಅಂತಾ, ಇವತ್ತೇನಾಯಿತೋ?''

''ಪರವಾಗಿಲ್ಲ ಬಿಡು.. ಎಷ್ಟಾಗಲೀ ಅವಳು ಪೇಷಂಟ್ ಅಲ್ವಾ, ಅವಳಿಗೆ ಮಾಫಿ ಇರುತ್ತೆ, ಇವತ್ತು ಅವಳಿಗೇನು ಬೇಜಾರಾಗಿದೆಯೋ ಏನೋ'' ದಿನೇಶನಂತೆ ತಾನು ಯೋಚಿಸಲಿಲ್ಲವಲ್ಲ ಎಂದುಕೊಂಡಾಗ ಹೀನಾಯವೆನಿಸಿತ್ತು.

ಮಾರನೇ ದಿನ ನಿತ್ಯಕ್ಕಿಂತ ಹೆಚ್ಚು ಸಮಯ ವ್ಯರ್ಥ ಮಾಡಿ, ಹೊರಡುವ ಸಿದ್ಧತೆ ನಡೆಸಿದ. ತಾಯಿ ಕೇಳಿದ್ದಳು, ''ಯಾವುದಾದರೂ ಮದುವೆಗೆ ಹೋಗ್ತಾ ಇದೀಯಾ.. ಊಟಕ್ಕೆ ಬರ್ತೀಯೋ ಹೇಗೆ!''

''ಇಲ್ಲ ಬರೊಲ್ಲ'' ಎಂದಿದ್ದ ತಟಕ್ಕನೇ, ಮರೆಯದೇ ಸುಂದರವಾದ ಹೂಗಳ ಗೊಂಚಲ ಬುಕೆ ಖರೀದಿಸಿದ. ಎಂದೂ ಅದಕ್ಕಾಗಿ ಹಣ ಖರ್ಚು ಮಾಡಿದವನಲ್ಲ ತಾನು ಎಂದೂ ನೆನಪಾಯಿತು.

ಮಂಡಿಯ ಮೇಲೆ ಗಲ್ಲವನ್ನಿಟ್ಟು ಕೈಗಳನ್ನು ಕಾಲಸುತ್ತ ಮಡಚಿ, ಏನೋ ಯೋಚಿಸುತ್ತಾ ಕುಳಿತಿದ್ದವಳನ್ನು ಕಂಡು ಮರುಕವೆನಿಸಿತು. ''ಹಲೋ, ಗುಡ್ ಮಾರ್ನಿಂಗ್'' ಎಂದ. ಅವಳೆಡೆಗೆ ಬುಕೆ ನೀಡಿದ. ಅವಳು ಕೈಗೆ ತೆಗೆದುಕೊಳ್ಳಲಿಲ್ಲ. ಆದರೆ ''ಥ್ಯಾಂಕ್ಸ್ ಅಲ್ಲಿಡಿ'' ಎಂದಳು.

''ಪರವಾಗಿಲ್ಲ'' ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡು, ಪಕ್ಕದ ಮೇಜಿನ ಮೇಲೆ ಇಟ್ಟ. ''ಹೂವುಗಳು ಎಷ್ಟು ಚೆನ್ನಾಗಿವೆ ಅಲ್ಲವೆ?'' ನಿನಗೆ ಹೂ ಎಂದರೆ ಇಷ್ಟವಿಲ್ಲವೆ!''

''ನನ್ನ ಇಷ್ಟ ಕಟ್ಟಿಕೊಂಡು ಏನು ಮಾಡ್ತೀರಿ! ನನ್ನನ್ಯಾಕೆ ಹೀಗೆ ಸತಾಯಿಸ್ತಿದೀರಿ?'' ದಿಢೀರನೇ ಕೇಳಿದಳು. ಅವನು ಸ್ತಂಭಿತನಾದ. ಇವಳಿಗೆ ಒಳ್ಳೇದಾಗಲಿ ಅಂತ ಮಾಡುತ್ತಿದ್ದರೆ, ನನ್ನ ಮೇಲೇ ರೇಗ್ತಾಳಲ್ಲ, ನನಗೇನಂತೆ ಹೊರಟು ಹೋಗಲೇ ಎಂದುಕೊಂಡವನು, ಸಹನೆಯಿಂದ.

''ನನಗೆ ನೀನು ಇಷ್ಟ. ಅದಕ್ಕೆ ಬರ್ತೀನಿ.. ಮಾತನಾಡಿಸ್ತೀನಿ.''

''ಹಾಗಾದರೆ ನನಗೊಂದು ಫೇವರ್ ಮಾಡಿ.. ಮೊದಲು ಇಲ್ಲಿಂದ ನನ್ನನ್ನು ಹೊರಕ್ಕೆ ಕರೆದುಕೊಂಡು ಹೋಗಿ..''

''ಡಾಕ್ಟರು, ಹೇಳಲಿ, ಕರೆದುಕೊಂಡು ಹೋಗ್ತೀನಿ.''

''ನನಗೇನೂ ಖಾಯಿಲೆ ಇಲ್ಲ, ನಾನು ಸರಿಯಾಗಿದೀನಿ.''

''ಹಾಗಂತ, ನಾನು ನೀನು ಹೇಳಿದರೆ ಸಾಲದು, ಅವರು ಹೇಳಬೇಕು.''

''ನನ್ನನ್ನು ಒಂದು ಸಲ ಹಾಸ್ಟೆಲ್ಲಿಗೆ ಕರೆದುಕೊಂಡು ಹೋಗಿ, ನನಗೆ ಸ್ವಲ್ಪ ಹಣ ಬೇಕಾಗಿತ್ತು.. ಬ್ಯಾಂಕಿಗೆ ಹೋಗಬೇಕು..''

''ಆಗಲಿ, ಈಗ ಎಷ್ಟು ಹಣ ಬೇಕಾಗಿತ್ತು..ನಾನು ಕೊಟ್ಟಿರ್ತೀನಿ..''

''ಬೇಡ, ನನ್ನ ದುಡ್ಡು ಬ್ಯಾಂಕಿನಲ್ಲಿದೆ, ನಾನು ಡ್ರಾ ಮಾಡ್ತೀನಿ.''

''ಸರಿ, ಡಾಕ್ಟರನ್ನು ಕೇಳ್ತೀನಿ, ಅವರು ಕರೆದುಕೊಂಡು ಹೋಗಿ ಪರವಾಗಿಲ್ಲ ಅಂದರೆ ಕರೆದುಕೊಂಡು ಹೋಗ್ತೀನಿ. ನಾನು ನಾಳೆ ಬರ್ತೀನಿ, ಇಷ್ಟು ಹೊತ್ತಿಗೆ ಸಿದ್ಧವಾಗಿರು..'' ''ಹುಂ'' ಎಂದು ತಲೆ ಆಡಿಸಿದಾಗ, ''ನಿನ್ನ ತಲೆ'' ಎಂದು [illegible] ಬೈದ.

ಡಾಕ್ಟರ ಹತ್ತಿರ ಮಾತನಾಡಿ, ''ಅವಳನ್ನು ನಾಳೆ ಹೊರಗೆ ಕರೆದುಕೊಂಡು ಹೋಗಲೇ'' ಎಂದು ಕೇಳಿದ್ದ.

''ಕರೆದುಕೊಂಡು ಹೋಗಬಹುದು, ಆದರೆ ಹುಶಾರಾಗಿರಬೇಕು.. ನಿಮ್ಮಿಂದ ತಪ್ಪಿಸಿಕೊಂಡು ಹೋಗದಂತೆ ನೋಡಿಕೊಳ್ಳಬೇಕು'' ತುಟಿಗಳನ್ನು ಹಲ್ಲಿನಿಂದ ಕಚ್ಚಿ ಚಿಂತಿಸಿದ. ತನ್ನಿಂದ ಏನಾದರೂ ಅಚಾತುರ್ಯವಾಗಿ ಅವಳು ತಪ್ಪಿಸಿಕೊಂಡರೇ.. ತನ್ನ ಜತೆಗೆ ದಿನೇಶನೂ ಇದ್ದರೆ ವಾಸಿ ಎಂದುಕೊಂಡು, ಮೊದಲು ಅವನ ಸ್ಟುಡಿಯೋಕ್ಕೆ ಬಂದ. ಇವನ ಮಾತಿಗೆ ದಿನೇಶನೂ ಒಪ್ಪಿದ.

ನರ್ಸು, ಅವಳ ಲಗೇಜ್‌ನಿಂದ ತೆಗೆದು, ಒಳ್ಳೆ ಪ್ಯಾಂಟು ಷರಟನ್ನು ತೊಡಿಸಿದ್ದಳು. ಸ್ವಲ್ಪ ಉದ್ದವಾಗಿ ಬೆಳೆದಿದ್ದ ಕೂದಲನ್ನು ನೀಟಾಗಿ ಬಾಚಿ, ಹಿಂದಕ್ಕೆ ಸೇರಿಸಿ ಕಟ್ಟಿದ್ದಳು. ಸ್ಕೂಲಿಗೆ ಹೋಗುವ ಹುಡುಗಿಯಂತೆ ಕಂಡು ಬಂದ ಅವಳನ್ನು ನೋಡಿ, ಹಿತವೆನಿಸಿತು, ''ಹಲೋ..ಯು ಲುಕ್ ಸ್ಮಾರ್ಟ್'' ಎಂದಿದ್ದ.

''ಥ್ಯಾಂಕ್‌ಯೂ... ಇವತ್ತು ಬುಕೆ ತರಲಿಲ್ವಾ!''

''ಸಾರಿ, ಮರೆತು ಬಿಟ್ಟೆ. ನೆನ್ನೆ ತಂದಿದ್ದು ಇಲ್ಲೇ ಬಿದ್ದಿದೆ.''

ತಪ್ಪು ಮಾಡಿದವಳಂತೆ ಮುಖ ಕೆಳಗೆ ಮಾಡಿದಾಗ, ಪರವಾಗಿಲ್ಲ ಇವಳಿಗೂ ನಟನೆ ಬರುತ್ತೆ ಎಂದುಕೊಂಡ. ಅಷ್ಟು ಹೊತ್ತಿಗೆ ದಿನೇಶನೂ ಅಲ್ಲಿಗೆ ಬಂದ. ಮೂವರೂ ಹೊರಟರು. ಹೊರಗೆ ಬಂದ ನಂತರ ಕೇಳಿದಳು.

''ನನಗೆ ಇಬ್ಬಿಬ್ಬರು ಗಾರ್ಡ್ಸ್..ಏಕೆ? ಓಡಿ ಹೋಗ್ತೀನಿ ಅಂತ ಹೆದರಿಕೇನಾ? ಅಶೋಕ ಪೆಚ್ಚಾದ. ದಿನೇಶನೇ ಸಮಯಕ್ಕೆ ತಕ್ಕ ಮಾತನಾಡಿದ.

''ಹಾಗೇನಿಲ್ಲ, ಫೋಟೋ ತೆಗೆಯೊಕ್ಕೆ ಅಂತ ನಾನೇ ಬಂದೆ.''

''ನನ್ನ ಫೋಟೋ ಯಾಕೆ? ನನ್ನ ಮೇಲೆ ಆರ್ಟಿಕಲ್ ಬರೀಬೇಕಾ?''

''ಸುಮ್ಮನೇ ನನ್ನ ಕಲೆಕ್ಷನ್‌ಗೆ..ಸ್ಮಾರ್ಟ್ ಹುಡುಗಿಯರ ಫೋಟೋಗಳ ಒಂದು ಆಲ್ಬಂ ಇದೆ ನನ್ನ ಹತ್ತಿರ.. ನನ್ನ ಸ್ಟುಡಿಯೋಕ್ಕೆ ಬಂದರೆ ತೋರಿಸ್ತೀನಿ.''

''ಇವತ್ತು ಬೇಡ, ಇನ್ನೊಂದು ದಿನ.. ಮೊದಲು ಬ್ಯಾಂಕಿಗೆ ಹೋಗಬೇಕು.''

ಬ್ಯಾಂಕಿನಲ್ಲಿ ಅವಳ ಹೆಸರಿನಲ್ಲಿ ಸಾಕಷ್ಟು ಹಣವೇ ಇರಲಿಲ್ಲ, ಅವಳಿಗೆ ಅವಮಾನವಾದಂತಾಗಿತ್ತು. ''ನೀವು ಸುಳ್ಳು ಹೇಳ್ತಿದೀರಿ'' ಎಂದು ಅವಳ ಮೇಲೆ ರೇಗಿದ್ದಳು. ಅಶೋಕ ಸಮಾಧಾನ ಹೇಳಿದ್ದ, ''ಎಷ್ಟೋ ದಿನಗಳಿಂದ, ಈ ಬ್ಯಾಂಕಿನ ಕಸ್ಟಮರ್ ನೀನು. ನಿನಗ್ಯಾಕೆ ಸುಳ್ಳು ಹೇಳ್ತಾರೆ!''

''ನಾನು ನನ್ನ ಅಂಕಲ್ ಹತ್ತಿರ ಮಾತನಾಡಬೇಕು.''

''ಓ.ಕೇ'' ಎಂದು ಬ್ಯಾಂಕಿನವರು, ರಾಯರ ಸ್ನೇಹಿತರ ನಂಬರ್ರಿಗೆ ಡಯಲ್ ಮಾಡಿಕೊಟ್ಟರು. ಅವರ ಸೊಸೆ, ಅವರು ಅಮೆರಿಕಾಕ್ಕೆ ಹೋಗಿದಾರೆ..'' ಎಂದಾಗ ಹತಾಶಳಾದಳು. ''ನಾನಿಲ್ಲಿ ನನ್ನ ಖರ್ಚಿಗೆ ಹಣವಿಲ್ಲದೇ ಒದ್ದಾಡ್ತಿದೀನಿ.. ಅವರು

ಅಮೆರಿಕಾಕ್ಕೆ ಮಜಾ ಮಾಡೊಕ್ಕೆ ಹೊರಟಿದಾರೆ.'' ಹಲ್ಲು ಕಡಿದಳು. ಹೊರಗೆ ಬಂದಳು. ಅವಳನ್ನು ಹಿಂಬಾಲಿಸಿದ. ''ಛೆ, ಹಾಗೆಲ್ಲ ಮಾತನಾಡಬಾರದು, ಯಾರಿಗೆ ಏನು ಕಷ್ಟವೋ..ನಿನಗೆಷ್ಟು ಹಣ ಬೇಕೋ ಅಷ್ಟನ್ನು ನಾನು ಕೊಟ್ಟಿರ್ತೀನಿ.. ಸಾಲ ಅಂತ.''

''ನನಗೆ ಯಾರ ಹಣವೂ ಬೇಡ, ನನ್ನ ದುಡ್ಡು ನನಗೆ ಕೊಡೊಕ್ಕೆ ಇವರಗೇನು ಕಷ್ಟ!''

''ಯಾರನ್ನು ಬೈತಿದೀಯ!''

''ಎಲ್ಲರನ್ನೂ, ಅಪ್ಪನ್ನ, ಅಂಕಲ್‌ನ, ಈ ಬ್ಯಾಂಕಿನವರನ್ನು.''

''ಇದರಲ್ಲಿ ನಿನ್ನ ಬ್ಯಾಂಕಿನವರದ್ದೂ, ನಿನ್ನ ಅಂಕಲ್‌ದೂ ತಪ್ಪೇನಿಲ್ಲ.''

''ಹಾಗಾದರೆ ನಮ್ಮ ಅಪ್ಪಂದೇ ತಪ್ಪು..'' ತಟಕ್ಕನೇ ನುಡಿದಳು.''

''ಹಾಗಾದರೆ ಅವರಿಗೂ ಫೋನ್ ಮಾಡಿ ಬಿಡು..''

''ಇಲ್ಲ, ನನಗೆ ಅವರ ಹತ್ತಿರ ಮಾತನಾಡೊಕ್ಕೆ ಇಷ್ಟವಿಲ್ಲ.''

''ನಾನು ಮಾತನಾಡ್ತೀನಿ, ಅವರ ನಂಬರ್ರು ಏನು!..''

''ನನ್ನ ಹತ್ತಿರ ಅವರ ನಂಬರು ಇಲ್ಲ.''

''ಇದೇನು ವಿಚಿತ್ರ ತಂದೆಯ ಮನೆಯ ನಂಬರ್ರು ಗೊತ್ತಿಲ್ಲ ಎಂದರೆ..''

''ಅದಕ್ಕೆ ಕಾರಣವೂ ಇದೆ. ಆದರೆ ಅದನ್ನು ನಾನು ನಿಮಗೇಕೆ ಹೇಳಲಿ!''

''ಬೇಡ ಬಿಡು. ಈಗೇನು ಮಾಡೋಣ ಹೇಳು..?''

''ಮೊದಲು ನನ್ನನ್ನು ಇಲ್ಲಿಂದ ಎಲ್ಲಿಗಾದರೂ ಕರೆದುಕೊಂಡು ಹೋಗಿ ಬಿಟ್ಟು ಬಿಡಿ.. ನನ್ನ ಪಾಡನ್ನು ನೋಡಿಕೊಳ್ಳುತ್ತೇನೆ..''

''ಒಬ್ಬಳೇ..? ಹಾಸ್ಟೆಲ್ಲಿಗೆ ಹೋಗ್ತೀಯಾ?''

''ಕೈಯಲ್ಲಿ ಹಣವಿಲ್ಲದೇ ಹಾಸ್ಟೆಲ್ಲಿಗೆ ಹೋದರೆ, ಅವರೆಲ್ಲಾ ಆಡಿಕೊಂಡು ನಗ್ತಾರೆ.''

''ಯಾರು! ಯಾಕೆ ನಗ್ತಾರೆ!''

''ಅಕ್ಕ ಪಕ್ಕದ ರೂಮಿನ ಹುಡುಗಿಯರು. ಅವರಿಗೆಲ್ಲ ದುಡ್ಡು ಕೊಡಬೇಕು.'' ಅವಳು ಅಳತೊಡಗಿದಾಗ ಅವನಿಗೆ ವ್ಯಥೆ ಎನಿಸಿತ್ತು.

''ಅಳುವಂಥಾದ್ದು ಏನಾಯ್ತು ಈಗ? ಎಲ್ಲರೂ ನಮ್ಮನ್ನೇ ನೋಡ್ತಾರೆ. ಮೊದಲು ಇಲ್ಲಿಂದ ಹೋಗೋಣ ನಡೀ.. ದಿನೇಶ ಇವಳನ್ನು ನರ್ಸಿಂಗ್ ಹೋಂಗೆ ಕರೆದುಕೊಂಡು ಹೋಗು, ನಾನು ಇವಳ ತಂದೆಯ ಮನೆಗೆ ಹೋಗಿ ಬರ್ತೀನಿ..''

ಅವಳು ಅಚ್ಚರಿಯಿಂದ ಅವನನ್ನೇ ನೋಡಿದಳು. ''ನಿಮಗೆ ನನ್ನ ತಂದೆಯ ಪರಿಚಯವಿದೆಯೆ! ಮನೆ ಗೊತ್ತೆ!''

“ಹುಂ ಗೊತ್ತಿಲ್ಲರ್ದೆ ಏನು!.. ನೀನು ಚಿಕ್ಕವಳಾಗಿದ್ದಾಗ ನಾನು ಬಂದಿದ್ದೆ”

“ಸುಳ್ಳು, ನಾನು ನಂಬೊಲ್ಲ, ನನಗೆ ನಿಮ್ಮನ್ನು ನೋಡಿದ ನೆನಪಿಲ್ಲ.”

“ಹಾಗೇ.. ಎಷ್ಟೋ ವರ್ಷಗಳು ಕಳೆದು ಹೋದರೆ ಯಾವ ನೆನಪೂ ಇರುವುದಿಲ್ಲ, ಬಹುಶಃ ಈಗ ನಿನ್ನ ತಂದೆಯ ನಿನಪೂ ಇಲ್ಲವೇನೋ..”

ಅವಳ ಮುಖ ಕೆಂಪಾಯಿತು. ನಾಚಿಕೆಯೋ, ಅವಮಾನವೋ ತಿಳಿಯಲಿಲ್ಲ.

“ಹಾಗಾದರೆ ನಮ್ಮ ಮನೆಯ ವಿಚಾರವೆಲ್ಲಾ ನಿಮಗೆ ಗೊತ್ತೇ..”

“ಕೆಲವು ಗೊತ್ತು. ಕೆಲವು ಗೊತ್ತಿಲ್ಲ.”

“ನಿಜವಾಗಿಯೂ ನೀವು ನನ್ನ ಕಸಿನ್ನಾ.. ಇದುವರೆಗೂ ಎಲ್ಲಿದ್ರಿ? ” ಸಂಶಯವಿತ್ತು ದನಿಯಲ್ಲಿ.”

“ಅದೆಲ್ಲ ದೊಡ್ಡ ಕತೆ. ನಿಧಾನವಾಗಿ ಮಾತನಾಡೋಣ. ಈಗ ಮೊದಲು ಆಸ್ಪತ್ರೆಗೆ ಹೋಗು, ದುಡ್ಡು ಬೇಕು ಅಂದೆಯಲ್ಲ..” ಎಂದು ನೂರರ ಎರಡು ನೋಟನ್ನು ಅವಳ ಕೈಗಿತ್ತ. “ನನ್ನ ಹತ್ತಿರ ಈಗ ಇರುವುದು ಇಷ್ಟೇ.. ಇನ್ನು ಬೇಕಾದರೆ ನಾಳೆ ತಂದು ಕೊಡ್ತೀನಿ..” ಅವಳು ಮಾತನ್ನಾಡಲಿಲ್ಲ.

ಇವಳು ಅಪ್ಸೆಟ್ ಆಗಿದಾಳೆ. ದಿನೇಶನ ಕಣ್ಣು ತಪ್ಪಿಸಿ, ಎಲ್ಲಿಗಾದರೂ ಓಡಿ ಹೋದರೇನು ಮಾಡುವುದು ಎಂದುಕೊಂಡು, ತಾನೂ ಅವರಿಬ್ಬರ ಜತೆಯಲ್ಲಿ ಹೊರಟ. ಅವಳನ್ನು ಅವಳ ವಾರ್ಡಿಗೆ ತಲುಪಿಸಿದ ಮೇಲೆ, ಡಾಕ್ಟರ ಹತ್ತಿರ ಮಾತನಾಡಿದ.

“ನನಗೆ ಗೊತ್ತು, ಅಪ್ಸೆಟ್ ಆಗಿದಾಳೆ ಅಂತ. ಇವತ್ತು ಸ್ವಲ್ಪ ಕಿರಿಕಿರಿ ಮಾಡ್ತಾಳೆ, ನಮ್ಮ ನರ್ಸುಗಳು ನೋಡಿಕೊಳ್ತಾರೆ ಬಿಡಿ.” ಅವಳ ಮನಸ್ಸನ್ನು ಶಾಂತಗೊಳಿಸಲು, ನಿದ್ದೆಯ ಇಂಜೆಕ್ಷನ್ ಕೊಟ್ಟು ಮಲಗಿಸಿದರು. “ಪರವಾಗಿಲ್ಲ, ನೀವು ಸಾಯಂಕಾಲಕ್ಕೆ ಬನ್ನಿ..” ಕಲಕಿದ ಮನಸ್ಸಿನಿಂದ ಅಶೋಕ ಮನೆಗೆ ಬಂದ. ಮಾರನೇ ದಿನ ತಾನು ಹೋಗದೇ, ದಿನೇಶನಿಗೆ ಹೋಗಿ ಬರುವಂತೆ ಹೇಳಿದ.

“ಈಚೆಗೆ ಮೆಡಿಕಲ್ ಸ್ಟೋರ್ಸ್ ಕಡೆ ಗಮನಾನೇ ಕೊಡೊಕ್ಕಾಗ್ತಿಲ್ಲ. ಹೀಗೆ ಮಾಡಿದರೆ ಪಾಪರ್ ಆಗ್ತೀನಿ ಅಷ್ಟೇ..”

“ನಿನಗೆ ಫೇವರ್ ಮಾಡಿದರೆ ನಾನು ಉದ್ಧಾರ ಆಗ್ತೀನಿ ಅಂತ ಅಂದ್ಕೊಂಡ್ಯಾ? ನನ್ನ ಸ್ಟುಡಿಯೋದಲ್ಲಿ ತಾನೇ ಯಾರಿದಾರೆ!”

“ಗೋಡೆಗೆ ಅಂಟಿ ಕೂತಿರುವ ಅನೇ ಮುದುಗಿಯರಿದಾರೆ. ಅವರೇ ನೋಡಿಕೊಳ್ತಾರೆ ಬಿಡು.”

“ಚೆನ್ನಾಗಿದೆ ನಿನ್ನ ಜೋಕು. ನನ್ನ ಹೆಂಡತಿ ಫ್ರೀಯಾಗಿದಾಳೆ. ಅವಳನ್ನು ಹೋಗಿ ಬಾ ಎಂದರೆ..?”

“ಅವರಿಗೆ ಬೇಸರವಿಲ್ಲದಿದ್ದರೆ ಹೋಗಲಿ. ನಮ್ಮ ಈ ಫಜೀತಿಗೆ ಅವರನ್ನು ಏಕೆ ಎಳೀಬೇಕು..?”

“ಮನೇಲಿ ಕೂತು ಏನು ಮಾಡ್ತಾಳೆ? ಸ್ವಲ್ಪ ಸಮಾಜಸೇವೇನೂ ಮಾಡಲಿ.”

“ಸ್ವಲ್ಪ ಆ ಹುಡುಗಿಯ ಬಗ್ಗೆ ಮೊದಲೇ ತಿಳಿಸಿಬಿಡು.. ಏನಾದರೂ ಹೆಚ್ಚು ಕಡಿಮೆ ಆದೀತು..”

“ಅದೂ ಸರಿ.. ನಾನು ಮನೆಗೆ ಹೋಗಿ ಅವಳನ್ನು ಕರೆದುಕೊಂಡು ನರ್ಸಿಂಗ್ ಹೋಂಗೆ ಬಿಟ್ಟು ಬರ್ತೀನಿ. ನಿನ್ನ ಸ್ಕೂಟರನ್ನು ಕೊಟ್ಟಿರು.”

“ಹುಂ, ತಗೊಂಡು ಹೋಗು” ಎಂದು ಬೀಗದ ಕೈಯನ್ನು ಕೊಟ್ಟ, ಅಷ್ಟರಲ್ಲಿ ಫೋನು ಟ್ರಿನ್ ಗುಟ್ಟಿತು. “ಹಲೋ” ಎಂದ. ಆಕಡೆಯಿಂದ ಆ ಏಜೆಂಟ್ ಮಾತನಾಡಿದ್ದ. “ಥೂ” ಇವನೊಬ್ಬಎಂದುಕೊಂಡು, “ನೀನು ಮಾತನಾಡು, ನನಗೆ ಬೇಜಾರು” ಎಂದು ದಿನೇಶನ ಕೈಗಿತ್ತ.

“ಅವನಿಗೆ ಅರ್ಜೆಂಟಾಗಿ ಹಣ ಬೇಕಂತೆ. ತುಂಬಾ ಕಷ್ಟದಲ್ಲಿದಾನಂತೆ.”

“ನಾವೇನು ಸುಖವಾಗಿದೀವೆಯೆ! ನಾನೀಗ ಎಲ್ಲಿಂದ ತರಲಿ!”

ದಿನೇಶ ಪೆಚ್ಚಾದ. “ಅವಳ ಮನೆ ಅಡಿಗೆಯವರಿಗೆ ಸೂಚ್ಯವಾಗಿ ಹೇಳಿದರೆ..?”

“ಬೇಡ, ಅವರುಗಳಿಗೆ ಈಗಲೇ ಏನನ್ನು ತಿಳಿಸುವುದು ಬೇಡ. ನಾನೀಗಲೇ ಹೋಗಿ ಅವನ ಹತ್ತಿರ ಮಾತನ್ನಾಡ್ತೀನಿ. ಅವನ ಆಫೀಸಿನ ಹತ್ತಿರ ನನ್ನನ್ನು ಇಳಿಸಿ ನೀನು ಮನೆಗೆ ಹೋಗು.”

ಆ ಏಜೆಂಟ್ ಇವನನ್ನು ಕಂಡೊಡನೆ ಕೈ ಕೈ ಮುಗಿದು ಕೇಳಿಕೊಂಡ.” ನಮ್ಮ ಕೆಲಸದವರಿಬ್ಬರಿಗೆ ಆಕ್ಸಿಡೆಂಟ್ ಆಗಿ ಸೀರಿಯಸ್ ಕಂಡೀಷನ್‌ನಲ್ಲಿದಾರೆ.. ನನಗೆ ಹಣ ಬೇಕೇ ಬೇಕು.”

“ಆಗಲೇ ಹೇಳಬಾರದಾಗಿತ್ತಾ?”

“ನೀವಿಲ್ಲ ಎಂದರು, ಅವರು ಯಾರೋ..”

“ಸರಿ, ನಾನು ಸಾಯಂಕಾಲ ಹಣವನ್ನು ಹೊಂದಿಸಿ, ನಾಳೆ ಬೆಳಿಗ್ಗೆ ತಂದುಕೊಡ್ತೀನಿ. ನೀವು ಮತ್ತೆ ಮತ್ತೆ ಫೋನು ಮಾಡಬೇಡಿ.”

“ತ[illegible]ಪ್ಯಾಪ.. ” ಮತ್ತೆ ಕೈ ಮುಗಿದ. ಇವನು ಗಮನಿಸದವನಂತೆ ಬಸ್ಸು ಹಿಡಿದು[illegible]ಗೆ ಬಂದ. ಸುಧಾ ಕೆಲಸದಿಂದ ಬರುವುದನ್ನೇ ಎದುರು ನೋಡುತ್ತಾ ಕೂತ.. ದಿನೇ[illegible]ಸಧಾನ ಮಾಡುತ್ತಿದ್ದಾಳೆನ್ನಿಸಿತ್ತು. ಅವಳು ಬಂದ ಮೇಲೆ ತಾಯಿಗೆ ತಿಳಿಯದಂತೆ, ಹ[illegible]ದ ಬಗ್ಗೆ ಮಾತನಾಡಿದ್ದ. ಹೀನಾಯದಿಂದ ಮುಖ ಮುದುಡಿತ್ತು. ಅವನ ಮುಖ ನೋಡಿ, ಅವಳು ಕಾರಣವನ್ನು ವಿಚಾರಿಸದೇ ಒಂದು ಚೆಕ್ ಬರೆದು ಕೊಟ್ಟಳು. ಚೆಕ್

ಹಾಳೆಯನ್ನು ಹಿಡಿಯುವ ಶಕ್ತಿಯೂ ಕೈ ಬೆರಳುಗಳಿಗೆ ಇಲ್ಲವೇನೋ ಎಂಬಂತೆ ಕೈ ನಡಗುತ್ತಿತ್ತು.

''ಈಗೊಂದು ಸ್ವಲ್ಪ ದಿನದಿಂದ ನೀನು ಏನೋ ಒಂದು ತರಹ ಇದೀಯ. ಏನೋ ಭಾರಿ ಸಮಸ್ಯೆ ಇರಬಹುದು. ನನಗೆ ಪೇಳಬಹುದಾದರೆ ಹೇಳು.. ನನ್ನ ಕೈಲಾಗುವುದಾದರೆ ನಾನ ನಿನಗೆ ಸಹಾಯ ಮಾಡ್ತೀನಿ.'' ಸುಧಾ ಕಳಕಳಿಯಿಂದ ವಿಚಾರಿಸಿದ್ದಳು.

''ಸಧ್ಯಕ್ಕೆ ಈ ಸಹಾಯ ಸಾಕು. ಸಮಯ ಬಂದಾಗ ನಾನೇ ಎಲ್ಲಾ ಹೇಳ್ತೀನಿ.'' ಮನೆಯಲ್ಲಿರಲು ಸಾಧ್ಯವಿಲ್ಲ, ಅಂಗಡಿ ತೆಗೆಯಲು ಮನಸ್ಸಿಲ್ಲ, ಆಸ್ಪತ್ರೆಗೆ ಹೋಗಲು ಇಷ್ಟವಿಲ್ಲ ಎಂದುಕೊಂಡು, ವಂಶಿಯನ್ನು ಎತ್ತಿಕೊಂಡು ಸಮೀಪದಲ್ಲಿದ್ದ ಪಾರ್ಕಿಗೆ ಬಂದ.

ಯಾವುದೋ ಮಗು ಅತ್ತ ಧ್ವನಿ ಕೇಳಿ ಪಕ್ಕಕ್ಕೆ ತಿರುಗಿ ನೋಡಿದ. ಬಿದ್ದು ಪೆಟ್ಟು ಮಾಡಿಕೊಂಡಿದ್ದ ಆ ಹುಡುಗಿ ಅಳುತ್ತಿತ್ತು. ಅಕ್ಕ ಪಕ್ಕ ಜತೆಯಲ್ಲಿ ಯಾರೂ ಇದ್ದಂತೆ ಕಾಣಲಿಲ್ಲ. ತಾನೇ ಎತ್ತಿ ಕಲ್ಲು ಬೆಂಚಿನ ಮೇಲೆ ಕೂರಿಸಿ, ಕೈ ಮೈನ ಧೂಳನ್ನು ಒರೆಸಿದ. ಆ ಹುಡುಗಿ ಅಳುತ್ತಲೇ ಇತ್ತು. ಅಷ್ಟರಲ್ಲಿ ಕೆಲಸದ ಹುಡುಗಿ ಎಲ್ಲಿಂದಲೋ ಓಡಿ ಬಂತು. ಗಾಬರಿಯ ಮುಖ, ಆ ಹುಡುಗಿಯನ್ನು ಕಂಡು ಅರಳಿತು.

''ಇಲ್ಲಿದೀಯ.. ಎಲ್ಲಿ ಹೋದ್ಯೋ ಅಂತ ಹೆದರಿದ್ದೆ..'' ಎತ್ತಿಕೊಳ್ಳಲು ಬಂದಳು.

''ತಡಿ, ಹೀಗೇನಾ ನೀನು ನೋಡಿಕೊಳ್ಳುವುದು ? ಒಂದನ್ನೇ ಬಿಟ್ಟು ಎಲ್ಲಿಗೆ ಹೋಗಿದ್ದೆ ನೀನು..?'' ಅಶೋಕ ಗದರಿಸಿದ್ದ.

''ಏಯ್ ಬಿಡಿ ಸಾರ್, ಮನೆಯವರೇ ನನ್ನನ್ನು ಏನೂ ಅನ್ನಲ್ಲ, ನೀವ್ಯಾರು ನನ್ನನ್ನು ಅನ್ನಕ್ಕೇ..?

''ಏನಂದೆ! ನಿನಗೆಷ್ಟು ಕೊಬ್ಬು! ಈಗಲೇ ನಿನ್ನ ಮನೆಯವರಿಗೆ ಹೇಳಿ, ನಿನ್ನನ್ನು ಕೆಲಸದಿಂದ ಓಡಿಸ್ತೀನಿ.. ನೋಡ್ತಿರು''

''ಹುಂ, ಓಡಿಸಿ ನೋಡೋಣ.. ಯಾರು ಸಿಗ್ತಾರೆ ಬೇರೆ.. ಅವರಿಗೆ..''

''ಮಾತನಾಡಬೇಡ ನಡೀ.. ಎಲ್ಲಿ ಅವರ ಮನೆ ತೋರಿಸು.. ವಂಶಿಯನ್ನು ಎತ್ತಿಕೊಂಡು ಹೊರಟೇಬಿಟ್ಟ, ಆ ಹುಡುಗಿ ಹೆದರಿ, ಆ ಮಗುವನ್ನು ಅಲ್ಲಿಯೇ ಬಿಟ್ಟು ಓಡಿ ಹೋಯಿತು. ಇವನು ಕೂಗುತ್ತಲೇ ಇದ್ದ. ಅಳುತ್ತಿದ್ದ ಹುಡುಗಿಯನ್ನು ಸಮಾಧಾನಗೊಳಿಸಿ, ಒಂದು ಕಡಲೇ ಕಾಯಿ ಪೊಟ್ಟಣವನ್ನು ಕೊಡಿಸಿ ಕೊಟ್ಟ, ಒಂದೊಂದೇ ಕಾಯನ್ನು ಬಿಡಿಸಿ, ವಂಶಿಗೂ ತಿನ್ನಿಸಿ, ಆ ಹುಡುಗಿಗೂ ಕೊಟ್ಟ. ಯಾರೋ ಓಡಿ ಬರುತ್ತಿರುವ ಸಪ್ಪಳವಾಗಲು ತಿರುಗಿ ನೋಡಿದ. ದೂರದಲ್ಲಿ ಓಡಿ ಬರುತ್ತಿದ್ದ ಹೆಂಗಸು, ಇವನನ್ನು ನೋಡಿದೊಡನೆ, ನಡಿಗೆಯ ಗತಿಯನ್ನು ಕಡಿಮೆ ಮಾಡಿದಳು. ಹತ್ತಿರ ಬಂದು ನಿಂತು ಏದುಸಿರು ಬಿಡುತ್ತಾ ''ಅರೇ ನೀನಾ ನಾನು ಹೆದರಿಬಿಟ್ಟಿದ್ದೆ'' ಎಂದಳು.

ಅಶೋಕ ಗಂಭೀರನಾದ.. ''ಶುಭಾ.. ಯಾಕೆ ಏನಾಯ್ತು!'' ಕೇಳಿದ್ದ.

ಬೆಂಚಿನ ಮೇಲೆ ಕುಳಿತಿದ್ದ ಮಗಳನ್ನು ಎತ್ತಿಕೊಂಡು, "ಕೆಲಸದ ಹುಡುಗಿ ಬಂದು ಏನೇನೋ ಹೇಳ್ತು, ಹೆದರಿ ಓಡಿ ಬಂದೆ.."

"ನಿನ್ನ ಮಗಳಾ! ಆ ಹುಡುಗಿ ತಾನೇನು ಮಾಡಿದೆ ಅಂತ ಹೇಳಲಿಲ್ವಾ! ಅಂಥೋರ ಜತೆ ಮಕ್ಕಳನ್ನು ಕಳಿಸಬಾರದು.."

"ಏನು ಮಾಡಲಿ! ಸದಾ ನಾನೇ ತಿರುಗಾಡಿಸುವುದಕ್ಕಾಗೊಲ್ಲ.. ಇದನ್ನಾದರೂ ಸರಿಯಾಗಿ ಮಾಡಬೇಡವೆ! ಇವತ್ತೇ ಬಿಡಿಸ್ತೀನಿ. ಅವಳನ್ನು..ಏನು ಮಾಡಿದಳು ಅವಳು?"

"ಆ ಹುಡುಗಿಯ ಮೇಲೆ ನನಗೆ ದ್ವೇಷವಿಲ್ಲ, ಸರಿಯಾಗಿ ಬುದ್ಧಿ ಹೇಳು ಸಾಕು.."

ಅವಳ ಗಮನ ವಂಶಿಯ ಕಡೆ ಹರಿಯಿತು.

"ಇವನು ಪ್ರತಾಪನ ಮಗನಲ್ವೆ? ಎಷ್ಟು ಬೆಳೆದುಬಿಟ್ಟಿದಾನೆ.." ಗಲ್ಲವನ್ನು ಸವರಿಸಿದಳು.

"ಹುಂ, ಬೆಳೆಯುವ ವಯಸ್ಸು.." ಎಂದು ವಂಶಿಯನ್ನು ಎತ್ತಿಕೊಂಡು ಹೊರಟ.

"ಯಾಕೆ ಅಶೋಕ? ನನ್ನೊಡನೆ ಒಂದೆರಡು ಮಾತನಾಡುವ ವ್ಯವಧಾನವೂ ಇಲ್ಲವೆ ನಿನಗೆ!" ಹಿಂದೆ ಹಿಂದೆ ಬೇಗ ಬಂದು ಕೇಳಿದಳು.

"ಏನಿದೆ ಮಾತು!" ಪ್ರಶ್ನಿಸಿದ. ದನಿಯಲ್ಲಿ ಅಲಕ್ಷ್ಯವಿತ್ತು.

"ಹಿಂದೆಲ್ಲಾ ಎಷ್ಟು ಮಾತನಾಡ್ತಿದ್ದೆ? ಅದನ್ನೆಲ್ಲ ಮರೆತು ಬಿಟ್ಟೆಯಾ?"

"ಮರೆಯಲೇ ಬೇಕಾಯ್ತು. ಅದಕ್ಕೇ ಕಾರಣ ನಾನಲ್ಲ"

"ನಾನೇ ಕಾರಣ. ನನಗೆ ಗೊತ್ತು. ನನ್ನ ಮೇಲಿನ ಕೋಪ ಇನ್ನು ಕಡಿಮೆಯಾಗಿಲ್ಲ ನನಗೆ ಅಂತ ಕಾಣುತ್ತೆ."

"ಸಂಬಂಧವೇ ಇಲ್ಲದವರ ಸಂಗಡ ಕೋಪವೆಲ್ಲಿ ಬಂತು!"

"ನಾನು ಹೇಗಿದೀನಿ? ಎಲ್ಲಿದ್ದೀನ ಅಂತ ತಿಳಿದುಕೊಳ್ಳುವ ಕುತೂಹಲವೂ ಇಲ್ಲವೆ!"

"ಇಲ್ಲ, ಅದರಲ್ಲೇನೂ ಆಸಕ್ತಿ ಇಲ್ಲ ನನಗೆ."

"ತುಂಬಾ ಒರಟಾಗಿ ಮಾತನಾಡ್ತೀಯಪ್ಪಾ, ಮೊದಲು ಹೀಗಿರಲಿಲ್ಲ ನೀನು." ಅಶೋಕ ಉತ್ತರಿಸದೇ ಹೆಜ್ಜೆಗಳನ್ನು ಹಾಕಿದ. "ಒಂದು ನಿಮಿಷ ನಿಂತ್ಕೋ ಪ್ಲೀಸ್" ಎಂದಳು ಹಿಂದಿನಿಂದ. ನಿಂತ. ತಿರುಗಿ ನೋಡಲಿಲ್ಲ. ಅವಳೇ ಅವನ ಮುಂದೆ ಬಂದು ನಿಂತಳು. "ನಾನು ಸುಧಾನ ಹತ್ತಿರ ಒಂದು ವಿಷಯ ಮಾತನಾಡಿದ್ದೆ. ಅವಳು ನಿನಗೆ ಹೇಳಲಿಲ್ಲವೆ?" ಕೇಳಿದಳು. "ಇಲ್ಲ, ನನಗೇನೂ ತಿಳಿಯದು" ಎಂದು ಹೇಳಿ ತನ್ನ ಪಾಡಿಗೆ ತಾನು ತಿರುಗಿ ನೋಡದೆ ಮುಂದೆ ಮುಂದೆ ಬಂದು ಬಿಟ್ಟ.

ಇರುವ ತಲೆ ಬಿಸಿ ಸಾಲದು ಅಂತ ಇವಳು ಬೇರೆ ಸಿಕ್ಕಬೇಕೆ? ಎಂದುಕೊಂಡ. ಬೇಡ ಬೇಡವೆಂದರೂ, ಅವಳಾಡಿದ ಮಾತುಗಳು ಅವನನ್ನು ಕದಡುತ್ತಿದ್ದವು.

ವಂಶಿಯನ್ನು ಮಲಗಿಸಲು ಸುಧಾ ಒಳಗೆ ಬಂದಾಗ ಸಿಟ್ಟಿನ ದನಿಯಲ್ಲಿ ಕೇಳಿದ್ದ "ಶುಭಾ ನಿನ್ನ ಹತ್ತಿರ ಏನು ಹೇಳಿದಾಳೆ!"

"ಯಾವ ಶುಭಾ..?"

"ಶುಭಾ ಅಂದರೆ ಶುಭಾ.. ನಿನ್ನ ಹತ್ತಿರ ಏನು ಮಾತನಾಡಿದಾಳೆ ಅಂತ ಕೇಳಿದೆ. ನೀನೇಕೆ ನನಗೆ ಹೇಳಲಿಲ್ಲ..?"

"ಓ ಆ ವಿಷಯಾನ? ನಾನು ಮರೆತೇಬಿಟ್ಟಿದ್ದೆ"

"ಮರೆತೆಯೋ, ಮರೆ ಮಾಚಿದೆಯೋ.. ಈಗ ಜ್ಞಾಪಿಸಿದೀನಲ್ಲ, ಅದೇನು ಅಂತ ಹೇಳು."

"ಈಚೆಗೆ ನೀನು ಒಂದು ತರಹ ಇದ್ದೆ.. ಅದಕ್ಕೇ ಹೇಳಲಿಲ್ಲ."

"ನಾನು ಹೇಗಿದ್ದರೇನು? ಬೇಕಾದ ವಿಷಯವನ್ನು ಮಾತನಾಡದೇ ಬಿಟ್ಟಿದೀಯಾ? ಅವಳೇನು ಹೇಳಿದಾಳೆ, ಹೇಳು.." ಒತ್ತಾಯಿಸಿದ.

"ನಾನು ಹೇಳುವುದಿಲ್ಲ, ನನಗಿಷ್ಟವಿಲ್ಲ"

"ಸುಧಾ.. ನೀನು ನನ್ನ ಅತ್ತಿಗೆ.. ಶುಭಾ ನನಗೆ ಏನೂ ಅಲ್ಲ.. ನೀವಿಬ್ಬರೂ ಒಂದಾಗಿ ಈಗ ನನಗೇ ಹೇಳೊಲ್ಲ ಅಂತೀಯಲ್ಲ, ಹೀನಾಯವಾಗುವುದಿಲ್ಲವೇ ನಿನಗೆ? ನನ್ನ ಮೇಲಿನ ಕೋಪಾನ ಹೀಗೆ ತೀರಿಸಿಕೊಳ್ತಿದೀಯಾ?"

"ಇಲ್ಲ, ಅಶೋಕ್, ನನಗೆ ನಿನ್ನ ಮೇಲೆ ಕೋಪವಿಲ್ಲ, ನನ್ನನ್ನು ನಂಬು."

"ಅವಳು ಏನು ಆಡಿದಳು ಅಂತ ನೀನು ಹೇಳಿದರೆ, ನಿನ್ನನ್ನು ನಂಬ್ತೀನಿ, ಇಲ್ಲದಿದ್ದರೆ ಇಲ್ಲ."

"ಪ್ಲೀಸ್ ಬಲವಂತಪಡಿಸಬೇಡ, ಬರೀ ಅನಾವಶ್ಯಕವಾದ ಮಾತು.."

"ಆ ಮಾತು ಏನೇ ಇರಲಿ.. ನನಗೆ ನೀನು ಹೇಳಲೇಬೇಕು.."

"ಹಾಗಾದರೆ ನಾಳೆ ಹೇಳ್ತೀನಿ. ಈಗ ಬೇಡ.. ನಾನು ಬೆಳಿಗ್ಗೆ ಕೆಲಸಕ್ಕೆ ಹೋಗಬೇಕು.. ಹೊತ್ತಾಯ್ತು ಮಲಗಬೇಕು."

"ನಾನು ನಿನ್ನನ್ನು ನನ್ನ ಆಪ್ತ ಸ್ನೇಹಿತೆ ಅಂತ ತಿಳಿದುಕೊಂಡಿದೀನಿ. ನಾಳೆ ನೀನು ಹೇಳದಿದ್ದರೆ, ನನ್ನ ನಿನ್ನ ಸ್ನೇಹ ನಾಳೆಗೇ ಕೊನೆ. "ಹುಂ, ಹೋಗು" ಎಂದು ತಾನಾಗಿಯೇ ಅವಳನ್ನು ಕಳಿಸಿದ.

ಮಂಚದ ಮೇಲೆ ಮಲಗಿ, "ಸಧ್ಯ ಬಚಾವಾದೆ ಇವತ್ತಿಗೆ, ಎಂದುಕೊಂಡರೂ, ನಾಳೆ ಹೇಗಪ್ಪಾ ಅವನಿಗೆ ತಿಳಿಸುವುದು ಎಂದು ಯೋಚಿಸಿದಳು.

ಅಶೋಕನಿಗೆ ಅವಳ ಮೇಲೂ ತುಸು ಕೋಪ ಬಂದಿತ್ತು. "ಎಲ್ಲಾ ವಿಷಯಗಳಿಗೂ ನಾನು ಬೇಕು, ಆದರೆ ಈಗೇಕೆ ಹೇಳಲಿಲ್ಲ.. ಏನಿದು ಅಂತ.. ಚೆನ್ನಾಗಿ ದಬಾಯಿಸಿ

ತಿಳಿದುಕೊಂಡು ಬಿಡಬೇಕಾಗಿತ್ತು.. ತಾನೇ ಈಗ ಹೋಗಿ ಮತ್ತೆ ಕೇಳಿ ತಿಳಿದುಕೊಳ್ಳಲೇ ಅಂತ ಸಹ ಅಂದುಕೊಂಡ.. ಎದ್ದು ಹೊರಟವನನ್ನು ಬುದ್ಧಿ ಎಚ್ಚರಿಸಿತು.. ವಂಶಿ ಇಲ್ಲೇ ಇದಾನೆ.. ಒಂದು ವೇಳೆ, ಅಮ್ಮನೋ, ಅಪ್ಪನೋ, ಅಲ್ಲೇಕೆ ಹೋಗಿದ್ದೆ ಎಂದು ಕೇಳಿದರೆ..?'' ನಾಳೆವರೆಗೂ ತಡೆದರಾಯಿತು ಎಂದು ತನಗೆ ತಾನೇ ಹೇಳಿಕೊಂಡು ಮತ್ತೆ ಮಲಗಿದ.

ಬೆಳಿಗ್ಗೆ ಅವನು ಏಳುವ ಹೊತ್ತಿಗೆ, ಸುಧಾ ಕೆಲಸಕ್ಕೆ ಹೊರಡುವ ಆತುರದಲ್ಲಿದ್ದಳು.. ಇವನು ಒಂದೆರಡು ಸಲ ಓರೆಗಣ್ಣಿನಿಂದ ಅವಳ ಕಡೆ ನೋಡಿದ. ಹೊರಡುವ ಮುಂಚೆ, ಅವನ ಕೈಗೆ ಮಡಿಚಿದ ಕಾಗದವನ್ನಿತ್ತು. ''ಇದನ್ನು ಓದು'' ಎಂದಷ್ಟೇ ಹೇಳಿ ಹೊರಟು ಹೋದಳು. ರೂಮಿನ ಕಿಟಕಿಯ ಬಳಿ ನಿಂತು ಕಾಗದದ ಮಡಿಕೆಯನ್ನು ಬಿಡಿಸಿ.

''ಶುಭಾ, ಅವಳ ಗಂಡನ ಮನೆಯಲ್ಲಿ ಸುಖವಾಗಿಲ್ಲವಂತೆ. ಡೈವೋರ್ಸ್ ತೆಗೆದುಕೊಳ್ಳುತ್ತಾಳಂತೆ, ನಿನ್ನ ಮದುವೆ ಹೇಗೂ ಆಗಿಲ್ಲವಲ್ಲ, ಅದಕ್ಕೆ ಮತ್ತೆ ನಿನ್ನನ್ನೇ ಮದುವೆ ಆಗುತ್ತೀನಿ.. ಅವನು ನನ್ನನ್ನು ಪ್ರೀತಿಸಿದ್ದ ಆ ಪ್ರೀತಿ ಈಗಲೂ ಇರುವುದರಿಂದಲೇ. ಹಾಗೆ ಇದಾನೆ.. ಅವನ ಮನಸ್ಸಿನಲ್ಲಿ ಏನಿದೆ ಅಂತ ತಿಳಿದು ಹೇಳಿ ಅಂದಿದ್ದಳು. ಈ ವಿಷಯವನ್ನು ನಾನು ನಿನ್ನನ್ನು ಹೇಗೆ ಕೇಳಬೇಕಾಗಿತ್ತು? ನೀನೇ ಹೇಳು...?

ಕಾಗದವನ್ನು ಪರಪರನೆ ಹರಿದು ಹಾಕಿದ. ಮೈಯೆಲ್ಲ ಉರಿಯುತ್ತಿರುವ ಅನುಭವವಾಗಿತ್ತು. ''ಎಲ್ಲಾ ಇವಳಿಂದಲೇ ಪ್ರಾರಂಭವಾಗಿದ್ದು.. ಎಂತಹ ಹೆಂಗಸು ಇವಳು. ಹೀಗೆ ಅಂತ ಗೊತ್ತಿದ್ದರೆ, ನಾನು ಖಂಡಿತಾ ಅವಳ ಮಾತಿಗೆ ಉತ್ತರಿಸುವುದಿರಲಿ ಎದುರಿಗೂ ನಿಲ್ಲದೇ ಬಂದು ಬಿಡುತ್ತಿದ್ದೆನೋ ಏನೋ..''

ನನ್ನ ಮದುವೆ? ಎಲ್ಲರಿಗೂ ನನ್ನನ್ನೇ ಮದುವೆ ಆಗುವ ಬಯಕೆ. ಏಕೆ? ಬೇರೆ ಯಾರೂ ಇವರ ಕಣ್ಣಿಗೆ ಬೀಳಲಿಲ್ಲವೆ.. ಸುಧಾ... ಶುಭಾ, ಇಬ್ಬರೂ ಈ ಆಸೆ ಇಟ್ಟುಕೊಂಡಿರಬಹುದು ಅಂತ ನಾನು ಖಂಡಿತಾ ಅಂದುಕೊಂಡಿರಲಿಲ್ಲ, ನನಗೆ ಅವಮಾನ ಮಾಡಿ, ಕಟ್ಟಿಕೊಂಡ ಗಂಡನ ಜತೆ ಬಾಳ್ವೆ ನಡೆಸೋಕ್ಕೆ ಆಗದೇ ಡೈವೋರ್ಸ್ ತಗೋತಾಳಂತೆ. ಇಷ್ಟೇ ಇವಳ ಯೋಗ್ಯತೆ.. ನನ್ನ ಅವಳ ಮದುವೆ ಆಗದೇ ಇದ್ದದು ಒಳ್ಳೆಯದೇ ಆಯ್ತು. ಈ ವಿಷಯವನ್ನು ಸುಧಾ ನನ್ನೊಡನೆ ಎದುರಿಗೆ ನಿಂತು ಆಡುವುದು ಸಾಧ್ಯವಿಲ್ಲದೇ ಬರೆದು ತಿಳಿಸಿದ್ದಾಳೇ.. ಅವಳಿಗೆ ಹೀನಾಯವಾಗಿರಬೇಕು. ಅವಳು ಅದೇ ಆಸೆಯನ್ನು ವ್ಯಕ್ತ ಪಡಿಸಿದ್ದಳಲ್ಲವೆ? ಹರಿದ ಚೂರುಗಳನ್ನು ಕಿಟಕಿಯಿಂದಾಚೆ ಎಸೆದು, ಕೈ ಕೊಡವಿಕೊಂಡ. ಆಗ ಇದ್ದಕ್ಕಿದ್ದಂತೆ ನೆನಪಾದವಳು ವನಜಾ..... ಪ್ರೀತಿ ವಾತ್ಸಲ್ಯದಿಂದ ವಂಚಿತಳಾಗಿ, ಮನೆಯಿಂದ ದೂರ, ಆಸ್ಪತ್ರೆಯಲ್ಲಿ ಮಲಗಿರುವ ವನಜಾ.... ಇವರಿಬ್ಬರಿಗಿಂತ ಭಿನ್ನವಾಗಿ ಕಂಡು ಬಂದಳು.

ಪ್ರೀತಿ, ಮದುವೆ, ಸಂಸಾರ.. ಇದನ್ನೆಲ್ಲ ಅಗತ್ಯಕ್ಕಿಂತ ಹೆಚ್ಚಿಗೆ ಅನುಭವಿಸುವ ಸ್ವಾರ್ಥದ ಪರಮಾವಧಿ ಈ ಮನುಷ್ಯ ಅಂತ ಯಾರಿಗೂ ಅನ್ನಿಸಿಲ್ಲವೇ ಇದುವರೆಗೂ.. ಇದನ್ನು ಬಿಟ್ಟು ಬೇರೆ ಪ್ರಪಂಚವೇ ಇಲ್ಲವೇ ಮನುಷ್ಯನಿಗೆ....? ಇದರ ಸುತ್ತ ಮುತ್ತವೇ ಮಾತ್ರ ಸುತ್ತುತ್ತಾನಲ್ಲ..

"ನಿನ್ನದು ಸ್ನಾನ ಆಯ್ತೇನೋ..?" ತಾಯಿ ಕೂಗಿದ್ದಳು. ಇವನು ಮಾತನಾಡದೇ ಟವೆಲ್ಲನ್ನು ಹಿಡಿದು ಬಚ್ಚಲು ಮನೆಗೆ ಹೋದ. ತಾನು ಇವತ್ತು ವನಜಳ ತಂದೆಯ ಹತ್ತಿರ ಎಲ್ಲಾ ಹೇಳಿಬಿಡಬೇಕು.. ಇನ್ನು ಅವರುಂಟು, ಅವಳುಂಟು. ನನಗೇಕೆ ಈ ಸಂಬಂಧ ಪಡದ ವಿಷಯ.. ಸರಸರನೆ ತಿಂಡಿ ಕಾಫಿ ಮುಗಿಸಿ, ಹೊರಡಲು ಸಿದ್ಧನಾಗುತ್ತಿರುವಾಗ, ನೆನ್ನೆ ರಾತ್ರಿ ಸುಧಾ ಕೊಟ್ಟಿದ್ದ ಚೆಕ್‌ನ ನೆಪವಾಯಿತು. ಒಂದು ಗಳಿಗೆ ಅದನ್ನೇ ನೋಡಿದ.. ಏಜೆಂಟನಿಗೆ ತಾನೀಗ ಹಣ ಕೊಡಲೇ ಬೇಕು. ಇಲ್ಲದಿದ್ದರೆ ಅವನು ಏನೇನು ಕಿತಾಪತಿ ಮಾಡ್ತಾನೋ.. ಜಗನ್ನಾಥರಾಯರಿಗೆ ಈ ವಿಷಯ ತಿಳಿದರೆ, ಅವನಿಗೆ ಹಣ ಕೊಡ್ತಾರೋ ಇಲ್ಲವೋ.. ಮನೆಯ ಮಗಳು, ಹಾಸ್ಟೆಲ್ಲಿನಲ್ಲಿ ಎಲ್ಲೋ ಇದ್ದರೂ, ನಿರಾತಂಕವಾಗಿದ್ದವರು, ಅವರು. ಅವರ ಮನಸ್ಸಿನಲ್ಲಿ ಏನಿದೆಯೋ ಅಡಿಗೆಯವರ ಮಾತಿಗೆ ಒಪ್ಪಿ, ನಾನು ಇಷ್ಟು ಮುಂದುವರೆಯಲೇ ಬಾರದಾಗಿತ್ತು. ನಾನೆಂತಹ ಮೂರ್ಖ-ತನ್ನನ್ನೇ ತಾನೇ ಹಳಿದುಕೊಂಡ.

ಸ್ಕೂಟರ್ ದಿನೇಶನ ಮನೆಯಲ್ಲೇ ಇತ್ತು. ಅಲ್ಲಿಗೆ ಹೋದ. ಅವನ ಹೆಂಡತಿ, ಆಶಾ, ನಗು ನಗುತ್ತಾ ಮಾತನಾಡಿದಳು, ಸೊಗಸಾದ ಕಾಫಿ ತಿಂದಿತ್ತಳು.. "ಹತ್ತು ಸಾವಿರ ರೂಪಾಯಿ ಡ್ರಾ ಮಾಡಬೇಕು. ನನ್ನ ಜತೆ ಬಾ.." ದಿನೇಶನ್ನು ಕರೆದಿದ್ದ. ಒಳಗೆ ಹೋಗಿ, ಕಿಲಕಿಲನೆ ನಗುತ್ತಾ ಸರಸವಾಡುತ್ತಿದ್ದವರನ್ನು ಕಂಡು ರೇಗಿತ್ತು. "ನಾನಿಲ್ಲಿ ಒದ್ದಾಡ್ತಿದ್ದೀನಿ.. ಇದೇ ಹೊತ್ತೇ ಇವನಿಗೆ ಸರಸಕ್ಕೆ" ಎಂದುಕೊಂಡು, ಉದ್ವೇಗದಿಂದ ಆಚೆ ಹೋಗಿ ನಿಂತ. ದಿನೇಶ ಬಂದ ಮೇಲೆ ಏನೂ ಮಾತನಾಡದೇ ಸ್ಕೂಟರ್ ಹತ್ತಿ ಇಬ್ಬರೂ ಹೊರಟರು.

ಸುಧಾಳ ಜತೆ, ಅಶೋಕನೂ ಆಗ ಈಗ ಬ್ಯಾಂಕಿಗೆ ಬಂದಿದ್ದುದರಿಂದ ಅಷ್ಟು ದೊಡ್ಡ ಮೊತ್ತವನ್ನು ಕೊಡುವಾಗ, ಬ್ಯಾಂಕಿನವರು ತಡ ಮಾಡಲಿಲ್ಲ. ಹಣದ ಕಟ್ಟನ್ನು ಹೊತ್ತು ಇಬ್ಬರೂ, ಏಜೆಂಟರ ಆಫೀಸಿಗೆ ಬಂದರು.

"ಸಧ್ಯ..ಬಂದರಲ್ಲಾ.. ಹಣ ತಂದಿರಾ?" ಅವನು ಆತುರದಿಂದ ಕೇಳಿದಾಗ, ಅಶೋಕ ಹಲ್ಲು ಕಡಿದು, ಹಣ ಕೊಟ್ಟಿದ್ದ.

"ತುಂಬಾ ಉಪಕಾರವಾಯ್ತು.." ಎಂದು ಅವನು ಮತ್ತೆ ಮತ್ತೆ ನುಡಿದ. ಅಶೋಕ ಸುಮ್ಮನಿದ್ದುದನ್ನು ಕಂಡು ದಿನೇಶನೇ ನುಡಿದಿದ್ದ.

"ಹಣ ತಲುಪಿದೆ ಅಂತ ರಶೀದಿ ಬರೆದುಕೊಡಿ.. ಹಾಗೇ ಆ ಕ್ಯಾಸೆಟ್ಟನ್ನು ಕೊಟ್ಟು ಬಿಡಿ.."

"ನೀವು ಐನೂರು ಅಡ್ವಾನ್ಸ್ ಕೊಟ್ಟಿದ್ದೀರಿ. ಅದನ್ನು ತೆಗೆದುಕೊಳ್ಳಿ" ಎಂದು ಐನೂರು ರೂಪಾಯಿಗಳನ್ನು ಎಣಿಸಿಕೊಟ್ಟಾಗ, ಆಶ್ಚರ್ಯವಾಗಿತ್ತು.

"ಆ ಹುಡುಗಿ ಈಗ ಎಲ್ಲಿದ್ದಾಳೆ.. ಅವರ ತಂದೆ ಹೇಗಿದ್ದಾರೆ!" ಎಂದು, ಅವನು ಅವರುಗಳನ್ನು ವಿಚಾರಿಸಿದಾಗ, "ನಿನಗೇಕೆ ಅದೆಲ್ಲ" ಎಂದು ರೇಗುವ ಹಾಗಾಗಿತ್ತು. ಅವನು ಕೊಟ್ಟ ರಶೀದಿ, ಕ್ಯಾಸೆಟ್‌ಗಳನ್ನು ತೆಗೆದುಕೊಂಡು ಇಬ್ಬರೂ ಹೊರಟರು. ಕಟ್ಟ

ಮುಖದ ಅಶೋಕನನ್ನು ನೋಡಿ, ಒಟ್ಟಿಗೇ ಇಷ್ಟು ಹಣ ಖರ್ಚಾಯಿತಲ್ಲ ಅಂತ ಬೇಸರವೇನೋ ಎಂದುಕೊಂಡ ದಿನೇಶ.

''ವನಜಾಳ ತಂದೆಯ ಮನೆಗೆ ಹೋಗೋಣ ಬಾ..''

''ಏಕೆ! ಇವನಿಗೆ ಹಣ ಕೊಟ್ಟಾಯ್ತಲ್ಲ, ಅಥವಾ ಈ ಹಣಾನ.. ಇಸ್ಕೋಬೇಕಾ ? ''

''ದುಡ್ಡಿನ ವಿಷಯ ಅಲ್ಲ, ಈ ಹಣ ನನಗೆ ವಾಪಸ್ಸು ಬರುತ್ತೆ ಅನ್ನುವ ನಂಬಿಕೆ ನನಗಿಲ್ಲ. ಇಬ್ಬರ ಜಗಳ ಮೂರನೆಯವನಿಗೆ ಲಾಭ ಅಲ್ಲ ಇದು.. ಮೂರನೇಯವನಿಗೆ ನಷ್ಟ..''

''ಯಾಕೋ ಹೀಗೆ ಮಾತನಾಡ್ತಿದೀಯ..?''

''ಮತ್ತಿನ್ನೇನು. ಇದು ನಾನಾಗಿಯೇ ಇರುವೆಯನ್ನು ಮುತ್ತಿಸಿಕೊಂಡ ಹಾಗಾಗಿದೆ. ನಾನು ಈಗಲೇ ಹೋಗಿ ಆತನಿಗೆ ಅವರ ಮಗಳು ಆಸ್ಪತ್ರೆಯಲ್ಲಿದಾಳೆ ಅಂತ ಹೇಳಿ ಬಿಡ್ತೀನಿ. ಅವರು ಏನು ಬೇಕಾದರೂ ಮಾಡಿಕೊಳ್ಳಲಿ.''

''ಆತನಿಗೆ ನಮ್ಮ ಮೇಲೆ ಅನುಮಾನ ಬರುವುದಿಲ್ಲವೇನೋ.. ಯಾರೋ ಅಪರಿಚಿತರಿಗೆ ನಾವೇಕೆ ಒದ್ದಾಡಿದೆವು ಅಂತ ಅಂದುಕೊಂಡರೆ..''

''ಅದು ತಪ್ಪು ಅಂತ ಈಗ ಗೊತ್ತಾಯ್ತು ಅಂತ ಹೇಳಿದರಾಯ್ತು.''

''ಚೆನ್ನಾಯ್ತು, ನಾವು ಮಾಡಿದ್ದು ತಪ್ಪು ಖಂಡಿತಾ ಅಲ್ಲ.. ನಿನಗೆ ಏನೋ ಬೇಸರವಾಗಿದೆ.. ಹಣಾನ ನಿನ್ನ ಅತ್ತಿಗೆ ಕೊಟ್ಟರು ಅಲ್ವಾ? ಯಾವುದೋ ಹುಡುಗಿಗೋಸ್ಕರ ಸಾಲ ಮಾಡಬೇಕಾಗಿ ಬಂತಲ್ಲ ಅಂತ ಚಿಂತೇನಾ.. ನನ್ನ ಹತ್ತಿರ ಇದ್ದಿದ್ದರೆ ನಾನೇ ಕೊಟ್ಟಿರುತ್ತಿದ್ದೆ..''

''ಅದಲ್ಲ, ಇದು ಪ್ರತಾಪನ ದುಡ್ಡು. ಅವಳ ಹೆಸರಿನಲ್ಲಿದೆ.. ಅಷ್ಟೇ.''

''ಸರಿ, ಮತ್ತೆ ಇನ್ನೇನು ಕೊರೀತಿದೆ ನಿನ್ನನ್ನ?''

''ಯಾಕೋ ತುಂಬಾ ಬೇಸರವಾಗಿ ಹೋಗಿದೆ. ಎಲ್ಲಾದರೂ ದೇಶಾಂತರ ಹೋಗಿಬಿಟ್ಟರೆ ಅಂತ ಅನ್ನಿಸ್ತಿದೆ.'' ದಿನೇಶ ಅವನ ಬೆನ್ನ ಮೇಲೆ ಕೈಯನ್ನಿಟ್ಟ.

''ನೀನೂ ದೇಶಾಂತರ ಹೊರಟು ಹೋದರೆ, ನಿಮ್ಮಪ್ಪ ಅಮ್ಮ ಹೇಗಿರಬೇಕು. ಜವಾಬ್ದಾರಿ ಇಲ್ಲದವನ ತರಹ ಮಾತನಾಡಬೇಡ.. ನಡೆದದ್ದಾದರೂ ಏನು ಹೇಳು.''

''ನನ್ನ ಅಪ್ಪನಿಗೆ ನಾನು ಬೇಕು.. ವಂಶಿಗೆ ನಾನು ಬೇಕು. ಸುಧಾಳಿಗೂ ನಾನು ಬೇಕು. ಅವರೆಲ್ಲರ ಜವಾಬ್ದಾರಿ ನನ್ನ ತಲೆಯ ಮೇಲೆ.. ಆದರೆ ನಾನು? ನಾನು ಹೇಗಿದೀನಿ ಅಂತ ಅವರೆಲ್ಲರಿಗೂ ಏನಾದರೂ ಗೊತ್ತಾ? ನನ್ನ ಮನಸ್ಸಿನಲ್ಲಿ ಏನೇನು ತಳಮಳ ಇದೆ ಅಂತ ಅವರುಗಳಿಗೆ ಗೊತ್ತಾ? ಅವರುಗಳಿಗೆ ತಿಳಿದುಕೊಳ್ಳುವ ವ್ಯವಧಾನವಿಲ್ಲ. ನನಗೆ

ಹೇಳಲಾಗುವುದಿಲ್ಲ. ವಂಶಿ ಚಿಕ್ಕವನು, ಉಳಿದವರಿಗೆ, ಅವರ ಕೊರಗು ಅವರಿಗೆ... ನನ್ನನ್ನು ಕೇಳುವವರ್‍ಯಾರು!''

''ಹೀಗೆಲ್ಲಾ ಎಂದೂ ಮಾತನಾಡಿದವನಲ್ಲ ನೀನು.. ಇವತ್ತೇನಾಗಿದೆ ನಿನಗೆ!''

''ಏನೂ ಇಲ್ಲ, ಅವರ ಮನೆಗೆ ನೀನು ಬರದಿದ್ದರೆ ನಾನೊಬ್ಬನೇ ಹೋಗ್ತೀನಿ. ಎಲ್ಲಾ ಹೇಳಿ ಎದ್ದು ಬರ್ತೀನಿ. ಅಲ್ಲಿಗೆ ಒಂದು ಎಂಡ್.''

ನೀನು ಇದನ್ನು ಒಂದು ಕೊನೆ ಅಂತ ತಿಳಿದುಕೊಂಡಿದೀಯ.. ಆದರೆ ಇದೇ ಒಂದು ಪ್ರಾರಂಭವಾದರೆ..

''ಏನು ಪ್ರಾರಂಭ, ನನ್ನ ತಲೆ..? ದಿನೇಶ ನಕ್ಕಿದ್ದ.

''ನಿನಗೆ ಹೇಗಾದರೂ ನಗು ಬರುತ್ತೋ ನನ್ನ ಸ್ಥಿತಿ ನೋಡಿ..''

''ನಿನ್ನ ಮಾತಿಗೆ ನಕ್ಕೆ.. ಇರಲಿ, ಇಷ್ಟು ದಿನವೇ ಕಳೆದಿದೆ. ಇನ್ನೊಂದೆರಡು ದಿನ ಸಹನೆಯಿಂದ ಇದ್ದು ಬಿಡು.. ವನಜನ್ನ ನೀನಾಗಿಯೇ ಅವರ ಮನೆಗೆ ತಲುಪಿಸಿ ಬಿಡು, ಅವಳು ಹೇಗಿದಾಳೆ ಅಂತ ಕೂಡಾ ವಿಚಾರಿಸಲಿಲ್ಲ ನೀನು..''

''ನನಗೆ ಆಸಕ್ತಿಯೇ ಇಲ್ಲ.''

''ಆದರೆ, ನನಗೆ ಆಸಕ್ತಿ ಇದೆ. ನೆನ್ನೆ ನನ್ನ ಹೆಂಡತಿ ಅವಳನ್ನು ನೋಡಿ ಎಷ್ಟು ಸಂತೋಷ ಪಟ್ಟಳು ಗೊತ್ತಾ?.. ಪಾಪ, ಅಂತಹ ಹುಡುಗಿಯ ಜೀವನವೇ ಹಾಳಾಗಿ ಹೋಗುತ್ತಿತ್ತು. ನಮ್ಮ ಅಶೋಕನಿಂದ ಹುಡುಗಿ ಬದುಕಿಕೊಂಡಳು'' ಎಂದಳು.

''ನನ್ನಿಂದ ಅವಳು ಬದುಕಿದಳು. ಆದರೆ ನಾನು!''

''ಆಶಾ ಹೇಳಿದ್ದನ್ನ ನಿನಗೆ ಹೇಳಿದೆ.. ಬದುಕಿರುವ ಹುಡುಗಿಗೆ ಹೂವನ್ನು ಕೊಟ್ಟು ವಿಷ್ ಮಾಡುವ ದೊಡ್ಡ ಗುಣ ನಿನ್ನಲ್ಲಿದೆ ಅಂತ ಭಾವಿಸ್ತೀನಿ.''

''ನನ್ನ ಪರವಾಗಿ ನೀನೇ ಒಂದು ದೊಡ್ಡ ಹೂವಿನ ಗೊಂಚಲನ್ನು ಕೊಟ್ಟು ವಿಷ್ ಮಾಡಿ ಬಾ.. ನಾನು ಬರೊಲ್ಲ.''

''ಸರಿಯಪ್ಪಾ ನಿನ್ನಿಷ್ಟ'' ದಿನೇಶ ಇಳಿದು ಹೊರಟು ಹೋದ. ಅಶೋಕ ಅಂಗಡಿಯ ಬಾಗಿಲನ್ನು ತೆಗೆದು, ಅಲ್ಲಿದ್ದ ಕುರ್ಚಿಯ ಮೇಲೆ ಸುಮ್ಮನೆ ಕೂತ. ದಿನೇಶನಾಡಿದ ಮಾತುಗಳು ಅವನನ್ನು ಕಲಕುತ್ತಿದ್ದವು. ಫೋನು ಗಂಟೆ ಬಾರಿಸಿತು.. ಉದಾಸೀನತೆಯಿಂದ ರಿಸೀವರ್ ಎತ್ತಿ ''ಹಲೋ'' ಎಂದ. ದಿನೇಶ ಮಾತನಾಡಿದ್ದ.

''ಅಶೋಕ್...ವನಜಾ ನೆನ್ನೆ ರಾತ್ರಿಯಿಂದ ಏನೂ ಆಹಾರವನ್ನೇ ತಗೊಂಡಿಲ್ಲವಂತೆ. ನಿನ್ನನ್ನೇ ಎರಡು ಮೂರು ಸಲ ಕೇಳಿದಳಂತೆ, ಬರ್ತೀಯಾ..?''

''ಇಲ್ಲ, ನಾನು ಬರೊಲ್ಲ.''

''ನೀರು ಆಹಾರ ಬಿಟ್ಟು ಸತ್ತು ಹೋಗ್ತಾಳೆ ಅಷ್ಟೇ..''

"ಅವಳನ್ನು ಸಾಯಿಸೊಕ್ಕೆ, ಬದುಕಿಸೊಕ್ಕೆ ನಾನು ಹೊಣೆ ಅಲ್ಲ."

"ಅವಳು ಸತ್ತು ಹೋದರೆ ಆ ಪಾಪ, ನನಗೂ ಸುತ್ತಿಕೊಳ್ಳುತ್ತೆ ಕಣಯ್ಯ..ಆ ಪಾಪ ನನ್ನ ಹೆಂಡತಿಗೆ ತಟ್ಟುತ್ತೆ, ಹುಟ್ಟಲಿರುವ ನನ್ನ ಮಗುವಿಗೆ ತಟ್ಟುತ್ತೆ.. ಪ್ಲೀಸ್ ಬಂದು ಈ ಹುಡುಗೀನ ಉಳಿಸಿ, ನನ್ನ ಮಗುವನ್ನು ಉಳಿಸು.."

"ಏನಿದು ನಾಟಕ..?"

"ನಾಟಕ ಅಲ್ಲ..ನಾನು ನಿನ್ನ ಸ್ನೇಹಿತ, ನನ್ನ ಒಳಿತು ಬೇಕಿದ್ದರೆ, ಈಗಲೇ ಬಾ.. ಇಲ್ಲದಿದ್ದರೆ ಏನೇನಾಗಿ ಹೋಗುತ್ತೋ.."

ಅವನಿಗೆ ಉತ್ತರಿಸುವ ಗೋಜಿಗೇ ಹೋಗದೇ, ಫೋನನ್ನು ಇಟ್ಟ. ಹತ್ತು ನಿಮಿಷ ಹಾಗೇ ಕೂತಿದ್ದನೋ ಏನೋ.. ದಿನೇಶನ ಹೆಂಡತಿ ಆಶಾ ನಗುನಗುತ್ತಾ ಮಾತನಾಡುತ್ತಾ ನಿಂತಿದ್ದವಳು ಇದ್ದಕ್ಕಿದ್ದಂತೆ ಕುಸಿದು ಬಿದ್ದಳೇನೋ ಅಂತ ಅನ್ನಿಸಿದಾಗ ದಿಗ್ಗನೆ ಎದ್ದ.. ಆಶಾಳಿಗೆ ಏನೂ ಆಗಬಾರದು. ಈಗ ಸ್ವಲ್ಪ ಹೊತ್ತಿಗೆ ಮುಂಚೆ ಅವಳ ಕೈಯ ಕಾಫಿ ಕುಡಿದಿದ್ದೆ. ನಗುನಗುತ್ತಾ ಮಾತನಾಡಿದ್ದಳು.. ಅವಳು ನಗು ನಗುತ್ತಾ ಇರಬೇಕು.. ಅವಳಿಗೆ ಹುಟ್ಟುವ ಮಗುವೂ ನಳಿನಳಿಸುತ್ತಾ ಇರಬೇಕು. ದಿನೇಶ ನನಗೆ ಈ ವಿಷಯ ತಿಳಿಸಿರಲೇ ಇಲ್ಲ. ಕಿಲಕಿಲನೆ ನಗುತ್ತಾ ಗಂಡ ಹೆಂಡತಿ ಸರಸವಾಡಿದ್ದಾಗ ನನಗೆ ರೇಗಿತ್ತು.. ಸರಸದಿಂದ ಸುಖವಾಗಿರುವ ಸಂಸಾರಕ್ಕೇ ಏನಾದರೂ ಆದರೆ, ಅದಕ್ಕೇ ತಾನು ಕಾರಣನಾಗುತ್ತೇನೆಯೆ! ಛೆ, ಹಾಗಾಗಬಾರದು.. ತಾನು ಇದುವರೆಗೂ ಯಾರಿಗೂ ಎಂದೂ ಕೇಡನ್ನು ಬಯಸಲ್ಲ.. ನನ್ನ ಆಪ್ತಸ್ನೇಹಿತನ ಸಂಸಾರ ಚೆನ್ನಾಗಿರಬೇಕು.

ತಕ್ಷಣ ಅಂಗಡಿ ಬಾಗಿಲನ್ನು ಮುಚ್ಚಿ ಸ್ಕೂಟರನ್ನು ಹತ್ತಿದ. ನರ್ಸಿಂಗ್ ಹೋಂನ ಮುಂಬಾಗಿಲಿನಲ್ಲಿ ದಿನೇಶ ಇವನಿಗಾಗಿ ಕಾಯುತ್ತಾ ನಿಂತಿದ್ದ. ಅವನ ಕೈಯಲ್ಲಿ ಹೂಗೊಂಚಲು ಹಾಗೇ ಇತ್ತು. "ಸದ್ಯ, ಬಂದೆಯಾ..? ಅಶೋಕ್ ಅವನಿಗೆ ಉತ್ತರಿಸದೇ ಸೀದಾ ವಾರ್ಡಿಗೆ ಬಂದ. ಒಳಗಿನಿಂದ ಬಾಗಿಲನ್ನು ಹಾಕಿತ್ತು. "ಒಂದ್ನಿಮಿಷ ನೀನು ಹೂಗೊಂಚಲನ್ನು ಇಟ್ಟುಕೊಂಡಿರು.. ನಾನು, ಈಗ ಬಂದೆ" ಎಂದು ಹೇಳಿ, ಅವನ ಕೈಗೆ ಅದನ್ನು ಬಲವಂತವಾಗಿ ಇರಿಸಿ, ದಿನೇಶ ಕಾರಿಡಾರಿನಲ್ಲಿ ಮರೆಯಾದ. ಎಷ್ಟೋ ನಿಮಿಷ ಹಾಗೇ ಹೂಗೊಂಚಲನ್ನು ಹಿಡಿದು ನಿಂತಿದ್ದವನನ್ನು ನರ್ಸುಗಳು ನೋಡಿ, ಮುಗುಳ್ನಕ್ಕರು. ಇವನೂ ಬಲವಂತವಾಗಿ ನಕ್ಕ. ದಿನೇಶ ವಾಪಸ್ಸಾಗಿರಲಿಲ್ಲ. ಅಷ್ಟರಲ್ಲಿ ರೂಮಿನ ಬಾಗಿಲು ತೆಗೆಯಿತು, ಸಿಸ್ಟರ್ ಹೊರಗೆ ಬಂದಳು. "ಹಲೋ" ಎಂದಳು. ನಗುತ್ತಾ ಇವನೂ ಮುಗುಳ್ನಕ್ಕು, "ಹೇಗಿದಾಳೇ.. ಈಗ! ಆತಂಕದಿಂದ ಕೇಳಿದ್ದ. "ಫೈನ್.. ಓ.ಕೆ." ಎಂದಿದ್ದಳು ಅವಳು ರೂಮಿನ ಬಾಗಿಲನ್ನು ಸರಿಸಿ ಇಣುಕಿ ನೋಡಿದ. ಆ ಕಡೆಗೆ ತಿರುಗಿ ಮಲಗಿದ್ದ ಅವಳ ಮುಖ ಕಾಣುವಂತಿರಲಿಲ್ಲ. ನಿಧಾನವಾಗಿ ಒಳಗೆ ಬಂದ. ಅವಳು ತಿರುಗಲಿಲ್ಲ. ಇವನೇ ಆ ಬದಿಗೆ ಹೋಗಿ "ವನಜಾ.." ಎಂದ...ಅವಳು ಬೆಚ್ಚಿ ಎದ್ದು ಕೂತಳು. ಇವನಿಗೆ ಗಾಬರಿಯಾಯಿತು, "ನಾನು, ಅಶೋಕ್" ಎಂದ.

‘‘ಅಬ್ಬಾ ಪೆದರಿ ಬಿಟ್ಟಿದ್ದೆ.. ಯಾವಾಗ ಬಂದಿರಿ? ಕೇಳಿದಳು. ಮುಗುಳ್ನಕ್ಕಿದ್ದಳು.

‘‘ಈಗ್ತಾನೆ.. ಈಗ ಹೇಗಿದೀಯಾ.. ಹಾಲು ಕುಡಿದೆಯಾ..?’’

‘‘ಹುಂ, ಎನ್ನುವಂತೆ ತಲೆಯಾಡಿಸಿ,’’ ನನ್ನನ್ನು ಯಾವಾಗ ಡಿಸ್ಚಾರ್ಜ್ ಮಾಡ್ತಾರೆ! ಡಾಕ್ಟರನ್ನು ಕೇಳಿದ್ರಾ..?’’ ಕೇಳಿದಳು.

‘‘ಇಲ್ಲ, ಈಗ ಮಾತನಾಡ್ತೀನಿ.. ಎನ್ನುತ್ತಾ ಹೂಗೊಂಚಲನ್ನು ಅವಳೆಡೆಗೆ ನೀಡಿದ. ಅವಳು ಕೈಗೆ ತಗೊಂಡು, ಥ್ಯಾಂಕ್ಸ್’’ ಎಂದು ಹೇಳಿ, ‘‘ಪ್ಲೀಸ್ ಅಲ್ಲಿಟ್ಟುಬಿಡಿ ಎಂದಳು. ಅವಳು ಹೇಳಿದಂತೆ ಇವನು ಅದನ್ನು ಮೇಜಿನ ಮೇಲೆ ಇಟ್ಟ, ಅವನು ಹೊರಗೆ ಬಂದ. ದಿನೇಶ ಅವನಿಗಾಗಿ ಕಾಯುತ್ತಾ ನಿಂತಿದ್ದ, ನಾನು ಮನೆಗೆ ಫೋನು ಮಾಡಿ, ಆಶಾಳ ಹತ್ತಿರ ಮಾತನಾಡಲು ಹೋಗಿದ್ದೆ..’’ ವಿಚಿತ್ರವಾಗಿ ನಕ್ಕಾಗ, ಇವನೂ ನಕ್ಕಂತೆ ಮಾಡಿದ. ಇಬ್ಬರೂ ಡಾಕ್ಟರನ್ನು ಹುಡುಕಿಕೊಂಡು ಹೊರಟರು.

ಹತ್ತು ನಿಮಿಷದ ಬಳಿಕ ಇಬ್ಬರೂ ಮತ್ತೆ ವಾರ್ಡಿಗೆ ಬಂದರು. ವನಜಾ ಅವನಿಗಾಗಿಯೇ ಕಾಯುತ್ತಾ ಕುಳಿತಂತೆ ಅನ್ನಿಸಿತ್ತು. ದಿನೇಶ ಸುಮ್ಮನೇ ನಿಂತ. ‘‘ಡಾಕ್ಟರು ಏನಂದ್ರು?’’ ಆತುರದಿಂದ ಕೇಳಿದ್ದಳು.

‘‘ಹುಂ, ಅವರು ಒಪ್ಪಿದಾರೆ.. ಈಗಲೇ ಬೇಕಾದರೂ ಹೋಗಬಹುದು..’’

‘‘ಆದರೆ ಎಲ್ಲಿಗೆ ಹೋಗ್ತೀಯಾ ವನಜಾ, ನೀನು ಮತ್ತೆ ಆ ಹಾಸ್ಟೆಲ್ಲಿಗೆ ಹೋಗುವುದು ನಮಗೆ ಇಷ್ಟವಿಲ್ಲ’’ ದಿನೇಶ ಆಡಿದ್ದ.

‘‘ಅದಲ್ಲದಿದ್ದರೆ ಇನ್ನೊಂದು.. ಹಾಸ್ಟೆಲ್ಲು ಬಿಟ್ಟರೆ ಬೇರೆ ಗತಿಯಿಲ್ಲ.’’

‘‘ಯಾವ ಹಾಸ್ಟೆಲ್ಲೂ ಬೇಡ.. ನಮ್ಮ ಮನೆಯಲ್ಲಿರು’’ ದಿನೇಶ ಮತ್ತೆ ಹೇಳಿದಾಗ, ಅವಳು ಅಶೋಕನ ಕಡೆ ನೋಡಿದಳು.

‘‘ನನ್ನ ಮಾತು ಕೇಳಿದರೆ, ನೀನು ನಿನ್ನ ತಂದೆಯ ಮನೆಗೇ ಹೋಗುವುದು ಒಳ್ಳೆಯದು. ಅಲ್ಲಿ ಈಗ ಅವರಿಗೆ ನಿನ್ನ ಅಗತ್ಯವಿರುತ್ತದೆ.’’

‘‘ನಾನು ಅಲ್ಲಿಗೆ ಹೋಗುವುದಿಲ್ಲ. ಅವರಿಗೆ ನನ್ನ ಅಗತ್ಯವಿಲ್ಲ. ನಿಮ್ಮ ಮನೆಗೆ ಏಕೆ ಕರೆದುಕೊಂಡು ಹೋಗಬಾರದು?’’ ಸವಾಲೆಸೆದಳು ತಬ್ಬಿಬ್ಬಾದ. ಆದರೂ ಹೇಳಿದ. ‘‘ಕರೆದುಕೊಂಡು ಹೋಗ್ತೀನಿ, ಆದರೆ ನಮ್ಮ ಮನೆಯ ವಾತಾವರಣ ನಿನಗೆ ಸರಿ ಹೋಗುತ್ತೋ ಇಲ್ಲವೋ.. ನಮ್ಮ ಅಪ್ಪ ಅಮ್ಮ ಹಳೇ ಸಂಪ್ರದಾಯದವರು, ಗಂಡನಿಲ್ಲದ ಅತ್ತಿಗೆ, ಅವಳ ಮಗು..’’ ಅವನು ಮಾತು ನಿಲ್ಲಿಸಿದ.

‘‘ಇನ್ನೂ ಮದುವೆಯಾಗಿಲ್ಲದ ಇವನು ಆ ಮನೇಲಿದಾನೆ.’’ ದಿನೇಶ ಸೇರಿಸಿದ.

‘‘ಏನು? ನಿಮಗಿನ್ನು ಮದುವೆ ಆಗಿಲ್ಲವೆ!’’ ವನಜಾ ಆಶ್ಚರ್ಯದಿಂದ ಕೇಳಿದಾಗ ಅಶೋಕ ದಿನೇಶನ ಕಡೆ ತಿರುಗಿ ‘‘ಪಿಟಿ ಪಿಟಿ’’ ಬೈದ.

"ಈ ಸಿಡುಕನ್ನ ಯಾರು ಮದುವೆಯಾಗ್ತಾರೆ?" ದಿನೇಶ ನಕ್ಕ ವನಜಾಳು ನಗುವಂತೆ ಮಾಡಿದ. ಅಶೋಕ ನಗಲಿಲ್ಲ.

"ನಿಮ್ಮ ಫ್ರೆಂಡ್ ಸದಾ ಹೀಗೇ ಸೀರಿಯಸ್ ಆಗಿರ್ತಾರಾ!" ಕೇಳಿದಳು.

"ಆ ಮಾತೆಲ್ಲಾ ಈಗ ಬೇಡ. ಈಗ ನೀನು ನಿನ್ನ ತಂದೆಯ ಮನೆಗೆ ಹೋಗುವುದಾದರೆ ಕರೆದುಕೊಂಡು ಹೋಗ್ತೀನಿ. ಇಲ್ಲದಿದ್ದರೆ ನಿನ್ನ ಹಣೇ ಬರಹ. ನಾನೂ ಇಲ್ಲಿಗೂ ಬರುವುದಿಲ್ಲ."

"ನೀನು ನಿನ್ನ ತಂದೆಯ ಮನೆಗೆ ಹೋಗಿ ಇದ್ದರೆ, ದಿನಾ ಬಂದು ನಿನ್ನನ್ನು ನೋಡಿಕೊಂಡು ಹೋಗ್ತಾನೆ.. ಅಲ್ವೇನೋ..?" ದಿನೇಶ ಕಣ್ಣು ಹೊಡೆದು ಹೇಳಿದ.

"ನನಗೆ ನಮ್ಮಪ್ಪನ ಮನೆಗೆ ಹೋಗಲು ಸುತರಾಂ ಇಷ್ಟವಿಲ್ಲ. ನೀವುಗಳು ಏಕೆ ಮತ್ತೆ ಮತ್ತೆ ಅದನ್ನೇ ಆಡುತ್ತಿದ್ದೀರಿ..?"

"ವನಜಾ.. ನೀನಿನ್ನು ಚಿಕ್ಕವಳು. ಸಧ್ಯಕ್ಕೆ ತಂದೆಯ ಮನೆಗಿಂತ ಬೇರೆ ಯಾವ ಜಾಗವೂ ನಿನಗೆ ಸೂಕ್ತವಲ್ಲ. ಆಮೇಲೆ ಮದುವೆ ಮಾಡಿಕೊಂಡು ಗಂಡನ ಮನೆಗೆ ಹೋಗಬಹುದು.."

"ಮದುವೆ, ಗಂಡ, ಇದರಲ್ಲೆಲ್ಲಾ ನನಗೆ ಆಸಕ್ತಿ ಇಲ್ಲ."

"ಯಾಕೆ? ಜೀವನದಲ್ಲಿ ಅದೂ ಒಂದು ಮುಖ್ಯವಾದ ಘಟನೆ. ಆದರೆ ಒಂದು ಮಾತು. ಇವನಿಗೂ ಅದರಲ್ಲೆಲ್ಲಾ ಆಸಕ್ತಿ ಇಲ್ಲ. ಮದುವೆ ಅಂದರೆ ಒಂದು ಮಾರು ದೂರ ಹಾರಿ ಹೋಗ್ತಾನೆ. ಅವರಮ್ಮ ಅಂತೂ ಹೇಳಿ ಹೇಳಿ ಸುಸ್ತಾದರು."

"ನನ್ನ ನಿಮ್ಮ ಜೋಡಿ ಚೆನ್ನಾಗಿರುತ್ತೆ ಹಾಗಾದರೆ.." ಚಪ್ಪಾಳೆ ತಟ್ಟಿ ನಕ್ಕಳು. ಚಪ್ಪಾಳೆ ತಟ್ಟಿ ನಗುವಂಥಾದ್ದು ಏನಿದೆ ಎಂದುಕೊಂಡು, "ಸ್ವಲ್ಪ ಸುಮ್ಮನಿರ್ತೀಯಾ ಪ್ಲೀಸ್.. ನನ್ನ ಮಾತು ಏಕೆ ಈಗ?" ದಿನೇಶನ ಕಡೆ ತಿರುಗಿ ಕೇಳಿದ.

"ಹಾಗಾದರೆ ನನ್ನ ಮಾತುಗಳನ್ನೇ ಹೇಳ್ತೀನಿ," ದಿನೇಶ ನುಡಿದ.

"ವನಜಾ, ನಾನು ಫೋಟೋಗ್ರಾಫರ್, ನನ್ನ ತಂದೆ ತಾಯಿ, ಅಣ್ಣ ಅತ್ತಿಗೆ ಬೇರೆ ಊರಿನಲ್ಲಿದಾರೆ. ಅಕ್ಕ, ತಂಗಿ ಅವರವರ ಗಂಡಂದಿರ ಮನೆಯಲ್ಲಿ ಇದೇ ಊರಿನಲ್ಲಿದಾರೆ. ನನ್ನ ಹೆಂಡತಿ ಆಶಾ ನನಗೆ ತಕ್ಕ ಹೆಂಡತಿ, ಒಳ್ಳೆಯವಳು, ಸಧ್ಯದಲ್ಲೇ ನನಗೊಬ್ಬ ಮಗಳು ಹುಟ್ಟುತ್ತಿದಾಳೇ.."

ವನಜಾ ಬಿದ್ದು ಬಿದ್ದು ನಕ್ಕಳು.

"ಮಗಳು ಅಂತ ಹೇಗೆ ಗೊತ್ತು.?"

"ಗೊತ್ತು, ಮಗಳೇ.. ಅವಳಿಗೂ ವನಜಾ ಅಂತ ಹೆಸರಿಡ್ತೀನಿ. ಏಕೆಂದರೆ ನನಗೆ ಆ ಹೆಸರು ಈಚೆಗೆ ತುಂಬಾ ಇಷ್ಟವಾಗಿದೆ"

"ಪ್ಲೀಸ್.. ನಾನಿನ್ನು ನಗಲಾರೆ.. ನೋಡಿ ನಿಮ್ಮ ಸ್ನೇಹಿತರು ಹೊರಟುಹೋದರು."

ಅಶೋಕ ಹೊರಗೆ ಕೈ ಕೈ ಹೊಸಕುತ್ತಾ ನಿಂತಿದ್ದ.

"ಸಾರಿ, ಅಶೋಕ್, ನಾನು ಜೋಕರ್ ತರಹ ಆಡ್ತಿದೀನಿ ಅಂತ ಅನ್ನಿಸ್ತಿದೆ ಅಲ್ಲವೆ! ನಿನ್ನ ಹಾಗೆ ಸೀರಿಯಸ್ ಆಗಿರಲು ನನ್ನಿಂದ ಸಾಧ್ಯವಿಲ್ಲ"

"ನನ್ನ ತಲೆ ತಿಂದು ಹೋಗ್ತಾ ಇದೆ. ನಿನಗೆ ತಮಾಷೆ. ಅವಳಿಗೆ ಅರ್ಥವಾಗುವ ಹಾಗೆ ಯಾಕೆ ಹೇಳೊಲ್ಲ ನೀನು!"

"ಬಾ, ಇಬ್ಬರೂ ಸರಿಯಾಗಿ ಮಾತನಾಡೋಣ.." ಇಬ್ಬರೂ ಒಳಗೆ ಬಂದರು.

"ನೀವಿಬ್ಬರೂ ಏನನ್ನೋ ಹೇಳುವುದಕ್ಕೆ ಆಗದೇ ಒದ್ದಾಡ್ತಿದೀರಿ.. ನನಗೆಲ್ಲಾ ಗೊತ್ತಾಗ್ತಿದೆ. ನಿಮ್ಮ ಮೇಲೆ ನಂಬಿಕೆ ಇದೆ. ಸಿಸ್ಟರ್ ಸಹ ಹೇಳಿದಾಳೆ, ನೀವಿಬ್ಬರೂ ತುಂಬಾ ಒಳ್ಳೆಯವರು ಅಂತ."

"ಇನ್ನೇನು ಹೇಳಿದಾರೆ..?"

"ನಿಮ್ಮ ತಂದೆಯ ವಿಷಯ, ಹೇಳಲಿಲ್ಲವೆ?"

ಏನಾಗಿದೆ ನಮ್ಮ ತಂದೆಗೆ? ಆ ಮಾತಿನಲ್ಲಿ ಗಾಬರಿಯಾಗಲೀ ಆತಂಕವಾಗಲೀ ಇರಲಿಲ್ಲ. ಇಬ್ಬರಿಗೂ ಖೇದವೆನಿಸಿತು.

"ನಿಮ್ಮ ತಂದೆಗೆ ಈಗ ಒಂದು ತಿಂಗಳ ಹಿಂದೆ, ಹಾರ್ಟ್ ಅಟ್ಯಾಕ್ ಆಗಿ ಆಸ್ಪತ್ರೆಗೆ ಸೇರಿದ್ದರು. ಅವರ ಜತೆ ಯಾರೂ ಇಲ್ಲ. ಅವರು ಒಬ್ಬರೇ.." ದಿನೇಶ ಹೇಳಿದ.

"ಯಾರೂ ಯಾಕಿಲ್ಲ? ಬೇಕಾದವರು ಇದಾರಲ್ಲ" ಕಟುವಾಗಿತ್ತು ಧ್ವನಿ.

"ಯಾರು! ಅಡಿಗೆಯವರೇ..?" ದಿನೇಶ ಕೇಳಿದ್ದ.

"ಹು..ಹು....ಅವರಲ್ಲ"

"ಅವರಿಬ್ಬರ ಹೊರತು ಮನೆಯಲ್ಲಿ ಬೇರೆ ಇನ್ಯಾರೂ ಇಲ್ಲವಲ್ಲ."

"ನಮ್ಮ ತಂದೆ ಸುಳ್ಳು ಹೇಳಿರಬೇಕು."

"ಅವರೇಕೆ ಸುಳ್ಳು ಹೇಳ್ತಾರೆ? ಅವರಿಗೆ ಯಾವ ವಿಷಯವೂ ಗೊತ್ತಿಲ್ಲ."

"ಯಾಕೆ ತಿಳಿಸಲಿಲ್ಲ? ತಿಳಿಸಬೇಕಾಗಿತ್ತು. ಅವರಿಗೂ ಗೊತ್ತಾಗ್ಲಿ, ಮಗಳು ಮಲತಾಯಿಯ ಕೆಳಗೆ ಇರಲು ಇಷ್ಟಪಡದೇ ಹಾಸ್ಟೆಲ್ಲಿಗೆ ಹೋಗಿ ಸೇರಿಕೊಂಡು, ಕಾಲೇಜಿಗೂ ಹೋಗದೇ, ಡ್ರಗ್ಸ್ ತಗೊಂಡು, ಹುಚ್ಚಿಯಂತಾಗಿದಾಳೆ ಅಂತ" ವನಜಾ ಅಳತೊಡಗಿದಳು. ನರ್ಸುಗಳು ಓಡೋಡಿ ಬಂದರು.

"ಏನಾಯ್ತು! ಯಾಕೆ ಅಳ್ತಿದಾರೆ..?"

"ಅವರ ತಂದೆಯ ನೆನಪಾಗಿದೆ. ಅದಕ್ಕೇ ಅಳ್ತಿದ್ದಾರೆ.."

ನಾನು ಈಗಲೇ ಹೋಗಿ ಅಪ್ಪನ್ನ ನೋಡಬೇಕು ಅಂತ ಅವಳೇನೂ ಗೋಳಾಡಲಿಲ್ಲ. ಸ್ವಲ್ಪ ಹೊತ್ತು ಅತ್ತು ತನಗೆ ತಾನೇ ಸಮಾಧಾನ ಮಾಡಿಕೊಂಡು ಹೇಳಿದಳು.

''ಅಪ್ಪನಿಗೆ ಹುಶಾರಿಲ್ಲ ಅನ್ನುವ ವಿಷಯವನ್ನು ನಂಬ್ತೀನಿ. ಬಹುಶಃ ಅದಕ್ಕೇ ಅವರಿಂದ ಹಣ ಬರಲಿಲ್ಲವೇನೋ, ಹಣವಿಲ್ಲದೇ ಸ್ವತಂತ್ರವಾಗಿ ನಾನು ಯಾವ ಹಾಸ್ಟೆಲ್ಲಿನಲ್ಲೂ ಇರಲು ಸಾಧ್ಯವಿಲ್ಲ, ನನ್ನ ವಿದ್ಯೆಗೆ ಯಾವ ಕೆಲಸವೂ ಸಿಗುವುದಿಲ್ಲ. ಈ ಆಸ್ಪತ್ರೆಯಲ್ಲೇ ಇರಲಾರೆ. ಅಥವಾ ನಿಮ್ಮಗಳ ಮನೆಗೆ ಬರಲಾರೆ. ಈಗ ನನಗಿರುವ ದಾರಿ ಒಂದೇ.. ನಮ್ಮ ಅಪ್ಪನ ಮನೆ ದಾರಿ.. ಯಾಕೆಂದರೆ ನಾನು ಆತ್ಮಹತ್ಯೆ ಮಾಡಿಕೊಳ್ಳಲಾರೆ.. ನನಗೆ ಬದುಕುವ ಆಸೆ ಇದೆ, ಆದರೆ ಒಂದು ರಿಕ್ವೆಸ್ಟ್.''

''ಏನದು?'' ಇಬ್ಬರು ಒಟ್ಟಿಗೆ ಕೇಳಿದರು.

''ನನ್ನ ಅಭಿಮಾನವನ್ನು ಬಿಟ್ಟು, ನಾನು ನನ್ನ ತಂದೆ ಮನೆಗೆ ವಾಪಸ್ಸು ಹೋಗಲು ಒಪ್ಪಿದೇನೆ. ನಿಮಗಾಗಿ, ನಿಮ್ಮ ಪ್ರೀತಿಗಾಗಿ, ನಿಮ್ಮ ಅಭಿಮಾನ, ವಿಶ್ವಾಸ.. ನನ್ನನ್ನು ಸೋಲಿಸಿದೆ. ನೀವಿಬ್ಬರೂ ದಿನಾ ಬಂದು ನನ್ನನ್ನು ನೋಡಿಕೊಂಡು ಹೋಗಬೇಕು..''

ಇಬ್ಬರೂ ನಕ್ಕರು ''ದಿನಾ ಬಂದು ನಾವೇಕೆ ನಿನ್ನ ನೋಡಬೇಕು? ನೀನೇನು ರೋಗಿಯಲ್ಲ, ಅದು ಆಸ್ಪತ್ರೆಯಲ್ಲ, ನಿನಗೆ ಸ್ವತಂತ್ರವಿದೆ. ದಿನಾ ನೀನೇ ಯಾಕೆ ನಮ್ಮನ್ನು ಭೇಟಿಯಾಗಬಾರದು?''

ಅವಳೂ ಮುಕ್ತವಾಗಿ ನಕ್ಕಳು. ''ಗುಡ್ ಐಡಿಯಾ, ನಿಮ್ಮ ಸ್ಟುಡಿಯೋ, ಇವರ ಮೆಡಿಕಲ್ ಸ್ಟೋರ್ಸ್‌ನಲ್ಲಿ ನನ್ನಂತಹ ಹುಡುಗಿ ಇದ್ದರೆ, ವ್ಯಾಪಾರ ಚೆನ್ನಾಗಿ ಆಗುತ್ತೆ ಅಲ್ಲವೆ? ನಿಮ್ಮಿಬ್ಬರ ಪ್ರಾಫಿಟ್‌ನಲ್ಲಿ ಟೆನ್ ಪರ್ಸೆಂಟ್ ನನಗೆ ಒಪ್ಪಿಗೇನಾ?''

''ನನಗೇನೋ ಒಪ್ಪಿಗೆ, ಆದರೆ ಆಶಾನ್ನ ಒಂದು ಮಾತು ಕೇಳಬೇಕು, ಅಶೋಕ ಇಪ್ಪತ್ತು ಪರ್ಸೆಂಟ್ ಕೊಡುವುದಕ್ಕೆ ಒಪ್ಪಿದರೆ ನೀನು ಅಲ್ಲೇ ಇರು. ನಾನೇ ನಿನ್ನನ್ನು ಬಂದು ಬಂದು ನೋಡ್ತೀನಿ.''

ವನಜಾ, ಅಶೋಕನ ಮುಖ ನೋಡಿ ನಕ್ಕಳು. ಅವನಿಗೂ ನಗು ಬಂತು. ಆ ನಗುವನ್ನು ಅವಳು ಹೇಗೆ ಅರ್ಥಮಾಡಿಕೊಂಡಳೋ, ಎದ್ದು ನಿಂತು ಮೈಮುರಿದಳು.

''ದಿನೇಶ ನೀನು ಇವಳಿಗೆ ಸಹಾಯ ಮಾಡು. ನಾನು ಬಿಲ್ ನೋಡಿಸಿ, ಡಿಸ್ಚಾರ್ಜ್‌ಗೆ ರೆಡಿ ಮಾಡಿಸ್ತೀನಿ..'' ಎಂದು ಹೊರಗೆ ಹೋದ. ಅಲ್ಲಿಂದ ಜಗನ್ನಾಥರಾಯರ ಮನೆಗೆ ಫೋನು ಮಾಡಿದ. ಅಡಿಗೆಯಾಕೆ ಮಾತನಾಡಿದಳು. ''ರಾಯರು ಹೇಗಿದಾರೆ ಎಂದು ವಿಚಾರಿಸಿ, ಹೇಳಿದ, ''ವನಜಾ ಸಿಕ್ಕದಾಳೆ, ಮಾತನಾಡಿ, ಅವಳನ್ನು ಮನೆಗೆ ವಾಪಸ್ಸು ಬರಲು ಒಪ್ಪಿಸಿದ್ದೇವೆ. ಈಗ ಕರೆದುಕೊಂಡು ಬರುತ್ತಿದೇವೆ. ಉಳಿದಿದ್ದೆಲ್ಲಾ ಆಮೇಲೆ ಮಾತನಾಡೋಣ..'' ಆಕೆ ಹೂಂ ಎಂದಳು.

ಮುಂದಿನ ಹತ್ತು ಹದಿನೈದು ನಿಮಿಷಗಳಲ್ಲಿ ಎಲ್ಲಾ ಸಿದ್ಧವಾಗಿತ್ತು. ದಿನೇಶನೇ ಹೋಗಿ ಆಟೋ ತಂದ. ವನಜಾಳ ಜತೆ ಅವನೇ ಕುಳಿತ. ಅಶೋಕ ಸ್ಕೂಟರ್ರಿನಲ್ಲಿ ಹಿಂದೆ ಹಿಂದೆ ಬಂದ.

ಅಡಿಗೆಯವರು ನಗುಮುಖ ಮಾಡಿಕೊಂಡು ''ಬಾಮ್ಮ'' ಎಂದಾಗ ಇವಳು ಓಡಿ ಹೋಗಿ ತಬ್ಬಿಕೊಳ್ಳಲಿಲ್ಲ. ''ಅಪ್ಪಾ ಎಲ್ಲೀ'' ಎಂದು ಕೇಳಲಿಲ್ಲ. ತನ್ನ ಪಾಡಿಗೆ ತಾನು ಒಳಗೆ ಹೋದಳು. ಅಡಿಗೆಯವಳು ಅವಳ ಹಿಂದೆಯೇ ಒಳಗೆ ಹೋದಳು. ಇವರಿಬ್ಬರೂ ಬಾಗಿಲಲ್ಲೇ ನಿಂತರು. ಯಾರೂ ಕರೆಯದಿದ್ದರೆ, ತಮ್ಮ ಕೆಲಸ ಮುಗಿಯಿತು ಅಂತ ಹೊರಟು ಬಿಡುವುದೇ ವಾಸಿ ಎಂದುಕೊಂಡರು.

ವನಜಾ ಹಿಂದೆ ತಾನು ಉಪಯೋಗಿಸುತ್ತಿದ್ದ ರೂಮಿಗೆ ಹೋಗಿ ಅನುಮಾನದಿಂದ ಇಣುಕಿ ನೋಡಿದಳು. ಎಲ್ಲಾ ಹಾಗೆ ಹಾಗೇ ಇತ್ತು. ಒಳಗೆ ಅಡಿ ಇರಿಸಿದಳು.

ಅಡಿಗೆಯಾಕೆಯೇ ಬಂದು ''ಬನ್ನಿ, ರಾಯರನ್ನು ಮಾತನಾಡಿಸಿ ಹೋಗೋರಂತೆ'' ಎಂದಳು. ಇಬ್ಬರೂ ಒಳಗೆ ಬಂದು ಹಾಲಿನಲ್ಲಿ ಕುಳಿತರು. ಇನ್ನೊಂದು ರೂಮಿನಿಂದ ರಾಯರು ಹೊರಗೆ ಬಂದರು. ಆದರೆ ಅವರ ಮುಖದಲ್ಲಿ ಏನೂ ಕುತೂಹಲ ಕಂಡುಬರಲಿಲ್ಲವಾದ್ದರಿಂದ ಇಬ್ಬರೂ ಮುಖ ಮುಖ ನೋಡಿಕೊಂಡರು.

''ಇವನು ನನ್ನ ಸ್ನೇಹಿತ ದಿನೇಶ..'' ಪರಿಚಯಿಸಿದ. ದಿನೇಶ ಎದ್ದುನಿಂತು ನಮಸ್ಕಾರ ಎಂದ. ಕೈ ಮುಗಿದು, ''ಇಬ್ಬರಿಗೂ ಏನಾದರೂ ಕುಡಿಯಲು ಕೊಡಿ'' ಎಂದು ಆಡಿಗೆಯವರಿಗೆ ಹೇಳಿದರು. ಅವಳು ಒಳಗೆ ಹೋದಳು.

''ಈಗ ಹೇಗಿದೀರಿ? ಅಶೋಕನೇ ಕೇಳಿದ.

''ಪರವಾಗಿಲ್ಲ, ಆದರೂ ರೆಸ್ಟ್‌ನಲ್ಲಿದೀನಿ..'' ಅವರ ಧ್ವನಿ ಕೇಳಿಯೂ ವಸುಧಾ ಹೊರಗೆ ಬರಲಿಲ್ಲ. ದಿನೇಶ ಅತ್ತಿತ್ತ ನೋಡಿದ ಅವಳು ಕಾಣಲಿಲ್ಲ. ಆದರೂ ''ಅವಳೆಲ್ಲಿ'' ಎಂದು ಕೇಳಲಿಲ್ಲ.

ಅಡಿಗೆಯವಳು ನಾಲ್ಕು ಲೋಟಗಳಲ್ಲಿ ಶರಬತ್ತು ತಂದು ಎಲ್ಲರ ಕೈಗೂ ಕೊಟ್ಟಳು. ಒಂದು ಲೋಟವನ್ನೆತ್ತಿಕೊಂಡು, ವನಜಳ ರೂಮಿಗೆ ಹೋದಳು. ಅವಳು ಆ ರೂಮಿನಲ್ಲಿದ್ದಾಳೆಂದು ಇಬ್ಬರಿಗೂ ತಿಳಿಯಿತು. ಏನೂ ಆಡದೇ ಗಟಗಟನೆ ಶರಬತ್ತನ್ನು ಕುಡಿದು, ಹೊಟ್ಟೆಯನ್ನು ತಣ್ಣಗೆ ಮಾಡಿಕೊಂಡರು. ಅಡಿಗೆಯವರು ಹೊರಗೆ ಬಂದರು. ಅವರ ಹಿಂದೆ ವನಜ ಬಂದಿರಲಿಲ್ಲ. ಇಬ್ಬರೂ ಹೊರಟರು.

''ಆಗಾಗ್ಗೆ ಬರ್ತೀರಿ, ನಾನೂ ಒಬ್ಬನೇ.. ಸಮಯ ಕಳೆಯುವುದೇ ಕಷ್ಟ'' ಎಂದು ಅವರು ಹೇಳಲಿಲ್ಲ. ದಿನೇಶನೇ ಒಳಗಿರುವ ಅವಳಿಗೆ ಕೇಳಿಸುವಂತೆ, ''ವನಜಾ.. ನಾವಿನ್ನು ಬರ್ತೀವಿ..'' ಎಂದ. ಅವಳು ಹೊರಗೆ ಬಂದು, ''ನಾಳೆ ಬರ್ತೀರಿ ತಾನೆ..'' ಎಂದಳು ತಂದೆಯ ಕಡೆ ತಿರುಗದೇ.. ಆತನೇ ಒಂದು ಗಳಿಗೆ ಬೆರಗಾಗಿ ಅವಳನ್ನು ನೋಡಿದರು. ಮಗಳು ಬಂದಳು ಎನ್ನುವ ಖುಷಿಗೆ ಆತನ ಹೃದಯ ಒಡೆದು ಬಿದ್ದರೇನು ಗತಿ ಎನ್ನುವಂತೆ

ಇಬ್ಬರೂ ನೋಡಿದರು. ಆದರೆ ಹಾಗೇನಾಗಲಿಲ್ಲ.

ಅಡಿಗೆಯವರು, ಆತನೊಡನೆ ಏನು ಹೇಳಿದ್ದರೋ ಏನೋ, ತಂದೆ ಮಗಳ ಮಿಲನ ವಿಚಿತ್ರವಾಗಿತ್ತು. ಆತ ''ಥ್ಯಾಂಕ್ಸ್'' ಎಂದರು. ಅದು ಯಾವುದಕ್ಕೆಂದು ಅರ್ಥವಾಗದೇ ಇಬ್ಬರೂ ಹೊರಟರು, ತಮ್ಮ ಕರ್ತವ್ಯ ಮುಗಿಯಿತು ಎಂಬಂತೆ.

ಅಡಿಗೆಯಾಕೆ ಹಿಂದೆ ಬಂದಳು. ''ನೋಡಿದ್ರೋ ಇಲ್ಲವೋ ತಂದೆ ಮಗಳ ಅನುಸಂಧಾನ...ನೀವುಗಳು ಆಗಾಗ್ಗೆ ಬರುತ್ತಿದ್ದರೆ ಎಲ್ಲಾ ಸರಿ ಹೋದೀತು.. ಇಲ್ಲದಿದ್ದರೆ, ಏನು ಕತೆಯೋ..? ಮತ್ತೆ ಏನಾದರೂ ಆದೀತು..''

''ನೀವು ಅವಳನ್ನು ಚೆನ್ನಾಗಿ ನೋಡಿಕೊಳ್ಳಿ.. ಎಲ್ಲಾ ಅರ್ಥವಾಗುವಂತೆ ಹೇಳಿ. ಎಲ್ಲಾ ಸರಿ ಹೋಗುತ್ತೆ. ಆತನಿಗೂ, ಮಗಳ ಮೇಲೆ ಯಾವ ಅನುಮಾನವೂ ಬರದಂತೆ ವರ್ತಿಸಲು ಹೇಳಿ.. ಆದರೆ ಅವರಿಗೆ ಸಂತೋಷವಾಗಿರುವಂತೆ ಅನ್ನಿಸಲಿಲ್ಲ.''

''ಅವರು ಹಾರ್ಟ್ ಪೇಷೆಂಟ್ ಅಲ್ಲವೇ.. ಅದಕ್ಕೇ ಖುಷಿಯನ್ನು ವ್ಯಕ್ತಪಡಿಸಿಲ್ಲ. ಸಂತೋಷವಾಗದೇ ಇರುತ್ಯೆ! ದಿನೇಶ ತಾನೇ ಹೇಳಿದಾಗ ಆಕೆ ತಲೆಯಾಡಿಸಿದ್ದಳು.

''ಅಬ್ಬಾ ಗೆದ್ದೆ'' ಎಂದ ಹೊರಗೆ ಬಂದ ಅಶೋಕ.

''ಇಲ್ಲ ಇನ್ನು ಪೂರ್ತಿ ಗೆದ್ದಿಲ್ಲ'' ಎಂದು ತಿದ್ದಿದ ದಿನೇಶ. ಆಮೇಲೆ ಅದೇ ದಿನ, ದಿನೇಶ ತನ್ನ ಹೆಂಡತಿಯನ್ನು ಕರೆದುಕೊಂಡು ಅವರ ಮನೆಗೆ ಮತ್ತೆ ಬಂದ. ಆಶಾ ವನಜಾಳೊಡನೆ ಮಾತನಾಡುವಾಗ ಆತನಿಗೆ ಅಚ್ಚರಿ. ಇವರೆಲ್ಲ ಯಾವಾಗ ನೆಂಟರಾದರು ಅಂತ. ಅವರು ಕೇಳದಿದ್ದರೂ ದಿನೇಶ ತಾನಾಗಿಯೇ, ಅಶೋಕ ಮಾಡಿದ ಉಪಕಾರವನ್ನೆಲ್ಲ ವರ್ಣಿಸಿ ಹೇಳಿದ.

''ಅಶೋಕ ತುಂಬಾ ಒಳ್ಳೆಯ ಹುಡುಗ. ಮನೆಯವರೂ ಒಳ್ಳೆಯ ಜನ. ನಿಮ್ಮ ವನಜಂಗೆ ಅವನು ತಕ್ಕ ಗಂಡ ಎಂದು ನಿಮಗೆ ಅನ್ನಿಸಿದರೆ, ನೀವು ಅವರ ಮನೆಗೆ ಬಂದು ಮಾತನಾಡಿ.. ವನಜಾಳು ಅವನನ್ನು ಮೆಚ್ಚಿದ್ದಾಳೆ. ಬೇಗ ಮದುವೆಯೂ ಆಗಿ ಹೋಗಲಿ. ಆತ ''ಯೋಚಿಸಿ ಹೇಳ್ತೀನಿ'' ಅಂದರು. ''ಇಷ್ಟೆಲ್ಲಾ ತಿಳಿದ ಮೇಲೆ ನಮ್ಮ ಮನೆಯ ಪ್ರಕರಣವೂ ನಿಮಗೆ ತಿಳಿದದ್ದೇ. ಅವಳು ಅವರಿಗೆ ಮೆಚ್ಚುಗೆಯಾಗಿದಾಳೆ ಅಂತ ಅನ್ನಿಸಿದರೂ ನನಗೇ ದಿಗಿಲು... ''ಯಾವ ಧೈರ್ಯದ ಮೇಲೆ ಮದುವೆ ಮಾತನಾಡಲಿ!

''ನನ್ನ ಹೆಂಡತಿ ಆಶಾ ಅದೇ ವಿಷಯವನ್ನು ನಿಮ್ಮ ಮಗಳೊಡನೆ ಆಡಿರುತ್ತಾಳೆ. ಯೋಚಿಸಿ, ನನಗೆ ನಿಮ್ಮ ನಿರ್ಧಾರವನ್ನು ತಿಳಿಸಿ, ''ಅಲ್ಲಿಂದ ಸೀದಾ ಅಶೋಕನ ಅಂಗಡಿಗೆ ಬಂದು, ಅದೇ ಪ್ರಸ್ತಾಪ ಮಾಡಿದ. ವನಜಂಗೆ ಅಲ್ಲಿ ಸರಿಹೋಗುತ್ತಿಲ್ಲ. ಬೇಜಾರು ಅನ್ನುತ್ತಾಳಂತೆ.'' ನೋಡಿದರೆ ತಂದೆ ಮಗಳ ಬಾಂಧವ್ಯ ಸರಿಹೋಗುವಂತೆ ಅನ್ನಿಸೊಲ್ಲ. ನಿನಗೆ ಇಷ್ಟವಾಗುವುದಾದರೆ ನೀನೇಕೆ ಅವಳನ್ನು ಮದುವೆಯಾಗಬಾರದು? ನೇರವಾಗಿ ಕೇಳಿದ್ದ.

''ವನಜನ್ನಾ? ನನಗಿಂತ ಅವಳು ಎಷ್ಟು ಚಿಕ್ಕವಳು..ಸಾಧ್ಯವಿಲ್ಲ.''

''ಅವಳು ಒಪ್ಪಿದರೇ...ಏಕಾಗಬಾರದು?''

''ಅವಳು ಒಪ್ಪೊಲ್ಲ... ಅವಳ ಅನುಕೂಲಕ್ಕೆ ತಕ್ಕಂತಹವರಲ್ಲ ನಾವು''.

''ಅದೆಲ್ಲ ಬೇಡ. ಅವಳು ಒಪ್ಪಿದರೆ ಸುಮ್ಮನೇ ಮದುವೆಯಾಗು, ನಿನಗೆ ಬೇಕಾದ ಹಾಗೆ ಅವಳನ್ನು ತಿದ್ದಿಕೋ..'' ದಿನೇಶ ತಮಾಷೆ ಮಾಡುತ್ತಿದಾನೆಂದು ಭಾವಿಸಿದ್ದ.

''ಯಾಕೆ! ಬೇರೆ ಯಾವ ಹುಡುಗಿಯರೂ ಸಿಕ್ಕುವುದಿಲ್ಲವಾ ನನಗೆ?''

''ಹಾಗಲ್ಲ, ನೀನು ಅವಳಗೋಸ್ಕರ ಒದ್ದಾಡಿದ್ದನ್ನು ನೋಡಿ, ನಿನಗೂ ಇಷ್ಟವಿರಬಹುದು ಅದ್ಕೊಂಡೆ, ಚಿಕ್ಕವಳು ಅಂತ ಒಂದು ಬಿಟ್ಟರೆ.. ನಿನಗೆ ತಕ್ಕವಳು.''

''ಸದ್ಗುಣ ಸಂಪನ್ನೆ, ನನಗೋಸ್ಕರ ಕಾಯುತ್ತಿದ್ದಳು ಅಪ್ಪಾ! ನೀನೇಕೆ ಅವಳ ಶಿಫಾರಸ್ಸು ಮಾಡ್ತಿದೀಯ..'' ಸ್ನೇಹಿತನ ಮಾತನ್ನು ಹಗುರವಾಗಿ ತಗೊಂಡಿದ್ದ.

''ವನಜಾ ನಿನ್ನನ್ನು ಮದುವೆಯಾಗೊಕ್ಕೆ ಒಪ್ಪಿದಾಳೆ. ಆಶಾ ಹೇಳಿದಳು.''

''ಹುಂ, ನೋಡೋಣ, ಯೋಚಿಸಿ ಹೇಳ್ತೀನಿ, ''ಆಮೇಲೆ ಯೋಚಿಸಿಯೂ ಇದ್ದ.

ಮಾರನೇ ದಿನವೇ ಆತ, ದಿನೇಶನೊಡನೆ ಇವರ ಮನೆಗೆ ಬಂದರು. ದಿನೇಶನ ಆದೇಶದಂತೆ, ಬರೀ ಮಗಳ ಮದುವೆ ಕುರಿತು ಹೇಳಿದರು. ಇನ್ನೇನನ್ನು ಹೇಳಲಿಲ್ಲ, ಆಗ ಅಶೋಕನೂ ಮನೆಯಲ್ಲಿರಲಿಲ್ಲ, ಫೋಟೋ ಕೊಟ್ಟು ಹೊರಟು ಹೋದರು.

ಅಶೋಕ ಬಂದ ಕೂಡಲೇ ಕಮಲಮ್ಮ ಆ ವಿಷಯವನ್ನು ನುಡಿದರು. ''ದಿನೇಶನೇ ಕರೆದುಕೊಂಡು ಬಂದಿದ್ದ. ಆತ ನಿನ್ನನ್ನು ನೋಡಿದಾರಂತೆ. ಆ ಹುಡುಗಿಯ ಫೋಟೋನೂ ಕೊಟ್ಟಿದಾರೆ. ನೋಡ್ತೀಯಾ!'' ಆಗ ದಿನೇಶನ ಸಂಧಾನದ ನೆನಪಾಗಿತ್ತು.

''ಬೇಡ, ನನಗೆ ಮದುವೆಯಾಗುವ ಆಸೆ ಇಲ್ಲ.''

''ಹಾಗೆನ್ನಬೇಡ...ಒಬ್ಬಳೇ ಮಗಳು. ನೋಡಿದರೆ ಅನುಕೂಲವಂತರಂತೆ ಕಾಣ್ತಾರೆ. ನಾನೂ ಇಷ್ಟು ದಿನ ಮದುವೆಯ ಮಾತನ್ನು ಎತ್ತೊಕ್ಕೇ ಹೆದರಿದ್ದೆ.''

''ಆತನ ಶ್ರೀಮಂತಿಕೆ ನೋಡಿ ನಿನಗೆ ಧೈರ್ಯ ಬಂತಾ?''

''ಹಂಗಿಸಬೇಡ, ನಿನಗೆ ಒಪ್ಪಿಗೆ ಇಲ್ಲದಿದ್ದರೆ ಬೇಡ, ನನ್ನದೇನೂ ಬಲವಂತವಿಲ್ಲ, ಆದರೆ, ಯೋಚಿಸಿ ನೋಡು.. ನಿನಗೂ ಮದುವೆ ವಯಸ್ಸು ಮೀರಿದೆ.''

''ಸರಿ, ಒಪ್ತೀನಿ, ಆದರೆ ಒಂದು ಷರತ್ತಿನ ಮೇಲೆ.. ಮೊದಲು ಸುಧಾಳ ಮದುವೆ ನಂತರ ನನ್ನದು.'' ವನಜಾ ತಾನು ಕಂಡ ಹುಡುಗಿ ಯಾಕಾಗಬಾರದು ಎನಿಸಿ ಒಪ್ಪಿದ.

''ಇದೇನೋ.. ಅವಳಿಗೆ ಇನ್ನೊಂದು ಮದುವೇನಾ?'' ತಾಯಿ ಬಾಯಿ ಅಗಲಿಸಿದ್ದಳು.

"ಯಾಕಾಗಬಾರದು! ತಪ್ಪೇನು! ಅವಳೂ ಇನ್ನು ಚಿಕ್ಕವಳು.."

"ತಪ್ಪೂಂತ ಹೇಳ್ತೊಲ್ಲ, ಆದರೆ ಅವಳ ಮಗು ಇದೆ.. ಜನ ಏನಂತಾರೆ?"

"ಜನ ಎಲ್ಲಾದಕ್ಕೂ ಆಡಿಕೊಂಡು ನಗ್ತಾರೆ. ಅದು ಬೇರೆ ಮಾತು. ಅವಳಿಗೆ ಮರು ಮದುವೆ ಆಗುವ ಆಸೆ ಇದೆ. ಅದಕ್ಕೇ ನೀನು ಅಡ್ಡಿ ಬರಬಾರದು."

"ನಿನ್ನೊಡನೆ ಹೇಳಿರಬೇಕು. ನಿನ್ನ ಮನಸ್ಸಿಗೆ ಬಂದಮೇಲೆ, ನೀನು ಅವಳ ಮದುವೆ ಮಾಡದೇ ಬಿಡುವವನಲ್ಲ. ಅವಳ ಹಣೇಲಿ ಎರಡನೇ ಮದುವೆ ಬರೆದಿದ್ದರೆ ನಾನೇಕೆ ತಪ್ಪಿಸಲಿ! ಆದರೆ ಮೊದಲು ನಿನ್ನ ಮದುವೆ ಆಗಲಿ.. ಆಮೇಲೆ ಅವಳದ್ದು."

ಅಮ್ಮ ಇಷ್ಟು ಸುಲಭವಾಗಿ ಒಪ್ಪಬಹುದೆಂದುಕೊಂಡಿರಲಿಲ್ಲ ಅವನು. ಅದಕ್ಕೆ ಕಾರಣ, ಕಾರಿನಲ್ಲಿ ಬಂದ ಜಗನ್ನಾಥರಾಯರು ಅಂತ ಅನ್ನಿಸದೇ ಇರಲಿಲ್ಲ.

ಅವನು ಒಪ್ಪಿದ್ದೇ ಸಾಕು ಎಂಬಂತೆ, ತಕ್ಷಣವೇ ಮದುವೆಯನ್ನು ನಿಶ್ಚಯಿಸಿದರು. ಅನುಕೂಲಸ್ಥರ ಮನೆಯ, ಏಕಮಾತ್ರ ಪುತ್ರಿ ವನಜ, ತಮ್ಮ ಸೊಸೆಯಾಗುತ್ತಿರುವುದು ಕಮಲಮ್ಮನಿಗೆ ಹಿಗ್ಗು, ಆ ದಿನ ಸುಧಾ ಪೆಚ್ಚಾಗಿದ್ದಾಳೆಂದೆನಿಸಿತ್ತು, ಅಶೋಕನಿಗೆ.

ವನಜಾನ್ನ ಅವನು ಪ್ರೀತಿಸಿಯೂ ಇರಲಿಲ್ಲ, ದ್ವೇಷಿಸಿಯೂ ಇರಲಿಲ್ಲ. ದಿಢೀರನೇ ತಾಯಿ ಕೇಳಿದಾಗ ಅದು ದಿನೇಶನ ಕಿತಾಪತಿ ಎಂದು ಅರ್ಥವಾಗಿತ್ತು. ಯಾಕಾಗಬಾರದು? ತಾನೇ ಅವಳನ್ನು ಉದ್ಧಾರ ಮಾಡಲು ಹೊರಟಿದ್ದ ಹುಡುಗಿ, ಎಂದುಕೊಂಡಾಗ, ಅವಳ ವರ್ತನೆಗಳು ನೆನಪಾಗಿ ನಗು ಬಂತು. ಅದೇ ದಿನ ಸುಧಾ ತನ್ನ ಸಹೋದ್ಯೋಗಿ ಒಬ್ಬರು ತನ್ನನ್ನು ಮದುವೆಯಾಗಲು ಒಪ್ಪಿರುವುದನ್ನು ತಿಳಿಸಿದಳು. ಅವನಿಗೆ ಅತ್ಯಂತ ಸಂತೋಷವಾಗಿತ್ತು. ತಕ್ಷಣ ಮುಂದಿನ ಮಾತುಗಳನ್ನು ಆಡಿದ್ದ.

ಅಶೋಕ-ವನಜಾರ ಮದುವೆಗೆ ಒಂದು ವಾರವಿದೆ ಎನ್ನುವಾಗಲೇ, ಸುಧಾ-ಸುರೇಶ ಎಲ್ಲರ ಒಪ್ಪಿಗೆಯೊಂದಿಗೆ ಸರಳವಾಗಿ ಮದುವೆಯಾಗಿದ್ದರು. ಸುಧಾ ಹೊರಟಾಗ ಅಶೋಕನ ಕಣ್ಣು ತುಂಬಿ ಬಂದಿತ್ತು.

"ವಂಶಿಯನ್ನ ಕರೆದುಕೊಂಡು ಹೋಗಬೇಡ ಪ್ಲೀಸ್, ಪ್ರತಾಪನ ನೆನಪಿಗಾಗಿ ಅವನು ಇಲ್ಲಿಯೇ ಇರಲಿ" ಎಂದು ಕೇಳಿಕೊಂಡಿದ್ದ. ಸುಧಾ ಕಷ್ಟದಿಂದ ಒಪ್ಪಿಕೊಂಡಿದ್ದಳು.

"ಇದೂ ನಿನ್ನ ಮನೆಯೇ, ನಿನಗೆ ಬೇಕೆನಿಸಿದಾಗಲೆಲ್ಲಾ ಬರುವ ಹಕ್ಕು ನಿನಗಿದೆ" ಎಂದು ಆತ್ಮೀಯವಾಗಿ ಹೇಳಿ ಅವಳನ್ನು ಬೀಳ್ಕೊಟ್ಟಿದ್ದ. ಕಮಲಮ್ಮನಿಗೂ ದುಃಖವಾಗಿತ್ತು ಎನ್ನುವುದು ಅವರ ಮುಖಭಾವವೇ ಹೇಳುತ್ತಿತ್ತು.

ಒಂದೇ ವಾರದಲ್ಲಿ ಅಶೋಕ ವನಜಾರ ಮದುವೆ, ಅದ್ದೂರಿಯಾಗಿ ನೆರವೇರಿತ್ತು. ನೆಂಟರಿಷ್ಟರು, ಬಂಧು ಬಳಗದವರು, ತಿಂದುಂಡು, ವಧೂವರರನ್ನು ಹರಸಿ, ಉಡುಗೊರೆಗಳೊಂದಿಗೆ ಹೋಗಿದ್ದರು. ಕಮಲಮ್ಮನ ಮುಖ ಮೊರದಗಲವಾಗಿತ್ತು.

ವನಜಾ ಅಪ್ರತಿಮ ಸುಂದರಿಯಲ್ಲ, ಆದರೆ ವೇಷ ಭೂಷಣಗಳೊಂದಿಗೆ ಆಕರ್ಷಕವಾಗಿದ್ದಳು. ತನಗಿಂತ ಅವಳು ತುಂಬಾ ಚಿಕ್ಕವಳು ಎನ್ನುವ ಭಾವನೆ ಅವನಿಗಿದ್ದೇ ಇತ್ತು. ಆದರೆ ವನಜಳ ಸಂಭ್ರಮ ಅವನನ್ನು ಹರ್ಷಗೊಳಿಸಿತ್ತು. ತಂದೆಯ ಜೊತೆ ಇರಲು ಇಚ್ಛಿಸದೇ ತನ್ನನ್ನು ಮದುವೆಯಾಗಿ ದುಡುಕಿದಳೇ.. ಹೀಗೇ ಅವಳು ಇರುತ್ತಾಳೆಯೇ ಎಂದು ಚಿಂತಿಸಿದಾಗ ಮನಸ್ಸು ಖಿನ್ನವಾಗಿತ್ತು.

ಆದರೆ, ಆ ರಾತ್ರಿ ಹುರುಪು ಉತ್ಸಾಹದಿಂದ ವನಜಾ ಅವನ ಬಳಿಗೆ ಬಂದಾಗ ಅವನ ಖಿನ್ನತೆ ಮಾಯವಾಗಿತ್ತು. ನಿರಾಕರಿಸಲು ಹೃದಯ ಒಪ್ಪಲಿಲ್ಲ.. ನಗುತ್ತಾ ಅವಳಿಗೆ ಹೇಳಿದ್ದ. "ಈ ಒಂದು ತಿಂಗಳಿನಲ್ಲಿ ನೀನು ತುಂಬಾ ಬದಲಾಯಿಸಿದೀಯ. ಆ ದಿನ ನಾನು ಕಂಡ ವನಜಾ ನೀನಲ್ಲ; ಅವತ್ತಿನ ನಿನ್ನ ಅವತಾರ ಕಂಡು ನಾನು ಹೆದರಿದ್ದೆ." ಎಂದ.

"ನಾನು ಹೆದರಿಸಿದರೂ, ನನ್ನನ್ನು ಅಪಹರಿಸಿದೀರಲ್ಲ ನೀವು.." ನಕ್ಕಳು, ಅರುಣರಾಗವನ್ನು ಬೀರುತ್ತಾ.

ಆ ತಕ್ಷಣ ಅವನಿಗೆ ಆ ಏಜೆಂಟನಾಡಿದ ಮಾತುಗಳು ನೆನಪಾದವು. "ಈ ಮಗು ನನ್ನದು-ಇದನ್ನು ನಾನು ಅಪಹರಿಸಿದೀನಿ.." ಎಂದು ಅವಳನ್ನು ತನ್ನೆಡೆಗೆ ಎಳೆದುಕೊಂಡು, ಆಲಂಗಿಸಿ, ಮುದ್ದಿಸಿದ. ಪುಟ್ಟ ಮಡದಿ, ಅವನ ಬಾಹುಗಳಲ್ಲಿ ಬೆಚ್ಚಗೆ ಮಲಗಿದಳು.

****

"ಅಕ್ಷಯತದಿಗೆ". ಇದು ಒಂದು ನೀಳ್ಗತೆ... ಸಾಮಾಜಿಕ ವಿಷಯವನ್ನು ಆಧಾರವಾಗಿಟ್ಟುಕೊಂಡು, ಕೌಟುಂಬಿಕ ಪಾತ್ರಗಳನ್ನೊಳಗೊಂಡು, ರಚಿತಗೊಂಡ ಕತೆ.

"ಅಕ್ಷಯತದಿಗೆ" ಒಂದು ಪ್ರಶಸ್ತವಾದ ದಿನ.
ಈ ಮುಹೂರ್ತದಲ್ಲಿ ನಡೆಯುವ ಒಳ್ಳೆಯ ಕಾರ್ಯಗಳು ವೃದ್ಧಿಯಾಗುತ್ತದೆ ಎಂಬ ಸಾಮಾನ್ಯ ನಂಬಿಕೆ. ವೈಶಾಖ ಮಾಸದ ಶುಕ್ಲ ಪಕ್ಷದ ತದಿಗೆಯ ದಿನ ಆಚರಿಸುವ ಹಬ್ಬ.

ಈ ಕತೆಯ ನಾಯಕಿ ವೃಂದಾ, ಯಾವ ಸಂಭ್ರಮ ಉತ್ಸಾಹಗಳಿಲ್ಲದೇ ಯಾವ ಆಸೆ ಆಡಂಬರಗಳಿಲ್ಲದೇ ವಿರಾಗಿಯಂತೆ ದಿನಗಳನ್ನು ತಳ್ಳುತ್ತಿರುತ್ತಾಳೆ. ಅವಳ ಬಾಳಿನಲ್ಲೂ ಅನಿರೀಕ್ಷಿತವಾಗಿ, ಸಂಭ್ರಮ ಉತ್ಸಾಹಗಳು ತುಂಬಿ ಬರುತ್ತದೆ. ಅವಳಿಗೆ ಒಳಿತನ್ನು ಹಾರೈಸುವವರು, ಅವಳಿಗೆ ಸಹಾಯಕರಾಗುತ್ತಾರೆ. ಅಕ್ಷಯ ತದಿಗೆ ಅವಳ ಜೀವನದಲ್ಲಿ ಒಂದು ತಿರುವು. ಇದು ಈ ಕತೆಯ ಕಥಾವಸ್ತು.

ಧೃತಿ ಪ್ರಕಾಶನ
ಬೆಂಗಳೂರು

Artfocus 98455 00709

ಬೆಲೆ ರೂ.90/-